
ಜನಶಕ್ತಿ



ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 34-35
ಆಗಸ್ಟ್ 31, 2014

ಪುಟ 92+4 ರೂ. 20/-

og : janashakthi.wordpress.com e-mail : js_weekly@yahoo.com

ಸ್ವಾತಂತ್ರ್ಯೋತ್ಸವ
ವಿಶೇಷಾಂಕ 2014





ಸ್ವಾತಂತ್ರ್ಯ ಮತ್ತು ಅಭಿವೃದ್ಧಿ




ಘನತೆಯ ಬದುಕಿಗಾಗಿ ಸ್ವಾತಂತ್ರ್ಯ



ಜನಶಕ್ತಿ ಕನ್ನಡ ವಾರಪತ್ರಿಕೆ
ಸಂಪುಟ 8 ಸಂಚಿಕೆ 34-35
ಆಗಸ್ಟ್ 31, 2014 ಬೆಲೆ ರೂ. : 20

ಬಿಡುಗಡೆಗಾಗಿನ ಹೋರಾಟವನ್ನು ಮುನ್ನಡೆಸಲು ಪಣತೊಡೋಣ

ಸಂಪಾದಕೀಯ



ಪಂಜರದೊಳಗೆ ಬಂಧಿತ ಪಕ್ಷಿಯೊಂದು ಪಂಜರದಿಂದ ಹೊರಬರಲು ಸಾಧ್ಯವಾದಾಗ 'ಅದರ ಬಿಡುಗಡೆಯಾಯಿತು, ಅದು ಸ್ವತಂತ್ರವಾಯಿತು' ಎನ್ನುತ್ತೇವೆ. ಜೈಲಿನಲ್ಲಿ ಬಂಧಿಯಾಗಿದ್ದವನು ಅಲ್ಲಿಂದ ಹೊರನಡೆಯಲು ಸಾಧ್ಯವಾದಾಗ 'ಆತನ ಬಿಡುಗಡೆಯಾಯಿತು, ಆತ ಸ್ವತಂತ್ರನಾದ' ಎನ್ನುತ್ತೇವೆ. ಇಂಡಿಯಾ ಅಥವ ಭಾರತ ಎನ್ನುವ ನಮ್ಮ ದೇಶವು ವಸಾಹತುಶಾಹಿ ಗುಲಾಮಗಿರಿಯಿಂದ ಹೊರಬಂದು ಸುಮಾರು 7 ದಶಕಗಳಾಗಿವೆ. ಸುದೀರ್ಘವಾದ ಜನಚಳುವಳಿಯ ನಂತರವಷ್ಟೇ ಭಾರತದ ವಿಮೋಚನೆ ಸಾಧ್ಯವಾಯಿತು. ಭಾರತದ ವಿಮೋಚನಾ ಚಳುವಳಿಯ ವೃತ್ತಾಂತವು ಪ್ರಪಂಚದ ಚರಿತ್ರೆಯ ಒಂದು ಅಮೋಘ ಅಧ್ಯಾಯವೇ ಆಗಿದೆ. ಬ್ರಿಟಿಷ್ ವಸಾಹತುಶಾಹಿಗಳಿಂದ ಭಾರತ ಸ್ವಾತಂತ್ರ್ಯವನ್ನು ಪಡೆದದ್ದು ಸಣ್ಣ ಸಾಧನೆಯಾಗಿರಲಿಲ್ಲ. ಅಪಾರ ತ್ಯಾಗ ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯ ಆದಾಗಿತ್ತು. ವಿವಿಧ ಜಾತಿ, ಮತ, ಬಣ್ಣ ಭಾಷೆಗಳ ಜನಸಮೂಹಗಳು ಒಂದಾಗಿ ಗಳಿಸಿದ ಸ್ವಾತಂತ್ರ್ಯ ಆದಾಗಿತ್ತು. ಆ ಎಲ್ಲ ದೇಶಪ್ರೇಮಿಗಳನ್ನು ಇಂದು ಗೌರವದಿಂದ ಸ್ಮರಿಸುವುದು ನಮ್ಮೆಲ್ಲರ ಹೆಮ್ಮೆಯ ಕರ್ತವ್ಯವಾಗಿದೆ.

ದೇಶಕ್ಕೇನೋ ಸ್ವಾತಂತ್ರ್ಯ ದೊರೆಯಿತು. ವಸಾಹತುಶಾಹಿಗಳ ದಮನಕಾರಿ ಆಳ್ವಿಕೆ ಕೊನೆಗೊಂಡಿತು. ಆದರೆ ನಮ್ಮ ಕೋಟ್ಯಾಂತರ ದೇಶ ಬಾಂಧವರಿಗೆ ತಮ್ಮ ಕೈಕಾಲುಗಳನ್ನು ಬಂಧಿಸಿರುವ ಸರಪಳಿಗಳು ಕಳಚಿ ಬಿದ್ದ ಅನುಭವ ಪ್ರಾಪ್ತವಾಗಿದೆಯಾ? ಅವರು ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆ ಮುಂತಾದ ಗೋಡೆಗಳಿಂದ ನಿರ್ಮಾಣಗೊಂಡ ಕಾರಾಗೃಹದಿಂದ ಹೊರನಡೆಯಲು ಸಾಧ್ಯವಾಗಿದೆಯಾ? ಅಸ್ಪೃಶ್ಯತೆ, ಅಸಮಾನತೆ, ಜಾತಿ ತಾರತಮ್ಯ, ಜಾತಿದಮನ ಎಂಬ ಸಾಮಾಜಿಕ ಬಂಧನಗಳಿಂದ ಅವರು ಇನ್ನೂ ಬಿಡುಗಡೆ ಹೊಂದಿಲ್ಲ. ಹಾಗೇನಾದರೂ ಆಗಿದ್ದರೆ ಪ್ರತಿವರ್ಷ ಅಗಸ್ಟ್ 15 ರಂದು ನಮ್ಮ ದೇಶಬಾಂಧವರೆಲ್ಲರ ಮನೆಗಳಲ್ಲಿ ಹಬ್ಬವಿರುತ್ತಿತ್ತು. ಅವರೆಲ್ಲರ ಮನೆಮಾಳಿಗೆಗಳ ಮೇಲೆ ರಾಷ್ಟ್ರದ ಧ್ವಜ ಹಾರಾಡುತಿತ್ತು.

ಅಂದು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದವರು, ಮಡಿದವರು ನಾಳೆಯ ಕುರಿತು ಚಿಂತಿಸುತ್ತಿದ್ದರು. ದೇಶದ ಭವಿಷ್ಯದ ಬಗ್ಗೆ, ಮುಂದಿನ ಪೀಳಿಗೆಯ ಬಗ್ಗೆ ಅವರು ಕನಸು ಕಾಣುತ್ತಿದ್ದರು. ಆದರೆ ಅವರ ಕನಸುಗಳೆಲ್ಲಾ ನುಚ್ಚುನೂರಾದವು. ದೇಶಬಾಂಧವರು ತಮ್ಮ ಬದುಕಿನಲ್ಲಿ ಬದಲಾವಣೆ ಕಾಣದಾದರು. ಕೆಲವರು ಸಿರಿವಂತರಾದರು. ಬಹುಸಂಖ್ಯಾತರು 'ಹಾಸಿಗೆ ಇದ್ದಷ್ಟು ಕಾಲು ಚಾಚಲು' ನಿರ್ಭಂಧಿತರಾದರು. ಎರಡು ಭಾರತಗಳು ತಲೆಎತ್ತಿದವು. ಒಂದು ಹೊಳೆಯುವ ಭಾರತ. ಇನ್ನೊಂದು ನರಳುವ ಭಾರತ. ಸ್ವಾತಂತ್ರ್ಯದ ಲಾಭವನ್ನುಂಡವರು ಹೊಳೆಯ ತೊಡಗಿದರು. ಅವಕಾಶ

■ ಸಂಪಾದಕರು:
ನಿತ್ಯಾನಂದಸ್ವಾಮಿ
■ ಪ್ರಕಾಶಕರು:
ಜಿ.ವಿ.ಶ್ರೀರಾಮ ರೆಡ್ಡಿ
■ ಸಂಪಾದಕೀಯ ಕಛೇರಿ:
ಇಎಂಎಸ್ ಭವನ, ನಂ. 37/ ಎ,
8ನೇ ಅಡ್ಡರಸ್ತೆ,
ಮಹಾಲಕ್ಷ್ಮಿ ಲೇಔಟ್
ಬೆಂಗಳೂರು – 560086
ದೂರವಾಣಿ:
080-23491114
ಇ-ಮೇಲ್:
js_weekly@yahoo.com
ಬ್ಲಾಗ್ :
janashakthi.wordpress.com

ವಂಚಿತರು ನರಳುವಂತಾದರು. ಕೆಲವರ ಅಭಿವೃದ್ಧಿ ಅದು ದೇಶದ ಅಭಿವೃದ್ಧಿ ಎಂದು ಬಿಂಬಿಸಲಾಯಿತು.

ಪ್ರಪಂಚದ ಚಿತ್ರವೂ ಬದಲಾಗಿತ್ತು. ಅಂದಿನ ವಸಾಹತುಶಾಹಿಗಳು ಇಂದು ನವವಸಾಹತುಶಾಹಿಗಳಾಗಿದ್ದರು. ಅವರ ಬಳಿ ಸಂಗ್ರಹವಾಗಿದ್ದ ಸಂಪತ್ತು ಪ್ರಪಂಚದಾದ್ಯಂತ ಹರಿದಾಡುತ್ತಿತ್ತು. ಭಾರತದ ಸಿರಿವಂತರು ಅವರ ಪಾಲುದಾರರಾಗಲು ಬಯಸಿದರು. 'ರೋಗಿ ಬಯಸಿದ್ದೂ ಹಾಲು, ವೈದ್ಯ ಕೊಟ್ಟದ್ದು ಹಾಲು' ಎಂಬಂತಾಯಿತು. 'ಗೇಟ್ ಆಫ್ ಇಂಡಿಯಾ' ತೆರೆಯಲ್ಪಟ್ಟಿತು. ರತ್ನಗಂಬಳಿ ಹಾಸಲ್ಪಟ್ಟಿತು. ಹಾಡೇ ಹಗಲಿನಲ್ಲಿ ಲೂಟಿ ಆರಂಭವಾಯಿತು. 47ರ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲದಂತಾಯಿತು.

'ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ' ಎಂಬ ಗಾದೆ ಮಾತು ಸುಳ್ಳಾಯಿತು. ಕಳೆದ ಎರಡು ದಶಕಗಳಲ್ಲಿ 3 ಲಕ್ಷಕ್ಕೂ ಹೆಚ್ಚು ಕೃಷಿಕರು ಆತ್ಮಹತ್ಯೆ ಮಾಡಿಕೊಂಡರೂ ದೇಶ ಮುನ್ನಡೆಯುತ್ತಲೇ ಇದೆ! ಅವರ ಭೂಮಿಯಲ್ಲಿ 'ವಿಶೇಷ ಆರ್ಥಿಕ ವಲಯಗಳು' ತಲೆಎತ್ತಿವೆ. ಅಲ್ಲಿ ದುಡಿಯುವ ಕಾರ್ಮಿಕರಿಗೆ ಕಾರ್ಮಿಕ ಕಾನೂನುಗಳ ಹಂಗಿಲ್ಲ. ಅವರಿಗೆ ಮನೆ ಇಲ್ಲ. ಇವರಿಗೆ ಉದ್ಯೋಗವಿಲ್ಲ. ಮಹಿಳೆಯರಿಗೆ ರಕ್ಷಣೆ ಇಲ್ಲ. ದಲಿತರಿಗೆ ಗೌರವವಿಲ್ಲ. ಯಾವುದೂ ಇಲ್ಲ, ಇಲ್ಲ, ಇಲ್ಲ. ಇವೆ ಗಗನಚುಂಬಿ ಗೋಪುರಗಳು. ಮೋಡಗಳನ್ನು ಮಾತನಾಡಿಸುವ ಮಹಲುಗಳು. ಅಲ್ಲೇ ಅಸುಪಾಸಿನಲ್ಲಿ ಕೊಳಚೆ ಕೊಂಪೆಗಳು! ಹೊಟ್ಟೆ ಬಟ್ಟೆಗಾಗಿ ಹೆಣಗುತ್ತಿರುವ ಮನುಷ್ಯ ಜೀವಿಗಳು! ಸ್ವತಂತ್ರ ಭಾರತದಲ್ಲಿ ಏನಾದರೂ ಬೆಳೆದಿದ್ದರೆ ಅದು ಭ್ರಷ್ಟಾಚಾರ ಮಾತ್ರ! ಇದ್ಯಾವ ಸ್ವಾತಂತ್ರ್ಯ? ಇದ್ಯಾವ ಅಭಿವೃದ್ಧಿ?

ಇಲ್ಲಿ ಯಾರೂ ಪ್ರಶ್ನೆ ಮಾಡುವಂತಿಲ್ಲ. ಪ್ರತಿಭಟಿಸುವಂತಿಲ್ಲ. ಇಲ್ಲಿ ನೀವು ಸಂಘಟಿತರಾಗುವಂತಿಲ್ಲ. ಸಭೆ ಸೇರುವಂತಿಲ್ಲ. ಅಪ್ಪಿ ತಪ್ಪಿ ಹಾಗೇನಾದರೂ ಮಾಡಲು ಪ್ರಯತ್ನ ಪಟ್ಟರೆ ನಿಮ್ಮ ವಿರುದ್ಧ ರೌಡಿ ಶೀಟ್ ತೆರೆಯಲಾಗುವುದು. ನೀವು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದರೆ, ನಿಮ್ಮನ್ನು ಭಯೋತ್ಪಾದಕರ ಪಟ್ಟಿಗೆ ಸೇರಿಸಿ, ಅಜ್ಞಾತ ಸ್ಥಳದಲ್ಲಿ ಬಂಧಿಸಿಟ್ಟು ಚಿತ್ರಹಿಂಸೆಗೆ ಗುರಿಪಡಿಸಲಾಗುವುದು.

ಅಂದು ವಸಾಹತುಶಾಹಿ ಶೋಷಣೆಯ ವಿರುದ್ಧ ವಿಭಿನ್ನ ಮತಪಂಥಗಳಿಗೆ ಸೇರಿದ ನಮ್ಮ ಜನ ಒಂದಾಗಿ ಹೋರಾಡಿದ್ದರು. ಆದರೆ ಇಂದು ಹಾಗಾಗುವುದನ್ನು ತಪ್ಪಿಸಲು ನವವಸಾಹತುಶಾಹಿಗಳು ಕಾರ್ಯತಂತ್ರ ರೂಪಿಸಿದ್ದಾರೆ. ಶೋಷಿತರು ಒಂದಾಗುವುದನ್ನು ತಪ್ಪಿಸಲು ಅವರ ನಡುವೆ ಕೋಮು ವಿಷ ವೃಕ್ಷವನ್ನು ಅವರು ಬೆಳೆಸಿದ್ದಾರೆ. ಹಿಂದುಗಳು ಮುಸಲ್ಮಾನರನ್ನು, ಮುಸಲ್ಮಾನರು ಹಿಂದುಗಳನ್ನು ಶತ್ರುಗಳೆಂದು ಪರಿಗಣಿಸುವ ಕಣ್ಣೋಟವನ್ನು ಬೆಳೆಸಿದ್ದಾರೆ. ಅವರ್‍ಯಾರೂ ತಮ್ಮ ಸಾಮಾನ್ಯ ಶತ್ರುವನ್ನು ಗುರುತಿಸದಂತೆ, ಗಮನಿಸದಂತೆ ಮಾಡಿದ್ದಾರೆ. ಕೋಮು ಗಲಭೆಗಳ ಮೂಲಕ ಇವರು ಚುನಾವಣೆಗಳಲ್ಲಿ ಜಯಗಳಿಸುತ್ತಾರೆ. ನವವಸಾಹತುಶಾಹಿ ಶಕ್ತಿಗಳು ಚುನಾವಣೆಗಳಲ್ಲಿ ಇವರಿಗೆ ತಮ್ಮ ಹಣಬಲವನ್ನು ಧಾರೆ ಎರೆದು ಗೆಲ್ಲಿಸುತ್ತಾರೆ. ಇಡೀ ಅರ್ಥವ್ಯವಸ್ಥೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ದೇಶವನ್ನು ಲೂಟಿ ಮಾಡುತ್ತಾರೆ.

ಹೀಗಾಗಿ, 2 ಶತಮಾನಗಳ ಕಾಲ ನಮ್ಮ ದೇಶಬಾಂಧವರು ಹೋರಾಟ ಮಾಡಿ ಗಳಿಸಿದ ಸ್ವಾತಂತ್ರ್ಯ ಇಂದು ಅರ್ಥ ಕಳೆದುಕೊಳ್ಳುವಂತಾಗಿದೆ. ನಮ್ಮ ವಿಮೋಚನಾ ಹೋರಾಟದ ಮುಖ್ಯ ಆಶಯಗಳು ಈಡೇರಲಿಲ್ಲ. ಭೂಮಿಯ ಕೇಂದ್ರೀಕರಣ ನಿಂತಿಲ್ಲ. ಪ್ರಗತಿಪರ, ಭೂಸುಧಾರಣೆಗಳು ಜಾರಿಗೆ ಬರಲಿಲ್ಲ. ಅದರಿಂದಾಗಿ ಸ್ಥಗಿತಗೊಂಡಿರುವ ಅಭಿವೃದ್ಧಿಯ ಚಕ್ರಕ್ಕೆ ಚಾಲನೆ ದೊರೆಯಲಿಲ್ಲ.

ಇಂದು ದೇಶದೊಳಗೆ ನುಗ್ಗುತ್ತಿರುವ ಕಾರ್ಪೊರೇಟ್ ಕಂಪೆನಿಗಳಿಂದಾಗಿ, ಅವುಗಳು ವಿಧಿಸುವ ಷರತ್ತುಗಳಿಂದಾಗಿ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗಿದೆ. ಕಷ್ಟ ಪಟ್ಟು ಗಳಿಸಿದ ಸ್ವಾತಂತ್ರ್ಯ ಅಪಾಯದಲ್ಲಿದೆ. ದೇಶದ ಸ್ವಾತಂತ್ರ್ಯವನ್ನು, ಸಾರ್ವಭೌಮತೆಯನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ದೇಶದ ಹಿತಕ್ಕೆ ವಿರುದ್ಧವಾದ ಉದಾರೀಕರಣ, ಖಾಸಗೀಕರಣ ನೀತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟ ಮಾಡುವ ಮೂಲಕ ಮಾತ್ರ ದೇಶದ ಸ್ವಾತಂತ್ರ್ಯವನ್ನು ಉಳಿಸಲು ಸಾಧ್ಯ. ಅಗಸ್ಟ್ ಕ್ರಾಂತಿಯ ಪೂರ್ಣಗೊಳ್ಳದ ಕರ್ತವ್ಯಗಳನ್ನು ಪೂರ್ಣಗೊಳಿಸಲು ಸಾಧ್ಯವಾದರೆ ಮಾತ್ರ ದೇಶವನ್ನು ನೈಜ ಅಭಿವೃದ್ಧಿಯ ಪಥಕ್ಕೆ ತರಲು ಸಾಧ್ಯ.



ಈ ವಿಶೇಷಾಂಕದಲ್ಲಿ

ಈ ವಿಶೇಷಾಂಕವನ್ನು ಹೊರತರುವಲ್ಲಿ ಸಹಕರಿಸಿರುವ ಎಲ್ಲಾ ಲೇಖಕರು, ಅನುವಾದಕರು, ಜಾಹಿರಾತುದಾರರು, ಜಾಹಿರಾತು ಸಂಗ್ರಹದಲ್ಲಿ ನೆರವಾಗಿರುವ ಕಾಂ. ಹನುಮೇಗೌಡ ಮತ್ತು ಇತರ ಸಂಗಾತಿಗಳಿಗೆ, ಸಂಘಟನೆಗಳಿಗೆ, ಜನಶಕ್ತಿ ಬಳಗ ಮತ್ತು ಕ್ರಿಯಾ ಬಳಗದ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು.



ಕೊಮಗತಮರು ಸಮುದ್ರಯಾನ

'ಕೊಮಗತ ಮರು' ಎಂಬುದು ಒಂದು ಜಪಾನಿ ಒಡೆತನದ ಹಡಗಿನ ಹೆಸರು. ಈ ಹಡಗಿನ ಸಮುದ್ರಯಾನಕ್ಕೆ ಈಗ ನೂರು ವರ್ಷ. ಬ್ರಿಟಿಷ್ ಸಾಮ್ರಾಜ್ಯಶಾಹಿ ದಾಸ್ಯದಿಂದ ಬಿಡುಗಡೆ ಹೊಂದಲು ಭಾರತದ ಜನತೆ ನಡೆಸಿದ ಹಲವಾರು ದೀರ್ಘ ಹೋರಾಟಗಳಲ್ಲಿ 'ಕೊಮಗತ ಮರು' ಒಂದು ಅವಿಸ್ಮರಣೀಯ ಘಟನೆ. 'ಕೊಮಗತ ಮರು', ಮೇ 23, 1914 ರಂದು ಕೆನಡಾ ದೇಶದ ವ್ಯಾಂಕೂವರ್ ಬಂದರು ತಲುಪಿದ ನಂತರ ಅದರಲ್ಲಿದ್ದ 372 ಭಾರತೀಯ ಪ್ರಯಾಣಿಕರನ್ನು ದಡ ಸೇರಲು ಬಿಡದಂತೆ ಕೆನಡಾ ಸರ್ಕಾರ ತಡೆಯಿತು. ಹಡಗು ಇಡೀ ಎಂಟು ವಾರ ಆ ಬಂದರಿನಲ್ಲಿ ಲಂಗರು ಹಾಕಿತ್ತು. ಆ ಅವಧಿಯಲ್ಲಿ ಹಡಗಿನಲ್ಲಿದ್ದ ಪ್ರಯಾಣಿಕರಿಗೆ ಕಿರುಕುಳ ಕೊಟ್ಟು ಅವರು ಹಿಂತಿರುಗುವಂತೆ ಕೆನಡಾ ಸರ್ಕಾರ ಬಲಾತ್ಕಾರ ಪಡಿಸಿತು. ಭಾರತೀಯ ಪ್ರಯಾಣಿಕರ ಒತ್ತಾಸೆಗೆ ನಿಂತಿದ್ದ ಕೆನಡಾದಲ್ಲಿ ವಾಸವಿದ್ದ ಭಾರತೀಯ ಸಂಜಾತರ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ನಂತರ, 'ಕೊಮಗತ ಮರು' ಜುಲೈ 23, 1914 ರಂದು ಭಾರತದತ್ತ ಹಿಂತಿರುಗಿತು.

'ಕೊಮಗತ ಮರು' ಅನುಭವಗಳನ್ನು ವಿಸ್ತಾರವಾಗಿದ್ದ ಕ್ರಾಂತಿಕಾರಿ ಘದರ್ ಚಳವಳಿಯೊಂದಿಗೆ ಸಮಗ್ರಗೊಳಿಸಲು ಉದ್ದೇಶಪೂರ್ವಕವಾದ ಹಿಂಜರಿಕೆ ಇರುವುದು ಕಾಣುತ್ತದೆ. ಏಕೆಂದರೆ, ಕೆನಡಾದ ಪ್ರಧಾನ ಮಂತ್ರಿಯವರು ಪ್ರಯಾಣಿಕರಿಗೆ ಆಗಿದ್ದ ತೊಂದರೆಗಳ ಬಗ್ಗೆ ಕ್ಷಮೆ ಯಾಚಿಸಿದರೆ ಹೊರತು, ಘದರ್ ಚಳವಳಿಯ ಬಗ್ಗೆ ಚಕಾರ ಎತ್ತಲಿಲ್ಲ. ನಮ್ಮ ದೇಶದಲ್ಲೂ ಸಹ ಈ ಹಿಂಜರಿಕೆ ಇದೆ. 'ಕೊಮಗತ ಮರು' ಯಾನದ ಪ್ರಯಾಣಿಕರ ಪೈಕಿ ಬದುಕಿರುವವರಿಗೆ ಸ್ವಾತಂತ್ರ್ಯ ಹೋರಾಟಗಾರರ ಸ್ಥಾನ-ಮಾನ ಕೊಡಬೇಕೆಂದೂ ಮತ್ತು ಘದರ್ ಚಳವಳಿಯು ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಅಭಿನ್ನ ಭಾಗವೆಂದು ಔಪಚಾರಿಕವಾಗಿ ಮಾನ್ಯತೆ ನೀಡುವಂತೆ 2003ರಲ್ಲಿ ನ್ಯಾಯಾಲಯವನ್ನು ಕೋರಿದ್ದ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಆಗ ಅಧಿಕಾರದಲ್ಲಿದ್ದ ಅಟಲ್ ಬಿಹಾರಿ ವಾಜಪೇಯಿ ಸರ್ಕಾರವು "ಕೊಮಗತ ಮರು ಪ್ರಯಾಣಿಕರು 1914 ರಲ್ಲಿ ದೇಶ ಬಿಟ್ಟು ಹೋದರು ಮತ್ತು ಸ್ವಲ್ಪ ಹಣ ಖರ್ಚು ಮಾಡಿದರು ಹಾಗು ಒಂದು ರೀತಿಯ ಹಲ್ಲೆಗೊಳಗಾದರು ಎಂದ ಮಾತ್ರಕ್ಕೆ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರೆಂದಾಗಲಿ ಅಥವಾ ಸ್ವಾತಂತ್ರ್ಯ ಚಳವಳಿಯೊಂದಿಗೆ ಯಾವುದೇ ಸಂಬಂಧವಿತ್ತು ಎಂದು ಸ್ಥಿರಪಡಿಸಲಾಗದು"ಎಂಬ ಕಾರಣ ನೀಡಿ, ಅರ್ಜಿಯನ್ನು ತಿರಸ್ಕರಿಸುವಂತೆ ಮನವಿ ಮಾಡಿತ್ತು.

ಸ್ವಾತಂತ್ರ್ಯ ಹೋರಾಟದ ವ್ಯಾಖ್ಯಾನವನ್ನು ಈ ರೀತಿಯಲ್ಲಿ ವಿಕೃತಗೊಳಿಸದಂತೆ ತಡೆಯಲು ಅನೇಕ ಪ್ರಯತ್ನಗಳಾದವು. ಕೊನೆಗೆ, ಸಿಪಿಐ(ಎಂ) ಆಗ್ರಹದ ಮೇಲೆ, ಆಗ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರವು ಘದರ್ ಚಳವಳಿ ನಾಯಕರ ನೆನಪಿನ ಅಂಚೆ ಚೀಟಿ ಬಿಡುಗಡೆ ಮಾಡಿತು ಮತ್ತು ಅಪರೂಪವೆಂಬಂತೆ ಅರ್ಥ ಸಚಿವರು ತಮ್ಮ 2013–14 ಮುಂಗಡ ಪತ್ರದಲ್ಲಿ "ಘದರ್ ಚಳವಳಿಯ ಶತಮಾನೋತ್ಸವದ ಗುರುತಾಗಿ, ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿರುವ ಘದರ್ ಸ್ಮಾರಕವನ್ನು ಒಂದು ವಸ್ತುಸಂಗ್ರಹಾಲಯ ಮತ್ತು ಲೈಬ್ರರಿಯಾಗಿ ಮಾರ್ಪಡಿಸಲು ಬೇಕಾಗುವ ಹಣವನ್ನು ಸರ್ಕಾರವು ತುಂಬುತ್ತದೆ" ಎಂದು ಘೋಷಿಸಿದರು.

ಅನೇಕ ದೇಶಾಭಿಮಾನಿಗಳ ಪ್ರಯತ್ನಗಳಿಂದಾಗಿ ಒಂದು ರೀತಿಯ ಮಾನ್ಯತೆ ಸಿಕ್ಕಿದ್ದರೂ ಸಹ, ತನ್ನದೇ ಬಹುಮತವಿರುವ ಭಾ ಜ ಪ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದಿರುವಾಗ, ಸ್ವಾತಂತ್ರ್ಯ ಚಳವಳಿಯ ಚರಿತ್ರೆಯಲ್ಲಿ ಘದರ್ ಚಳವಳಿಗೆ ನ್ಯಾಯ ಸಮ್ಮತವಾದ ಸ್ಥಾನ ಕೊಡದಿರುವ ಅಪಾಯ ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ವ್ಯಾಂಕೂವರ್‌ನ ಭಾರತ-ಕೆನಡಾ ಕಾರ್ಮಿಕರ ಸಂಘವು ಹಮ್ಮಿಕೊಂಡಿರುವ ಸ್ಮರಣೋತ್ಸವ ಆಚರಣೆ ಅತ್ಯಂತ ಮಹತ್ವದ್ದಾಗಿದೆ.

ಚರಿತ್ರೆಯ ಅವಲೋಕನ

'ಕೊಮಗತ ಮರು' ಸಮುದ್ರಯಾನ ಘಟನೆಗೆ ಐತಿಹಾಸಿಕ ಮಹತ್ವವಿದೆ. ಅದರ ಪ್ರಯಾಣಿಕರು ತಮ್ಮ ಸಮುದ್ರಯಾನ ಆರಂಭಿಸುವ ಮುನ್ನ ಎದುರಿಸುತ್ತಿದ್ದ

ಉತ್ತರ ಅಮೆರಿಕ ಖಂಡದಲ್ಲಿ ಭಾರತೀಯ ವಲಸೆಗಾರರು, ತಾವು ವಸಾಹತುಶಾಹಿ ಗುಲಾಮಗಿರಿಗೆ ಒಳಪಟ್ಟಿರುವ ಒಂದು ದೇಶದಿಂದ ಬಂದವರಾಗಿರುವ ಕಾರಣದಿಂದ ತಮ್ಮ ಮೇಲೆ ತಾರತಮ್ಯ ಮತ್ತು ಜನಾಂಗೀಯ ಶೋಷಣೆ ನಡೆಯುತ್ತಿದೆಂದು ಅರ್ಥಮಾಡಿಕೊಂಡು ತಮ್ಮ ಮೇಲೆ ನಡೆಯುತ್ತಿದ್ದ ಈ ದಬ್ಬಾಳಿಕೆ, ಅನ್ಯಾಯ ಮತ್ತು ಶೋಷಣೆಗಳ ವಿರುದ್ಧ ಆರಂಭಿಸಿದ ಹೋರಾಟವು, ಸ್ವಾಭಾವಿಕವಾಗಿಯೇ, ದೇಶವು ದಾಸ್ಯದಿಂದ ಬಿಡುಗಡೆಯಾಗಲು ವಿದೇಶಿ ನೆಲದಿಂದ 1913 ರಲ್ಲಿ ಆರಂಭಿಸಿದ ಸ್ವಾತಂತ್ರ್ಯ ಹೋರಾಟವಾಗಿತ್ತು. ಇದೇ ಘದರ್ ಚಳವಳಿ. ಈ ಚಳುವಳಿಯೊಂದಿಗೆ ಬೆಸೆದುಕೊಂಡಿರುವ 'ಕೊಮಗತಮರು' ಹಡಗಿನ ಪ್ರಯಾಣಿಕರ ಐತಿಹಾಸಿಕ ಪಯಣಕ್ಕೆ ಈಗ ನೂರು ವರ್ಷಗಳು. ಆದರೆ ಭಾರತದ ಆಳುವ ಮಂದಿ ಘದರ್ ಚಳುವಳಿಯಾಗಲೀ, ಕೊಮಗಟಮರು ಹಡಗಿನ ಘಟನೆಯಾಗಲಿ ದೇಶದ ಸ್ವಾತಂತ್ರ್ಯ ಹೋರಾಟದ ಅಭಿನ್ನ ಭಾಗ ಎಂದು ಸ್ವೀಕರಿಸಲು ಈಗಲೂ ಹಿಂಜರಿಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ವ್ಯಾಂಕೂವರ್‌ನ 'ಭಾರತ–ಕೆನಡಾ ಕಾರ್ಮಿಕರ ಸಂಘ' ಕೆನಡಾದಲ್ಲಿ ಈಗ ನೆಲೆಸಿರುವ ಭಾರತ ಮೂಲದ ಜನರ ಸಹಯೋಗದೊಂದಿಗೆ 'ಕೊಮಗತ ಮರು' ಪ್ರಯಾಣಿಕರಿಗೆ ಸಿಗಬೇಕಾಗಿದ್ದ ನ್ಯಾಯ ಮತ್ತು ಮಾನ್ಯತೆ ದೊರಕಿಸಲು ನಡೆಸಿದ ಅವಿರತ ಹೋರಾಟ ಈಗ ಸಮಾಧಾನ ಪಡುವಷ್ಟು ಜಯ ಕಂಡಿದೆ. 2012 ರಲ್ಲಿ, ವ್ಯಾಂಕೂವರ್ ಬಂದರು ಪಕ್ಕದಲ್ಲಿ 'ಕೊಮಗತಮರು' ಸ್ಮಾರಕ ಮತ್ತು ವಸ್ತುಸಂಗ್ರಹಾಲಯಗಳ ನಿರ್ಮಾಣವಾಗಿದೆ.

ಈ ಸಂಘ ಕಳೆದ ತಿಂಗಳು ಈ ಅವಿಸ್ಮರಣೀಯ ಘಟನೆಯ ಸ್ಮರಣೋತ್ಸವವನ್ನು ಆಯೋಜಿಸಿ ಅದರಲ್ಲಿ ಭಾಗವಹಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸೀತಾರಾಂ ಯೆಚುರಿಯವರನ್ನು ಆಹ್ವಾನಿಸಿತ್ತು. ಆ ಸಂಘದ ಈ ಮುತುವರ್ಜಿಯನ್ನು ಅಭಿನಂದಿಸುತ್ತ, ಅವರು ಸ್ಮರಿಸುತ್ತಿರುವ ಆದರ್ಶಗಳು, ನಮ್ಮ ದೇಶದ ಜನತೆ, ಆಧುನಿಕ ಪರಿಸ್ಥಿತಿಯಲ್ಲಿ, ಎಲ್ಲರಿಗೂ ಒಂದು ಯೋಗ್ಯ ರೀತಿಯ ಜೀವನ ನಿರ್ವಹಿಸುವಂತಹ ವಾತಾವರಣದ ನಿರ್ಮಾಣಕ್ಕಾಗಿ ಮುಂದುವರೆಸುತ್ತಿರುವ ಹೋರಾಟಗಳಿಗೆ ಸ್ಫೂರ್ತಿಯಾಗಿವೆ ಎಂದ ಯೆಚುರಿಯವರು, ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ಹೋರಾಟದ ಈ ಅವಿಸ್ಮರಣೀಯ ಘಟನೆ ಮತ್ತು ಘದರ್ ಚಳುವಳಿಯ ಒಂದು ಪಕ್ಷಿನೋಟವನ್ನು ನೀಡಿದರು. ಆ ಭಾಷಣದ ಅನುವಾದವನ್ನು ಈ ವಿಶೇಷಾಂಕದಲ್ಲಿ ಪ್ರಕಟಿಸುತ್ತಿದ್ದೇವೆ. 'ಜನಶಕ್ತಿ'ಗಾಗಿ ಇದನ್ನು ರಿಝರ್ವ್ ಬ್ಯಾಂಕ್ ನೌಕರರ ಸಂಘದ ಮುಖಂಡರಾಗಿದ್ದು ಈಗ ನಿವೃತ್ತರಾಗಿರುವ **ಕಾಂ. ಕೆ.ಎಂ.ನಾಗರಾಜ್** ಅನುವಾದಿಸಿ ಕೊಟ್ಟಿದ್ದಾರೆ.

ಸ್ವಾತಂತ್ರ್ಯ ಹೋರಾಟದಿಂದ ಬೇರ್ಪಡಿಸಲಾಗದ ಘಟನೆ

ಸೀತಾರಾಂ ಯೆಚೂರಿ



ಪರಿಸ್ಥಿತಿ ಹಾಗೂ ಅವರ ಮನದಾಳದ ಆಶಯಗಳು ದೇಶದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಒಂದಿಲ್ಲೊಂದು ರೀತಿಯಲ್ಲಿ ತಳುಕು ಹಾಕಿಕೊಂಡಿವೆ. ಚಳುವಳಿಯ ಕಾವು ಆಗ ಕೆನಡಾದಲ್ಲಿದ್ದ ಸಹಸ್ರಾರು ಭಾರತೀಯರನ್ನು (ಅವರಲ್ಲಿ ಶೇ.90 ಕ್ಕಿಂತ ಹೆಚ್ಚಿನವರು ಸಿಖ್ಖರು) ಆವರಿಸಿತ್ತು.

'ಕೊಮಗತ ಮರು' ಘಟನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ, ಇಪ್ಪತ್ತನೇ ಶತಮಾನದ ಮೊದಲ ಭಾಗದ ಚರಿತ್ರೆಯ ಅವಲೋಕನ ಅವಶ್ಯ. ಅಂದಿನ ಬ್ರಿಟಿಷ್ ಇಂಡಿಯಾದಲ್ಲಿ, ಜೀವನ ನಡೆಸಲು ಅಸಹನೀಯವಾಗಿದ್ದ ಸ್ಥಿತಿಗತಿಗಳಿಂದಾಗಿ ಸಹಸ್ರಾರು ಮಂದಿ ಭಾರತೀಯರು ಆಗ ಆರ್ಥಿಕವಾಗಿ ಶಕ್ತಿಶಾಲಿಯಾಗಿ ಬೆಳೆಯುತ್ತಿದ್ದ ಅಮೆರಿಕ ಮತ್ತು ಕೆನಡಾ ಮುಂತಾದ ದೇಶಗಳಿಗೆ ವಲಸೆ ಹೋದರು. ಏಕೆಂದರೆ, ಆ ದೇಶಗಳಲ್ಲಿ ವಿಪುಲವಾದ ಉದ್ಯೋಗಾವಕಾಶಗಳಿದ್ದವು. ಸುಮಾರು ಹತ್ತು ಪಟ್ಟು ಹೆಚ್ಚಿಗೆ ಸಂಬಳವೂ ಸಿಗುತ್ತಿತ್ತು.. ಅಲ್ಲದೆ, ಇಂಗ್ಲೆಂಡ್ ಪ್ರಜೆಗಳಾದ ಕಾರಣದಿಂದ ಸಾಮ್ರಾಜ್ಯದ ಯಾವುದೇ ಪ್ರದೇಶಕ್ಕೂ ಹೋಗಬಹುದಿತ್ತು.

ಆದರೆ, ಈ ದೇಶಗಳು ಜಪಾನ್ ಮತ್ತು ಚೀನಿ ವಲಸೆಗಾರರೊಂದಿಗೆ ನಡೆದು ಕೊಳ್ಳುತ್ತಿದ್ದ ರೀತಿಯು ಭಾರತೀಯ ವಲಸೆಗಾರರ ಜೊತೆ ನಡೆದು ಕೊಳ್ಳುತ್ತಿದ್ದುದಕ್ಕಿಂತ ತೀರ ಭಿನ್ನವಾಗಿತ್ತು. ಭಾರತೀಯರು ಅಪಾರವಾದ ಜನಾಂಗೀಯ ಪಕ್ಷಪಾತ ಮತ್ತು ತಿರಸ್ಕಾರಕ್ಕೊಳಗಾದರು. ಬಹುತೇಕ ಪಂಜಾಬಿಗಳೇ ಆಗಿದ್ದ ಭಾರತೀಯ ವಲಸೆಗಾರರು, ತಾವು ವಸಾಹತುಶಾಹಿ ಗುಲಾಮಗಿರಿಗೆ ಒಳಪಟ್ಟಿರುವ ಒಂದು ದೇಶದಿಂದ ಬಂದವರಾಗಿರುವ ಕಾರಣದಿಂದ ತಮ್ಮ ಮೇಲೆ ಈ ರೀತಿಯ ತಾರತಮ್ಯ ಮತ್ತು ಜನಾಂಗೀಯ ಶೋಷಣೆ ನಡೆಯುತ್ತಿದೆಂದು ಅರ್ಥಮಾಡಿಕೊಂಡರು. ತಾವು ಅನುಭವಿಸುತ್ತಿರುವ ಶೋಷಣೆ, ಜನಾಂಗೀಯ ಪಕ್ಷಪಾತ ಮತ್ತು ಅವಮಾನಗಳಿಗೆ ತಮ್ಮ ದೇಶವು ವಸಾಹತುಶಾಹಿ ಗುಲಾಮಗಿರಿಗೆ ಒಳಪಟ್ಟಿರುವುದೇ ಮೂಲ ಕಾರಣ ಎಂಬ ತಾರ್ಕಿಕ ನಿರ್ಣಯಕ್ಕೆ ಬಂದರು. ಉತ್ತರ ಅಮೆರಿಕದಲ್ಲಿ ತಮ್ಮ ಮೇಲೆ ನಡೆಯುತ್ತಿದ್ದ ಈ ದಬ್ಬಾಳಿಕೆ, ಅನ್ಯಾಯ ಮತ್ತು ಶೋಷಣೆಗಳ ವಿರುದ್ಧವಾಗಿದ್ದ ಅವರ ಈ ಹೋರಾಟವು, ಸ್ವಾಭಾವಿಕವಾಗಿಯೇ, ದೇಶವು ದಾಸ್ಯದಿಂದ ಬಿಡುಗಡೆಯಾಗಲು ವಿದೇಶಿ ನೆಲದಿಂದ 1913 ರಲ್ಲಿ ಆರಂಭಿಸಿದ ಸ್ವಾತಂತ್ರ್ಯ ಹೋರಾಟವಾಗಿತ್ತು. ಇದೇ ಘದರ್ ಚಳವಳಿಯ ಹುಟ್ಟು.

ಘದರ್ ಚಳವಳಿಯಲ್ಲಿ ತೊಡಗಿದವರು ಹೆಚ್ಚಿನ ಮಂದಿ ಪಂಜಾಬಿಗಳೇ ಆಗಿದ್ದರೂ ಸಹ, ಅವರಲ್ಲಿ ಹಿಂದೂ ಮತ್ತು ಮುಸ್ಲಿಂ ಪಂಗಡಗಳಿಗೆ ಸೇರಿದ ಅನೇಕರು



ಕೆನಡಾದ ವಾಂಕುವರ್‌ನಲ್ಲಿ ಕೊಮಗತಮರು ಪ್ರಯಾಣಿಕರು

ಮಹರಾಷ್ಟ್ರ, ಆಂಧ್ರ ಮತ್ತು ಬಂಗಾಳ ಪ್ರಾಂತಗಳಿಂದ ಬಂದವರು. ಕೆಲವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು – ಲಾಲಾ ಹರ್ ದಯಾಳ್, ಹರ್ನಾಮ್ ಸಿಂಗ್, ಕರ್ತಾರ್ ಸಿಂಗ್ ಸರಭಾ, ತಾರಕನಾಥ್ ದಾಸ್, ವಿ.ಜಿ.ಪಿಂಗ್ಳೆ ಮತ್ತು ಮೌಲ್ವಿ ಬರ್ಖತುಲ್ಲಾ ಮುಂತಾದವರು ಪ್ರಮುಖರು. ಭಾರತದಲ್ಲಿ ಬಂಡಾಯ ಚುರುಕುಗೊಳಿಸುವುದೇ ಘದರ್ ಚಳವಳಿಯ ಉದ್ದೇಶವಾಗಿತ್ತು. ಚಳವಳಿಗೆ ಅದು ಜನರನ್ನು ಆಕರ್ಷಿಸಿದ ರೀತಿ ವೈಶಿಷ್ಟ್ಯಪೂರ್ಣವಾಗಿತ್ತು. ಚಳವಳಿಯಲ್ಲಿ ಭಾಗವಹಿಸಿದವರಿಗೆ ಸಿಗುವ ಸಂಭಾವನೆಯ ಘೋಷಣೆಗಳು ರೋಮಾಂಚನಕಾರಿಯಾಗಿದ್ದವು –

ಸಂಬಳ=ಸಾವು,
ಮೌಲ್ಯ=ಹುತಾತ್ಮನಾಗುವುದು,
ಪಿಂಚಣಿ=ಬಂಧ ಮುಕ್ತಿ,
ಯುದ್ಧಭೂಮಿ= ಭಾರತ.

ಅವರು ತಾವು ಹಿಂದೂ, ಪಂಜಾಬಿ ಅಥವಾ ಮುಸ್ಲಿಮ ರೆಂದು ಭಾವಿಸಿರಲಿಲ್ಲ. ದೇಶಪ್ರೇಮವೇ ಅವರ ಧರ್ಮವಾಗಿತ್ತು. ಆ ಚಳವಳಿ ಜಾತ್ಯಾತೀತತೆ ಯ ಒಂದು ಪ್ರತಿರೂಪವಾಗಿತ್ತು.

1908ರ ಮೊದಲು ಕೆನಡಾ ಪ್ರವೇಶಿಸಿದ 5–6 ಸಾವಿರ ಭಾರತೀಯರ ಪೈಕಿ ಅನೇಕರು ಕೆನಡಾ ಗಡಿ ದಾಟಿ ಅಮೆರಿಕ ಪ್ರವೇಶಿಸಿದರು. 1914ರ ಹೊತ್ತಿಗೆ ಕೆನಡಾದಲ್ಲಿ ಸುಮಾರು ಎರಡು ಸಾವಿರ ಭಾರತೀಯರು ಉಳಿದರು ಮತ್ತು ಭಾರತೀಯ ವಲಸೆಗಾರರ ಒಳ ಹರಿವು ಮುಂದುವರಿಯುತ್ತಲೇ ಇತ್ತು. ಇನ್ನೂ ಹೆಚ್ಚಿನ ಸಂಖ್ಯೆಯ ಭಾರತೀಯ ವಲಸೆಗಾರರು ತಮ್ಮ ದೇಶದೊಳಗೆ ಬರದಂತೆ ತಡೆಯಲು ಕೆನಡಾ ಮತ್ತು ಅಮೆರಿಕ, ವಲಸೆಗೆ ಸಂಬಂಧಿಸಿದ ತಮ್ಮ ದೇಶದ ಕಾನೂನುಗಳನ್ನು ಬಿಗಿಮಾಡಿದರು. ಭಾರತೀಯ ವಲಸೆಗಾರರು ಮಾತ್ರ ಈ ದೇಶಗಳನ್ನು ಪ್ರವೇಶಿಸುವ ಸಮಯದಲ್ಲಿ ತಮ್ಮ ಬಳಿ 200 ಡಾಲರ್ ಹಣ ಇಟ್ಟುಕೊಂಡಿರಬೇಕಾಗಿತ್ತು. ಜೊತೆಯಲ್ಲಿ ಹೆಂಡತಿ–ಮಕ್ಕಳನ್ನು ಕರೆತರುವಂತಿರಲಿಲ್ಲ. ಹಡಗುಗಳು ಭಾರತೀಯ ಪ್ರಯಾಣಿಕರನ್ನು ಹೊತ್ತೊಯ್ಯದಂತೆ ಹಾಗು ಅವರಿಗೆ ಅನ್ನ ನೀರು ಕೊಡದಂತೆ ನಿರ್ಬಂಧಿಸಲಾಗಿತ್ತು.

ಘದರ್ ಚಳವಳಿಯಿಂದ ಪ್ರಭಾವಿತರಾದ ಭಾರತೀಯ ವಲಸೆಗಾರರು ಇಂತಹ ಅಸಹ್ಯವಾದ ಜನಾಂಗೀಯ ದ್ವೇಷ ಕಾರುವ ಕ್ರಮಗಳಿಗೆ ಬಗ್ಗಲಿಲ್ಲ. ಬದಲಿಗೆ, ಅವಮಾನ ಮತ್ತು ಅನ್ಯಾಯಗಳ ವಿರುದ್ಧದ ಅವರ ಹೋರಾಟದ ಕೆಚ್ಚು ಇನ್ನೂ ಹೆಚ್ಚಿತು. ಕೆನಡಾ ಸರ್ಕಾರವು ಭಾರತೀಯ ಪ್ರಯಾಣಿಕ/ವಲಸೆಗಾರರ ಮೇಲೆ ಮತ್ತೊಂದು ಶರತ್ತು ಹಾಕಿತು. ಅವರು ಭಾರತದಿಂದ ಹೊರಟು ನಲುಗಡೆ ಇಲ್ಲದ, ನೇರವಾಗಿ ಕೆನಡಾ ತಲುಪುವ ಹಡಗುಗಳಲ್ಲಿ ಮಾತ್ರ ಪ್ರಯಾಣಿಸಬಹುದಿತ್ತು. ಈ ಶರತ್ತನ್ನು ಪಾಲಿಸುವುದು ಅಸಾಧ್ಯವಾಗಿತ್ತು. ಏಕೆಂದರೆ, ಆಗ ಭಾರತ–ಕೆನಡಾ ನಡುವೆ ನಿಲುಗಡೆ ಇಲ್ಲದ ನೇರ ಹಡಗು ಸೇವೆ ಇರಲಿಲ್ಲ. ಭಾರತೀಯ ಪ್ರಯಾಣಿಕರಿಗೆ/ವಲಸೆಗಾರರಿಗೆ ಇದೊಂದು ಸವಾಲಾಗಿ ಉಳಿಯಿತು.

ದಿ. ಕಾಂ. ಹರ್‌ಕಿಷನ್ ಸಿಂಗ್ ಅವರು ಗುರುತಿಸಿರುವಂತೆ "ಈ ಸವಾಲನ್ನು ಎದುರಿಸಲು ಕೆನಡಾದ ವ್ಯಾಂಕೂವರ್‌ನಲ್ಲಿ ನೆಲೆಸಿದ್ದ ಭಾರತೀಯ ಸಮುದಾಯವು ಮುಂದೆ ಬಂತು. 1906 ರಲ್ಲಿ ಕೆನಡಾಕ್ಕೆ ಬಂದಿದ್ದ ಅಮೃತ್ಸರ ಮೂಲದ ಒಬ್ಬ ಶ್ರೀಮಂತ ವ್ಯಾಪಾರಿ ಗುರುದಿತ್ ಸಿಂಗ್ ಅವರು ಜಪಾನಿ ಒಡೆತನದ 'ಕೊಮಗತ ಮರು' ಹಡಗನ್ನು ಬಾಡಿಗೆ ಪಡೆದು, ಕೆನಡಾಕ್ಕೆ ಹೊರಟಿದ್ದ ಭಾರತೀಯ ಪ್ರಯಾಣಿಕರಿಗೆ ಟಿಕೆಟ್ ನೀಡಿ ಅವರನ್ನು ಕರೆತರಲು ವ್ಯವಸ್ಥೆ ಮಾಡಿದರು. 351 ಮಂದಿ ಸಿಖ್ಖರು ಮತ್ತು 21 ಮಂದಿ ಪಂಜಾಬಿ ಮುಸ್ಲಿಮರೂ ಸೇರಿ 372 ಪ್ರಯಾಣಿಕರಿದ್ದ ಈ ಹಡಗು ಎಪ್ರಿಲ್ 4, 1914 ರಂದು ಹಾಂಗ್‌ಕಾಂಗ್‌ನಿಂದ ಹೊರಟು ಮೇ 23, 1914 ರಂದು ವ್ಯಾಂಕೂವರ್ ಬಂದರು ತಲುಪಿತು. ಆದರೆ, ಈ ವಿದ್ಯಮಾನವನ್ನು ಅರಿತಿದ್ದ ಕೆನಡಾ ಸರ್ಕಾರ 'ಕೊಮಗತ ಮರು' ಪ್ರಯಾಣಿಕರನ್ನು ದೇಶದೊಳಗೆ ಪ್ರವೇಶಿಸದಂತೆ ತಡೆಯುವ ಸಲುವಾಗಿ

ಇಡೀ ಎಂಟು ವಾರ ಬಂದರಿನಲ್ಲಿ ಲಂಗರು ಹಾಕಿದ್ದ ಹಡಗು ಜುಲೈ 23, 1914 ರಂದು ಭಾರತದತ್ತ ಪ್ರಯಾಣ ಆರಂಭಿಸಿ ಸೆಪ್ಟೆಂಬರ್ 27, 1914 ರಂದು ಕಲ್ಕತ್ತಾ ಬಳಿ ಇರುವ ಬಜ್ ಬಜ್ ರೇವು ತಲುಪಿತು. ಹಡಗು ದಡ ಸೇರುವ ಮುನ್ನ ಬ್ರಿಟಿಷ್ ಸರ್ಕಾರವು 'ಕೊಮಗತ ಮರು' ಪ್ರಯಾಣಿಕರನ್ನು ಅಪಾಯಕಾರಿ ರಾಜಕೀಯ ಚಳವಳಿಕಾರರೆಂದು ಗುರುತಿಸಿ ಅವರ ನಾಯಕರನ್ನು ಸೆರೆ ಹಿಡಿಯುವ ಭರದಲ್ಲಿ ಗುಂಡಿನ ಮಳೆಗರೆಯಿತು. 18 ಮಂದಿ ಗುಂಡಿಗೆ ಬಲಿಯಾದರು. ನೂರಾರು ಜನ ಗಾಯಗೊಂಡರು.




ಹಡಗು ದಡ ತಲುಪಲು ಬಿಡಲಿಲ್ಲ. ಹಡಗು ಹಿಂತಿರುಗುವಂತೆ ಒತ್ತಾಯ ಹಾಕಿತು. ಇಡೀ ಎಂಟು ವಾರ ಬಂದರಿನಲ್ಲಿ ಲಂಗರು ಹಾಕಿದ್ದ ಹಡಗು ಜುಲೈ 23, 1914 ರಂದು ಭಾರತದತ್ತ ಪ್ರಯಾಣ ಆರಂಭಿಸಿ ಸೆಪ್ಟೆಂಬರ್ 27, 1914 ರಂದು ಕಲ್ಕತ್ತಾ ಬಳಿ ಇರುವ ಬಜ್ ಬಜ್ ರೇವು ತಲುಪಿತು. ಹಡಗು ದಡ ಸೇರುವ ಮುನ್ನ ಬ್ರಿಟಿಷ್ ಸರ್ಕಾರವು 'ಕೊಮಗತ ಮರು' ಪ್ರಯಾಣಿಕರನ್ನು ಅಪಾಯಕಾರಿ ರಾಜಕೀಯ ಚಳವಳಿಕಾರರೆಂದು ಗುರುತಿಸಿ ಅವರ ನಾಯಕರನ್ನು ಸೆರೆ ಹಿಡಿಯುವ ಭರದಲ್ಲಿ ಗುಂಡಿನ ಮಳೆಗರೆಯಿತು. 18 ಮಂದಿ ಗುಂಡಿಗೆ ಬಲಿಯಾದರು. ನೂರಾರು ಜನ ಗಾಯಗೊಂಡರು. ಗುರುದಿತ ಸಿಂಗ್ ಸೇರಿದಂತೆ 29 ಮಂದಿ ತಪ್ಪಿಸಿಕೊಂಡರು."

1915 ರ ಮೊದಲ ಭಾಗದಲ್ಲಿ ಘದರ್ ಪಕ್ಷದ ನಾಯಕರು, ಕೆನಡಾ ಮತ್ತು ಅಮೆರಿಕ ತೊರೆದು ಸ್ವದೇಶಕ್ಕೆ ತಂಡಗಳಲ್ಲಿ ವಾಪಸಾದರು. ಅವರ ಗುರಿ ಬ್ರಿಟಿಷರ ವಿರುದ್ಧ ಬಂಡೇಳುವಂತೆ ಬಾರತೀಯ ಸೈನಿಕರನ್ನು ಪ್ರೇರೇಪಿಸುವುದೇ ಆಗಿತ್ತು. ಫೆಬ್ರವರಿ 21, 1915 ರಂದು ದಿನಾಂಕವನ್ನೂ ನಿಗದಿಪಡಿಸಲಾಗಿತ್ತು. ಒಬ್ಬ ದೇಶ ದ್ರೋಹಿಯು ಈ ಮಾಹಿತಿಯನ್ನು ಗೂಢಚಾರಿಗಳಿಗೆ ಕೊಟ್ಟ ಪರಿಣಾಮವಾಗಿ ಅವರ ಬಂಧನವಾಯಿತು. ನಂತರ, ಅವರ ವಿರುದ್ಧ ಲಾಹೋರ್ ಪಿತೂರಿ, ಮಂಡಿ ಪಿತೂರಿ, ಬರ್ಮಾ ಪಿತೂರಿ, ಸಿಂಗಪುರ ಪಿತೂರಿಯೇ ಅಲ್ಲದೆ ಸಾಲುಸಾಲಾಗಿ ಹಲವಾರು ಪಿತೂರಿ ಮೊಕದ್ದಮೆಗಳಾದವು. ಘದರ್ ದೇಶಪ್ರೇಮಿಗಳ ಪೈಕಿ 46 ಮಂದಿಯನ್ನು ಗಲ್ಲಿಗೇರಿಸಿ, 64 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿ ಅಂಡಮಾನ್ ಕಾರಾಗೃಹಕ್ಕೆ ತಳ್ಳಿದ್ದೂ ಅಲ್ಲದೆ ನೂರಾರು ಮಂದಿ ವಿವಿಧ ಅವಧಿಯ ಜೈಲು ಶಿಕ್ಷೆಗೊಳಗಾದರು.

ಘದರ್ ಬಂಡಾಯ ವಿಫಲವಾದ ಕೆಲಕಾಲದ ಬಳಿಕ ಪ್ರಪಂಚದ ಚರಿತ್ರೆಯನ್ನೇ ಬದಲಿಸಿದ ರಷ್ಯಾದ ಕ್ರಾಂತಿ 1917 ರಲ್ಲಿ ಸಂಭವಿಸಿತು. ಸಮಾಜವಾದಿ ರಷ್ಯಾ ಮತ್ತು ಅದರ ಮುಖಂಡ ಲೆನಿನ್ ವಸಾಹತು ದೇಶಗಳ ವಿಮೋಚನಾ ಹೋರಾಟಗಳಿಗೆ ವ್ಯಕ್ತಪಡಿಸಿದ ತುಂಬು ಹೃದಯದ ಬೆಂಬಲದಿಂದ ಆಕರ್ಷಿತರಾಗಿದ್ದ ಘದರ್ ಮುಖಂಡರುಗಳಲ್ಲಿ ಇಬ್ಬರು – ಭಾಯ್ ಸಂತೋಕ್ ಸಿಂಗ್ ಮತ್ತು ರತನ್ ಸಿಂಗ್– ಕಮ್ಯೂನಿಸ್ಟ್ ಅಂತರಾಷ್ಟ್ರೀಯದ ನಾಲ್ಕನೇ ಅಧಿವೇಶನದಲ್ಲಿ ಭಾಗವಹಿಸಿದ್ದರು. ರಷ್ಯಾ

ಪ್ರೀತಿಯಿಂದ 'ಘದರಿ ಬಾಬ'ಗಳು ಎಂದು ಕರೆಯುತ್ತಿದ್ದ ಭಾಯ್ ಸಂತೋಕ್ ಸಿಂಗ್, ರತನ್ ಸಿಂಗ್, ಜ್ವಾಲ ಸಿಂಗ್, ಸೋಹನ್ ಸಿಂಗ್ ಭಾಕ್ನಾ, ಕರಮ್ ಸಿಂಗ್ ಚೀಮಾ ಮುಂತಾದವರು 1936 ರಲ್ಲಿ 'ಅಖಿಲ ಭಾರತ ಕಿಸಾನ್ ಸಭಾ' ಅಸ್ತಿತ್ವಕ್ಕೆ ಬರಲು ಅಪಾರ ಶ್ರಮವಹಿಸಿದರು. ಘದರ್ ಚಳವಳಿಯು ಕ್ರಾಂತಿಕಾರಿ ನಾಯಕ ಭಗತ್ ಸಿಂಗ್ ಅವರಿಗೆ ಸ್ಫೂರ್ತಿಯ ಸೆಲೆಯಾಗಿತ್ತು. ಅವರು ತಮ್ಮ ಜೇಬಿನಲ್ಲಿ ಕರ್ತಾರ್ ಸಿಂಗ್ ಸರಭಾ ಅವರ ಛಾಯಾಚಿತ್ರವನ್ನು ಯಾವಾಗಲೂ ಇಟ್ಟುಕೊಂಡಿರುತ್ತಿದ್ದರು.



ಕ್ರಾಂತಿಯ ಯಶಸ್ಸಿನಿಂದ ಪ್ರಭಾವಿತರಾಗಿದ್ದ ಭಾಯ್ ಸಂತೋಕ್ ಸಿಂಗ್ ಭಾರತಕ್ಕೆ ಹಿಂತಿರುಗಿದ ನಂತರ, ಕ್ರಾಂತಿಕಾರಿ ಪ್ರಜ್ಞೆ ಜನರಲ್ಲಿ ಮೊಳೆಯುವಂತೆ ಮಾಡುವ ಸಲುವಾಗಿ 1926 ರಲ್ಲಿ ಪಂಜಾಬಿ ಮತ್ತು ಉರ್ದು ಭಾಷೆಗಳಲ್ಲಿ 'ಕಿರ್ತಿ'(ದುಡಿಮೆ) ಎಂಬ ಪತ್ರಿಕೆ ಪ್ರಾರಂಭಿಸಿದರು. ಜೊತೆಗೆ, ಕಿಸಾನ್ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿದರು. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಘದರ್ ಚಳವಳಿಯೇ ಮೊದಲ ನೈಜ ಕ್ರಾಂತಿಕಾರಿ ಹೋರಾಟವೆಂದು ಗುರುತಿಸಿದ್ದ ಮಹಾನ್ ಕ್ರಾಂತಿಕಾರಿ ನಾಯಕ ಭಗತ್ ಸಿಂಗ್ ಕೂಡ ಕೆಲಕಾಲ 'ಕಿರ್ತಿ' ಪತ್ರಿಕೆಯ ಸಂಪಾದಕರಾಗಿದ್ದರು. ಸರಿಯಾದ ರಾಜಕೀಯ ಶಿಕ್ಷಣ ಹಾಗು ಕಾರ್ಮಿಕರು ಮತ್ತು ರೈತರನ್ನು ಅಣಿನೆರಸುವ ಮೂಲಕ ಕ್ರಾಂತಿಕಾರಿ ಬದಲಾವಣೆ ತರಬಹುದೆಂದು ಅವರು ನಂಬಿದ್ದರು.

ರಷ್ಯಾದ ಸಮಾಜವಾದಿ ಕ್ರಾಂತಿಯ ನಂತರ ಮಾಸ್ಕೊದಲ್ಲಿ 'ಯೂನಿವರ್ಸಿಟಿ ಆಫ್ ದ ಟಾಯ್ಲರ್ಸ್ ಆಫ್ ದ ಈಸ್ಟ್' ಸ್ಥಾಪಿತವಾಗಿತ್ತು. ಲೆನಿನ್ ಬೆಂಬಲದಿಂದ ಅಲ್ಲಿಗೆ ವ್ಯಾಸಂಗ ಮಾಡಲು ಹೋದ ಅನೇಕ ಭಾರತೀಯ ಯುವ ಕ್ರಾಂತಿಕಾರಿಗಳು 1936 ರಲ್ಲಿ ಹಿಂತಿರುಗಿ ಕ್ರಾಂತಿಕಾರಿ ಹೋರಾಟಗಳಲ್ಲಿ ನೇರವಾಗಿ ಭಾಗವಹಿಸಿದರು. ಪ್ರೀತಿಯಿಂದ 'ಘದರಿ ಬಾಬ'ಗಳು ಎಂದು ಕರೆಯುತ್ತಿದ್ದ ಭಾಯ್ ಸಂತೋಕ್ ಸಿಂಗ್, ರತನ್ ಸಿಂಗ್, ಜ್ವಾಲ ಸಿಂಗ್, ಸೋಹನ್ ಸಿಂಗ್ ಭಾಕ್ನಾ, ಕರಮ್ ಸಿಂಗ್ ಚೀಮಾ ಮುಂತಾದವರು 1936 ರಲ್ಲಿ 'ಅಖಿಲ ಭಾರತ ಕಿಸಾನ್ ಸಭಾ' ಅಸ್ತಿತ್ವಕ್ಕೆ ಬರಲು ಅಪಾರ ಶ್ರಮವಹಿಸಿದರು.

1917 ರಲ್ಲಿ ರಷ್ಯಾದ ಕ್ರಾಂತಿ ಯಶಸ್ವಿಯಾಗುವ ನಾಲ್ಕು ವರ್ಷ ಮುನ್ನವೇ ಘದರ್ ಪಕ್ಷವು ಭಾರತದ ಸ್ವಾತಂತ್ರ್ಯಕ್ಕೆ ಕರೆ ನೀಡಿತ್ತು. 1921 ರಲ್ಲಿ ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕಮ್ಯೂನಿಸ್ಟ್ ನಾಯಕರಾದ ಸ್ವಾಮಿ ಕುಮಾರಾನಂದ ಮತ್ತು ಮೌಲಾನಾ ಹಸ್ರತ್ ಮೊಹಾನಿ ಅವರು ಮಂಡಿಸಿದ ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಗಾಂಧೀಜಿಯವರು ತಿರಸ್ಕರಿಸಿದ್ದರು. ಕೊನೆಗೆ, ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಡಿಸೆಂಬರ್ 31, 1929 ರಂದು ಸಂಪೂರ್ಣ ಸ್ವರಾಜ್ಯದ ಘೋಷಣೆಯನ್ನು ಕೊಡಲಾಯಿತು.

ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಮೈಲಿಗಲ್ಲುಗಳೆಂದು ಗುರುತಿಸಿರುವ ಕೆಲವು ನವೀನವಾದ ಮತ್ತು ವಿಶಿಷ್ಟವಾದ ಚಳವಳಿಗಳ ಜನಕರೆಂದು ಈ ಘದರ್ ಚಳವಳಿಗಾರರನ್ನು ಕರೆಯಬಹುದು. ಗಾಂಧೀಜಿಯವರ ಪರಿಕಲ್ಪನೆಯಾದ ಅಸಹಕಾರ ಚಳವಳಿಯ ತಿರುಳನ್ನು ಘದರ್ ಚಳವಳಿಗಾರರು ಇನ್ನೊಂದು ರೂಪದಲ್ಲಿ ಕಾರ್ಯಾಚರಣೆ ಮಾಡಬಹುದೆಂದು ಭಾವಿಸಿದ್ದರು. ಮೂವತ್ತು ಕೋಟಿ ಭಾರತೀಯರು ಬ್ರಿಟಿಷರೊಂದಿಗೆ ಸಹಕರಿಸದಿದ್ದರೆ, ಬ್ರಿಟಿಷರು ಭಾರತದಲ್ಲಿ ಇರಲು ಸಾಧ್ಯವಾಗುತ್ತಿರಲಿಲ್ಲ ಎಂಬುದು ಅವರ ಸರಳವಾದ ಮತ್ತು ಖಚಿತವಾದ ನಂಬಿಕೆಯಾಗಿತ್ತು. 'ಪಿಂದಾನ್‌ವಾಲೋ ಮಾಮ್ಲಾ ಬಂದ್ ಕರ್‌ದೇ' (ಗ್ರಾಮವಾಸಿಗಳೇ ಸರ್ಕಾರಕ್ಕೆ ಕಂದಾಯ ಕೊಡುವುದನ್ನು ನಿಲ್ಲಿಸಿ). ಇದು ಅವರ ಘೋಷಣೆಯಾಗಿತ್ತು.

ಸ್ಫೂರ್ತಿಯ ಸೆಲೆ

ಘದರ್ ಚಳವಳಿಯು ಕ್ರಾಂತಿಕಾರಿ ನಾಯಕ ಭಗತ್ ಸಿಂಗ್ ಅವರಿಗೆ ಸ್ಫೂರ್ತಿಯ ಸೆಲೆಯಾಗಿತ್ತು. ಅವರು ತಮ್ಮ ಜೇಬಿನಲ್ಲಿ ಕರ್ತಾರ್ ಸಿಂಗ್ ಸರಭಾ ಅವರ ಛಾಯಾಚಿತ್ರವನ್ನು ಯಾವಾಗಲೂ ಇಟ್ಟುಕೊಂಡಿರುತ್ತಿದ್ದರು. ಸರಭಾ ಅವರ ಬಗ್ಗೆ ಹೀಗೆ ಬರೆದಿದ್ದರು: 'ಹತ್ತೊಂಭತ್ತನೇ ವಯಸ್ಸಿಗೆ ಅವರು ಏನೆಲ್ಲಾ ಮಾಡಿದರು ಎಂದು ಯೋಚಿಸಲೂ ಕೂಡ ವಿಸ್ಮಯವಾಗುತ್ತದೆ.... ಅದೆಂತಹ ಧೈರ್ಯ!

ಅದೆಂತಹ ಆತ್ಮ ವಿಶ್ವಾಸ! ಅಷ್ಟೊಂದು ಸ್ವ-ನಿರಾಕರಣೆ ಮತ್ತು ಸಂಪೂರ್ಣ ಬದ್ಧತೆ ಇರುವವರು ತುಂಬಾ ವಿರಳ....ಕ್ರಾಂತಿಕಾರಕ ಪ್ರೇಮ ಅವರ ಧಮನಿಗಳಲ್ಲಿ ಪ್ರವಹಿಸುತ್ತಿದೆ'. ಒಂದು ರೀತಿಯಲ್ಲಿ ಇದು ಭಗತ್ ಸಿಂಗ್ ಅವರ ಗುಣ ವಿಶೇಷಗಳ ವಿವರಣೆಯೇ ಎನಿಸುತ್ತದೆ. ಭಗತ್ ಸಿಂಗ್ ತಮ್ಮ ಇಪ್ಪತ್ತಮೂರನೇ ವಯಸ್ಸಿನಲ್ಲಿ ಕ್ಷಮಾದಾನ ನಿರಾಕರಿಸಿ, ಮಾರ್ಚ್ 23, 1923 ರಂದು ನಸುನಗುತ್ತಲೇ ನೇಣಿಗೆ ಬಲಿಯಾಗಿ ಮುಂದಿನ ಪೀಳಿಗೆಗಳ ದೇಶಪ್ರೇಮಿ ಯುವಕರಿಗೆ ಯಾವತ್ತೂ ಸ್ಫೂರ್ತಿಯ ಸೆಲೆಯಾಗಿದ್ದಾರೆ.

ಐ ಎನ್ ಎ ನಾಯಕರಾಗಿದ್ದ ಸುಭಾಷ್ ಚಂದ್ರ ಬೋಸ್ ಸ್ವಾತಂತ್ರ್ಯಕ್ಕಾಗಿ ಅನುಸರಿಸಿದ ಸಶಸ್ತ್ರ ಹೋರಾಟದ ವಿಧಾನಗಳು ಕೂಡ ಘದರ್ ಚಳವಳಿಯಿಂದ ಪ್ರಭಾವಿತವಾಗಿದ್ದವು. 1915 ರಲ್ಲಿ ಬ್ರಿಟಿಷರ ವಿರುದ್ಧ ಬಂಡೇಳಲು ಘದರ್ ನಾಯಕರು ಹಾಕಿಕೊಂಡಿದ್ದ ಯೋಜನೆಗೆ ಇನ್ನೊಬ್ಬ ಐಎನ್ಎ ನಾಯಕರಾಗಿದ್ದ ರಾಷ್ ಬೆಹಾರಿ ಬೋಸ್ ಕೈಜೋಡಿಸಿದ್ದರು. 1946ರ ನೌಕಾ ದಂಗೆಯೂ ಸೇರಿದಂತೆ ವಿವಿಧ ರೀತಿಯ ಅನೇಕ ಹೋರಾಟಗಳಿಗೆ ಘದರ್ ಚಳವಳಿಯು ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವಿಸಿದೆ.

'ಕೊಮಗತ ಮರು' ಘಟನೆ ಇಂತಹ ಅನೇಕ ಪ್ರಕರಣಗಳಿಗೆ ಪ್ರೇರಕವಾಗಿ, ಘದರ್ ಚಳವಳಿ ಬೆಳೆಯಲು ಪ್ರಮುಖ ಕಾರಣವಾಗಿ, ಸ್ವಾತಂತ್ರ್ಯ ಸಂಗ್ರಾಮದಲ್ಲೂ ಬಹಳ ಮುಖ್ಯವಾದ ಪಾತ್ರ ವಹಿಸಿದೆ. ದೇಶದ ಸ್ವಾತಂತ್ರ್ಯ ಹೋರಾಟದ ಜೊತೆಗೆ ಅಂತರ್ಗತವಾಗಿರುವ ಜನತೆಯ ಆಶೋತ್ತರಗಳು ಇನ್ನೂ ಪೂರ್ಣವಾಗಿ ಕೈಗೂಡಿಲ್ಲದಿರುವ ಈ ಸಂದರ್ಭದಲ್ಲಿ ಮತ್ತು ಅವುಗಳ ಈಡೇರಿಕೆಗಾಗಿ ಹೋರಾಟ ಮುಂದುವರೆಸುತ್ತಿರುವವರಿಗೆ ಈ ಘಟನೆ ಗಳು ಯಾವಾಗಲೂ ಸ್ಫೂರ್ತಿಯಾಗಿವೆ. ಸಾಮ್ರಾಜ್ಯಶಾಹಿಯ ಬಿಗಿಯಾದ ಹಿಡಿತದಿಂದ ದೇಶವನ್ನು ಬಿಡಿಸುವುದು, ತಡೆದುಕೊಳ್ಳಲಾರದ ಶೋಷಣೆಯಿಂದ ರೈತರಿಗೆ ಬಿಡುಗಡೆ ಸಿಗುವಂತೆ ಮಾಡುವುದು, ಭಾರತದ ಏಕಸ್ವಾಮ್ಯ ಬಂಡವಾಳದ ನೇತೃತ್ವದಲ್ಲಿ ಆಳುವ ವರ್ಗಗಳ ಆರ್ಥಿಕ ಶೋಷಣೆಗೆ ಒಳಪಟ್ಟಿರುವ ಶ್ರಮ ಜೀವಿಗಳನ್ನು ಮತ್ತು ದೇಶದ ಜನತೆಯನ್ನು ಈ ಶೋಷಣೆಯಿಂದ ತಪ್ಪಿಸುವುದು, ಸಿಪಿಐ(ಎಂ) ನಡೆಸುತ್ತಿರುವ ಹೋರಾಟಗಳ ತಕ್ಷಣದ ಗುರಿಯಾಗಿದೆ. ■

ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು ವಹಿಸಿದ ಪಾತ್ರದ ಬಗ್ಗೆ ತಿಳಿಸಿದರೆ ಮುಂದಿನ ತಲೆಮಾರಿನ ವಿದ್ಯಾರ್ಥಿಗಳು ಸ್ಫೂರ್ತಿ ಪಡೆದು ಆ ಪರಂಪರೆಯಲ್ಲಿ ಮುಂದುವರಿದರೆ ಗತಿಯೇನು ಎಂಬ ಭೀತಿಯಿಂದ ಆ ರೋಚಕ ಅಧ್ಯಾಯವನ್ನೇ ಇತಿಹಾಸದ ಪುಟಗಳಿಂದ ಮರೆಮಾಚಲಾಗುತ್ತಿದೆ. ಇದು ತಪಸ್ಸು ಮಾಡುವ ಹಕ್ಕು ಇಲ್ಲದಿದ್ದರಿಂದ ಶಂಭೂಕನ ವಧೆ ಮಾಡಲಾಯಿತು 'ಎಂದಷ್ಟೇ ಹೇಳುವ ಕತೆಯ 'ಪರಂಪರೆ'ಯ ಮುಂದುವರಿಕೆಯಷ್ಟೇ ಎಂದಿದ್ದರು ಭಗತ್‌ಸಿಂಗ್ ಒಡನಾಡಿ ಶಿವ ವರ್ಮಾ. ವಿದ್ಯಾರ್ಥಿ-ಯುವಜನರು ಸಾಮ್ರಾಜ್ಯಶಾಹಿ ವಸಾಹತುಶಾಹಿ ವಿರೋಧಿ ಆಂದೋಲನದಲ್ಲಿ ವಹಿಸಿದ ಪಾತ್ರದ ಒಂದು ಪಕ್ಷಿನೋಟವನ್ನು ಬೀರುವ ಅವರ ಒಂದು ಲೇಖನವನ್ನು ಪತ್ರಕರ್ತ **ವಿಶ್ವ ಕುಂದಾಪುರ** ಇತ್ತೀಚೆಗೆ ಪ್ರಕಟವಾದ ಅವರ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿ' ಪುಸ್ತಕದಲ್ಲಿ 'ಸ್ಫೂರ್ತಿಯ ಪ್ರವಾಹ ತಡೆಯುವ ಹುನ್ನಾರ-ಭಗತ್‌ಸಿಂಗ್ ಒಡನಾಡಿಯ ನುಡಿ' ಎಂಬ ಅಧ್ಯಾಯದಲ್ಲಿ ಅನುವಾದಿಸಿ ಕೊಟ್ಟಿದ್ದಾರೆ, ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ನಮ್ಮ ಓದುಗರಿಗಾಗಿ ಅದನ್ನು ಇಲ್ಲಿ ಕೊಡುತ್ತಿದ್ದೇವೆ.


ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು

ಭಾರತದ ವಿಮೋಚನಾ ಸಮರದ ಕ್ರಾಂತಿಕಾರಿ ಅಧ್ಯಾಯದಲ್ಲಿ ಧೃವತಾರೆಯಂತೆ ಮಿನುಗುವ ವ್ಯಕ್ತಿತ್ವ ಭಗತ್‌ಸಿಂಗ್ ಅವರದು. 23ರ ಎಳವೆಯಲ್ಲೇ ದೇಶಕ್ಕಾಗಿ ನಗುನಗುತ್ತಲೇ ಗಲ್ಲುಗಂಬವೇರಿ, ಸಮ ಸಮಾಜ ರಚನೆಯ ತನ್ನ ಸ್ಪಷ್ಟ ರಾಜಕೀಯ ಕಣ್ಣೋಟದಿಂದ ಯುವಜನತೆಯನ್ನು ಈಗಲೂ ಸೂಜಿಗಲ್ಲಿನಂತೆ ಆಕರ್ಷಿಸುತ್ತಾ ಪ್ರಭಾವ ಬೀರುತ್ತಿರುವ ಭಗತ್‌ಸಿಂಗ್‌ರ ಒಡನಾಡಿಯಾಗಿದ್ದವರು ಶಿವ ವರ್ಮಾ. ಕ್ರಾಂತಿಕಾರಿ ಚಟುವಟಿಕೆಗಳ ಸಂಬಂಧ ಭಗತ್‌ಸಿಂಗ್ ಜತೆ ಆರೋಪಿಯಾಗಿದ್ದ ಒಂಬತ್ತು ಜನರಲ್ಲಿ ಶಿವ ವರ್ಮಾ ಕೂಡ ಒಬ್ಬರು. ಅನೇಕ ಭಾಷಣ, ಲೇಖನಗಳಲ್ಲಿ ವಿದ್ಯಾರ್ಥಿ–ಯುವಜನರು ಸಾಮ್ರಾಜ್ಯಶಾಹಿ ವಸಾಹತುಶಾಹಿ ವಿರೋಧಿ ಆಂದೋಲನದಲ್ಲಿ ವಹಿಸಿದ ಪಾತ್ರವನ್ನು ಶಿವವರ್ಮಾ ಮೆಲುಕು ಹಾಕಿದ್ದಾರೆ. ಅಂದಿನ ಕ್ರಾಂತಿಕಾರಿ ಚಳವಳಿಯಲ್ಲಿ ಸ್ವತಃ ಪಾಲ್ಗೊಂಡಿದ್ದ ವೀರ ಸೇನಾನಿ ಶಿವ ವರ್ಮಾ ಅವರ ಮಾತುಗಳಲ್ಲೇ ಅವರ ಅನುಭವ–ವಿಶ್ಲೇಷಣೆಯನ್ನು ಮನನ ಮಾಡಿಕೊಳ್ಳೋಣ....

****

1929ರಲ್ಲಿ ಅದೇ ಮೊದಲ ಬಾರಿಗೆ ನಾನು ಮತ್ತು ಗೆಳೆಯ ಜಯದೇವ ಡೆಹ್ರಾಡೂನಿಗೆ ಹೋಗಿದ್ದೆವು. ಅಲ್ಲಿಗೆ ಹೋಗಿದ್ದು ಬೇಟೆಯಾಡಲು! ಅದೂ ಅಂತಿಂಥ ಬೇಟೆಯಲ್ಲ!! ಲಾರ್ಡ್ ಇರ್ವಿನ್ ಅವರ ಬೇಟೆಯಾಡಲು!!! ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿ ಇರ್ವಿನ್ ಅಲ್ಲಿ ಪ್ರಾಣಿ ಬೇಟೆಯ ಮೋಜಿಗೆ ಬಂದಿದ್ದರೆ ನಾವು ಆ ಬೇಟೆಗಾರನ ಬೇಟೆಗಾಗಿ ಯೋಜನೆ ರೂಪಿಸಿಕೊಂಡು ಅಲ್ಲಿಗೆ ತೆರಳಿದ್ದೆವು. ಆ ಸಮಯ ಡೆಹ್ರಾಡೂನ್ ದೇಶದೆಲ್ಲೆಡೆಯಿಂದ ಬಂದಿದ್ದ ಸಿಐಡಿಗಳಿಂದ ತುಂಬಿ ಹೋಗಿತ್ತು. ಆದರೂ ಅಂಥಾ ಸನ್ನಿವೇಶದಲ್ಲೂ ನಗರದ ಜನತೆ ನನ್ನಂಥ ಕ್ರಾಂತಿಕಾರಿ ತರುಣರಿಗೆ ಹಲವು ದಿನಗಳ ಕಾಲ ಆಶ್ರಯ ನೀಡಿತು. ಏನೇ ಇರಲಿ, ಇರ್ವಿನ್‌ಗೆ ಯಾವ ಬೇಟೆಯೂ ಸಿಗಲಿಲ್ಲ. ನಮ್ಮ ಯೋಜನೆಯೂ ಕೈಗೂಡದೆ ನಾವು ಕೂಡ ಮರಳಿದೆವು.

1921ರಲ್ಲಿ ಗಾಂಧೀಜಿ ಅಸಹಕಾರ ಆಂದೋಲನವನ್ನು ಆರಂಭಿಸಿದಾಗ ಅವರು ಮನವಿ ಮಾಡಿದ್ದು ಸಮಾಜದ ಎರಡು ವಿಭಾಗಗಳಿಗೆ ಮಾತ್ರ. ಮೊದಲನೆಯದಾಗಿ,



ಪ್ರಾಕ್ಟೀಸ್ ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದ ಮುಖ್ಯವಾಹಿನಗೆ ಸೇರುವಂತೆ ವಕೀಲರಿಗೆ ಕರೆಕೊಟ್ಟರು. ಎರಡನೆಯದಾಗಿ, ವಿದ್ಯಾರ್ಥಿಗಳು ಶಾಲೆ-ಕಾಲೇಜ್ ತೊರೆದು ಚಳವಳಿಗೆ ಧುಮುಕಿ ಆಂದೋಲನಕ್ಕೆ ಓಘ -ಸ್ಫೂರ್ತಿ ತುಂಬುವಂತೆ ಕರೆ ನೀಡಿದರು. ಆ ಕರೆಗೆ ಓಗೊಟ್ಟ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬನಾಗಿದ್ದೆ.

ಆ ಕಾಲದಲ್ಲಿ ಚಳವಳಿಯಲ್ಲಿ ಪಾಲ್ಗೊಂಡು ಸೆರೆಮನೆ ಸೇರುತ್ತಿದ್ದವರಲ್ಲಿ ಶೇಕಡ 40ರಷ್ಟು ಮಂದಿ ವಿದ್ಯಾರ್ಥಿಗಳೇ ಆಗಿದ್ದರು. ಉತ್ಸಾಹಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಇಲ್ಲವಾಗಿದ್ದರೆ ಸ್ವರಾಜ್ಯ ಘೋಷಣೆಯೊಂದಿಗೆ ಭುಗಿಲೆದ್ದಿದ್ದ ಚಳವಳಿ ಹಳ್ಳಿಯಿಂದ ಹಳ್ಳಿಗೆ, ಮನೆಯಿಂದ ಮನೆಗೆ ತಲುಪುವುದು ಸಾಧ್ಯವೇ ಇರುತ್ತಿರಲಿಲ್ಲ. ಹಳ್ಳಿಗಳ ಮುಖವನ್ನೇ ನೋಡದಿದ್ದ ವಿದ್ಯಾರ್ಥಿಗಳು ಹಾಗೂ ಶಾಲೆ ಕಾಲೇಜ್‌ಗೆ ಹೋಗಿ ಬರುವುದಕ್ಕಾಗಿ ಹೊರತುಪಡಿಸಿ ಬೇರೆ ಯಾವುದಕ್ಕೂ ಮನೆಯಿಂದ ಹೊರಗೆ ಕಾಲಿಡದಿರುತ್ತಿದ್ದ ವಿದ್ಯಾರ್ಥಿಗಳೂ ಬದಲಾದ ಸನ್ನಿವೇಶದಲ್ಲಿ ರಾಷ್ಟ್ರಾಂದೋಲನದ ಕರ್ತವ್ಯದ ಕರೆಗೆ ಓಗೊಟ್ಟರು. ಖಾದಿ ಬಟ್ಟೆ

ಧರಿಸಿ, ಹೆಗಲಿಗೊಂದು ಚೀಲ ನೇತು ಹಾಕಿಕೊಂಡು ಹಳ್ಳಿ ಹಳ್ಳಿಗೆ ತೆರಳಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ನಿರ್ವಹಿಸಿದ ಪಾತ್ರದ ಒಂದು ಮುಖವಿದು.

ಈ ಪಾತ್ರಕ್ಕೆ ಇನ್ನೊಂದು ಮಹತ್ವದ ಮುಖವೂ ಇದೆ. ಸ್ವಾತಂತ್ರ್ಯ ಸಮರದ ಕ್ರಾಂತಿಕಾರಿ ಧಾರೆಯನ್ನು ಗಮನಿಸುವಾಗ, ಬಹುತೇಕ ಕ್ರಾಂತಿಕಾರಿಗಳು ಶಾಲೆ-ಕಾಲೇಜ್‌ಗಳಿಂದಲೇ ನೇರವಾಗಿ ಕ್ರಾಂತಿಯ ಕಾರ್ಯಕ್ಷೇತ್ರಕ್ಕೆ ಧುಮುಕಿದ್ದರು ಎನ್ನುವುದು ತಿಳಿಯುತ್ತದೆ.

ಚಂದ್ರಶೇಖರ ಅಜಾದ್ ಮತ್ತು ರಾಜಗುರು ಸಂಸ್ಕೃತದ ವಿದ್ಯಾರ್ಥಿಗಳಾಗಿದ್ದರು. ಭಗತ್‌ಸಿಂಗ್, ಸುಖದೇವ್ ಮತ್ತು ಭಗವತಿ ಚರಣ್ ವೋರಾ ಮೊದಲಾದವರು ತಿಲಕ್ ರಾಜಕೀಯ ಶಾಲೆ (ತಿಲಕ್ ಸ್ಕೂಲ್ ಆಫ್ ಪಾಲಿಟಿಕ್ಸ್ Tilak School of Politics) ಎಂದೇ ಖ್ಯಾತವಾಗಿದ್ದ ಲಾಹೋರ್‌ನ ನ್ಯಾಷನಲ್ ಕಾಲೇಜ್ ವಿದ್ಯಾರ್ಥಿಗಳಾಗಿದ್ದರು. ಮಹಾವೀರ ಸಿಂಗ್ ಮತ್ತು ಸಾಲಿಗ್ರಾಮ ಶುಕ್ಲಾ ಕಾನ್ಪುರದ ಡಿ.ಎ.ವಿ. ಕಾಲೇಜ್ ವಿದ್ಯಾರ್ಥಿಗಳಾಗಿದ್ದರು. ಇದು ಕ್ರಾಂತಿಕಾರಿ ಆಂದೋಲನದಲ್ಲಿ ಭಾಗವಹಿಸಿ ಹುತಾತ್ಮರಾದವರ ಪಟ್ಟಿಯಷ್ಟೆ. ಅದೇ ರೀತಿ ಬಂಗಾಳದ ಶಾಂತಿ, ಸುನಿತಿ, ಪ್ರೀತಿಲತಾ ಮತ್ತು ವೀಣಾ ಮೊದಲಾದ ವಿದ್ಯಾರ್ಥಿನಿಯರು ಶಾಲೆ-ಕಾಲೇಜ್ ತೊರೆದು ದೇಶ ವಿಮೋಚನೆಯ ಕ್ರಾಂತಿಕಾರಿ ಸಮರದಲ್ಲಿ ಪಾಲ್ಗೊಂಡವರು. ಅವರೆಲ್ಲ ತಮ್ಮ ಕಾರ್ಯ ಸಾಧನೆಯ ಪ್ರಕ್ರಿಯೆಯಲ್ಲಿ ಬಾಂಬ್, ಪಿಸ್ತೂಲ್‌ಗಳನ್ನು ಕೈಗೆತ್ತಿಕೊಂಡು ಹೋರಾಡುತ್ತಾ ಮಡಿದು ಹುತಾತ್ಮರಾಗಿ ಸ್ಫೂರ್ತಿಯ ಚಿಲುಮೆಯಾಗಿರುವ ಹರೆಯದ ವಿದ್ಯಾರ್ಥಿನಿಯರು. ಕ್ರಾಂತಿಕಾರಿ ಹೋರಾಟಗಳ ಸಾಲಿನಲ್ಲಿ ಚಿರಸ್ಥಾಯಿ ಸ್ಥಾನ ಪಡೆದ ಪ್ರಕರಣಗಳಲ್ಲಿ ಒಂದಾದ ಚಿತ್ತಗಾಂಗ್ ಶಸ್ತ್ರಾಗಾರ ದಾಳಿಯ ಬೆನ್ನೆಲುಬಾಗಿದ್ದವರು 16ರಿಂದ 22 ವರ್ಷದೊಳಗಿನ ತರುಣ-ತರುಣಿಯರು. ಇವೆಲ್ಲವೂ ಅಂದಿನ ಕ್ರಾಂತಿಕಾರಿ ಚಳವಳಿಗೆ ವಿದ್ಯಾರ್ಥಿಗಳ ಕೊಡುಗೆಯಾಗಿತ್ತು.

ಅದಾದ ನಂತರದ್ದು 1930-31ರ ಚಳವಳಿಯ ಕಾಲಘಟ್ಟ. ಆಗ ಕೂಡ ಜೈಲುಗಳಲ್ಲಿ ಕೇಳಿಬಂದಿದ್ದು ವಿದ್ಯಾರ್ಥಿ-ಯುವಜನರ ಕಲರವವೇ. ಆಗ ನಾನು ಮದ್ರಾಸ್ (ಚೆನ್ನೈ) ಜೈಲಿನಲ್ಲಿ ಬಂಧಿತನಾಗಿದ್ದೆ. ಆಗ ಕೇವಲ 16ರ ಹರೆಯದವರಾಗಿದ್ದ ಪಿ. ಸುಂದರಯ್ಯ ಅವರಂಥ, ನಂತರದಲ್ಲಿ ಘಟಾನುಘಟಿ ನಾಯಕರಾಗಿ ಹೊರಹೊಮ್ಮಿದ ಅನೇಕ ಜನರು ಸೆರೆಮನೆಯಲ್ಲಿದ್ದರು. ದೇಶದೆಲ್ಲೆಡೆ ವಿದ್ಯಾರ್ಥಿ-ಯುವಜನರು ನಾಮುಂದು-ತಾಮುಂದು ಎಂದು ಹೋರಾಟಕ್ಕೆ ಧುಮುಕಿ ಜೈಲು ಸೇರಿದರು, ಲಾಠಿ ಏಟಿನ ರುಚಿ ಸವಿದರು. 1921-22ರಲ್ಲಿ ನಡೆದದ್ದು 'ಜೈಲು ತುಂಬಿ' (ಜೈಲ್ ಭರೋ) ಚಳವಳಿಯಾದರೆ, 1930-31ರ ಆಂದೋಲನ 'ಲಾಠಿ ಏಟು ತಿನ್ನಿ' ಆಂದೋಲನವಾಯಿತು ಎಂಬುದರಲ್ಲಿ ಎರಡು ಮಾತಿಲ್ಲ.

ಒಬ್ಬನೇ ಒಬ್ಬ ವಿದ್ಯಾರ್ಥಿ ಅಥವಾ ಯುವಕನ ಬೆನ್ನ ಮೇಲೆ ಲಾಠಿಯೇಟು ಬಿದ್ದಿರಲಿಲ್ಲ, ಎಲ್ಲರೂ ಎದೆಯ ಮೇಲೆ ಲಾಠಿಯೇಟು ಪಡೆದಿದ್ದರು ಎನ್ನುವುದು ಇಲ್ಲಿ ಗಮನಾರ್ಹ.

ಭಾರತೀಯರಿಗೆ ಒಂದು ಪಾಠ ಕಲಿಸಲಿಕ್ಕಾಗಿ ಇಂಗ್ಲೆಂಡಿನಿಂದ ಲಾರ್ಡ್ ವೆಲ್ಲಿಂಗ್ಟನ್‌ನನ್ನು ಭಾರತಕ್ಕೆ ಕಳಿಸಲಾಯಿತು. ಆರು ತಿಂಗಳೊಳಗೆ ಭಾರತೀಯರು ಶರಣಾಗುವಂತೆ ಮಾಡುವುದಾಗಿ ವೆಲ್ಲಿಂಗ್ಟನ್ ಘೋಷಿಸಿದ. ಆತ ಭಾರತಕ್ಕೆ ಬರುತ್ತಲೇ ಬಂಧನ ಪರ್ವ ಆರಂಭವಾಯಿತು. ಆ ಸಂದರ್ಭ ಇಂಗ್ಲೆಂಡಿನಲ್ಲಿದ್ದ ಗಾಂಧೀಜಿ ಭಾರತಕ್ಕೆ ಮರಳಿದರು. "ನಾನು ಯಾವುದೇ ಚಳವಳಿಯನ್ನು ಆರಂಭಿಸಿಲ್ಲ" ಎಂದು ಗಾಂಧೀಜಿ ಸ್ಪಷ್ಟಪಡಿಸಿದರು. ವಾಸ್ತವವಾಗಿ 1930-31ರ ಚಳವಳಿ ಗಾಂಧೀಜಿ ಚಳವಳಿಯಾಗಿದ್ದರೆ 1932-33ರ ಈ ಆಂದೋಲನ ಅಕ್ಷರಶಃ ಜನತಾ ಆಂದೋಲನವಾಗಿತ್ತು. 1930-31ರ ಆಂದೋಲನದ ವೇಳೆ ಬಂಧಿತರಾದ ಹಾಗೂ ಲಾಠಿ ಏಟು ತಿಂದವರ ಸಂಖ್ಯೆಗಿಂತಲೂ ಹೆಚ್ಚಿನ ಜನರು 1932-33ರ ಚಳವಳಿಯಲ್ಲಿ ಬಂಧಿತರಾದರು ಹಾಗೂ ಕೆಚ್ಚೆದೆಯಿಂದ ಹಿಂಸೆಯನ್ನು ಅನುಭವಿಸಿದರು. ಅದು ಲಾರ್ಡ್ ವೆಲ್ಲಿಂಗ್ಟನ್ ಮತ್ತು ಭಾರತದ ಜನರ ನಡುವಿನ ನೇರ ಮುಖಾಮುಖಿಯಾಗಿತ್ತು.

ಆರು ತಿಂಗಳೊಳಗೆ ಮೊಣಕಾಲೂರುವಂತೆ ಮಾಡುವುದಾಗಿ ದರ್ಪದಿಂದ ಹೇಳಿದ್ದ ಅದೇ ವೆಲ್ಲಿಂಗ್ಟನ್ ಭಾರತೀಯ ಜನತೆಯ ಆಕ್ರೋಶದ ಕಾವನ್ನು ಎದುರಿಸಲಾಗದೆ ಈ ಚಳವಳಿಯನ್ನು ಹಿಂತೆಗೆದುಕೊಳ್ಳುವಂತೆ ಗಾಂಧೀಜಿಗೆ ಮನವಿ ಮಾಡಿದ. ಮಾತ್ರವಲ್ಲದೆ, ಎಲ್ಲಾ ಬಂಧಿತರನ್ನು ಬಿಡುಗಡೆ ಮಾಡುವುದಾಗಿಯೂ ಆಶ್ವಾಸನೆ ನೀಡಿದ.

"ಚಳವಳಿಯನ್ನು ನಾನು ಆರಂಭಿಸಿಲ್ಲವಾದ್ದರಿಂದ ಅದನ್ನು ವಾಪಸ್ ಪಡೆಯಲು ನನಗೆ ಸಾಧ್ಯವಿಲ್ಲ" ಎಂದು ಗಾಂಧೀಜಿ ಹೇಳಿದರು. ಸೂರ್ಯ ಮುಳುಗದ ಸಾಮ್ರಾಜ್ಯ ಇಕ್ಕಟ್ಟಿಗೆ ಸಿಲುಕಿದಂತಾಯಿತು. ಕೊನೆಗೆ, ವೆಲ್ಲಿಂಗ್ಟನ್‌ರ ಮುಖ ಉಳಿಸುವ ಸಲುವಾಗಿ, ಚಳವಳಿಯನ್ನು ಹಿಂತೆಗೆದುಕೊಂಡಿರುವುದಾಗಿ ಗಾಂಧೀಜಿ ಸಾರ್ವಜನಿಕವಾಗಿ ಹೇಳಿಕೆ ನೀಡುವ ಒತ್ತಡಕ್ಕೆ ಒಳಗಾದರು. ಇದು ಭಾರತದ ಯುವಜನತೆಗೆ ಸಂದ ದೊಡ್ಡ ಜಯವಾಗಿತ್ತು.

1932–33ರ ಆಂದೋಲನದ ಈ ಘಟ್ಟದ ನಂತರ, 1936ರಲ್ಲಿ ಭಾರತದ ವಿದ್ಯಾರ್ಥಿ ಆಂದೋಲನ ಒಂದು ಸಂಘಟಿತ ಸ್ವರೂಪ ಪಡೆಯಿತು. ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ರೂಪದಲ್ಲಿ ಹೋರಾಡಲು ಆರಂಭಿಸಿದರಾದರೂ ದೇಶ ವಿಮೋಚನೆಯ ಕರ್ತವ್ಯವನ್ನು ಮುಂಚೂಣಿಯಲ್ಲಿಡಲು ಮರೆಯಲಿಲ್ಲ. ಈ ಚಳವಳಿಗಳ ಪರಿಣಾಮವನ್ನು 1942ರಲ್ಲಿ ಕಾಣಬಹುದಾಗಿತ್ತು.

1942ರ ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ) ಚಳವಳಿಯ ಸಂದರ್ಭದ ಒಂದು ಪ್ರಕರಣವನ್ನು ಗಮನಿಸೋಣ. ನಾನು ಆ ಸಂದರ್ಭ ಅಲಹಾಬಾದ್‌ನ ನೈನಿ ಸೆರೆಮನೆಯಲ್ಲಿ ಬಂಧಿಯಾಗಿದ್ದೆ. ನಗರದಲ್ಲಿ 144ನೇ ಸೆಕ್ಷನ್ ಅನ್ವಯ ಪ್ರತಿಬಂಧಕಾಜ್ಞೆ ವಿಧಿಸಲಾಗಿತ್ತು. ಮೆರವಣಿಗೆ, ಪ್ರದರ್ಶನಗಳನ್ನು ನಿಷೇಧಿಸಲಾಗಿತ್ತು. ಈ ಆಜ್ಞೆಯನ್ನು ಉಲ್ಲಂಘಿಸಲು ನಮ್ಮ ವಿದ್ಯಾರ್ಥಿಗಳು ನಿರ್ಧರಿಸಿದರು.

ಕೈಯಲ್ಲಿ ಬಾವುಟ ಹಿಡಿದ ಲಾಲ್ ಪರಮಧರ್ ಸಿಂಗ್ ಎಂಬ ವಿದ್ಯಾರ್ಥಿ ಮುಂಚೂಣಿಯಲ್ಲಿದ್ದ ಮೆರವಣಿಗೆ ಆರಂಭವಾಯಿತು. ಬ್ರಿಟಿಷ್ ಜಿಲ್ಲಾ ಮ್ಯಾಜಿಸ್ಟ್ರೇಟ್ ತನ್ನ ಪೂರ್ಣ ಬಲದೊಂದಿಗೆ ಸಜ್ಜಾಗಿದ್ದು ಹಾಜರಿದ್ದರು. ಮೆರವಣಿಗೆ ನಡೆಸದೆ ಹಿಂದಿರುಗುವಂತೆ ಆತ ಆಜ್ಞಾಪಿಸಿದ. ಇದಕ್ಕೆ ಕಿವಿಗೊಡದೆ ವಿದ್ಯಾರ್ಥಿಗಳು ಮುನ್ನುಗ್ಗುತ್ತಲೇ ಇದ್ದರು. ಆಗ 'ಫಯರ್' ಎಂಬ ಆದೇಶ, ಹಿಂದೆಯೇ ಗುಂಡಿನ ಸದ್ದು. ಪೈಶಾಚಿಕ ಬ್ರಿಟಿಷ್ ಪಡೆಯ ಬಂದೂಕಿನಿಂದ ಹೊರಟ ಗುಂಡು ಪರಮಧರ್‌ನ ಎದೆಯನ್ನು ಹೊಕ್ಕಿತ್ತು. ಆತ ಇನ್ನೇನು ಕುಸಿದು ಬೀಳುತ್ತಾನೆ ಎನ್ನುವಷ್ಟರಲ್ಲಿ ಅವನ ಹಿಂದಿದ್ದ ಇನ್ನೊಬ್ಬ ವಿದ್ಯಾರ್ಥಿ ಬಾವುಟವನ್ನು ತೆಗೆದುಕೊಂಡು ಇಂಕ್ವಿಲಾಲ್ ಜಿಂದಾಬಾದ್ ಘೋಷಣೆ ಮೊಳಗಿಸುತ್ತಾ ಮುನ್ನಡೆದ. ಅವನ ಮೇಲೆಯೂ ಗುಂಡು ಹಾರಿಸಲಾಯಿತು. ಮೂರನೇ ವಿದ್ಯಾರ್ಥಿ ಬಾವುಟವನ್ನು ತನ್ನ ಕೈಗೆ ತೆಗೆದುಕೊಂಡ. ಲಾಠಿ–ಗುಂಡೇಟುಗಳಿಂದ ಅನೇಕ ವಿದ್ಯಾರ್ಥಿಗಳು ಆಸ್ಪತ್ರೆಗಳಲ್ಲಿ ಚೇತರಿಸಿಕೊಂಡರು. ಅದರೆ ಪರಮಧರ್ ಮಾತ್ರ ಹುತಾತ್ಮನಾದ.

ಗುಂಡೇಟಿನಿಂದ ಒಬ್ಬೊಬ್ಬರಾಗಿಯೇ ವಿದ್ಯಾರ್ಥಿಗಳು ಧರೆಗೆ ಉರುಳುತ್ತಿದ್ದರೂ ದೇಶಪ್ರೇಮದ ಸ್ವಾತಂತ್ರ್ಯದ ರಣಕಹಳೆಯ ಸಂಕೇತವಾದ ಧ್ವಜ ಮಾತ್ರ ನೆಲಕ್ಕೆ ಬೀಳದಂತೆ ತಡೆದು ಅದನ್ನು ಕೈಯಿಂದ ಕೈಗೆ ಬದಲಾಯಿಸುತ್ತಾ ಮೇಲೆತ್ತಿ ಹಿಡಿಯುತ್ತಾ ಹೋದುದನ್ನು ಕಾಣುತ್ತಿದ್ದ ಆ ಬ್ರಿಟಿಷ್ ಮ್ಯಾಜಿಸ್ಟ್ರೇಟ್ ಆವಕ್ಕಾಗಿ ಹೋದ. "ಇವರಿಗೇನು ಹುಚ್ಚು ಹಿಡಿದಿದೆಯೇ? ಗುಂಡುಗಳು ಅವರ ಮೇಲೆ ಯಾವುದೇ ಪರಿಣಾಮ ಬೀರದೇ!..." ಎಂದು ಆತ ಉದ್ಗರಿಸಿದ.

ಇದು ನಮ್ಮ ದೇಶದ ವಿದ್ಯಾರ್ಥಿಗಳು ಸ್ವಾತಂತ್ರ್ಯಕ್ಕಾಗಿ ನಡೆಸಿದ ವೀರ ಸಂಗ್ರಾಮದಲ್ಲಿ ನಿರ್ವಹಿಸಿದ್ದ ಪಾತ್ರಕ್ಕೆ ಒಂದು ಅನನ್ಯ ಉದಾಹರಣೆಯಷ್ಟೆ.

ದೇಶಕ್ಕೆ ತಾವೇ ಸ್ವಾತಂತ್ರ್ಯ ತಂದುಕೊಟ್ಟಿದ್ದು ಎಂದು ಇಂದಿನ ಕೆಲ ರಾಜಕಾರಣಿಗಳು ಹೇಳುವಾಗ ಮನಸ್ಸಿಗೆ ಖೇದವೆನಿಸುತ್ತದೆ. ಯಾರ್‍ಯಾರು ಏನೇನು ಮಾಡಿದರು, ಯಾರ ನಿಜಬಣ್ಣ ಯಾವುದು ಎಂಬುದನ್ನು ಹತ್ತಿರದಿಂದ ಬಲ್ಲೆನಾದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ...

ನೈನಿ ಜೈಲಿನಲ್ಲಿ ನನ್ನ ಜತೆಗಿದ್ದ ಕೆಲವರು, ಅಲ್ಲಿಂದ ತಪ್ಪಿಸಿಕೊಂಡು ಮೂರು ದಿನಗಳಾದ ಮೇಲೆ ಈ ರೀತಿಯ ಜೀವನ ಸಹಿಸಲಸಾಧ್ಯ ಎಂದು ಗೊಣಗಲು ಶುರು ಮಾಡಿದರು. ಮ್ಯಾಜಿಸ್ಟ್ರೇಟ್‌ಗೆ ಫೋನ್ ಮಾಡಿದ ಅವರು, ಮಾಹಿತಿ ನೀಡಿ, 'ನಾವು ಇಂತಿಂಥ ಕಡೆ ಇಂತಿಂಥ ವೇಳೆಯಲ್ಲಿ ಇರುತ್ತೇವೆ. ನೀವು ಬಂದು ನಮ್ಮನ್ನು ಬಂಧಿಸಿ' ಎಂದು ತಿಳಿಸಿದರು. ಇದು ಕೆಲವು ನಾಯಕರ ಪಾತ್ರ! ಒಂದೆಡೆ ವಿದ್ಯಾರ್ಥಿಗಳ ಕೆಚ್ಚು ಗುಂಡೇಟು ಬೀಳುತ್ತಿದ್ದರೂ ಮುನ್ನುಗ್ಗುವ ಸಾಹಸ! ಇನ್ನೊಂದೆಡೆ ಒಂದು ನಾಲ್ಕು ದಿನ ಕಾಲ ಕಷ್ಟ ಎದುರಿಸಲಾಗದೆ ವಸಾಹತುಶಾಹಿಗಳ ಮುಂದೆ ಹಲ್ಲುಗಿಂಜಿ ನಿಂತು ಅವರ ಮೊರೆ ಹೋಗುವ ನಾಯಕರು!! ಅಬ್ಬಾ... ಆನೆ–ಆಡಿನ ಅಂತರವೇ!

ಮಕ್ಕಳ ವೀರೋಚಿತ ಹೋರಾಟ ಮನೋಭಾವಕ್ಕೆ ಕನ್ನಡಿ ಹಿಡಿಯುವ ಇನ್ನೊಂದು ಪ್ರಕರಣವನ್ನು ಗಮನಿಸೋಣ.

ಹತ್ತು ವರ್ಷದ ಬಾಲಕ ಪಾರಸನಾಥ ಏಳನೇ ತರಗತಿಯ ವಿದ್ಯಾರ್ಥಿ. ಮೆರವಣಿಗೆಯೊಂದರ ಮುಂಚೂಣಿಯಲ್ಲಿದ್ದ ಆತನ ತೋಳಿಗೆ ಗುಂಡೇಟು ಬೀಳುತ್ತದೆ. ಅವನನ್ನು ಜೈಲಿಗೆ ಕರೆದುಕೊಂಡು ಹೋಗಿ ಬ್ಯಾರಕ್‌ಗಳಲ್ಲಿ ಇರಿಸಲಾಗುತ್ತದೆ. ಅಲ್ಲಿಗೆ ವೈದ್ಯರು, ಜೈಲ್ ಅಧಿಕಾರಿ, ಸಿ.ಐ.ಡಿ, ಪೊಲೀಸ್ ಹೀಗೆ ಒಬ್ಬೊಬ್ಬರಾಗಿ ಬಂದು "ನೀನು ಕ್ಷಮೆ ಕೋರಿದರೆ ನಿನ್ನನ್ನು ಬಿಟ್ಟು ಬಿಡುತ್ತೇವೆ. ಇಲ್ಲದಿದ್ದರೆ ಗುಂಡು ತಗಲಿದ ನಿನ್ನ ಕೈಯನ್ನೇ ಕಡಿದು ಹಾಕುತ್ತೇವೆ" ಎಂದು ಬೆದರಿಸುತ್ತಾರೆ. ಆದರೆ ವಸಾಹತುಶಾಹಿಗಳ ಗೊಡ್ಡು ಬೆದರಿಕೆಗೆ ಮಣಿಯಬಾರದು ಎಂದು ದೃಢ ನಿರ್ಧಾರ ಮಾಡಿದ ಬಾಲಕ ಪಾರಸನಾಥ ಕ್ಷಮೆ ಕೇಳಲು ನಿರಾಕರಿಸುತ್ತಾನೆ. ದೇಶದೇಶಗಳನ್ನೇ ಕೊಳ್ಳೆಹೊಡೆದು ಕೊಬ್ಬಿದ ಕರುಣೆಯೇ ಇಲ್ಲದ ಬ್ರಿಟಿಷ್ ಅಧಿಕಾರಿಗಳು ಪಾರಸನ ಎರಡೂ ಕೈಗಳನ್ನು ತುಂಡರಿಸುತ್ತಾರೆ. ಅಬ್ಬಾ, ಅದೆಂಥಾ ರೊಚ್ಚು–ಕೆಚ್ಚು ಆ ಬಾಲಕನದ್ದು!.

ಮಾತೃಭೂಮಿಯನ್ನು ಪರತಂತ್ರದಿಂದ

ಬಿಡುಗಡೆ ಮಾಡುವ ಸಂಗ್ರಾಮದಲ್ಲಿ ಯಾವ ತ್ಯಾಗಕ್ಕೂ ಸಿದ್ಧ ಎಂಬ ಮನೋಭಾವ ಹಾಗೂ ಅದಕ್ಕೆ ತಕ್ಕ ನಡೆ ವಿದ್ಯಾರ್ಥಿ ಯುವಜನ ಸಮುದಾಯದಲ್ಲಿ.

ಚಿತ್ತಗಾಂಗ್ ಖ್ಯಾತಿಯ ಗಣೇಶ್ ಘೋಷ್ ವಿವರಿಸಿದ್ದ ಒಂದು ಘಟನೆಯನ್ನೂ ಹೇಳಬೇಕೆನಿಸುತ್ತದೆ. ಬಂಗಾಳದಲ್ಲಿ ಪ್ರಮುಖ ನಾಯಕರಲ್ಲೊಬ್ಬರಾದ ಅಬ್ದುಲ್ ರಷೀದ್‌ರನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ವ್ಯಾಪಕ ಚಳವಳಿ ನಡೆಯುತ್ತಿದ್ದಾಗಿನ ಸಂದರ್ಭ. ದೊಡ್ಡ ದೊಡ್ಡ ಕಟ್ಟಡಗಳ ಮೇಲೆ ಅವಿತು ಕುಳಿತ ಪೊಲೀಸರು ರಸ್ತೆಗಳತ್ತ ಕಣ್ಣು ನೆಟ್ಟಿದ್ದರು. ಆಗ ಕರ್ಫ್ಯೂ ಜಾರಿಯಲ್ಲಿತ್ತು. ಊರಿನ ವಿದ್ಯುತ್ ಕಂಬವೊಂದರ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಲು ಕೆಲವು ವಿದ್ಯಾರ್ಥಿಗಳು ನಿರ್ಧರಿಸಿದರು. ಧ್ವಜ ಹಾರಿಸಲು ಅವರಲ್ಲೇ ಪೈಪೋಟಿ ಉಂಟಾಯಿತು. ಒಬ್ಬ ವಿದ್ಯಾರ್ಥಿ ಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ಕಂಬವನ್ನು ಏರತೊಡಗಿದ. ಮರೆಯಲ್ಲಿ ಕುಳಿತಿದ್ದ ಪೊಲೀಸ್ ಹಾರಿಸಿದ ಗುಂಡು ತಗಲಿದ ಆ ವಿದ್ಯಾರ್ಥಿ ಕೆಳಗೆ ಉರುಳಿದ. ಇನ್ನೊಬ್ಬ ವಿದ್ಯಾರ್ಥಿ ಬಾವುಟ ಹಿಡಿದು ಏರಲಾರಂಭಿಸಿದ. ಅವನ ಮೇಲೂ ಗುಂಡೇಟು. ಅವನೂ ಕೆಳಗೆ ಬಿದ್ದ. ಮೂರನೇ ವಿದ್ಯಾರ್ಥಿ ಧ್ವಜ ಹಿಡಿದು ಸರಸರನೆ ಕಂಬವೇರಿ ಧ್ವಜವನ್ನು ಹಾರಿಸಿಯೇ ಬಿಟ್ಟ. ಗುರಿಸಾಧಿಸಿದ ಸಂಭ್ರಮದಲ್ಲಿ ಕಂಬದಿಂದ ಇಳಿಯುತ್ತಿದ್ದ ಅವನ ಮೇಲೆಯೂ ಗುಂಡು ಹಾರಿಸಲಾಯಿತು.

ಈ ರೀತಿಯಾಗಿ ದೇಶದ ಒಂದಲ್ಲ ಒಂದು ಭಾಗದಲ್ಲಿ ಒಂದಲ್ಲ ಒಂದು ಊರಿನಲ್ಲಿ ಯುವಜನರು ಮತ್ತು ವಿದ್ಯಾರ್ಥಿಗಳು ಅಮಿತೋತ್ಸಾಹದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಅಪಾರ ಕಷ್ಟ, ನಷ್ಟ ಅನುಭವಿಸಿದರು. ಪ್ರಾಣವನ್ನು ಕಳೆದುಕೊಂಡರು. ಆದರೆ, ವಿಮೋಚನೆ ಸಮರದಲ್ಲಿ ಜನಸಾಮಾನ್ಯರು, ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವಜನರು ವಹಿಸಿದ ಪಾತ್ರವನ್ನು ಸ್ವಾತಂತ್ರ್ಯ ಹೋರಾಟದ ಇತಿಹಾಸದಿಂದ ತೆಗೆದುಹಾಕುತ್ತಿರುವುದು ದೇಶದ ದೌಭಾಗ್ಯವೇ ಸರಿ. ಈ ಹೋರಾಟಗಳಿಂದ ಮುಂದಿನ ಪೀಳಿಗೆ ಸ್ಫೂರ್ತಿ ಪಡೆಯಬಾರದು ಎನ್ನುವುದೇ ಇದರ ಹಿಂದಿನ ಉದ್ದೇಶವಾಗಿದೆ. ಆಳುವ ವರ್ಗದ ವರ್ಗಗುಣವನ್ನು ಇದು ತೋರಿಸುತ್ತದೆ.

ಎಲ್ಲರಿಗೂ ರಾಮಾಯಣದ ಬಗ್ಗೆ ಗೊತ್ತಿರುತ್ತದೆ. ಅದರಲ್ಲಿ ಶಂಭೂಕನೆಂಬ ಶೂದ್ರ ತಪಸ್ಸು ಮಾಡುತ್ತಿದ್ದಾಗ ಶ್ರೀರಾಮಚಂದ್ರ ಹಿಂದಿನಿಂದ ಬಂದು ಆತನ ಕತ್ತನ್ನು ಕೊಯ್ಯುವ ಪ್ರಸಂಗವಿದೆ. ಶೂದ್ರನ ತಪಸ್ಸಿನಿಂದಾಗಿ ತನ್ನ ಮಗ ಮೃತಪಟ್ಟನು ಎಂದು ಬ್ರಾಹ್ಮಣನೊಬ್ಬ ದೂರಿದ ಹಿನ್ನೆಲೆಯಲ್ಲಿ ಶ್ರೀರಾಮಚಂದ್ರ ಈ ರೀತಿ ಮಾಡಿದ ಎನ್ನುವುದು ಕತೆಯ ತಿರುಳು. ಆದರೆ ವಾಸ್ತವವಾಗಿ ಈ ಕತೆಯ ಹಿಂದಿನ ಇತಿಹಾಸವನ್ನು ದಮನಿಸಲಾಗಿದೆ ಎನ್ನುವುದು ಬಹಳಷ್ಟು ಜನರಿಗೆ ಗೊತ್ತಿಲ್ಲ.

ದೇಶದಲ್ಲಿ "ದಾಸಪ್ರಥ" ಅಂದರೆ ಗುಲಾಮ ಪದ್ಧತಿ ಜಾರಿಯಲ್ಲಿತ್ತು. ಶ್ರೀರಾಮನ ಪಟ್ಟಾಭಿಷೇಕ ಸಂದರ್ಭದಲ್ಲಿ ಪ್ರತಿಯೊಬ್ಬ ಋಷಿ ಮತ್ತು ಬ್ರಾಹ್ಮಣರಿಗೆ ತಲಾ ಒಂದು ಸಾವಿರ 'ದಾಸಿ'ಗಳನ್ನು ಕೊಡುಗೆಯಾಗಿ ನೀಡಲಾಯಿತು ಎಂದು ರಾಮಾಯಣದಲ್ಲಿ ವಾಲ್ಮೀಕಿ ಹೇಳುತ್ತಾರೆ. ಈ ಸಾವಿರಾರು ದಾಸಿಗಳು ಮನಃಪೂರ್ವಕವಾಗಿಯೇನೂ ಹೋಗಲಿಲ್ಲ. ಅವರನ್ನು ಸರಪಳಿ ಕಟ್ಟಿ ಬಲವಂತವಾಗಿ ಕೊಂಡೊಯ್ದು ಅವರ ನೆಲೆಯನ್ನು ತಪ್ಪಿಸಲಾಯಿತು. ಅಲ್ಲದೆ ಅವರನ್ನು ಬಲಪ್ರಯೋಗ ಮಾಡಿ ಹಿಡಿದು ತರಲಾಯಿತು. ಈ ದಸ್ಯುಗಳು ಬಂಡಾಯವೆದ್ದರು. ಶಂಭೂಕ ಅವರ ನಾಯಕನಾಗಿದ್ದ. ಒಂದು ವೇಳೆ ಶಂಭೂಕನ ಹೋರಾಟದ ವೀರೋಚಿತ ಕತೆಯನ್ನು ಹೇಳಿದರೆ ಮುಂದಿನ ತಲೆಮಾರಿನ ಶೋಷಿತರು ಹಾಗೂ ದಲಿತರು ಅದರಿಂದ ಸ್ಫೂರ್ತಿ ಪಡೆದಾರು ಎಂಬ ಭಯ ಕೆಲವು ವರ್ಗಗಳನ್ನು ಕಾಡುತ್ತಿದೆ. ಅದೇ ರೀತಿ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು ವಹಿಸಿದ ಪಾತ್ರದ ಬಗ್ಗೆ ತಿಳಿಸಿದರೆ ಮುಂದಿನ ತಲೆಮಾರಿನ ವಿದ್ಯಾರ್ಥಿಗಳು ಸ್ಫೂರ್ತಿ ಪಡೆದು ಆ ಪರಂಪರೆಯಲ್ಲಿ ಮುಂದುವರಿದರೆ ಗತಿಯೇನು ಎಂಬ ಭೀತಿಯಿಂದ ಆ ರೋಚಕ ಅಧ್ಯಾಯವನ್ನೇ ಇತಿಹಾಸದ ಪುಟಗಳಿಂದ ಮರೆಮಾಚಲಾಗುತ್ತಿದೆ.

ತಪಸ್ಸು ಮಾಡುವ ಹಕ್ಕು ಇಲ್ಲದಿದ್ದರಿಂದ ಶಂಭೂಕನ ವಧೆ ಮಾಡಲಾಯಿತು ಎಂದಷ್ಟೇ ಹೇಳುವ ಕತೆಯನ್ನು ಮುಂದುವರಿಸಲಾಗುತ್ತಿದೆ. ರಾವಣನೂ, ರಾಮನೂ ಒಬ್ಬ ರಾಜನಾಗಿದ್ದರಿಂದ ಆತನ ಪರಾಕ್ರಮವನ್ನು ಪ್ರಸ್ತಾಪಿಸಲಾಗುತ್ತದೆ. ಆದರೆ ಅದೇ ಶಂಭೂಕನ ಪರಾಕ್ರಮದ ಬಗ್ಗೆ ತುಟಿಬಿಚ್ಚುವುದಿಲ್ಲ. ವರ್ಗ ತಾರತಮ್ಯಪೂರಿತ ಈ ಧೋರಣೆ–ನೀತಿ ಎಂದೆಂದಿಗೂ ವಾಸ್ತವ ಸಂಗತಿಯಾಗಿದೆ. ಆದರೆ ನಮ್ಮ ಇತಿಹಾಸವನ್ನು ನಾವು ಅರಿತುಕೊಂಡು ನಾವೇ ಬರೆಯಬೇಕು. ನಮ್ಮ ಇತಿಹಾಸವನ್ನು ಬರೆಯುವ ಸಾಮರ್ಥ್ಯವಿಲ್ಲದ ಆಳುವ ವರ್ಗಕ್ಕೆ ಆ ಕೆಲಸವನ್ನು ಬಿಡಬಾರದು.

ಆಳುವ ವರ್ಗಗಳ ಇತಿಹಾಸ ಯಾವಾಗಲೂ ವ್ಯಕ್ತಿ ಕೇಂದ್ರಿತವಾಗಿರುತ್ತದೆಯೇ ಹೊರತು ಜನಸಮೂಹದ ಬಗ್ಗೆ ಅದು ನಿರ್ಲಜ್ಜ ನಿರ್ಲಕ್ಷ್ಯ ವಹಿಸುತ್ತದೆ ಎನ್ನುವುದು ಸೂರ್ಯನ ಬೆಳಕಿನಷ್ಟೇ ಸತ್ಯ.

(ಕೃಪೆ: ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿ
ಲೇಖಕರು: ವಿಶ್ವ ಕುಂದಾಪುರ,
ಪ್ರಕಟನೆ: ಕ್ರಿಯಾ ಪ್ರಕಾಶನ, ಬೆಂಗಳೂರು
ಜನವರಿ 2014, ಬೆಲೆ:ರೂ.80/–)

"ದೇಶಕ್ಕೆ ತಾವೇ ಸ್ವಾತಂತ್ರ್ಯ ತಂದುಕೊಟ್ಟಿದ್ದು ಎಂದು ಇಂದಿನ ಕೆಲ ರಾಜಕಾರಣಿಗಳು ಹೇಳುವಾಗ ಮನಸ್ಸಿಗೆ ಖೇದವೆನಿಸುತ್ತದೆ. ಯಾರ್‍ಯಾರು ಏನೇನು ಮಾಡಿದರು, ಯಾರ ನಿಜಬಣ್ಣ ಯಾವುದು ಎಂಬುದನ್ನು ಹತ್ತಿರದಿಂದ ಬಲ್ಲೆನಾದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ..."






'ಅಭಿವೃದ್ಧಿ' ಈ ಬಾರಿಂಯ ಚುನಾವಣೆಯಲ್ಲಿ ಮತ್ತು ಇತ್ತೀಚಿನ ರಾಜಕೀಯ ಸಂವಾದಗಳಲ್ಲಿ ಬಹಳ ಚಾಲ್ತಿಯಲ್ಲಿರುವ ಪದ. ಈ ಬಾರಿಯ ಜನಾದೇಶ 'ಅಭಿವೃದ್ಧಿ'ಗೆ ಎನ್ನಲಾಗುತ್ತಿದೆ. ಆದರೆ 'ಅಭಿವೃದ್ಧಿ'ಗೆ ಎಲ್ಲರೂ ತಮ್ಮ ತಮ್ಮ ಭಾವಕ್ಕೆ ತಕ್ಕಂತೆ ತಮ್ಮದೇ ಆದ ಅರ್ಥ ಕೊಡುತ್ತಾರೆ. ಈ ಬಗ್ಗೆ 'ಜನಶಕ್ತಿ' ವಾರಪತ್ರಿಕೆ ಈ ವರ್ಷದ ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆಗೆ ಒಂದು ಸಂವಾದ ನಡೆಸಲು ನಿರ್ಧರಿಸಿ ಈ ಕ್ಷೇತ್ರದಲ್ಲಿನ ತಜ್ಞರಿಗೆ ಮತ್ತು ಅಧ್ಯಯನಕಾರರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕಳುಹಿಸಿ ಅಭಿಪ್ರಾಯ ಕೇಳಿತು.

1. ಅಭಿವೃದ್ಧಿ ಎಂದರೆ ನಿಮ್ಮ ಪ್ರಕಾರ ಏನು ? ಅದನ್ನು ಅಳೆಯಬಹುದೆ ? ಅಳೆಯಬಹುದಾದರೆ ಅದರ ಅಳತೆಗೋಲುಗಳು ಯಾವುದು ?
2. 'ಗುಜರಾತ್ ಮಾದರಿ' ಅಭಿವೃದ್ಧಿ ಎನ್ನುವುದಿದೆಯೆ? ಇದ್ದರೆ ಅದರ ಮುಖ್ಯ ಅಂಶಗಳು ಏನು? ಅದು ದೇಶಕ್ಕೆ ಮಾದರಿಯಾಗಬಲ್ಲುದೆ?
3. ಅಭಿವೃದ್ಧಿಗೂ ರಾಜಕೀಯ ಸಿದ್ದಾಂತಕ್ಕೂ ಏನೂ ಸಂಬಂಧವಿಲ್ಲ. ಅದು ರಾಜಕೀಯ ಸಿದ್ದಾಂತಗಳಿಗೆ ಮೀರಿದ್ದು ಎಂಬುದನ್ನು ನೀವು ಒಪ್ಪುತ್ತೀರಾ ? 'ಜನ-ಪರ' 'ಜನ-ವಿರೋಧಿ' ಎಂಬ ಎರಡು ರೀತಿಯ ಅಭಿವೃದ್ಧಿಗಳಿವೆಯೇ?
4. ಅಭಿವೃದ್ಧಿಗೂ ಭ್ರಷ್ಟಾಚಾರ-ನಿರ್ಮೂಲನಕ್ಕೂ ಸಂಬಂಧ ಇದೆಯೆ? ಇದ್ದರೆ ಅದು ಎಂತಹುದು ?
5. ಈಗ ಪ್ರಚಲಿತವಾಗುತ್ತಿರುವ ಮತ್ತು ಮೋದಿಯವರು ಬೆಂಬಲಿಸುವ "ಅಭಿವೃದ್ಧಿಗಾಗಿ ಕನಿಷ್ಟ ಸರ್ಕಾರ, ಗರಿಷ್ಟ ಆಡಳಿತ"ದ ('ಮಿನಿಮಮ್ ಗವರ್ನಮೆಂಟ್ ಮಾಕ್ಸಿಮಮ್ ಗವರ್ನೆನ್ಸ್') ಘೋಷಣೆ/ಗುರಿಯನ್ನು ನೀವು ಒಪ್ಪುತ್ತೀರಾ ? ಇಲ್ಲದಿದ್ದರೆ ಏಕೆ ?

ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಟಿ.ಆರ್. ಚಂದ್ರಶೇಖರ್, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪ್ರೊ. ಚಂದ್ರ ಪೂಜಾರಿ ಹಾಗೂ ಭಾರತ ಬ್ಯಾಂಕ್ ನೌಕರರ ಒಕ್ಕೂಟ(ಬಿಇಎಫ್ಐ)ದ ಉಪಾಧ್ಯಕ್ಷರಾದ ರತ್ನಾಕರ ಶೆಣೈ ನಮಗೆ ಕಳಿಸಿದ ಸ್ಪಂದನೆಗಳನ್ನು ಓದಿ ಮುಂದಿನ ಪುಟಗಳಲ್ಲಿ..................



ಅಭಿವೃದ್ಧಿಯ ಪ್ರಶ್ನೆ
'ಓ! ಅದು ಮಾಯವಾಗಿ ಹೋಗಿದೆ'
– 'ದಿ ಹಿಂದೂ' ನಲ್ಲಿ ಕೇಶವ್

ಗವರ್ನೆನ್ಸ್ ಹೆಸರಿನಲ್ಲಿ ಸಾಮಾಜಿಕ ನ್ಯಾಯದ ಜವಾಬುದಾರಿಯನ್ನು ಬಿಟ್ಟುಕೊಡಬಾರದು



ಪ್ರೊ. ಟಿ.ಆರ್.ಚಂದ್ರಶೇಖರ್

ಅಭಿವೃದ್ಧಿ ಎಂದರೇನು ?

ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಪರಿಭಾವನೆಗಳನ್ನು ಸಮಾನಾರ್ಥಕನುಡಿಗಳಾಗಿ ಬಳಸುವುದು ರೂಢಿಯಲ್ಲಿದೆ. ಆದರೆ ಅವೆರಡೂ ಒಂದೇ ಅಲ್ಲ. ಆರ್ಥಿಕ ಬೆಳವಣಿಗೆಯು ಕೇವಲ ವರಮಾನದಲ್ಲಿನ ಬೆಳವಣಿಗೆಗೆ ಸಂಬಂಧಿಸಿದ ಸಂಗತಿಯಾದರೆ ಅಭಿವೃದ್ಧಿ ಅನ್ನುವುದು ವರಮಾನ ವರ್ಧನೆಯ ಜೊತೆಗೆ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಮುಂತಾದ ಸಂಗತಿಗಳನ್ನು ಒಳಗೊಂಡಿದೆ. ಇದು ವಿಸ್ತೃತವಾದ ಒಂದು ಪರಿಭಾವನೆ. ಆರ್ಥಿಕ ಬೆಳವಣಿಗೆ ಅನ್ನುವುದು ಆರ್ಥಿಕ ಸಂಗತಿಗಳನ್ನು ಮಾತ್ರ ಒಳಗೊಳ್ಳುತ್ತದೆ. ಆದರೆ ಅಭಿವೃದ್ಧಿ ಅನ್ನುವುದು ಆರ್ಥಿಕ, ಸಾಮಾಜಿಕ, ರಾಜಕೀಯ, ಲಿಂಗ ಸಂಬಂಧಗಳು ಮುಂತಾದ ಸಂಗತಿಗಳನ್ನು ಒಳಗೊಳ್ಳುತ್ತದೆ.

ಅಭಿವೃದ್ಧಿಯ ನಿರ್ವಚನವು ಅದನ್ನು ನಿರ್ವಚಿಸುವವರು ಯಾವ ಸೈದ್ಧಾಂತಿಕ ನೆಲೆಯಲ್ಲಿ ನಿಂತು ನಿರ್ವಚಿಸುತ್ತಿದ್ದಾರೆ ಎಂಬುದನ್ನು ಅವಲಂಬಿಸಿದೆ. ಬಂಡವಾಳ ಹೂಡಿಕೆಯನ್ನು ಆಧಾರವಾಗಿಟ್ಟುಕೊಂಡು ವರಮಾನದಲ್ಲಿನ ಬೆಳವಣಿಗೆಯನ್ನು ಅಭಿವೃದ್ಧಿ ಎಂದು ನಿರ್ವಚಿಸುವುದು ವಾಡಿಕೆಯಲ್ಲಿದೆ. ಆದರೆ ಬಡತನವನ್ನು ಎದುರಿಸುತ್ತಿರುವವರ ನೆಲೆಯಿಂದ ಅದನ್ನು ನಿರ್ವಚಿಸುವುದಾದರೆ ಬಡತನ, ದುಸ್ಥಿತಿ, ಅಸಮಾನತೆ, ಅನಕ್ಷರತೆ, ಆಹಾರ ಅಭದ್ರತೆ ಮುಂತಾದ ಅಸ್ವಾತಂತ್ರ್ಯಗಳ ನಿವಾರಣೆಯನ್ನು ಅಭಿವೃದ್ಧಿ ಎಂದು ಕರೆಯುವುದು ರೂಢಿಯಲ್ಲಿದೆ. ಸಮಾಜದಲ್ಲಿ ಪರಿವರ್ತನೆಯನ್ನು ಉಂಟು ಮಾಡುವ ಪ್ರಕ್ರಿಯೆಯನ್ನು ಅಭಿವೃದ್ಧಿ ಎಂದು ಕರೆಯಬಹುದು. ಪರಿವರ್ತನೆ ಎಂದರೆ ಏನು? ಪರಿವರ್ತನೆ ಅಂದರೆ ಸಮಾಜದಲ್ಲಿ ಏರಿಕೆಯಾದ ವರಮಾನವು ಜನರ ಬದುಕಾಗಿ, ಜನರ ಅಕ್ಷರವಾಗಿ, ಜನರ ಆರೋಗ್ಯವಾಗಿ ಪರಿವರ್ತನೆಯಾಗುವುದು ಎಂದು ಪರಿಭಾವಿಸಿಕೊಳ್ಳಬಹುದು. ಈ ಬಗೆಯ ಪರಿವರ್ತನೆಯು ಜನರನ್ನು ಒಳಗೊಳ್ಳುವ ರೀತಿಯಲ್ಲಿರುತ್ತದೆ.

ಒಂದು ಅಸಮಾನ ಸಮಾಜದಲ್ಲಿ ಅಭಿವೃದ್ಧಿ ಅಂದರೆ ಅಲ್ಲಿ ಯಾರು ಈಗಾಗಲೆ ವಂಚಿತರಾಗಿರುತ್ತಾರೋ, ಯಾರು ಅಂಚಿನಲ್ಲಿರುತ್ತಾರೋ, ಯಾರು ತೀವ್ರ ದುಸ್ಥಿತಿಯನ್ನು ಅನುಭವಿಸುತ್ತಿರುತ್ತಾರೋ, ಯಾರು ಸಾಮಾಜಿಕ ಪ್ರತ್ಯೇಕತೆಗೆ ಒಳಗಾಗಿರುತ್ತಾರೋ ಅವರಿಗೆ ಏರಿಕೆಯಾದ ವರಮಾನದಲ್ಲಿ, ವಿಸ್ತೃತಗೊಂಡ ಉದ್ಯೋಗದಲ್ಲಿ, ಹೆಚ್ಚಳಗೊಂಡ ಅನುಭೋಗದಲ್ಲಿ ಹೆಚ್ಚಿನ ಭಾಗ ದೊರೆಯುವಂತೆ ಮಾಡುವ ಒಂದು ಪ್ರಕ್ರಿಯೆಯನ್ನು ಅಭಿವೃದ್ಧಿ ಎಂದು ಕರೆಯಬಹುದು. ಉಳ್ಳವರ ಬದುಕನ್ನು ಸಮೃದ್ಧಗೊಳಿಸುವುದು ಅಭಿವೃದ್ಧಿಯಲ್ಲ. ಅದು ಉಳಿದವರ ಬದುಕನ್ನು ಸುಖಮಯವನ್ನಾಗಿ ಮಾಡುವ ಪ್ರಕ್ರಿಯೆಯಾಗಿದೆ.

ಏರಿಕೆಯಾದ ವರಮಾನವು ತನ್ನಷ್ಟಕ್ಕೆ ಎಲ್ಲ ಜನರಿಗೂ ದೊರೆಯುವಂತೆ ಪಸರಿಸಿಕೊಳ್ಳುತ್ತದೆ ಎಂಬುದು ಆರ್ಥಿಕ ಬೆಳವಣಿಗೆ ಸಿದ್ಧಾಂತದ ಬುಡದಲ್ಲಿರುವ ಒಂದು ನಂಬಿಕೆಯಾಗಿದೆ. ಆದರೆ ನಮ್ಮ ಅನುಭವವೇನೆಂದರೆ ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನು ಸಮಾಜದ ಎಲ್ಲ ವರ್ಗಗಳಿಗೂ ದೊರೆಯುವಂತೆ ಹರಿಯುತ್ತದೆ ಎಂಬುದು ಕೇವಲ ಒಂದು ಭ್ರಮೆ. ಉದಾಹರಣೆಗೆ 2010-2011ರಲ್ಲಿ ಕರ್ನಾಟಕ ತಲಾ ವರಮಾನ ರೂ.60000 ಕ್ಕೂ ಮೀರಿದೆ. ಆದರೆ ನಮ್ಮಲ್ಲಿ 72 ಲಕ್ಷ(2011) ದಷ್ಟಿರುವ ಭೂರಹಿತ ದಿನಗೂಲಿ ದುಡಿಮೆಗಾರರ ದೈನಂದಿನ ವರಮಾನ ರೂ.150 ಮೀರುವುದಿಲ್ಲ. ಇವರಿಗೆ ವಾರ್ಷಿಕ ದೊರೆಯುವ ಉದ್ಯೋಗದ ದಿನಗಳು 200 ದಾಟುವುದಿಲ್ಲ. ಅಂದರೆ ಇವರ ವಾರ್ಷಿಕ ವರಮಾನ ರೂ.37500ರಷ್ಟಾಗುತ್ತದೆ. ಮಹಿಳಾ ದುಡಿಮೆಗಾರರ ಕೂಲಿ ಇನ್ನೂ ಕಡಿಮೆ. ದಿನದ ಕೂಲಿ ರೂ200 ಅಂದು ಕೊಂಡರೂ ಅವರ ವಾರ್ಷಿಕ ವರಮಾನ ರೂ.40000 ಮೀರುವುದಿಲ್ಲ. ಹಾಗಾದರೆ ಏರಿಕೆಯಾದ ವರಮಾನ ಎಲ್ಲರಿಗೂ ಸಮಾನವಾಗಿ ದೊರೆಯುತ್ತದೆ ಎಂದು ಹೇಗೆ ಹೇಳುವುದು? ಅಮರ್ತ್ಯ ಸೇನ್ ಹೇಳುವಂತೆ ಅಭಿವೃದ್ಧಿ ಅನ್ನುವುದು ಜನರ ಬದುಕಿನ ಸಮೃದ್ಧತೆಗೆ ಸಂಬಂಧಿಸಿದ ಸಂಗತಿಯೇ ವಿನಾ ಆರ್ಥಿಕ ಸಮೃದ್ಧತೆಗೆ ಸಂಬಂಧಿಸಿದ ಸಂಗತಿಯಲ್ಲ. ಆರ್ಥಿಕತೆಯು ಸಮೃದ್ಧವಾಗಿ ಬಿಟ್ಟರೆ ಜನರ ಬದುಕು ಸಮೃದ್ಧವಾಗುತ್ತದೆ ಎಂದು

ಸಮಾಜದಲ್ಲಿ ಪರಿವರ್ತನೆಯನ್ನು ಉಂಟು ಮಾಡುವ ಪ್ರಕ್ರಿಯೆಯನ್ನು ಅಭಿವೃದ್ಧಿ ಎಂದು ಕರೆಯಬಹುದು. ಪರಿವರ್ತನೆ ಅಂದರೆ ಸಮಾಜದಲ್ಲಿ ಏರಿಕೆಯಾದ ವರಮಾನವು ಜನರ ಬದುಕಾಗಿ, ಜನರ ಅಕ್ಷರವಾಗಿ, ಜನರ ಆರೋಗ್ಯವಾಗಿ ಪರಿವರ್ತನೆಯಾಗುವುದು ಎಂದು ಪರಿಭಾವಿಸಬಹುದು.

ಹೇಳಲು ಬರುವುದಿಲ್ಲ. ಆದರೆ ಇಂದು ಭಾರತದಲ್ಲಿ ಸಮೃದ್ಧ ಆರ್ಥಿಕತೆಯ ಬಗ್ಗೆ ಉಗ್ರ ರೀತಿಯಲ್ಲಿ ಮಾತನಾಡಲಾಗುತ್ತಿದೆ. ಭಾರತವನ್ನು ಸೂಫರ್ ಪವರ್ ಮಾಡುವ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಜನರ ಬದುಕನ್ನು ಅಲಕ್ಷಿಸಿ ಆರ್ಥಿಕತೆಯನ್ನು ಸಮೃದ್ಧಗೊಳಿಸುವುದು ಸುಸ್ಥಿರ ಗತಿ ಅಭಿವೃದ್ಧಿಯಾಗಲಾರದು.

> ಗುಜರಾತ್ ಮಾದರಿ ಯಾವ ಕಾರಣಕ್ಕೂ ದೇಶಕ್ಕೆ ಮಾದರಿಯಾಗುವುದು ಸಾಧ್ಯವಿಲ್ಲ. ಒಂದು ವೇಳೆ ಅದನ್ನು ರಾಷ್ಟ್ರಮಟ್ಟಕ್ಕೆ ಅನ್ವಯ ಮಾಡಿದರೆ ಅಲ್ಲಿ ಬಡವರ, ವಂಚಿತರ, ಅಂಚಿನಲ್ಲಿರುವವರ, ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ದಕ್ಕೆಯುಂಟಾಗುವ ಸಾಧ್ಯತೆಯಿದೆ. ಏಕೆಂದರೆ ಅದು ಕಾಲಾವಕಾಶವಾಗಿ ತನ್ನ ಫಲಗಳನ್ನು ಕೆಳವರ್ಗಕ್ಕೆ ಹರಿಯ ಬಿಡುತ್ತದೆ ಎಂದು ಹೇಳುವ ಮಾದರಿ ಅದು ಕೆಳಮಟ್ಟದವರೆಗೆ ಹರಿದು ಬರುವುವ ವರೆಗೆ ಕೆಳಶ್ರೇಣಿಯಲ್ಲಿರುವ ಜನರು ಕಾಯಬೇಕಾಗುತ್ತದೆ. ಈ ಕಾಯುವಿಕೆಯಲ್ಲಿ ಜನರ ದುಸ್ಥಿತಿಯ ಪ್ರಮಾಣ ಉಲ್ಬಣಿಸುವ ಸಾಧ್ಯತೆಯಿದೆ.

ಅಭಿವೃದ್ಧಿಯ ಮಾಪನ

ಅಭಿವೃದ್ಧಿಯನ್ನು ಪರಿಮಾಣಾತ್ಮಕವಾಗಿ ಮಾಪನ ಮಾಡಬಹುದು. ಆರ್ಥಿಕ ಬೆಳವಣಿಗೆಯನ್ನು ವರಮಾನದಲ್ಲಿನ ವಾರ್ಷಿಕ ಬೆಳವಣಿಗೆಯ ಆಧಾರದ ಮೇಲೆ ಅಳತೆ ಮಾಡಲಾಗುತ್ತಿದೆ. ಆದರೆ ಅಭಿವೃದ್ಧಿಯು ಬಹುಮುಖಿಯಾದ ಒಂದು ಸಂಗತಿ. ಆದ್ದರಿಂದ ಅದನ್ನು ಯಾವುದೋ ಒಂದು ಮಾನದಂಡದಿಂದ ಮಾಪನ ಮಾಡುವುದು ಸಾಧ್ಯವಿಲ್ಲ. ಈ ಕಾರಣಕ್ಕೆ ಯುಎನ್‌ಡಿಪಿಯು ಅಭಿವೃದ್ಧಿಯನ್ನು ಅದರ ಬಹುಮುಖಿ ನೆಲೆಯಲ್ಲಿ ಮಾಪನ ಮಾಡಲು 'ಮಾನವ ಅಭಿವೃದ್ಧಿ ಸೂಚ್ಯಂಕ' ಅನ್ನುವ ಮಾಪನವನ್ನು ರೂಪಿಸಿದೆ. ಇದೊಂದು ಸಮಗ್ರ, ಸಂಯುಕ್ತ ಮಾಪನವಾಗಿದೆ. ಇದರಲ್ಲಿ ಸಾಕಷ್ಟು ಮಿತಿಗಳಿವೆ. ಇಲ್ಲಿ ಜನರ ಸ್ವಾತಂತ್ರ್ಯವನ್ನು, ಜನರ ಹಕ್ಕುಗಳನ್ನು, ಮಹಿಳೆಯರ ಸಹಭಾಗಿತ್ವವನ್ನು ಒಳಗೊಂಡಂತೆ ಅಭಿವೃದ್ಧಿಯನ್ನು ಮಾಪನ ಮಾಡುವುದು ಸಾಧ್ಯವಿಲ್ಲ. ಆದರೆ ಇದು ವರಮಾನ ವರ್ಧನೆಯನ್ನು ಅಳೆಯುವ ಜಿಡಿಪಿಗಿಂತ ಉತ್ತಮವಾದುದಾಗಿದೆ ಮತ್ತು ವಿಸ್ತೃತವಾದುದಾಗಿದೆ.

'ಗುಜರಾತ್ ಮಾದರಿ ಅಭಿವೃದ್ಧಿ'

ನನಗೆ ತಿಳಿದಂತೆ ಮತ್ತು ಅನೇಕ ವಿದ್ವಾಂಸರು ಪರಿಭಾವಿಸಿಕೊಂಡಂತೆ ಗುಜರಾತ್ ಮಾದರಿ ಅಭಿವೃದ್ಧಿ ಎಂಬುದು ಇಲ್ಲ. ಅದರ ಬಗ್ಗೆ ಮಾತನಾಡುವವರು ಅದರ ನಿರ್ವಚನವನ್ನು ನೀಡುತ್ತಿಲ್ಲ. ಅದನ್ನು ಇದೆ ಎಂದು ಪ್ರಚಾರ ಮಾಡಲಾಗುತ್ತಿದೆ. ಅದು ಅಮೂರ್ತ, ಭಾವನಾತ್ಮಕವಾದ ಒಂದು ಸಂಗತಿ. ಸ್ಥೂಲವಾಗಿ ಗುಜರಾತ್ ಮಾದರಿ ಅಭಿವೃದ್ಧಿಯನ್ನು ಖಾಸಗಿ ಬಂಡವಾಳ ಹೂಡಿಕೆಯ ವಿಸ್ತರಣೆ, ಕೈಗಾರಿಕೋದ್ಯಮಿಗಳಿಗೆ ಮುಕ್ತ ಅವಕಾಶ ನೀಡುವುದು, ವಿದೇಶ ಬಂಡವಾಳಕ್ಕೆ ತೆರೆದ ಅವಕಾಶ, ಸರ್ಕಾರದ ಪಾತ್ರವನ್ನು ನಿಕೃಷ್ಟಗೊಳಿಸುವುದು ಮುಂತಾದ ಸಂಗತಿಗಳನ್ನು ಒಳಗೊಂಡ ನೀತಿಗಳ ಮೊತ್ತ ಎಂದು ಹೇಳಬಹುದು. ಈ ಮಾದರಿಯಲ್ಲಿ ವರಮಾನ ಬೆಳವಣಿಗೆಯು ನಿರ್ಣಾಯಕ ಸಂಗತಿಯಾಗುತ್ತದೆ. ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನು ಸಮಾಜದ ಎಲ್ಲರಿಗೂ ಒದಗಿ ಬರುತ್ತದೆ ಎಂಬ ನಂಬಿಕೆಯು ಇಲ್ಲಿದೆ. ಈ ಅಭಿವೃದ್ಧಿ ಮಾದರಿಯು ಅಖಂಡವಾದುದು. ಅಂದರೆ ಅಭಿವೃದ್ಧಿಯು ಸಮಾಜದಲ್ಲಿ ಎಲ್ಲ ಸಾಮಾಜಿಕ ಗುಂಪುಗಳಿಗೂ ಸಮಾನವಾಗಿ ದೊರೆಯುತ್ತದೆ ಎಂದು ಭಾವಿಸಲಾಗುತ್ತದೆ. ಸಾಮಾಜಿಕ ಶ್ರೇಣೀಕರಣವನ್ನು ಮೀರಿ ಅಭಿವೃದ್ಧಿ ಸಂಭವಿಸುತ್ತದೆ ಎಂಬುದನ್ನು ಗುಜರಾತ್ ಮಾದರಿ ಅಭಿವೃದ್ಧಿಯು ನಂಬುತ್ತದೆ. ಗುಜರಾತ್ ಮಾದರಿ ಅಭಿವೃದ್ಧಿಯು ಲಿಂಗ ನಿರಪೇಕ್ಷವಾದುದಾಗಿದೆ. ಈ ಮಾದರಿಯಲ್ಲಿ ಮಹಿಳೆಯರು–ಪುರುಷರು ಎಂಬ ಭಿನ್ನತೆಯನ್ನು ಮಾಡುವುದಿಲ್ಲ. ಈ ಕಾರಣದಿಂದ ಗುಜರಾತಿನಲ್ಲಿ ಲಿಂಗ ಅಸಮಾನತೆಯು ತೀವ್ರವಾಗಿದೆ.

ಅಲ್ಲಿ ಕಾಣೆಯಾದ ಮಹಿಳೆಯರ ಪ್ರಮಾಣವು 2011ರಲ್ಲಿ ಅಲ್ಲಿನ ಮಹಿಳಾ ಸಂಖ್ಯೆಯು ಶೇ8.78ರಷ್ಟಿದ್ದರೆ ರಾಷ್ಟ್ರಮಟ್ಟದಲ್ಲಿ ಅದು ಶೇ 6.67ರಷ್ಟಿದೆ. ಕರ್ನಾಟಕದಲ್ಲಿ ಅದರ ಪ್ರಮಾಣ ಶೇ 2.78ರಷ್ಟಿದೆ. ಅಲ್ಲಿ ಲಿಂಗ ಅನುಪಾತ 918ರಷ್ಟಿದ್ದರೆ ರಾಷ್ಟ್ರಮಟ್ಟದಲ್ಲಿ ಅದು 942ರಷ್ಟಿದೆ. ಆದರೆ ಕರ್ನಾಟಕದಲ್ಲಿ ಅದು 973ರಷ್ಟಿದೆ. ರಾಷ್ಟ್ರ ಮಟ್ಟದಲ್ಲಿ ಸಾಕ್ಷರತೆಯಲ್ಲಿ ಲಿಂಗ ಅಸಮಾನತೆಯ ಪ್ರಮಾಣ ಶೇ 16.50 ಅಂಶಗಳಷ್ಟಿದ್ದರೆ ಗುಜರಾತಿನಲ್ಲಿ ಅದು ಅತ್ಯಂತ ಅಧಿಕ ಶೇ 22.44 ಅಂಶಗಳಷ್ಟಿದೆ. ಕರ್ನಾಟಕದಲ್ಲಿ ಅದರ ಪ್ರಮಾಣ ಕೇವಲ ಶೇ 14.4. ಅಂಶಗಳು. ಕಾಣೆಯಾದ ಮಹಿಳೆಯರ ಪ್ರಮಾಣ ಅಧಿಕವಾಗಿರುವುದನ್ನು, ಸಾಕ್ಷರತೆಯಲ್ಲಿನ ಲಿಂಗ ಅಸಮಾನತೆಯನ್ನು ಮತ್ತು ಲಿಂಗ ಅನುಪಾತ ಅತ್ಯಂತ ಕೆಳಮಟ್ಟದಲ್ಲಿರುವುದನ್ನು ಗುಜರಾತಿನಲ್ಲಿರುವ ಲಿಂಗ ಅಸಮಾನತೆಯ ಮಾಪನವಾಗಿ ಬಳಸಬಹುದಾಗಿದೆ. ಗುಜರಾತ್ ಮಾದರಿ ಅಭಿವೃದ್ಧಿಯಲ್ಲಿ ವರಮಾನದಲ್ಲಿನ ಏರಿಕೆಯನ್ನು ಶಿಷ್ಟ ವರ್ಗವು ಗುತ್ತಿಗೆ ಹಿಡಿದುಕೊಂಡಿದೆ. ಇಲ್ಲಿ ಅಭಿವೃದ್ಧಿಯು ಉನ್ನತ ವರ್ಗಕ್ಕೆ ಪರವಾಗಿರುತ್ತದೆ ವಿನಾ ಬಡವರ–ವಂಚಿತರ, ಮಹಿಳೆಯರ ಪರ ಇರುವುದಿಲ್ಲ. ಈ ಮಾದರಿಯನ್ನು ರಾಷ್ಟ್ರದ ಮಟ್ಟದಲ್ಲಿ ಅಳವಡಿಸಿಕೊಳ್ಳುವುದು ಅಂದರೆ ಅಚ್ಚರಿಯಾಗುತ್ತದೆ. ಗುಜರಾತಿಗಿಂತ ಕೇರಳ, ತಮಿಳುನಾಡು, ಕರ್ನಾಟಕದ ಆರ್ಥಿಕತೆಗಳು ಉತ್ತಮವಾಗಿವೆ.

ಗುಜರಾತ್ ಮಾದರಿ ಯಾವ ಕಾರಣಕ್ಕೂ ದೇಶಕ್ಕೆ ಮಾದರಿಯಾಗುವುದು ಸಾಧ್ಯವಿಲ್ಲ. ಒಂದು ವೇಳೆ ಅದನ್ನು ರಾಷ್ಟ್ರಮಟ್ಟಕ್ಕೆ ಅನ್ವಯ ಮಾಡಿದರೆ ಅಲ್ಲಿ ಬಡವರ, ವಂಚಿತರ, ಅಂಚಿನಲ್ಲಿರುವವರ, ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ದಕ್ಕೆಯುಂಟಾಗುವ ಸಾಧ್ಯತೆಯಿದೆ. ಏಕೆಂದರೆ ಈ ಮಾದರಿಯು ಅಖಂಡವಾದುದು, ಅದು ಕಾಲಾವಕಾಶವಾಗಿ ತನ್ನ ಫಲಗಳನ್ನು ಕೆಳವರ್ಗಕ್ಕೆ ಹರಿಯ ಬಿಡುತ್ತದೆ ಎಂದು ಹೇಳಲಾಗುತ್ತದೆ. ಅದು ಕೆಳಮಟ್ಟದವರೆಗೆ ಹರಿದು ಬರುವುವ ವರೆಗೆ ಕೆಳಶ್ರೇಣಿಯಲ್ಲಿರುವ ಜನರು ಕಾಯಬೇಕಾಗುತ್ತದೆ. ಈ ಕಾಯುವಿಕೆಯಲ್ಲಿ ಜನರ ದುಸ್ಥಿತಿಯ

ಪ್ರಮಾಣ ಉಲ್ಬಣಿಸುವ ಸಾಧ್ಯತೆಯಿದೆ. ಇದಕ್ಕಿಂತ ಮುಖ್ಯವಾಗಿ ಇಲ್ಲಿ ಅಭಿವೃದ್ಧಿಯು ಸಾಮಾಜಿಕತೆಗೆ ಅತೀತವಾಗಿ ಸಂಭವಿಸುತ್ತದೆ. ಇದರ ಪರಿಣಾಮವಾಗಿ ಅದು ಸಮಾಜದಲ್ಲಿ ಈಗಾಗಲೆ ಬಲಿಷ್ಠರಾಗಿರುವವರಿಗೆ ಹೆಚ್ಚು ಅನುಕೂಲ ಒದಗುವಂತೆ ಮಾಡುತ್ತದೆ ವಿನಾ ವಂಚಿತರಿಗೆ ವಿಶೇಷ ಅನುಕೂಲಗಳು ಇಲ್ಲಿ ಸಾಧ್ಯವಿಲ್ಲ. ಇಲ್ಲಿ ಅಭಿವೃದ್ಧಿ ಅನ್ನುವುದು ಒಂದು ಆರ್ಥಿಕ ಚಟುವಟಿಕೆಯಾಗಿದೆ.

ಅಭಿವೃದ್ಧಿ ಮತ್ತು ಭ್ರಷ್ಟಾಚಾರ ನಿರ್ಮೂಲನೆ

ಅಭಿವೃದ್ಧಿಯನ್ನು ಜನರ ಸಹಭಾಗಿತ್ವದ ಪ್ರಕ್ರಿಯೆಯಾಗಿ ಪರಿಭಾವಿಸಿಕೊಂಡರೆ ಅಲ್ಲಿ ಅಭಿವೃದ್ಧಿ ಮತ್ತು ಭ್ರಷ್ಟಾಚಾರ ನಿರ್ಮೂಲನೆಗೂ ನಡುವೆ ಸಂಬಂಧ ಸಾಧ್ಯವಿದೆ. ಜನರ ಸಹಭಾಗಿತ್ವದಲ್ಲಿ ಅಭಿವೃದ್ಧಿಯು ನಡೆದರೆ ಅಲ್ಲಿ ಅಭಿವೃದ್ಧಿಯು ಜನತಾಂತ್ರಿಕವಾಗಿರುತ್ತದೆ. ಅಭಿವೃದ್ಧಿಯು ಜನತಾಂತ್ರಿಕವಾಗಿದ್ದರೆ ಅಲ್ಲಿ ಜನರು ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ಮಾಡುತ್ತಾರೆ. ಎಲ್ಲಿ ನಾಗರಿಕ ಸಮಾಜವು ಅತ್ಯಂತ ಕ್ರಿಯಾಶೀಲವಾಗಿರುತ್ತದೋ ಅಲ್ಲಿ ಭ್ರಷ್ಟಾಚಾರ ನಿರ್ಮೂಲನೆಯು ಸಾಧ್ಯ. ಆದರೆ ಅಭಿವೃದ್ಧಿಯು ಜನರ ಸಹಭಾಗಿತ್ವದಲ್ಲಿ ನಡೆಯದಿದ್ದರೆ ಅಲ್ಲಿ ನಾಗರಿಕ ಸಮಾಜ ಕ್ರಿಯಾಶೀಲವಾಗಿರುವುದು ಸಾಧ್ಯವಿಲ್ಲ. ನಮ್ಮ ನಾಗರಿಕ ಸಮಾಜ ಸಮಾನತೆಗೆ, ಸಾಮಾಜಿಕ ನ್ಯಾಯಕ್ಕೆ, ಬಹುಳತೆಗೆ ವಿರುದ್ಧವಾದುದಾಗಿದೆ. ಆದ್ದರಿಂದ ಇಲ್ಲಿ ಅಭಿವೃದ್ಧಿಯು ಭ್ರಷ್ಟಾಚಾರವನ್ನು ಪ್ರೋತ್ಸಾಹಿಸುವ ಸಾಧ್ಯತೆಯಿದೆ. ನಮ್ಮಲ್ಲಿ ಭ್ರಷ್ಟಾಚಾರವು ಉದ್ದಿಮೆ-ಕೇಂದ್ರಿತವಾಗಿದೆ. ಈ ಸಮಸ್ಯೆಗೆ ರಾಜಕಾರಣಿಗಳನ್ನು ದೂರಿದರೆ ಪ್ರಯೋಜನವಿಲ್ಲ. ಕಾರ್ಪೋರೇಟ್ ವಲಯ, ರಾಜಕಾರಣಿಗಳು ಮತ್ತು ಅಧಿಕಾರಶಾಹಿ- ಈ ಮೂರು ವರ್ಗಗಳ ಅನೈತಿಕ ಕೂಟದಿಂದ ಭ್ರಷ್ಟಾಚಾರವು ಊರ್ಜಿತಗೊಳ್ಳುತ್ತಿದೆ. ಈ ಕೂಟವು ಸೀಮಿತ ನೆಲೆಯ ವರಮಾನ ವರ್ಧನೆಯನ್ನು ಆಧರಿಸಿದ ಆರ್ಥಿಕ ಬೆಳವಣಿಗೆಯನ್ನು ಬಯಸುತ್ತದೆ ವಿನಾ ಜನರನ್ನು ಒಳಗೊಂಡ, ಪರಿವರ್ತನಶೀಲ ಅಭಿವೃದ್ಧಿಯನ್ನಲ್ಲ. ನಾವು ಭ್ರಷ್ಟಾಚಾರವನ್ನು ಕುರಿತ ಚರ್ಚೆಯನ್ನು ಹಣಕಾಸಿಗೆ ಸಂಬಂಧಿಸಿದ ಸಂಗತಿಗೆ ಮೀಸಲಿರಿಸಿಕೊಂಡಿದ್ದೇವೆ. ಅದಕ್ಕೆ ಸಾಮಾಜಿಕ ಆಯಾಮವೂ ಇದೆ. ಅಸ್ಪೃಶ್ಯತೆ, ಕೋಮುವಾದ, ಜಾತೀಯತೆ, ಸ್ವಜನಪಕ್ಷಪಾತ, ಮಹಿಳೆಯರ ಮೇಲಿನ ದೌರ್ಜನ್ಯ ಮುಂತಾದವು ಸಾಮಾಜಿಕ ಭ್ರಷ್ಟಾಚಾರ. ಅನೇಕರು ಭಾವಿಸಿರುವಂತೆ ಇವೆಲ್ಲ ಅಭಿವೃದ್ಧಿ ಉನ್ನತಮಟ್ಟಕ್ಕೆ ತಲುಪಿದಂತೆ ತಮ್ಮಷ್ಟಕ್ಕೆ ತಾವು ತೊಲಗಿಬಿಡುತ್ತವೆ ಎಂದು ನಂಬಲಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ವರಮಾನದಲ್ಲಿ ಏರಿಕೆಯಾದಂತೆ ಕಡಿಮೆಯಾಗುತ್ತಿಲ್ಲ. ಅದು ಹೆಚ್ಚಾಗುತ್ತಿದೆ. ಭ್ರಷ್ಟಾಚಾರವು ಏರಿಕೆಯಾಗುತ್ತಿದೆ. ಯಾವುದನ್ನು ಅರ್ಥಶಾಸ್ತ್ರದಲ್ಲಿ 'ರೆಂಟ್ ಸೀಕಿಂಗ್' ಎಂದು ಕರೆಯುತ್ತೇವೆಯೋ ಅದು ಇಂದು ಉಲ್ಬಣಗೊಳ್ಳುತ್ತಿದೆ. ರೆಂಟ್ ಸೀಕಿಂಗ್ ಅಂದರೆ ಯಾವುದೇ ಪರಿಶ್ರಮವಿಲ್ಲದೆ ಗಳಿಸಿಕೊಳ್ಳುವ ವರಮಾನ. ಕಾರ್ಲ್ ಮಾರ್ಕ್ಸ್‌ನ ಪ್ರಕಾರ ಎಲ್ಲ ಮೌಲ್ಯಗಳ ಮೂಲ ಆಕರ ಶ್ರಮ. ಆ ಶ್ರಮವನ್ನು ಸಲ್ಲಿಸದೆ ಗಳಿಸುವ ವರಮಾನವೇ ರೆಂಟ್. ಅಕ್ರಮ ಗಣಿಗಾರಿಕೆ, ಅರಣ್ಯನಾಶ, ಪರಿಸರ ಮಾಲಿನ್ಯ, ಕೋಮುವಾದ ಮುಂತಾದವು ಸಾಮಾಜಿಕ ಭ್ರಷ್ಟಾಚಾರ. ಇವೆಲ್ಲವನ್ನು ನಾವು ಬದ್ಧತೆಯಿಂದ ಪ್ರಜ್ಞಾಪೂರ್ವಕವಾಗಿ ಹೋಗಲಾಡಿಸಿಕೊಳ್ಳಬೇಕಾಗುತ್ತದೆ.

ಅಭಿವೃದ್ಧಿ ಮತ್ತು ರಾಜಕೀಯ

ಅಭಿವೃದ್ಧಿಗೂ ರಾಜಕೀಯ ಸಿದ್ಧಾಂತಕ್ಕೂ ಏನೂ ಸಂಬಂಧ ಇಲ್ಲ, ಅದು ರಾಜಕೀಯ ಸಿದ್ಧಾಂತಗಳಿಗೆ ಮೀರಿದ್ದು ಎಂಬ ಬಗ್ಗೆ- ಇದೊಂದು ಮುಗ್ಧ ನಂಬಿಕೆ. ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಬಾರದು ಎಂದು ನಮ್ಮ ಸಂಸ್ಕೃತಿಯ ಅನುಯಾಯಿಗಳು ಹೇಳಿದಂತೆ ಇದೊಂದು ಆಧಾರ ರಹಿತ ಭ್ರಮೆ. ಇಲ್ಲಿ ಮೊದಲು ನಾವು ರಾಜಕೀಯ ಎಂದರೇನು ಎಂಬುದನ್ನು ಸ್ಪಷ್ಟ ಪಡಿಸಿಕೊಳ್ಳಬೇಕು. ಜನರು ಸಮಾಜದಲ್ಲಿ ತಮ್ಮ ಅಧಿಕಾರವನ್ನು, ತಮ್ಮ ಸ್ಥಾನವನ್ನು, ತಮ್ಮ ಹಕ್ಕುಗಳನ್ನು ಒತ್ತಾಯಿಸುವ ಕ್ರಿಯೆಯನ್ನು ರಾಜಕೀಯ/ರಾಜಕಾರಣ ಎಂದು ಕರೆಯಬಹುದು. ಸಮಾಜದಲ್ಲಿ ತಮ್ಮ ಪಾಲನ್ನು ಪಡೆಯಲು ಜನರು ನಡೆಸುವ ಪ್ರಯತ್ನವೇ ರಾಜಕೀಯ. ರಾಜಕೀಯ ಅನ್ನುವುದನ್ನು ಜನರು ಸೀಮಿತವಾದ ನೆಲೆಯಲ್ಲಿ ಪಕ್ಷ ರಾಜಕಾರಣ ಎಂದು ಪರಿಭಾವಿಸಿಕೊಳ್ಳುವುದು ಸಾಮಾನ್ಯ. ಇಲ್ಲಿ ನಾವು ಅದನ್ನು ವಿಸ್ತೃತ ಅರ್ಥದಲ್ಲಿ ಬಳಸುತ್ತಿದ್ದೇವೆ. ಈ ಅರ್ಥದಲ್ಲಿ ಅಭಿವೃದ್ಧಿ ಅನ್ನುವುದು ಸಾರಾಸಗಟಾಗಿ ಒಂದು ರಾಜಕೀಯ ಸಂಗತಿ. ಅದು ರಾಜಕೀಯವನ್ನು ಮೀರಿದ್ದಲ್ಲ. ಅದು ರಾಜಕೀಯವನ್ನು ಒಳಗೊಂಡಿರುವ ಒಂದು ಸಂಗತಿ. ಸಾಮಾಜಿಕ ನ್ಯಾಯದ ಮೂಲಕ ಅಭಿವೃದ್ಧಿ ಎಂಬುದು ಒಂದು ರಾಜಕೀಯ ನೀತಿ. ನಾವು ರೂಪಿಸಿರುವ ಆಹಾರ ಭದ್ರತೆಯ ಮಸೂದೆ, ಉದ್ಯೋಗದ ಹಕ್ಕಿನ ಮಸೂದೆ, ಶಿಕ್ಷಣ ಹಕ್ಕಿನ ಶಾಸನ ಮುಂತಾದವು ಸಾಮಾಜಿಕ ನ್ಯಾಯದ ಮೂಲಕ ಅಭಿವೃದ್ಧಿ ಎಂಬ ನೀತಿಯ ಸಂಗತಿಗಳಾಗಿವೆ. ಆದರೆ ಇಂದು ಆರ್ಥಿಕ ಬೆಳವಣಿಗೆಯ ಮೂಲಕ ಸಾಮಾಜಿಕ ನ್ಯಾಯ ಅನ್ನುವ ನೀತಿಯನ್ನು ಪ್ರತಿಪಾದಿಸುತ್ತಿರುವ ರಾಜಕೀಯ ಪಕ್ಷ ಭಾರತದಲ್ಲಿ ಅಧಿಕಾರಕ್ಕೆ ಬಂದಿದೆ. ಇಂದಿನ ಆಳುವ ಪಕ್ಷವು ನೀಡಿರುವ ಘೋಷಣೆಯಾದ 'ಕನಿಷ್ಠ ಸರ್ಕಾರ: ಗರಿಷ್ಠ ಆಡಳಿತ ಪರಿಪಾಲನೆ' ಅನ್ನುವುದು ಒಂದು ರಾಜಕೀಯ ಸೈದ್ಧಾಂತಿಕ ನಿಲುವು. ಇದು ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಯಾಗಿದೆ.

ಅಭಿವೃದ್ಧಿ ಅನ್ನುವುದು ಸಾರಾಸಗಟಾಗಿ ಒಂದು ರಾಜಕೀಯ ಸಂಗತಿ. ಅದು ರಾಜಕೀಯವನ್ನು ಮೀರಿದ್ದಲ್ಲ. ಅದು ರಾಜಕೀಯವನ್ನು ಒಳಗೊಂಡಿರುವ ಒಂದು ಸಂಗತಿ. ಸಾಮಾಜಿಕ ನ್ಯಾಯದ ಮೂಲಕ ಅಭಿವೃದ್ಧಿ ಎಂಬುದು ಒಂದು ರಾಜಕೀಯ-ನೀತಿ. ಇಂದಿನ ಆಳುವ ಪಕ್ಷವು ನೀಡಿರುವ ಘೋಷಣೆಯಾದ 'ಕನಿಷ್ಠ ಸರ್ಕಾರ: ಗರಿಷ್ಠ ಆಡಳಿತ ಪರಿಪಾಲನೆ' ಅನ್ನುವುದು ಒಂದು ರಾಜಕೀಯ ಸೈದ್ಧಾಂತಿಕ ನಿಲುವು. ಇದು ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಯಾಗಿದೆ.

ಜನಪರ ಮತ್ತು ಜನವಿರೋಧಿ ಅಭಿವೃದ್ಧಿಗಳಿರುತ್ತವೆಯೇ ಎಂದು ಕೇಳಿದರೆ ಉತ್ತರ ಖಚಿತವಾಗಿ 'ಹೌದು' ಅನ್ನದೆ ವಿಧಿಯಿಲ್ಲ. ಆರ್ಥಿಕ ಬೆಳವಣಿಗೆ ಮೂಲಕ ಸಾಮಾಜಿಕ ನ್ಯಾಯ ಅನ್ನುವುದು ಜನವಿರೋಧಿ ಅಭಿವೃದ್ಧಿಯಾಗಿದೆ. ಏಕೆಂದರೆ ಕಳೆದ ಇನ್ನೂರು ವರ್ಷಗಳ ಅನುಭವವೇನೆಂದರೆ ಇತಿಹಾಸದಲ್ಲಿ ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನು ಜನರ ಬದುಕಾಗಿ, ಜನರ ಆರೋಗ್ಯವಾಗಿ, ಜನರ ಶಿಕ್ಷಣವಾಗಿ, ಸಮಾನತೆಯಾಗಿ ಪರಿವರ್ತನೆಗೊಂಡಿರುವುದಕ್ಕೆ ನಮಗೆ ಯಾವ ದೇಶದ ಪುರಾವೆಗಳು ದೊರೆಯುವುದಿಲ್ಲ. ಜನರು ತಮ್ಮ ವೈಯುಕ್ತಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ನಡೆಸುವ ಪ್ರಯತ್ನಗಳು ಸಮಾಜದಲ್ಲಿ ಎಲ್ಲರ ಹಿತವನ್ನು ಕಾಪಾಡುತ್ತವೆ ಎಂಬ ನಂಬಿಕೆಯ ನೀತಿಗಳನ್ನು ಆಧರಿಸಿದ ಅಭಿವೃದ್ಧಿಯು ಜನವಿರೋಧಿಯಾಗದೆ ಬೇರೇನಾಗುವುದಕ್ಕೂ ಬರುವುದಿಲ್ಲ. ಸಾವಿರಾರು ಜನರ ಹಿತಕ್ಕಾಗಿ ಲಕ್ಷಾಂತರ ಜನರ ಹಿತವನ್ನು ಬಲಿ ಕೊಡುವ ಅಭಿವೃದ್ಧಿಯನ್ನು ಜನವಿರೋಧಿ ಅನ್ನದೆ ಬೇರೆ ಮಾರ್ಗವಿಲ್ಲ. ಉದಾಹರಣೆಗೆ ಅನೇಕ ನೀರಾವರಿ ಯೋಜನೆಗಳಲ್ಲಿ, ಕೈಗಾರಿಕಾ ಯೋಜನೆಗಳಲ್ಲಿ, ಮೂಲಸೌಕರ್ಯ ಕಾರ್ಯಕ್ರಮಗಳಲ್ಲಿ, ಅಣು ಸ್ಥಾವರಗಳ ಸ್ಥಾಪನೆಯಲ್ಲಿ ಕೆಲವರ ಹಿತವನ್ನು ಕಾಯುವ ಸಲುವಾಗಿ ಲಕ್ಷಾಂತರ ಜನರ ಬದುಕನ್ನು ಬಲಿ ತೆಗೆದುಕೊಳ್ಳುವುದು ಜನವಿರೋಧಿ ಅಭಿವೃದ್ಧಿಯಾಗುತ್ತದೆ.

'ಅಭಿವೃದ್ಧಿಗಾಗಿ ಕನಿಷ್ಠ ಸರ್ಕಾರ: ಗರಿಷ್ಠ ಆಡಳಿತ' ಎಂಬ ಘೋಷಣೆ

ನಮ್ಮ ಪ್ರಧಾನಮಂತ್ರಿ ಅವರು ತಮ್ಮ ಪಕ್ಷದ ಅಭಿವೃದ್ಧಿ ನೀತಿಯನ್ನು ಖಚಿತವಾದ ನುಡಿಗಳಲ್ಲಿ ಮೇಲಿನ ಘೋಷಣೆಯಲ್ಲಿ ಮಂಡಿಸಿದ್ದಾರೆ. ಇದನ್ನು ನಾವು ಒಪ್ಪುವುದಕ್ಕೆ ಕೆಲವು ಸಮಸ್ಯೆಗಳಿವೆ. ಅದರ ಒಳಾರ್ಥಗಳು ನಮ್ಮ ಸಮಾಜದಲ್ಲಿನ ವಂಚಿತ ವರ್ಗಗಳಿಗೆ, ಅಂಚಿನಲ್ಲಿರುವ ಸಮುದಾಯಗಳಿಗೆ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ ಅಪಾಯಕಾರಿಯಾಗುವ ಸಾಧ್ಯತೆಯಿದೆ. ಈ ಘೋಷಣೆಯ ಇಂಗಿತಾರ್ಥವೇನು? ಅಂದರೆ ಇನ್ನು ಮುಂದೆ ಜನರಿಗೆ ಅಗತ್ಯವಾದ ಕುಡಿಯುವ ನೀರು, ವಿದ್ಯುತ್, ಆರೋಗ್ಯ ಸೇವೆ, ಆಹಾರ, ಉದ್ಯೋಗ, ಶಿಕ್ಷಣ ಮುಂತಾದವುಗಳನ್ನು ಸರ್ಕಾರವು ಕೊಡುವುದಿಲ್ಲ. ಅದು ಸರ್ಕಾರದ ಜವಾಬುದಾರಿಯಲ್ಲ. ಅದನ್ನು ಮಾರುಕಟ್ಟೆ ಒದಗಿಸುತ್ತದೆ. ಸರ್ಕಾರದ ಜವಾಬುದಾರಿಯೇನೆಂದರೆ ಮಾರುಕಟ್ಟೆಯು ಸಮರ್ಪಕವಾಗಿ, ಮತ್ತು ದಕ್ಷತೆಯಿಂದ ಕೆಲಸ ಮಾಡುವಂತೆ ಮೇಲುಸ್ತುವಾರಿ ಮಾಡುವುದು. ಇನ್ನು ಮುಂದೆ ಸರ್ಕಾರದ ಕರ್ತವ್ಯವೇನಿದ್ದರೂ ಗೌರ್ವನೆನ್ಸ್ – ಆಡಳಿತ ಪರಿಪಾಲನೆ. ಯಾವುದನ್ನು ನಾವು ಜನಕಲ್ಯಾಣವಾದಿ ಸರ್ಕಾರ ಎಂದು ಕರೆಯುತ್ತಿದ್ದೆವೋ ಅದು ಇನ್ನು ಮುಂದೆ ಇರುವುದಿಲ್ಲ. ಆಡಳಿತಾತ್ಮಕ ಸರ್ಕಾರ ಮಾತ್ರ ಇನ್ನು ಮುಂದೆ ಇರುತ್ತದೆ. ಅದು ಪೊಲೀಸ್ ಕೆಲಸಗಳನ್ನು, ದೇಶವನ್ನು ರಕ್ಷಿಸುವ ಕಾರ್ಯವನ್ನು ಮಾತ್ರ ಮಾಡುತ್ತದೆ. ಮಾರುಕಟ್ಟೆ ಆರ್ಥಿಕತೆಯನ್ನು ಸಬಲಗೊಳಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ. ಬಡವರ, ವಂಚಿತರ, ಅಂಚಿನಲ್ಲಿರುವವರ, ಅಲ್ಪಸಂಖ್ಯಾತರ, ಮಹಿಳೆಯರ ರಕ್ಷಣೆಯು ಇನ್ನು ಮುಂದೆ ಸರ್ಕಾರದ ಜವಾಬುದಾರಿಯಾಗಿರುವುದಿಲ್ಲ. ಇದು ಮೇಲಿನ ಘೋಷಣೆಯ ಒಳ ಅರ್ಥ(ಹಿಡನ್ ಮೀನಿಂಗ್).

ಇದು ನಮ್ಮ ಸಮಾಜಕ್ಕೆ ಅಪಾಯಕಾರಿಯಾಗುತ್ತದೆ. ಇಂದು ನಮ್ಮಲ್ಲಿ ಬಡವರ ಸಂಖ್ಯೆ ಹೆಚ್ಚುತ್ತಿದೆ. ಅಭಿವೃದ್ಧಿಯಿಂದ ವಂಚಿತ ಜನರಿದ್ದಾರೆ. ಸಮಾಜದ ಅಂಚಿನಲ್ಲಿ ಬದುಕು ದೂಡುತ್ತಿರುವ ಸಮುದಾಯಗಳಿವೆ. ಹಿಂಸೆ, ದೌರ್ಜನ್ಯ, ಶೋಷಣೆ, ತಾರತಮ್ಯ ಮುಂತಾದವುಗಳಿಗೆ ತುತ್ತಾಗುತ್ತಿರುವ ಮಹಿಳೆಯರಿದ್ದಾರೆ. ಸಾಮಾಜಿಕ ಪ್ರತ್ಯೇಕತನವನ್ನು ಎದುರಿಸುತ್ತಿರುವ ಜನರಿದ್ದಾರೆ. ಎಲ್ಲ ಬಗೆಯ ತಾರತಮ್ಯಗಳನ್ನು ಅನುಭವಿಸುತ್ತಿರುವ ಅಲ್ಪಸಂಖ್ಯಾತರಿದ್ದಾರೆ. ಇವರೆಲ್ಲರಿಗೂ ಸರ್ಕಾರದ ಭದ್ರತೆ, ಪೋಷಣೆ, ರಕ್ಷಣೆ ಅಗತ್ಯವಾಗಿದೆ. ಈ ಜನರಿಗೆ ಜೀವನಾವಶ್ಯಕತೆಗಳನ್ನು ಒದಗಿಸುವ ಜವಾಬುದಾರಿಯನ್ನು ಸರ್ಕಾರ ನಿರ್ವಹಿಸಬೇಕಾಗುತ್ತದೆ. ಅವರನ್ನು ಮಾರುಕಟ್ಟೆಯ ಶಕ್ತಿಗಳ ವಶಕ್ಕೆ ನೀಡುವುದರಿಂದ ಅವರ ಬವಣೆಗಳು ಅಧಿಕವಾಗುತ್ತವೆ ವಿನಾ ಅವು ತೊಲಗಿ ಬಿಡುವುದಿಲ್ಲ. ಮಾರುಕಟ್ಟೆಗೆ ಕರುಣೆ ಎಂಬುದಿರುವುದಿಲ್ಲ. ಅದಕ್ಕೆ ಸಾಮಾಜಿಕ ನ್ಯಾಯದ ಬಗ್ಗೆ ಬದ್ಧತೆಯಿರುವುದಿಲ್ಲ. ಅದರ ಬದ್ಧತೆಯೇನಿದ್ದರೂ ಲಾಭ, ಹೆಚ್ಚು ಲಾಭ. ನಮ್ಮ ಸರ್ಕಾರವು ಗೌರ್ವನೆನ್ಸ್ ಹೆಸರಿನಲ್ಲಿ ಸಾಮಾಜಿಕ ನ್ಯಾಯದ ಜವಾಬುದಾರಿಯನ್ನು ಬಿಟ್ಟುಕೊಡಬಾರದು. ಗೌರ್ವನೆನ್ಸ್ ಬೇಕು. ಆದರೆ ಜನರ ಹಿತಾಸಕ್ತಿಯನ್ನು ಬಲಿಕೊಟ್ಟು ಗೌರ್ವನೆನ್ಸ್ ಸಾಧಿಸಿಕೊಳ್ಳುವುದು ಸಾಧನೆಯಾಗುವುದಿಲ್ಲ. ಇಂದು ನಮಗೆ ಅಗತ್ಯವಾಗಿರುವ ಅಭಿವೃದ್ಧಿ ರಾಜನೀತಿಯೆಂದರೆ 'ಗರಿಷ್ಠ ಸರ್ಕಾರ : ಗರಿಷ್ಠ ಆಡಳಿತ ಪರಿಪಾಲನೆ'. ಇದಕ್ಕೆ ಪ್ರತಿಯಾಗಿ 'ಕನಿಷ್ಠ ಸರ್ಕಾರ: ಗರಿಷ್ಠ ಆಡಳಿತ ಪರಿಪಾಲನೆ' ಎಂಬ ಘೋಷಣೆಯು ಉಳ್ಳವರ ಹಿತಾಸಕ್ತಿಗಳನ್ನು ಕಾಯಬಲ್ಲುದೆ ವಿನಾ ಉಳಿದವರ, ಬಡವರ, ಅಲ್ಪಸಂಖ್ಯಾತರ, ಮಹಿಳೆಯರ ಹಿತಾಸಕ್ತಿಯನ್ನು ಕಾಪಿಡುವುದು ಸಾಧ್ಯವಿಲ್ಲ.

> ಇನ್ನು ಮುಂದೆ ಸರ್ಕಾರದ ಕರ್ತವ್ಯವೇನಿದ್ದರೂ ಗರ್ವನೆನ್ಸ್ – ಆಡಳಿತ ಪರಿಪಾಲನೆ. ಯಾವುದನ್ನು ನಾವು ಜನಕಲ್ಯಾಣವಾದಿ ಸರ್ಕಾರ ಎಂದು ಕರೆಯುತ್ತಿದ್ದೆವೋ ಅದು ಇನ್ನು ಮುಂದೆ ಇರುವುದಿಲ್ಲ. ಆಡಳಿತಾತ್ಮಕ ಸರ್ಕಾರ ಮಾತ್ರ ಇನ್ನು ಮುಂದೆ ಇರುತ್ತದೆ. ಅದು ಪೊಲೀಸ್ ಕೆಲಸಗಳನ್ನು, ದೇಶವನ್ನು ರಕ್ಷಿಸುವ ಕಾರ್ಯವನ್ನು ಮಾತ್ರ ಮಾಡುತ್ತದೆ. ಮಾರುಕಟ್ಟೆ ಆರ್ಥಿಕತೆಯನ್ನು ಸಬಲಗೊಳಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ. ಬಡವರ, ವಂಚಿತರ, ಅಂಚಿನಲ್ಲಿರುವವರ, ಅಲ್ಪಸಂಖ್ಯಾತರ, ಮಹಿಳೆಯರ ರಕ್ಷಣೆಯು ಇನ್ನು ಮುಂದೆ ಸರ್ಕಾರದ ಜವಾಬುದಾರಿಯಾಗಿರುವುದಿಲ್ಲ. ಇದು ಮೇಲಿನ ಘೋಷಣೆಯ ಒಳ ಅರ್ಥ. ಇದು ನಮ್ಮ ಸಮಾಜಕ್ಕೆ ಅಪಾಯಕಾರಿಯಾಗುತ್ತದೆ.



ನಮ್ಮ ದೇಶದಲ್ಲಿ ಚಾಲ್ತಿಯಲ್ಲಿರುವ ಮುಕ್ತ ಮಾರುಕಟ್ಟೆ ಅಭಿವೃದ್ಧಿ

ಪ್ರೊ. ಚಂದ್ರ ಪೂಜಾರಿ

ಅಭಿವೃದ್ಧಿಯೆಂದರೆ, ...

ನನ್ನ ಪ್ರಕಾರ, ನ್ಯಾಯಯುತ ಸಮಾಜದ (ಜಸ್ಟ್ ಸೊಸೈಟಿಯ) ನಿರ್ಮಾಣ ಪ್ರಕ್ರಿಯೆ. ಜಸ್ಟ್ ಸೊಸೈಟಿಯ ಲಕ್ಷಣಗಳೇನು? ಸಮಾಜದ ಬಹುತೇಕರಿಗೆ ಮೂರು ಹೊತ್ತಿನ ಊಟ, ತಲೆ ಮೇಲೊಂದು ಸೂರು, ಉತ್ತಮ ಶಿಕ್ಷಣ, ಆರೋಗ್ಯ ಮತ್ತು ಇತರ ಮೂಲ ಸೌಕರ್ಯಗಳು ಸಮಸ್ಯೆಯಾಗದಿರುವುದು. ಇಂತಹ ಮೂಲಭೂತ ಅವಶ್ಯಕತೆಗಳನ್ನು ದುಡಿದು ಗಳಿಸಲು ಅವಶ್ಯವಿರುವ ಸಂಪನ್ಮೂಲಗಳ (ಭೂಮಿ ಅಥವಾ ಬಂಡವಾಳ ಅಥವಾ ನೈಪುಣ್ಯತೆ) ಒಡೆತನ ಇರುವುದು. ಜತೆಗೆ ಇವೆಲ್ಲವನ್ನು ಗಳಿಸಲು ನಾಲ್ಕು ಜನರೊಂದಿಗೆ ವ್ಯವಹರಿಸಬೇಕು. ನಾಲ್ಕು ಜನರ ನಡುವೆ ವ್ಯವಹರಿಸುವಾಗ ಪ್ರತಿಯೊಬ್ಬರಿಗೂ ಮಾನ ಸಮ್ಮಾನದಿಂದ ವ್ಯವಹರಿಸುವ ಭರವಸೆ ಇರುವುದು. ಇನ್ನೂ ಮುಂದಕ್ಕೆ ಹೋಗಿ ಆಲೋಚಿಸುವುದಾದರೆ ತಮ್ಮ ತಮ್ಮ ಏಳಿಗೆಯ ಮತ್ತು ಕನಸಿನ ನ್ಯಾಯಯುತ ಸಮಾಜವನ್ನು ವ್ಯಾಖ್ಯಾನಿಸುವ ಮತ್ತು ಕಾರ್ಯರೂಪಕ್ಕೆ ತರುವ ಸ್ವಾತಂತ್ರ್ಯ, ಸಮಾನತೆ ಮತ್ತು ಅಧಿಕಾರ ಇರುವುದು ಕೂಡ ಜಸ್ಟ್ ಸೊಸೈಟಿಯ ಲಕ್ಷಣವೇ.

ಇಂತಹ ಅಭಿವೃದ್ಧಿಯನ್ನು ಖಂಡಿತವಾಗಿಯೂ ಮಾಪನ ಮಾಡಬಹುದು.

ಮೇಲಿನ ಅಭಿವೃದ್ಧಿಯನ್ನು ಮಾಪನ ಮಾಡಲು ಪರಿಗಣಿಸಬೇಕಾದ ಮುಖ್ಯ ಅಂಶಗಳು ಸಮಾಜೋಸಾಂಸ್ಕೃತಿಕ ಸ್ಥಾನಮಾನ, ರಾಜಕೀಯ ಅಧಿಕಾರ ಹಾಗು ಆರ್ಥಿಕ ಸ್ಥಿತಿಗತಿ. ವ್ಯಕ್ತಿಯ ಅಥವಾ ಕುಟುಂಬದ ಸಾಮಾಜಿಕ ಹಾಗು ಸಾಂಸ್ಕೃತಿಕ ಸ್ಥಾನಮಾನ ಹಾಗು ಅಭಿವೃದ್ಧಿ ನಡುವೆ ನೇರ ಸಂಬಂಧ ಇದೆ. ವ್ಯಕ್ತಿ, ಕುಟುಂಬಗಳನ್ನು ಕುಬ್ಜರನ್ನಾಗಿಸುವ ಸ್ಥಾನಮಾನ ಅಭಿವೃದ್ಧಿಗೆ ಪೂರಕವಲ್ಲ. ಮಾನಸಮ್ಮಾನಗಳು ವ್ಯಕ್ತಿಯ ಆತ್ಮವಿಶ್ವಾಸ ವನ್ನು ಹೆಚ್ಚಿಸುತ್ತದೆ, ಇತರರೊಂದಿಗೆ ವ್ಯವಹರಿಸಿ ತಮ್ಮ ಮೂಲ ಸೌಕರ್ಯಗಳನ್ನು ದುಡಿದು ಗಳಿಸುವ ಭರವಸೆಯನ್ನು ನೀಡುತ್ತವೆ. ಇದೇ ರೀತಿಯಲ್ಲಿ ಸಮಾನತೆ, ಸ್ವಾತಂತ್ರ್ಯಗಳ ಪ್ರಜ್ಞೆ ಕೂಡ ವ್ಯಕ್ತಿ, ಕುಟುಂಬಗಳ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಅನ್ಯಾಯಗಳನ್ನು ಪ್ರಶ್ನಿಸುವ, ಪ್ರತಿಭಟಿಸುವ, ಅಡ್ಡಿ ಆತಂಕಗಳಿಲ್ಲದೆ ವ್ಯವಹರಿಸುವ ಸ್ವಾತಂತ್ರ್ಯ ಇದೆ ಎನ್ನುವ ಪ್ರಜ್ಞೆ ಅಭಿವೃದ್ಧಿಯ ಲಕ್ಷಣ. ಯಾವುದೇ ಕ್ಷೇತ್ರಗಳಲ್ಲೂ ತನಗೆ ತಾರತಮ್ಯವಾಗಿಲ್ಲ, ಬದುಕಿನ ಎಲ್ಲ ಅವಕಾಶಗಳು ಇತರರಂತೆ ತನಗೂ ಲಭ್ಯ ಎನ್ನುವ ನಂಬಿಕೆ ಸಮಾನತೆಯನ್ನು ಸೂಚಿಸುತ್ತದೆ ಮತ್ತು ಅಭಿವೃದ್ಧಿಗೆ ಇದು ಅನಿವಾರ್ಯ. ಇವುಗಳೊಂದಿಗೆ ಈಗಾಗಲೇ ಇರುವ ಆರ್ಥಿಕ ಅಭಿವೃದ್ಧಿಯ ಮಾನದಂಡ ಗಳನ್ನು ಸೇರಿಸಿ ಹೊಸತೊಂದು ಅಭಿವೃದ್ಧಿ ಮಾಪಕವನ್ನು ರೂಪಿಸುವ ಅಗತ್ಯವಿದೆ.

'ಗುಜರಾತ್ ಮಾದರಿ' ದೇಶಕ್ಕೆ ಮಾದರಿಯಾಗದು

ತೊಂಬತ್ತರ ನಂತರ ನಮ್ಮಲ್ಲಿ ಖಾಸಗೀಕರಣ ಹಾಗು ಉದಾರೀಕರಣ ನೀತಿಗಳು ಜಾರಿಯಲ್ಲಿವೆ. ಖಾಸಗೀಕರಣ ವೆಂದರೆ ಸಾರ್ವಜನಿಕ (ಸಮಷ್ಠಿಯ) ಸಂಪನ್ಮೂಲಗಳನ್ನು ಖಾಸಗಿ ಬಂಡವಾಳಿಗರಿಗೆ ನೀಡುವುದು. ಉದಾರೀಕರಣವೆಂದರೆ ಬಂಡವಾಳಿಗರ ವ್ಯವಹಾರಗಳನ್ನು ನಿಯಂತ್ರಿಸುವ ಕಾನೂನು ಕಟ್ಟಲೆಗಳನ್ನು ಸಡಿಲ ಗೊಳಿಸುವುದು. ಈ ಎಲ್ಲ ಸವಲತ್ತುಗಳನ್ನು ಅನುಭವಿಸುವ ಉದ್ದಿಮೆಗಳು ಸರಕುಸೇವೆಗಳನ್ನು ಉತ್ಪಾದಿಸುವ ತಮ್ಮ ಸಾಂಪ್ರದಾಯಿಕ ಜವಾಬ್ದಾರಿಯೊಂದಿಗೆ ಸಾಮಾಜಿಕ, ಆರ್ಥಿಕ ಮೂಲಸೌಕರ್ಯ ಗಳನ್ನು ಒದಗಿಸುವ ಜವಾಬ್ದಾರಿಯನ್ನು ವಹಿಸಬೇಕೆನ್ನುವುದು ಇಂದು ಆಚರಣೆ ಯಲ್ಲಿರುವ ಅಭಿವೃದ್ಧಿಯ ಲಕ್ಷಣ. ಇಂತಹ ಉದ್ದಿಮೆಗಳಿಗೆ ನೆರವು ನೀಡುವುದು ಮಾತ್ರ ಸರಕಾರದ ಕೆಲಸ. ಉದ್ದಿಮೆಗಳಿಗೆ ಕಡಿಮೆ ಬೆಲೆಗೆ ನೀರು, ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಮಾನವ ಸಂಪನ್ಮೂಲ ಮುಂತಾದವುಗಳನ್ನು ಒದಗಿಸುವುದು ಸರಕಾರದ

> ಇತರ ರಾಜ್ಯಗಳಿಗೆ ಹೋಲಿಸಿದರೆ ಗುಜರಾತ್ ಚೆನ್ನಾಗಿ ಅಭಿವೃದ್ಧಿ ಯನ್ನು ಮಾಡಿದೆಯೆನ್ನುವುದು ಉದ್ದಿಮೆಗಳ ತೀರ್ಮಾನ. ಇದನ್ನೇ ಗುಜರಾತ್ ಅಭಿವೃದ್ಧಿ ಮಾದರಿಯೆಂದು ಅವು ತಮ್ಮ ಮಾಧ್ಯಮಗಳ ಮೂಲಕ ಪ್ರಚಾರ ಪಡಿಸಿವೆ. ಇದು ದೇಶಕ್ಕೆ ಮಾದರಿಯಾಗಲು ಸಾಧ್ಯವಿಲ್ಲ. ಏಕೆಂದರೆ ಈ ಮಾದರಿ ನಡೆಯುತ್ತಿರುವುದೇ ಸಮಾಜದ ಬಹುದೊಡ್ಡ ವರ್ಗದ (ಶೇ.70ರಷ್ಟು ಜನರ) ಆಸಕ್ತಿಗಳನ್ನು ಬಲಿಕೊಟ್ಟು.

ಜವಾಬ್ದಾರಿಯಾಗಿದೆ. ಈ ಎಲ್ಲ ಸಂಪನ್ಮೂಲಗಳಲ್ಲಿ ಉದ್ದಿಮೆಗಳು ಮಾತ್ರ ಪಾಲು ಕೇಳುವುದಲ್ಲ. ಸಮಾಜದ ಉಳಿದವರು (ರೈತರು, ಭೂರಹಿತರು, ಕಾರ್ಮಿಕರು ಮತ್ತು ಇತರರು) ಕೂಡ ಪಾಲು ಕೇಳುತ್ತಾರೆ. ಇವರ ಕೂಗನ್ನು ಮನ್ನಿಸದಿದ್ದರೆ ಹೋರಾಟ ಮಾಡುತ್ತಾರೆ. ಕೃಷಿಕರು, ಭೂರಹಿತರು, ಕಾರ್ಮಿಕರು ಮತ್ತು ಇತರರ ಬೇಡಿಕೆಗಳನ್ನು ಕಾನೂನುಬದ್ಧವಾಗಿ ತಿರಸ್ಕರಿಸಲು ಮತ್ತು ಹೋರಾಟಗಳನ್ನು ಹತ್ತಿಕ್ಕಲು ಸರಕಾರ ಬೇಕು.

ಭೂಸುಧಾರಣಾ ಕಾಯಿದೆಗಳಿಗೆ ತಿದ್ದುಪಡಿ ತರಲು, ಕೃಷಿಕರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಸರಕಾರ ಬೇಕು. ಕಾರ್ಮಿಕ ಕಾನೂನಿಗೆ ತಿದ್ದುಪಡಿ ತಂದು ಗುತ್ತಿಗೆ, ಹೊರಗುತ್ತಿಗೆ, ತಾತ್ಕಾಲಿಕ, ಅರೆಕಾಲಿಕ ಇತ್ಯಾದಿ ಕಾರ್ಮಿಕ ಪದ್ಧತಿಗಳನ್ನು ತಂದು ಅಸಂಘಟಿತ ಕಾರ್ಮಿಕರನ್ನು ಸೃಷ್ಟಿಸಲು ಸರಕಾರ ಬೇಕು. ಬ್ಯಾಂಕಿಂಗ್ ಕಾನೂನಿಗೆ ತಿದ್ದುಪಡಿ ತಂದು ಸಾರ್ವಜನಿಕ ಹಣಕಾಸಿನ ದೊಡ್ಡ ಪಾಲು ಉದ್ದಿಮೆಗಳಿಗೆ ಲಭ್ಯವಾಗುವಂತೆ ನೋಡಿಕೊಳ್ಳಲು ಸರಕಾರ ಬೇಕು. ನೇರ ತೆರಿಗೆ ಬದಲು ಪರೋಕ್ಷ ತೆರಿಗೆ ಮೂಲಕ ಸಂಪನ್ಮೂಲ ಸಂಗ್ರಹಿಸಲು ಸರಕಾರ ಬೇಕು. ಈ ಬಗೆಯ ಅಭಿವೃದ್ಧಿಯನ್ನು ಇತರ ರಾಜ್ಯಗಳಿಗೆ ಹೋಲಿಸಿದರೆ ಗುಜರಾತ್ ಚೆನ್ನಾಗಿ ಮಾಡಿದೆಯೆನ್ನುವುದು ಉದ್ದಿಮೆಗಳ ತೀರ್ಮಾನ. ಇದನ್ನೇ ಗುಜರಾತ್ ಅಭಿವೃದ್ಧಿ ಮಾದರಿಯೆಂದು ಉದ್ದಿಮೆಗಳು ತಮ್ಮ ಮಾಧ್ಯಮಗಳ ಮೂಲಕ ಪ್ರಚಾರ ಪಡಿಸಿವೆ. ಇದು ದೇಶಕ್ಕೆ ಮಾದರಿಯಾಗಲು ಸಾಧ್ಯವಿಲ್ಲ. ಏಕೆಂದರೆ ಈ ಮಾದರಿ ನಡೆಯುತ್ತಿರುವುದೇ ಸಮಾಜದ ಬಹುದೊಡ್ಡ ವರ್ಗದ (ಶೇ.70ರಷ್ಟು ಜನರ) ಆಸಕ್ತಿಗಳನ್ನು ಬಲಿಕೊಟ್ಟು ಎನ್ನುವುದನ್ನು ಮೇಲಿನ ಪ್ಯಾರಾಗಳಲ್ಲಿ ನೋಡಿದ್ದೇವೆ.

ಅಭಿವೃದ್ಧಿ ಅದು ಕಾರ್ಯರೂಪಕ್ಕೆ ಬರುವ ರಾಜಕೀಯ ಪರಿಸರದ ರೂಪು ಪಡೆಯುತ್ತದೆ

ಇಂದು ರಾಜಕೀಯ ಅಭಿವೃದ್ಧಿಯನ್ನು ನಿರ್ಧರಿಸುವುದಲ್ಲ; ಅಭಿವೃದ್ಧಿಯೇ ರಾಜಕೀಯವನ್ನು ನಿರ್ಣಯಿಸುವುದು

> ನಮ್ಮಲ್ಲಿಂದು ಕ್ಯಾಪಿಟಲಿಸ್ಟ್ ಅಭಿವೃದ್ಧಿ ಜಾರಿಯಲ್ಲಿದೆ. ಈ ಅಭಿವೃದ್ಧಿಯನ್ನೂ ನಾವು ನೀವು ಮತ ಹಾಕಿ ಚುನಾಯಿಸಿದ ಪ್ರತಿನಿಧಿಗಳೇ ಜಾರಿಗೆ ತರುತ್ತಿರುವುದು. ಇವರು ಇದನ್ನು ಕ್ಯಾಪಿಟಲಿಸ್ಟ್ ಅಭಿವೃದ್ಧಿ ಎನ್ನುವ ಬದಲು ಮುಕ್ತ ಮಾರುಕಟ್ಟೆ ಅಭಿವೃದ್ಧಿ ಎನ್ನುತ್ತಿದ್ದಾರೆ. ಕ್ಯಾಪಿಟಲಿಸ್ಟ್ ಅಭಿವೃದ್ಧಿಯ ಕೆಟ್ಟ ಗುಣಗಳು ಜನರಿಗೆ ಅರ್ಥವಾದರೆ ಕಷ್ಟವೆಂದು ಇದನ್ನು ಮುಕ್ತ ಮಾರುಕಟ್ಟೆ ಅಭಿವೃದ್ಧಿಯೆಂದು ಪ್ರಚಾರ ಪಡಿಸುತ್ತಿದ್ದಾರೆ.

ಎನ್ನುವ ಚಿತ್ರಣ ಇದೆ. ಆದರೆ ಇದು ನಿಜವಲ್ಲ. ಅಭಿವೃದ್ಧಿಗೆ ನಿರ್ದಿಷ್ಟ ರೂಪ, ಅರ್ಥ, ವ್ಯಾಖ್ಯಾನ, ಸಿದ್ಧಾಂತಗಳಿಲ್ಲ. ಈ ದೃಷ್ಟಿಯಿಂದ ಅಭಿವೃದ್ಧಿಯೊಂದು ದ್ರವದ ರೀತಿಯಲ್ಲಿದೆ. ದ್ರವ ಹೇಗೆ ತಾನಿರುವ ಪಾತ್ರದ ರೂಪ ತಳೆಯುತ್ತದೆ, ಅದೇ ರೀತಿ ಅಭಿವೃದ್ಧಿ ಕೂಡ ಅದು ಕಾರ್ಯರೂಪಕ್ಕೆ ಬರುವ ರಾಜಕೀಯ ಪರಿಸರದ (ಪೊಲಿಟಿಕಲ್ ಎಕಾನಮಿಯ) ರೂಪು ಪಡೆಯುತ್ತದೆ. ಹಿಂದೆ ಮತ್ತು ಈಗಲೂ ಅಭಿವೃದ್ಧಿಗೆ ನಿರ್ದಿಷ್ಟ ರೂಪುಕೊಡುವ ರಾಜಕೀಯ ಸಿದ್ಧಾಂತಗಳಿವೆ. ಸೋಶಿಯಲಿಸಂ ಮತ್ತು ಕ್ಯಾಪಿಟಲಿಸಂಗಳು ಅವುಗಳಲ್ಲಿ ಪ್ರಮುಖ. ಇವು ಕ್ರಮವಾಗಿ ಸೋಶಿಯಲಿಸ್ಟ್ ಅಭಿವೃದ್ಧಿ ಮತ್ತು ಕ್ಯಾಪಿಟಲಿಸ್ಟ್ ಅಭಿವೃದ್ಧಿಯ ಹುಟ್ಟಿಗೆ ಕಾರಣವಾಗಿವೆ. ಸೋಶಿಯಲಿಸ್ಟ್ ಅಭಿವೃದ್ಧಿಯಲ್ಲಿ ಭೂಮಿ, ಬಂಡವಾಳ, ನೈಸರ್ಗಿಕ ಸಂಪನ್ಮೂಲ, ಮೆಶಿನರಿ, ಮಾನವ ಸಂಪನ್ಮೂಲ ಇತ್ಯಾದಿ ಉತ್ಪಾದನಾ ಪರಿಕರಗಳು ಕೆಲವೇ ಕೆಲವು ವ್ಯಕ್ತಿಗಳ ಸ್ವಾಧೀನದಲ್ಲಿ ಇರುವುದಿಲ್ಲ; ಸರಕಾರ ಅಥವಾ ಸಮಾಜದ ಎಲ್ಲರ ಒಡೆತನದಲ್ಲಿರುತ್ತವೆ. ಇದೇ ರೀತಿಯಲ್ಲಿ ಸೋಶಿಯಲಿಸ್ಟ್ ಅಭಿವೃದ್ಧಿಯಲ್ಲಿ ಉತ್ಪಾದನೆಯ ಇಡೀ ಉದ್ದೇಶವೇ ಜನರ ಅಗತ್ಯಗಳನ್ನು ಪೂರೈಸುವುದು. ಆದುದರಿಂದ ಸೋಶಿಯಲಿಸ್ಟ್ ಅಭಿವೃದ್ಧಿಯಲ್ಲಿ ಒಂದು ಕಡೆ ಸರಕುಸೇವೆಗಳು ರಾಶಿ ರಾಶಿ ಬಿದ್ದಿರುವಾಗ ಮತ್ತೊಂದೆಡೆ ಊಟಕ್ಕಿಲ್ಲದ ಜನರನ್ನು ನೋಡಲು ಸಾಧ್ಯವಿಲ್ಲ.

ಕ್ಯಾಪಿಟಲಿಸ್ಟ್ ಅಭಿವೃದ್ಧಿಯಲ್ಲಿ ಉತ್ಪಾದನಾ ಪರಿಕರಗಳು ಕೆಲವೇ ಕೆಲವರ ಸ್ವಾಧೀನದಲ್ಲಿದ್ದು ಸಮಾಜದ ಬಹುತೇಕರು ತಮ್ಮ ಮೂರು ಹೊತ್ತಿನ ಊಟಕ್ಕೆ ತಮ್ಮ ಶ್ರಮ ಮಾರಿ ಬದುಕುವುದು ಮಾತ್ರ ದಾರಿ. ಉತ್ಪಾದಿತ ಸರಕು ಮತ್ತು ಸೇವೆಗಳ ವಿತರಣೆಯನ್ನು ಮಾರುಕಟ್ಟೆ ತೀರ್ಮಾನಿಸುತ್ತದೆ. ವ್ಯಕ್ತಿಗಳ ಅವಶ್ಯಕತೆಗಳು ಸರಕುಸೇವೆಗಳ ಮೇಲೆ ಅವರ ಹಕ್ಕನ್ನು ನಿರ್ಧರಿಸುವುದಿಲ್ಲ; ಖರೀದಿಸುವ ಶಕ್ತಿ ಸರಕು ಸೇವೆಗಳ ಮೇಲೆ ಅವರ ಹಕ್ಕನ್ನು ತೀರ್ಮಾನಿಸುತ್ತದೆ.

ನಮ್ಮಲ್ಲಿಂದು ಕ್ಯಾಪಿಟಲಿಸ್ಟ್ ಅಭಿವೃದ್ಧಿ ಜಾರಿಯಲ್ಲಿದೆ. ಈ ಅಭಿವೃದ್ಧಿಯನ್ನೂ ನಾವು ನೀವು ಮತ ಹಾಕಿ ಚುನಾಯಿಸಿದ ಪ್ರತಿನಿಧಿಗಳೇ ಜಾರಿಗೆ ತರುತ್ತಿರುವುದು. ಇವರು ಇದನ್ನು ಕ್ಯಾಪಿಟಲಿಸ್ಟ್ ಅಭಿವೃದ್ಧಿ ಎನ್ನುವ ಬದಲು ಮುಕ್ತ ಮಾರುಕಟ್ಟೆ ಅಭಿವೃದ್ಧಿ ಎನ್ನುತ್ತಿದ್ದಾರೆ. ಕ್ಯಾಪಿಟಲಿಸ್ಟ್ ಅಭಿವೃದ್ಧಿಯ ಕೆಟ್ಟ ಗುಣಗಳು ಜನರಿಗೆ ಅರ್ಥವಾದರೆ ಕಷ್ಟವೆಂದು ಇದನ್ನು ಮುಕ್ತ ಮಾರುಕಟ್ಟೆ ಅಭಿವೃದ್ಧಿಯೆಂದು ಪ್ರಚಾರ ಪಡಿಸುತ್ತಿದ್ದಾರೆ.

ಮಾರುಕಟ್ಟೆ ಎಂದ ಕೂಡಲೇ ಗ್ರಾಹಕರ ಸ್ವಾತಂತ್ರ್ಯ – ಇಚ್ಛೆ ಇದ್ದರೆ ಖರೀದಿಸುವ ಇಚ್ಛೆ ಇಲ್ಲದಿದ್ದರೆ ಮಾರದಿರುವ ಸ್ವಾತಂತ್ರ್ಯ ಮುಂಚೂಣಿಗೆ ಬರುತ್ತದೆ. ಜೊತೆಗೆ ಮಾರುಕಟ್ಟೆಯಲ್ಲಿ ವ್ಯವಹರಿಸುವವರ ಜಾತಿ, ಧರ್ಮಗಳ, ಲಿಂಗಗಳನ್ನು ಯಾರೂ ಕೇಳುವುದಿಲ್ಲ. ಹೀಗೆ ಮಾರುಕಟ್ಟೆ ಸ್ವಾತಂತ್ರ್ಯ, ಸಮಾನತೆ, ಸ್ವಾಯತ್ತತೆಗಳ ತದ್ರೂಪವಾಗಿ ನಮ್ಮ ಮುಂದೆ ನಿಲ್ಲುತ್ತದೆ. ಇಂದು ಚಾಲ್ತಿಯಲ್ಲಿರುವ ಕ್ಯಾಪಿಟಲಿಸ್ಟ್ ಅಥವಾ ಮುಕ್ತ ಮಾರುಕಟ್ಟೆ ಅಭಿವೃದ್ಧಿ ಜನಪರವೇ ಅಥವಾ ಜನವಿರೋಧಿಯೇ ಎಂದರೆ ಹೌದು ಮತ್ತು ಅಲ್ಲ ಎನ್ನುವ ಉತ್ತರ ನೀಡಬೇಕಾಗಿದೆ. ನಮ್ಮ ಸಮಾಜದ ಒಂದು ಸಣ್ಣ ವರ್ಗದ ಆಸಕ್ತಿಗಳನ್ನು ಈಡೇರಿಸುವ ದೃಷ್ಟಿಯಿಂದ ಇದು ಜನಪರ. ಆದರೆ ಸಮಾಜದ ಬಹುತೇಕರ ಆಸಕ್ತಿಯ ದೃಷ್ಟಿಯಿಂದ ಇದು

ಕನಿಷ್ಠ ಸರಕಾರ ಗರಿಷ್ಠ ಆಡಳಿತದ ಘೋಷಣೆ ಎರಡು ಮತ್ತು ಮೂರನೇ ವಿಧದ ಆಡಳಿತವನ್ನು ಮುಂಚೂಣಿಗೆ ತರುವ ಉದ್ದೇಶ ಹೊಂದಿದೆ. ಅಂದರೆ ಸಾಮಾಜಿಕ ಹಾಗು ಆರ್ಥಿಕ ಮೂಲಸೌಕರ್ಯಗಳನ್ನು ಸೃಷ್ಟಿಸಲು ಉದ್ದಿಮೆಗಳನ್ನು ಮತ್ತು ಪಾಲಿಸಿ ರಚನೆ ಹಾಗು ಸೇವಾ ಪೂರೈಕೆಗಳಿಗೆ ಸಿವಿಲ್ ಸೊಸೈಟಿಗಳನ್ನು ಅವಲಂಬಿಸುವುದು. ಖಾಸಗಿ ಸಾರ್ವಜನಿಕ ಪಾಲುದಾರಿಕೆ ಮೂಲಕ ಮೂಲಸೌಕರ್ಯಗಳನ್ನು ಸೃಷ್ಟಿಸುವುದು, ಸರಕಾರೇತರ ಸಂಸ್ಥೆಗಳ ಮೂಲಕ ಅಭಿವೃದ್ಧಿ ಸವಲತ್ತುಗಳನ್ನು ಪೂರೈಸುವುದು,

ಜನವಿರೋಧಿ. ಏಕೆಂದರೆ ಮಾರುಕಟ್ಟೆ ಪ್ರತಿಪಾದಿಸುವ ಸ್ವಾತಂತ್ರ್ಯ ಸಮಾನತೆಗಳು ಆಚರಣೆಗೆ ಬರಬೇಕಾದರೆ ಸಮಾಜದಲ್ಲಿ ಸಮಾನತೆ ಸ್ವಾತಂತ್ರ್ಯಗಳಿರಬೇಕು. ಸಮಾನತೆ, ಸ್ವಾತಂತ್ರ್ಯಗಳಿಲ್ಲದ ಸಮಾಜದಲ್ಲಿ ಮಾರುಕಟ್ಟೆ ನ್ಯಾಯಕ್ಕಿಂತ ಹೆಚ್ಚು ಅನ್ಯಾಯ ಮಾಡುತ್ತದೆನ್ನುವುದನ್ನು ನಾವು ಈಗಾಗಲೇ ಅರ್ಥ ಮಾಡಿ ಕೊಂಡಿದ್ದೇವೆ. ಆದುದರಿಂದ ಸಮಾಜದ ಬಹುತೇಕರ ಅದರಲ್ಲೂ ತಳಸ್ತರದ ಜನರ ದೃಷ್ಟಿಯಿಂದ ಇದು ಜನ ವಿರೋಧಿ ಅಭಿವೃದ್ಧಿ.

ಅಭಿವೃದ್ಧಿಗೂ ಭ್ರಷ್ಟಾಚಾರ ನಿರ್ಮೂಲನಕ್ಕೂ ಸಂಬಂಧವಿಲ್ಲ...

.ಆದರೆ ರಾಜಕೀಯಕ್ಕೂ ಭ್ರಷ್ಟಾಚಾರಕ್ಕೂ ನೇರ ಸಂಬಂಧ ಇದೆ. ಎಲ್ಲ ಕ್ಷೇತ್ರಗಳ ವ್ಯವಹಾರಗಳನ್ನು ನಿರ್ದೇಶಿಸುವ ನಿಯಮಗಳನ್ನು ರೂಪಿಸುವ ಪ್ರಕ್ರಿಯೆ ರಾಜಕೀಯ. ಈ ದೃಷ್ಟಿಯಿಂದ ನಮ್ಮ ಬದುಕಿನ ಇಂಚುಇಂಚನ್ನು ರಾಜಕೀಯ ಪ್ರಭಾವಿಸುತ್ತದೆ. ಭೂಮಿ, ಹಣಕಾಸು, ನೈಸರ್ಗಿಕ ಸಂಪನ್ಮೂಲ ಮುಂತಾದವು ಗಳನ್ನು ಎಲ್ಲರೂ ಹೊಂದಿರಬೇಕೇ ಅಥವಾ ಕೆಲವರ ಸ್ವಾಧೀನ ಇದ್ದರೆ ಸಾಕೇ? ಶಿಕ್ಷಣ, ಆರೋಗ್ಯ, ವಸತಿಗಳನ್ನು ಖರೀದಿಸಲು ಶಕ್ತಿ ಇಲ್ಲದವರಿಗೆ ಉಚಿತವಾಗಿ ನೀಡಬೇಕೇ ಅಥವಾ ಎಲ್ಲರೂ ಮಾರುಕಟ್ಟೆ ದರ ನೀಡಿ ಇವುಗಳನ್ನು ಖರೀದಿಸಬೇಕೇ? ಧರ್ಮ, ಜಾತಿ ಮುಂತಾದವುಗಳನ್ನು ಚುನಾವಣೆಯಲ್ಲಿ ಧಾರಾಳವಾಗಿ ಬಳಸಲು ಅವಕಾಶ ನೀಡಬೇಕೇ ಅಥವಾ ಇವುಗಳನ್ನು ಖಾಸಗಿ ಲೋಕಕ್ಕೆ ಸೀಮಿತ ಗೊಳಿಸಬೇಕೇ? ಟಿವಿ ಪೇಪರ್‌ಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ತಳಸ್ತರದ ಜನರ ಸ್ವಾತಂತ್ರ್ಯವನ್ನು ಕುಗ್ಗಿಸುವ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ನೀಡಬೇಕೇ ಅಥವಾ ತಳಸ್ತರದ ಜನರ ಸ್ವಾತಂತ್ರ್ಯಗಳನ್ನು ಹೆಚ್ಚಿಸುವ ಕಾರ್ಯಕ್ರಮ ಗಳನ್ನು ಮಾತ್ರ ನಡೆಸಬೇಕೆಂದು ಮಾಧ್ಯಮಗಳ ಮೇಲೆ ಒತ್ತಡ ಹೇರಬೇಕೇ? ಈ ಎಲ್ಲ ತೀರ್ಮಾನಗಳನ್ನು ರಾಜಕೀಯ ಮಾಡುತ್ತದೆ.

ಇಂತಹ ರಾಜಕೀಯದಲ್ಲಿ ಪಾಲು ಗೊಳ್ಳಲು (ಎಂಎಲ್‌ಎ, ಎಂಪಿಯಾಗಲು) ಕೆಲವು ಕೋಟಿ ರೂ. ಖರ್ಚು ಮಾಡಬೇಕಾಗಿದೆ. ಈ ಮೊತ್ತವನ್ನು ಯಾವ ರಾಜಕಾರಣಿಯೂ ತನ್ನ ಮನೆಮಠ ಮಾರಿ ತರುವುದಿಲ್ಲ. ಅವರು ಇತರರಿಂದ (ಉದ್ದಿಮೆಗಳಿಂದ, ರಿಯಲ್ ಎಸ್ಟೇಟ್ ವ್ಯಾಪಾರಿಗಳಿಂದ, ಸರಕಾರದ ಹುದ್ದೆಗಳ ಆಪೇಕ್ಷಿಗಳಿಂದ) ಸಾರ್ವಜನಿಕ ಸಂಪನ್ಮೂಲಗಳನ್ನು ವಿನಿಮಯ ಮಾಡಿ ಪಡೆಯುತ್ತಾರೆ. ದುಡ್ಡು ಕೊಟ್ಟು ಹುದ್ದೆ ಪಡೆದವರು ತಾವು ವಿನಿಯೋಜಿಸಿದ ಮೊತ್ತವನ್ನು ಹಿಂದಕ್ಕೆ ಪಡೆಯಲು ತಮ್ಮ ಸೇವೆಗೆ ನಿರ್ದಿಷ್ಟ ಬೆಲೆ (ಲಂಚ) ಕೇಳುತ್ತಾರೆ. ರಾಜಕೀಯದ ಮೇಲೆ ಕೋಟಿಗಟ್ಟಲೆ ವಿನಿಯೋಗಿಸಿದ ಉದ್ದಿಮೆ ಗಳು ನಮ್ಮ ಆರ್ಥಿಕ, ಶಿಕ್ಷಣ, ಆರೋಗ್ಯ ನೀತಿಗಳು ಅವರು ಹಾಕಿದ ಬಂಡವಾಳ ಹಿಂದಕ್ಕೆ ಪಡೆಯುವ ರೀತಿಯಲ್ಲಿ ರೂಪಿಸ ಬೇಕೆಂದು ತಾಕೀತು ಮಾಡು ತ್ತಾರೆ. ಹೀಗೆ ರಾಜಕೀಯಕ್ಕೂ ಭ್ರಷ್ಟಾಚಾರಕ್ಕೂ ನೇರ ಸಂಬಂಧ ಇದೆ.

ಆದುದರಿಂದ ಭ್ರಷ್ಟಾಚಾರ ಕಡಿಮೆಯಾಗ'ಬೇಕಾದರೆ ನಮ್ಮ ಚುನಾವಣಾ ರಾಜಕೀಯ ವನ್ನು ಆಮೂಲಾಗ್ರವಾಗಿ ಸುಧಾರಿಸ ಬೇಕು. ಸುಧಾರಿಸಬೇಕೆಂದ ಕೂಡಲೇ ದುಡ್ಡಿನ ಪ್ರಭಾವವನ್ನು ಕಡಿಮೆಗೊಳಿಸಿದ ಕೂಡಲೇ ಭ್ರಷ್ಟಾಚಾರ ನಿಲ್ಲುವುದಿಲ್ಲ. ಅಧಿಕಾರ ಗಳಿಸಲು ಕೇವಲ ದುಡ್ಡಿನ ಉಪಯೋಗ ಮಾತ್ರ ನಡೆಯುವುದಲ್ಲ, ಧರ್ಮ, ಜಾತಿ ಮತ್ತು ಇತರ ಗುರುತುಗಳು ಕೂಡ ಉಪಯೋಗವಾಗುತ್ತವೆ. ಭ್ರಷ್ಟಾಚಾರ ಕಡಿಮೆಯಾಗಬೇಕಾದರೆ ಇವುಗಳ ಬಳಕೆ ಕೂಡ ಕಡಿಮೆಯಾಗಬೇಕು.


'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ': ಉದ್ದಿಮೆಗಳ ಆಡಳಿತದ ಹಿನ್ನೆಲೆಯಿಂದ ಬಂದ ಪರಿಭಾಷೆ

ಸರಕಾರ ಮತ್ತು ಆಡಳಿತಗಳು ಒಂದೇ ನಾಣ್ಯದ ಎರಡು ಮುಖಗಳು. ಆದುದರಿಂದ ಇಲ್ಲಿ ಒಂದು ಕನಿಷ್ಠ ಮತ್ತು ಗರಿಷ್ಠ ಎನ್ನುವ ತೀರ್ಮಾನಕ್ಕೆ ಅವಕಾಶವಿಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ಸರಕಾರ ಮತ್ತು ಆಡಳಿತದ ರೂಪ ಬದಲಾಗಿದೆ. ಈ ಬದಲಾವಣೆಗಳನ್ನು ಮೂರು ವಿಧಗಳಲ್ಲಿ ನೋಡಬಹುದು.

ಒಂದು, ವಿಕೇಂದ್ರೀಕರಣಕ್ಕೆ ಮಹತ್ವ ಕೊಡುವ ಬದಲಾವಣೆ. ಅಂದರೆ ಹಿಂದಿನ ಕೇಂದ್ರ ಅಥವಾ ರಾಜ್ಯ ಸರಕಾರಗಳ ಜತೆಗೆ ಜಿಲ್ಲೆ, ತಾಲ್ಲೂಕು ಹಾಗು ಪಂಚಾಯತ್ ಮಟ್ಟಗಳಲ್ಲಿ ಸ್ಥಳೀಯ ಸರಕಾರಗಳನ್ನು ರೂಪಿಸುವುದು.

ಎರಡು, ಸಾಮಾಜಿಕ ಹಾಗು ಆರ್ಥಿಕ ಮೂಲಸೌಕರ್ಯಗಳನ್ನು ಸೃಷ್ಟಿಸಲು ಮತ್ತು ಪೂರೈಸಲು ಸರಕಾರೇತರ ಮೂಲಗಳನ್ನು ಅವಲಂಬಿಸುವುದು.

ಮೂರು, ಪಾಲಿಸಿ ರಚನೆ ಹಾಗು ಸೇವಾ ಪೂರೈಕೆಗಳನ್ನು ಬದಲೀ ವಿಧಾನದಲ್ಲಿ ಮಾಡುವುದು.



ಆದರೆ ಈಗಿನ ಕೇಂದ್ರ ಸರಕಾರದ ಕನಿಷ್ಠ ಸರಕಾರ ಮತ್ತು ಗರಿಷ್ಠ ಆಡಳಿತ ಈ ಬಗೆಯ ಬದಲಾವಣೆಗಳ ಬಗ್ಗೆ ಮಾತಾಡುತ್ತಿಲ್ಲ. ಅದರ ಬದಲು ಉದ್ದಿಮೆಗಳ ಆಡಳಿತದ ಹಿನ್ನೆಲೆಯಿಂದ ಬಂದ ಕನಷ್ಠ ಸರಕಾರ ಮತ್ತು ಗರಿಷ್ಠ ಆಡಳಿತ ಪರಿಭಾಷೆಯನ್ನು ಕೇಂದ್ರ ಸರಕಾರ ಬಳಸುತ್ತಿದೆ.

ಇಂದಿನ ಕನಿಷ್ಠ ಸರಕಾರ ಗರಿಷ್ಠ ಆಡಳಿತದ ಘೋಷಣೆ ಎರಡು ಮತ್ತು ಮೂರನೇ ವಿಧದ ಆಡಳಿತವನ್ನು ಮುಂಚೂಣಿಗೆ ತರುವ ಉದ್ದೇಶ ಹೊಂದಿದೆ. ಅಂದರೆ ಸಾಮಾಜಿಕ ಹಾಗು ಆರ್ಥಿಕ ಮೂಲಸೌಕರ್ಯಗಳನ್ನು ಸೃಷ್ಟಿಸಲು ಉದ್ದಿಮೆಗಳನ್ನು ಮತ್ತು ಪಾಲಿಸಿ ರಚನೆ ಹಾಗು ಸೇವಾ ಪೂರೈಕೆಗಳಿಗೆ ಸಿವಿಲ್ ಸೊಸೈಟಿಗಳನ್ನು ಅವಲಂಬಿಸುವುದು. ಖಾಸಗಿ ಸಾರ್ವಜನಿಕ ಪಾಲುದಾರಿಕೆ ಮೂಲಕ ಮೂಲ ಸೌಕರ್ಯಗಳನ್ನು ಸೃಷ್ಟಿಸುವುದು, ಸರಕಾರೇತರ ಸಂಸ್ಥೆಗಳ ಮೂಲಕ ಅಭಿವೃದ್ಧಿ ಸವಲತ್ತುಗಳನ್ನು ಪೂರೈಸುವುದು, ಟಾಸ್ಕ್ ಫೋರ್ಸ್ ಸಮಿತಿಗಳ ಮೂಲಕ ನಗರಾಡಳಿತಗಳನ್ನು ನಡೆಸುವುದು ಇತ್ಯಾದಿಗಳು ಗರಿಷ್ಠ ಆಡಳಿತದ ಉದಾಹರಣೆಗಳು. ಇವು ಯಾವುವು ಕೂಡ ಸಮಾಜದ ತಳಸ್ತರದ ಜನರನ್ನು ಬಲಪಡಿಸುವುದಿಲ್ಲ. ತಳಸ್ತರದ ಜನರನ್ನು ಬಲಪಡಿಸುವ ಗರಿಷ್ಠ ಆಡಳಿತದ ನಮೂನೆ ಆಡಳಿತದ ವಿಕೇಂದ್ರೀಕರಣ. ಆಡಳಿತ ವಿಕೇಂದ್ರೀಕರಣ ಈ ಕುರಿತು ಈಗಿನ ಸರಕಾರ ವಿಶೇಷ ಮುತುವರ್ಜಿ ವಹಿಸಿಲ್ಲ. ಆದುದರಿಂದ ಇಂತಹ ಸಂದರ್ಭದಲ್ಲಿ ಕನಿಷ್ಠ ಸರಕಾರ ಮತ್ತು ಗರಿಷ್ಠ ಆಡಳಿತ ಎನ್ನುವ ಘೋಷಣೆ ಒಂದೇ ಅರ್ಥವನ್ನು ನೀಡಲು ಸಾಧ್ಯ. ಅದೇನೆಂದರೆ ಪ್ರಜಾಪ್ರಭುತ್ವದ ನಾಟಕ ಮುಗಿದಿದೆ. ಈ ನಾಟಕದ ಮೇಲೆ ನಾವು (ಉದ್ದಿಮೆಗಳು) ಸುರಿದ ಕೋಟಿಗಟ್ಟಲೆ ಹಣವನ್ನು ಹಿಂದಕ್ಕೆ ಪಡೆಯಲು ಅಡ್ಡಿಪಡಿಸಬೇಡಿ ಎನ್ನುವ ಅರ್ಥವನ್ನು ಮಾತ್ರ ಈ ಘೋಷಣೆ ನೀಡಲು ಸಾಧ್ಯ.

ಒಂದು ವರ್ಗದ ಜನರಿಗೇ ಸೀಮಿತವಾದ ಅಭಿವೃದ್ಧಿ ಒಂದು 'ಮಾದರಿ' ಹೇಗಾದೀತು?



–ಎಂ. ರತ್ನಾಕರ ಶೆಣೈ

'ಅಭಿವೃದ್ಧಿ' ಎಂದರೆ ಇಡೀ ದೇಶದ ಅಭಿವೃದ್ಧಿ. ದೇಶವೆಂದರೆ ಜನ. ಜನರ ಬದುಕಿನ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ನಿರಂತರವಾಗಿ ಉತ್ತಮ ಪಡಿಸಲು ಅವಕಾಶವಿರದ ಯಾವುದೇ ತೆರನ ಅಭಿವೃದ್ಧಿ ದೇಶದ 'ಅಭಿವೃದಿ' ಆಗಲಾರದು. ಅದು ಕೇವಲ 'ಉಳ್ಳವರ' ಅಭಿವೃದ್ಧಿ ಮಾತ್ರವೇ ಆಗಲು ಸಾಧ್ಯ.

ಜನ ಗಾಳಿಯಲ್ಲಿ ಬದುಕಲಾರರು. ಅವರ ಜೀವನ ನಿರ್ವಹಣೆಗೆ ತಕ್ಕ ಆದಾಯ ಅಗತ್ಯ. ಆರೋಗ್ಯವಂತ ಸ್ಥಿತಿಗೆ ಪೂರಕವಾದ ಸತ್ವಯುತ ಆಹಾರ, ಶಿಕ್ಷಣದ ಅವಕಾಶ, ಸಾಮಾಜಿಕ ಸಮಾನತೆ, ಮತ್ತಿತರ ಸೌಲಭ್ಯಗಳು ಕೂಡಾ. ಇವೆಲ್ಲವುಗಳನ್ನೂ ಒದಗಿಸುವ ಸಕಾರಾತ್ಮಕ ಸುಧಾರಣೆಗಳೇ ಅಭಿವೃದ್ಧಿಯ ಅಳತೆಗೋಲುಗಳು.

ಜನ ಹೇಗೆ ಬದುಕುತ್ತಿದ್ದಾರೆ, ಅವರಿಗೆ ಲಭ್ಯವಾಗಿರುವ ಅವಕಾಶಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ ಇದೆಯೆ, ಇಲ್ಲವಾದಲ್ಲಿ ಅಂತಹ ಸಾಮರ್ಥ್ಯವನ್ನು ಅವರಿಗೆ ದೊರಕಿಸಿ ಕೊಡುವ ಪ್ರಯತ್ನಗಳು ನಡೆಯುತ್ತಿವೆಯೆ ಎಂಬ ಅಂಶಗಳ ಮೂಲಕ 'ಅಭಿವೃದ್ಧಿ'ಯನ್ನು ಅಳೆಯಬಹುದು.

'ಗುಜರಾತ್ ಮಾದರಿ ಅಭಿವೃದ್ಧಿ' ಎನ್ನುವ ಮಾತಿನಲ್ಲಿ ತಥ್ಯಕ್ಕಿಂತಲೂ ಘೋಷಣಾತ್ಮಕ ಪ್ರಚಾರದ ಅಂಶಗಳೇ ಜಾಸ್ತಿ ಇವೆ ಎಂದು ನನ್ನ ಅಭಿಪ್ರಾಯ. ದೇಶದ ಅತೀ ಶ್ರೀಮಂತ ಮನೆತನಗಳಿಗೆ ಹೇರಳವಾದ ಸೌಲಭ್ಯಗಳನ್ನು ಹೆಚ್ಚುಕಡಿಮೆ ಪುಕ್ಕಟೆಯಾಗಿ ಅಥವಾ ಸರ್ಕಾರದ ಬೊಕ್ಕಸದಿಂದ ಕೊಡಮಾಡಿ, ಅಪಾರ ಸಂಪತ್ತನ್ನು ಕ್ರೋಢೀಕರಿಸಿಕೊಳ್ಳಲು ಅವರಿಗೆ ಅವಕಾಶ ನೀಡಿರುವುದನ್ನು ಬಿಟ್ಟರೆ, ಜನ ಸಾಮಾನ್ಯರಿಗೆ ನೆರವಾಗುವ ಯಾವುದೇ ತೆರನ ಕಾರ್ಯಕ್ರಮಗಳಾಗಲೀ, ಯೋಜನೆಗಳಾಗಲಿ ಇಲ್ಲದಿರುವ ಸ್ಥಿತಿಯಲ್ಲಿ, ಕೇವಲ ಒಂದು ವರ್ಗದ ಜನ ಮಾತ್ರವೇ ಸಾಧಿಸಿರುವ ವಿಪುಲ ಆರ್ಥಿಕ ಅಭಿವೃದ್ಧಿಯನ್ನು 'ಮಾದರಿ' ಎಂದು ಗುರುತಿಸುವುದು ಎಷ್ಟರ ಮಟ್ಟಿಗೆ ಸರಿ? (ಉದಾಹರಣೆಗೆ ಹಿಂದಿನ ಯುಪಿಎ ಸರ್ಕಾರದ ತೈಲ ನೀತಿಗಳು ಖಾಸಗೀ ವಲಯದ ದಿಗ್ಗಜಗಳಾದ ರಿಲೈಯನ್ಸ್ (ಅಂಬಾನಿ ಸಮೂಹ) ಮತ್ತು ಎಸ್ಸಾರ್ (Essar)ಸಂಸ್ಥೆಗಳಿಗೆ ಕೇವಲ ಒಂದು ವರ್ಷದಲ್ಲಿ 667 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಲಾಭವನ್ನು ಅಕ್ರಮವಾಗಿ ತಂದು ಕೊಟ್ಟಿರುವ ಬಗ್ಗೆ ಮಹಾಲೇಖ ಪಾಲರ (CAG) ವರದಿಗಳು ಮಾಧ್ಯಮದಲ್ಲಿ ಪ್ರಕಟವಾದ ಹಿನ್ನೆಲೆಯಲ್ಲೇ, ಗುಜರಾತಿನಲ್ಲಿ ವಿದ್ಯುತ್ ಉತ್ಪಾದಿಸುವ ಎಸ್ಸಾರ್ ಪವರ್ ಗುಜರಾತ್ ಲಿಮಿಟೆಡ್ ಎಂಬ ಖಾಸಗೀ ಸಂಸ್ಥೆಗೆ ಅಕ್ರಮವಾಗಿ ರೂ. 587 ಕೋಟಿಗಳನ್ನು ಕೊಳ್ಳೆಹೊಡೆಯಲು ಅವಕಾಶ ನೀಡಿರುವ ಬಗ್ಗೆ ಸಿಎಜಿ ವರದಿ 26.7.2014 ರಂದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಅಲ್ಲದೆ ಗುಜರಾತಿನಲ್ಲಿ ನಡೆದಿದೆ ಎಂದು ಅಬ್ಬರದ ಪ್ರಚಾರ ಪಡೆದಿರುವ ಈ ಅಭಿವೃದ್ಧಿಯ ಮೂಲಕ ಜನಸಾಮಾನ್ಯರ ಬದುಕು

> ಜನರಿಂದ ಆಯ್ಕೆಯಾಗಿರುವ, ಜನರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಬೇಕಾದ, ಅದೇ ಜನರಿಗಾಗಿ ದುಡಿಯಬೇಕಾದ ಜವಾಬ್ದಾರಿ ಹೊಂದಿರುವ ಒಂದು ಸರ್ಕಾರ, ಮಧ್ಯಪ್ರವೇಶ ಮಾಡುವ ತನ್ನ ಪಾತ್ರವನ್ನು ಕನಿಷ್ಟಗೊಳಿಸುವುದರ ಮೂಲಕ ತನ್ನ ಹೊಣೆಗಾರಿಕೆಯಿಂದ ನುಣುಚಿ ಕೊಳ್ಳಬಹುದೇ ಹೊರತು ಆಡಳಿತೆಯನ್ನು ಗರಿಷ್ಟಗೊಳಿಸುವುದು ಸಾಧ್ಯವಿಲ್ಲದ ಮಾತು.

ಉತ್ತಮಗೊಂಡಿರುವುದೇ ಆಗಿದ್ದಲ್ಲಿ, ಬದುಕಿಗಾಗಿ ವಲಸೆ ಹೋಗುತ್ತಿರುವ ಲಕ್ಷಾಂತರ ಜನ ಸಮೂಹಗಳಲ್ಲಿ ಗುಜರಾತಿನ ಬಡಜನರೂ ಇರುವುದು ವಿಪರ್ಯಾಸವಲ್ಲವೇನು?

ಒಂದು ರಾಜ್ಯದ ಭೌಗೋಳಿಕ ಪರಿಧಿಯ ಪರಿಮಿತಿಯಲ್ಲಿ ಸಾಧಿಸಲಾಗಿದೆ ಎಂದು ಪ್ರಚುರಗೊಂಡಿರುವ ಅಭಿವೃದ್ಧಿಯ ಈ 'ಮಾದರಿ', ಆ ರಾಜ್ಯದ ಜನ ವಿಭಾಗಗಳು ಬದುಕುವ ದಾರಿಗಳನ್ನು ಅರಸಿ ವಲಸೆ ಹೋಗುವುದನ್ನು ತಡೆಯಲು ಅಶಕ್ತವಾಗಿರುವ ವಾಸ್ತವಿಕ ಹಿನ್ನೆಲೆಯಲ್ಲಿ, ಅಂತಹ ಮಾದರಿಯನ್ನು ಒಂದು ವೇಳೆ ಇಡೀ ದೇಶಕ್ಕೇ ಅನ್ವಯಿಸುವುದಾದರೆ 'ಜನವಲಸೆ' ಎಲ್ಲಿಂದ ಎಲ್ಲಿಗೆ ಎಂಬ ಪ್ರಶ್ನೆ ಧುತ್ತೆಂದು ಏಳುತ್ತದೆ. ಅಷ್ಟಕ್ಕೂ ಜನ ವಲಸೆ ಹೋಗುವುದು ಬದುಕಿನ ಅವಕಾಶಗಳಿಗಾಗಿ. ಅಂತಹ ಅವಕಾಶಗಳಿಂದ ಜನರನ್ನು ವಂಚಿತರನ್ನಾಗಿ ಮಾಡಿರುವ 'ಅಭಿವೃದ್ಧಿ' 'ಮಾದರಿ' ಬಿಡಿ, ಕನಿಷ್ಟ 'ಅಭಿವೃದ್ಧಿ' ಎಂದೆನಿಸಿಕೊಳ್ಳುವುದಾದರೂ ಹೇಗೆ?

ಅಭಿವೃದ್ಧಿಗೂ, ರಾಜಕೀಯ ಸಿದ್ಧಾಂತಕ್ಕೂ ಸಂಬಂಧವಿಲ್ಲ ಎನ್ನುವುದು ಹುರುಳಿಲ್ಲದ ಮಾತು.

ಆರ್ಥಿಕ ಸುಧಾರಣೆ ಎನ್ನುವುದು ಅಭಿವೃದ್ಧಿಯ ಅಳತೆಗೋಲುಗಳಲ್ಲಿ ಒಂದು. ಆರ್ಥಿಕ ಪ್ರಶ್ನೆಗಳಿಲ್ಲದ ರಾಜಕೀಯವೇ ಇಲ್ಲ, ಎಂದ ಮೇಲೆ ಸಿದ್ಧಾಂತವೂ ಇಲ್ಲ.

'ರಾಜಕೀಯ'ದ ಪರಮೋದ್ದೇಶವೇ ಅಧಿಕಾರ ಗ್ರಹಣವಾಗಿರುವ ಈ ಕಾಲಘಟ್ಟದಲ್ಲಿ, ಅಭಿವೃದ್ಧಿ ಎನ್ನುವುದು ರಾಜಕೀಯ ಕಾರ್ಯಸೂಚಿಯ ಒಂದು ಭಾಗವಾಗಿರುವುದು ಅನಿವಾರ್ಯ. ಯಾರ ಹಿತಾಸಕ್ತಿಗಳನ್ನು ಪ್ರತಿನಿಧಿಸಿ ರಾಜಕೀಯ ನಡೆಯುತ್ತಿದೆ ಮತ್ತು ಅಂತಹ ರಾಜಕೀಯದ ಮೂಲಕ ಪಡೆದ ಅಧಿಕಾರವನ್ನು ಯಾರ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಚರ್ಚೆಗೆ ಪ್ರಾಧಾನ್ಯತೆ ನೀಡಬೇಕಾದ ಅಗತ್ಯತೆ ಎದ್ದು ಬಂದಿರುವಾಗ, ರಾಜಕೀಯ ಸಿದ್ಧಾಂತವನ್ನು ಅಭಿವೃದ್ಧಿಯ ಪ್ರಶ್ನೆಗಳಿಂದ ಪ್ರತ್ಯೇಕಿಸ ಬಯಸುವ ವಾದಗಳು ಕೇವಲ ದಿಕ್ಕು ತಪ್ಪಿಸುವ ತಂತ್ರಗಳು ಮಾತ್ರ.

ಅಭಿವೃದ್ಧಿಯನ್ನು ಜನಪರ ಮತ್ತು ಜನವಿರೋಧಿ ಎಂದು ವಿಂಗಡಿಸುವುದು ಹೇಗೆ ಸಾಧ್ಯ? 'ಜನಪರ'ವಾಗಿರುವುದು ಮಾತ್ರವೇ 'ಅಭಿವೃದ್ಧಿ'. ಜನ ವಿರೋಧಿಯಾಗಿದ್ದರೆ ಅದು 'ಅಭಿವೃದ್ಧಿ' ಎನಿಸಿಕೊಳ್ಳಲಾರದು. 'ಸಾಮಾಜಿಕ ವಿಕೃತಿ' ಆಗಬಹುದೇನೊ.

ಭ್ರಷ್ಟಾಚಾರ ಎಂದರೆ ಅನರ್ಹರು ಅಕ್ರಮವಾಗಿ 'ಆರ್ಥಿಕ ಪ್ರಗತಿ' ಸಾಧಿಸುವುದರ ಮೂಲಕ 'ಅಭಿವೃದ್ಧಿ' ಹೊಂದುವ ಪ್ರಕ್ರಿಯೆ.

ಸಹಜವಾಗಿಯೇ ಅಂಕೆಯಿಲ್ಲದ ಭ್ರಷ್ಟಾಚಾರ ಅಭಿವೃದ್ಧಿಯ ಲಾಭಗಳನ್ನು ಕಬಳಿಸುತ್ತದೆ. ಇಂತಹ ಕಬಳಿಸುವಿಕೆ ನ್ಯಾಯಯುತ ಬದುಕು ಸಾಗಿಸಬಯಸುವ 'ಅರ್ಹರ' ಅವಕಾಶಗಳನ್ನು ಮೊಟಕುಗೊಳಿಸುತ್ತದೆ. ಅವಕಾಶಗಳಿಂದ ವಂಚಿತರಾಗುವ 'ಅರ್ಹರು' ಅಭಿವೃದ್ಧಿಯ ಪರಿಧಿಯಿಂದ ದೂರವೇ ಉಳಿಯುತ್ತಾರೆ. ಇಂತಹ ವಂಚಿತ 'ಅರ್ಹರೇ' ಹೆಚ್ಚು ಪ್ರಮಾಣದಲ್ಲಿರುವ ಸಮಾಜ 'ಪ್ರಗತಿ' ಕಾಣುವುದಕ್ಕಿಂತ 'ವಿಗತಿ'ಯೆಡೆಗೆ ಸಾಗಬೇಕಾದ ಅಪಾಯಕ್ಕೆ ಸಿಲುಕುತ್ತದೆ.

"ಕನಿಷ್ಟ ಸರ್ಕಾರ, ಗರಿಷ್ಟ ಆಡಳಿತ" ಎಂಬುದು ಗೊಂದಲಗೊಳಿಸುವ ಮಾತು.

ಸರ್ಕಾರದ ಮಧ್ಯಪ್ರವೇಶವನ್ನು ಕನಿಷ್ಟಗೊಳಿಸುವುದು ಹೇಗೆ ಸಾಧ್ಯ? ಜನರಿಂದ ಆಯ್ಕೆಯಾಗಿರುವ ಒಂದು ಸರ್ಕಾರ, ಜನರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಬೇಕಾದ ಒಂದು ಸರ್ಕಾರ, ಅದೇ ಜನರಿಗಾಗಿ ದುಡಿಯಬೇಕಾದ ಜವಾಬ್ದಾರಿ ಹೊಂದಿರುವ ಒಂದು ಸರ್ಕಾರ, ಮಧ್ಯಪ್ರವೇಶ ಮಾಡುವ ತನ್ನ ಪಾತ್ರವನ್ನು ಮೊಟಕುಗೊಳಿಸುವುದರ ಮೂಲಕ ತನ್ನ ಹೊಣೆಗಾರಿಕೆಯಿಂದ ನುಣುಚಿ ಕೊಳ್ಳಬಹುದೇ ಹೊರತು ಆಡಳಿತೆಯನ್ನು ಗರಿಷ್ಟಗೊಳಿಸುವುದು ಸಾಧ್ಯವಿಲ್ಲದ ಮಾತು.

ಕನಿಷ್ಟ ಸರ್ಕಾರ, ಗರಿಷ್ಟ ಆಡಳಿತ ಎಂಬ ಘೋಷಣೆ ಮೇಲ್ನೋಟಕ್ಕೆ 'ಗಾತ್ರ ಚಿಕ್ಕದು, ಪಾತ್ರ ದೊಡ್ಡದು' ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಸರ್ಕಾರದ ಹೊಣೆಗಾರಿಕೆ ಇಡೀ ಸಮಾಜದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮಜಲುಗಳನ್ನು ಒಳಗೊಳ್ಳಬೇಕು. ಇಲ್ಲವಾದಲ್ಲಿ ಅದು ಕೇವಲ 'ಉಳ್ಳವರ' ಬದುಕಿಗೆ ಮಾತ್ರವೇ ಹೊಣೆಯಾಗುವ ಮಟ್ಟಕ್ಕೆ ಕುಸಿಯುತ್ತದೆ.


ವಾಸ್ತವದಲ್ಲಿ, ಜನರ ಬದುಕಿನ ಗಂಭೀರ ಪ್ರಶ್ನೆಗಳನ್ನು ಎತ್ತಿಕೊಂಡು ದುಡಿಯುವ ಹೊಣೆಗಾರಿಕೆಯಿಂದ ದೂರ ಸರಿದು (ಈ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿರುವುದನ್ನು ಜಾಗತೀಕರಣದ ನಂತರದ ಬೆಳವಣಿಗೆಗಳು ದೃಢಪಡಿಸಿವೆ) ಸರ್ಕಾರ ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಉಳ್ಳವರ ಪರವಾಗಿಯೇ ಮೀಸಲಿಡಲು ಬಯಸುವುದನ್ನು ಇದು ಸೂಚಿಸುತ್ತದೆ. ಇದನ್ನು ಒಪ್ಪಲು ಸಾಧ್ಯವಿಲ್ಲ.



'ಅಭಿವೃದ್ಧಿ'ಯ ಘೋಷಣೆಯ ಹಿಂದೆ 'ಜೈಶ್ರೀರಾಮ್'

ಕೃಪೆ: ಸುರೇಂದ್ರನ್, ದಿ ಹಿಂದು

ಭ್ರಷ್ಟಾಚಾರ




ಹೋಗಲಾಡಿಸುವುದು ಹೇಗೆ?

'ಭ್ರಷ್ಟಾಚಾರ' ಇತ್ತೀಚಿನ ವರ್ಷಗಳಲ್ಲಿ ದೊಡ್ಡ ರೀತಿಯಲ್ಲಿ ಸಾರ್ವಜನಿಕ ಸಂವಾದದ ವಿಷಯವಾಗಿದೆ. ಇತ್ತೀಚಿನ ವರ್ಷಗಳ ಭಾರೀ ಹಗರಣಗಳು, ಅಣ್ಣಾ ಹಜಾರೆ ಚಳುವಳಿ ಅದನ್ನು ದೊಡ್ಡ ರೀತಿಯಲ್ಲಿ ಮುನ್ನೆಲೆಗೆ ತಂದವು. ಆಮ್ ಅದ್ಮಿ ಅದನ್ನು ತನ್ನ ಚುನಾವಣೆಯ ಪ್ರಮುಖ ವಿಷಯವನ್ನಾಗಿಸಿತು. ಕಾಂಗ್ರೆಸ್ ನೇತೃತ್ವದ ಯುಪಿಎ ಇತ್ತೀಚಿನ ಚುನಾವಣೆಗಳಲ್ಲಿ ಶೋಚನೀಯ ಸೋಲು ಕಾಣಲು ಇದು ಒಂದು ಪ್ರಮುಖ ಕಾರಣವಾಯಿತು ಎನ್ನಲಾಗಿದೆ. ಆದರೆ 'ಭ್ರಷ್ಟಾಚಾರ'ವನ್ನು ಹೋಗಲಾಡಿಸುವುದು ಹೇಗೆ ? ಎಂಬುದರ ಬಗ್ಗೆ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಕೆಲವು ಪ್ರಶ್ನೆಗಳು ಏಳುತ್ತವೆ–

1. ಭ್ರಷ್ಟಾಚಾರದ ಮೂಲ ಯಾವುದು ? ಸಾಮಾಜಿಕ–ಆರ್ಥಿಕ ವ್ಯವಸ್ಥೆಗೆ ತಕ್ಕಂತೆ ಅದರ ಮೂಲ ಬದಲಾಗುತ್ತದೆಯೇ ?
2. ಭ್ರಷ್ಟಾಚಾರ ಒಂದು ಸ್ವತಂತ್ರ ಸಮಸ್ಯೆಯೆ ? ಅಥವಾ ಬೇರೆ ಸಮಸ್ಯೆಗಳ ಪರಿಣಾಮವೇ ? ಅಥವಾ ಅದೇ ಒಂದು ರೋಗವೇ ಅಥವಾ ಒಂದು ರೋಗ ಲಕ್ಷಣವೇ ? ಅಥವಾ ಭ್ರಷ್ಟಾಚಾರ ಹೋಗಲಾಡಿಸಿದರೆ ಎಲ್ಲಾ ಸಮಸ್ಯೆಗಳು ತನ್ನಿಂದ ತಾನೇ ಪರಿಹಾರವಾಗುತ್ತದೆಯೆ ?
3. ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ಚಳುವಳಿ ಬಗ್ಗೆ ಮತ್ತು ಭ್ರಷ್ಟಾಚಾರ ಹೋಗಲಾಡಿಸಲು ಅವರ 17–ಅಂಶದ ಕಾರ್ಯಕ್ರಮ ಇದನ್ನು ಹೋಗಲಾಡಿಸಬಲ್ಲುದೇ?
4. ಲೋಕಪಾಲ್ ಕಾಯಿದೆ ಅಥವಾ ಜನ ಲೋಕಪಾಲ್ ಕಾಯಿದೆಯ ಪ್ರಾಮಾಣಿಕ ಜಾರಿ ಭ್ರಷ್ಟಾಚಾರ ಹೋಗಲಾಡಿಸಬಲ್ಲುದೆ ? ಅಲ್ಲದಿದ್ದರೆ ಇನ್ನೇನು ಕ್ರಮಗಳು ಬೇಕಾಗುತ್ತವೆ ?
5. ಭ್ರಷ್ಟಾಚಾರ ಹೋಗಲಾಡಿಸುವುದರಲ್ಲಿ ರಾಜಕೀಯ ಪಕ್ಷಗಳ, ಸಾಮಾಜಿಕ ಚಳುವಳಿಗಳ, ಜನತೆಯ ಪಾತ್ರ ಏನು ?

ಈ ಪ್ರಶ್ನೆಗಳ ಸುತ್ತ ಎರಡು ಲೇಖನಗಳು ಮತ್ತು ಕೆಲವು ಕವನಗಳು ಮುಂದಿನ ಪುಟಗಳಲ್ಲಿ....



ಕೃಪೆ: ಕೇಶವ್ 'ದಿ ಹಿಂದು'




ಭ್ರಷ್ಟಾಚಾರದ ನೆಲೆ ಹುಡುಕುವಾಗ

ಅಮಾನುಲ್ಲ ಖಾನ್,
ಅಧ್ಯಕ್ಷರು, ಅಖಿಲ ಭಾರತ ವಿಮಾನೌಕರರ ಸಂಘ

ಭ್ರಷ್ಟಾಚಾರಕ್ಕೆ ರಾಜಕಾರಣಿ–ಕಾರ್ಪೋರೇಟ್ ಸಂಸ್ಥೆಗಳು ಮತ್ತು ಅಧಿಕಾರಿಗಳ ನಡುವಿನ ಅಪವಿತ್ರ ಮೈತ್ರಿಯೇ ಕಾರಣ. ಶುದ್ಧ ರಾಜಕೀಯದಲ್ಲಿ ವಿಶ್ವಾಸವಿರುವ ಕಾರ್ಮಿಕ ಸಂಘಟನೆಗಳು. ಸಾಮೂಹಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಒಂದಾಗಿ ಒಂದು ಸಮರ್ಥ ಮತ್ತು ಸಶಕ್ತ ಚಳುವಳಿ ಕಟ್ಟುವ ಮೂಲಕ ಭಾರತ ದೇಶವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಬೇಕಿದೆ.

ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರದ ವಿಚಾರವು ಸಾರ್ವಜನಿಕರ ಮನವನ್ನು ಬಹಳಷ್ಟು ಆವರಿಸಿದೆ. 2ಜಿ ತರಂಗಾಂತರ ಕಲ್ಲಿದ್ದಲು, ಕಾಮನ್ವೆಲ್ ಕ್ರೀಡಾಕೂಟ ಇವುಗಳಲ್ಲಿ ನಡೆದ ಅಸಾಧಾರಣ ಹಗರಣಗಳು ಬಯಲಿಗೆ ಬಂದದ್ದೇ ಇದಕ್ಕೆ ಕಾರಣ. ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗಿಯವರ ಲಾಭಕ್ಕಾಗಿ ಬಳಸಿಕೊಳ್ಳುವ ಪ್ರಕಿಯೆಯಲ್ಲೇ ಇಂತಹ ಬಹುದೊಡ್ಡ ಹಗರಣಗಳು ನಡೆದಿರುವುದು. ಈ ರಾಷ್ಟ್ರದ ಜನತೆ ಸಹಜವಾಗಿಯೇ ಈ ಬಗ್ಗೆ ಆಕ್ರೋಶ ಗೊಂಡಿತ್ತು. ಈ ಆಕ್ರೋಶದ ಆಧಾರದಲ್ಲಿ ನಡೆದ ಅಣ್ಣಾ ಹಜಾರೆಯವರ ಚಳುವಳಿಯು ಭ್ರಷ್ಟಾಚಾರ ತಡೆಯಲು ಲೋಕಪಾಲ ಮಸೂದೆಯನ್ನು ಸ್ವೀಕರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಿತ್ತು.

ಜಗತ್ತಿನ ಅತ್ಯಂತ ಭ್ರಷ್ಟ ರಾಷ್ಟ್ರಗಳಲ್ಲಿ ಭಾರತವೂ ಒಂದೆನಿಸಿಕೊಂಡಿರುವುದು ನಾಚಿಕೆಗೇಡು. ದೇಶದ ಭ್ರಷ್ಟಾಚಾರಕ್ಕೆ ಈ ಮೊದಲಿದ್ದ ಲೈಸೆನ್ಸ್ ರಾಜ್ಯಭಾರ ಕಾರಣ, ಉದಾರೀಕರಣವಾದ ಕೂಡಲೇ ಭ್ರಷ್ಟಾಚಾರದ ಮಟ್ಟ ಕಡಿಮೆಯಾಗುತ್ತದೆ ಎಂಬ ಭಾವನೆಯಿತ್ತು. ಆದರೆ ಉದಾರೀಕರಣದ ನಂತರದ ದಿನಗಳ ಅನುಭವವು ಭ್ರಷ್ಟಾಚಾರವು ಉದಾರೀಕರಣದ ಗರ್ಭದಲ್ಲೇ ಅಡಕವಾಗಿದೆಯೆಂಬುದನ್ನು ದೃಢಪಡಿಸುತ್ತದೆ. ಸಾರ್ವಜನಿಕ ಆಸ್ತಿಯನ್ನು ಖಾಸಗಿಯವರಿಗೆ ವರ್ಗಾವಣೆ ಮಾಡುವ ಪ್ರಕ್ರಿಯೆಯೇ ಹಿಂದೆಂದಿಗಿಂತ ಹೆಚ್ಚಿನ ಭ್ರಷ್ಟಾಚಾರಕ್ಕೆ ಕಾರಣವಾಗಿದೆಯೆಂಬುದನ್ನು ನಾವು ಕಂಡಿದ್ದೇವೆ. ಇಂತಹ ಭ್ರಷ್ಟಾಚಾರಕ್ಕೆ ರಾಜಕಾರಣಿ–ಕಾರ್ಪೋರೇಟ್ ಸಂಸ್ಥೆಗಳು ಮತ್ತು ಅಧಿಕಾರಿಗಳ ನಡುವಿನ ಅಪವಿತ್ರ ಮೈತ್ರಿಯೇ ಕಾರಣ.



ಕೃಪೆ: ಕೇಶವ್ 'ದಿ ಹಿಂದು'

ಅಣ್ಣಾ ಹಜಾರೆಯವರ ಚಳುವಳಿಯು ಇಂತಹ ಭ್ರಷ್ಟಾಚಾರದ ಬಗ್ಗೆ ಉದಾಸೀನವಾಗಿತ್ತು. ಬದಲಿಗೆ ದೇಶದ ಸಾಮಾನ್ಯ ಜನತೆ ತಮ್ಮ ಕೆಲಸವಾಗಬೇಕೆಂದರೆ ಕಛೇರಿಗಳಲ್ಲಿ ಲಂಚ ಕೊಡಲೇ ಬೇಡುವ ಪರಿಸ್ಥಿತಿಯ ಬಗ್ಗೆಯೇ ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ಸಹಜವಾಗಿಯೇ ಈ ಚಳುವಳಿಯು ಬಹುತೇಕ ಮಧ್ಯಮ ವರ್ಗದವರನ್ನು ಸೆಳೆದು ಭ್ರಷ್ಟಾಚಾರದ ವಿರುದ್ಧ ಅವರು ಬೀದಿಗಿಳಿಯುವಂತೆ ಮಾಡಿತ್ತು. ಈ ಇಡೀ ಚಳುವಳಿ ಕೇವಲ ಮಧ್ಯಮ ವರ್ಗದವರ ಮಧ್ಯಮ ವಿಚಾರವಾಗಿ ಉಳಿದಿತ್ತು.

ಚಳುವಳಿಯ ಉದ್ದೇಶದೊಂದಿಗೆ ಸಹಮತವಿದ್ದರೂ ಬಹು ಸಂಖ್ಯೆಯ ಜನತೆ ಇದರಿಂದ ಹೊರತಾಗಿಯೇ ಉಳಿದಿತ್ತು. ದುರದೃಷ್ಟವಶಾತ್ ವ್ಯವಸ್ಥೆಯಿರುವುದೇ ಹೀಗೆ, ಅದನ್ನು ಬದಲಿಸಲು ಸಾಧ್ಯವಿಲ್ಲವೆಂಬ ಭಾವನೆಯಿದೆ. ಜನತೆ ಪೊಲೀಸು ಠಾಣೆಯಲ್ಲೊ, ಸರ್ಕಾರದ ಕಛೇರಿಯಲ್ಲೊ ಕೊಟ್ಟ ಲಂಚವು ರಾಜಕಾರಣಿಗಳ ಜೇಬನ್ನೇ ಸೇರುತ್ತದೆ ಎಂಬ ತಿಳುವಳಿಕೆಯೇ ಇದಕ್ಕೆ ಕಾರಣವಾಗಿದೆ.

ಭಾರತದಲ್ಲಿ ರಾಜಕೀಯವು ಕೊಳಕು ನಾರುತ್ತಿದೆ. ರಾಜಕೀಯವೆಂಬುದು ಇಂದು ಸಮಾಜವನ್ನು ಹೇಗೆ ನಿರ್ಮಿಸಬೇಕು ದೃಷ್ಟಿಯಾಗಿ ಉಳಿದಿಲ್ಲ ಬದಲಿಗೆ ತಮ್ಮ ವ್ಯಯುಕ್ತಿಕ ಹಿತಾಸಕ್ತಿಗಳನ್ನೇ ಕಾಯ್ದುಕೊಳ್ಳುವವರಿಗೊಂದು ಆಶ್ರಯತಾಣವಾಗಿದೆ. ಭ್ರಷ್ಟಚಾರವನ್ನು ನಿಜಕ್ಕೂ ನಿಯಂತ್ರಿಸಬೇಕೆಂದಿದ್ದರೆ ಚುನಾವಣೆಗಳಲ್ಲಿ ಹಣಕಾಸು ವಹಿಸುತ್ತಿರುವ ಪಾತ್ರವನ್ನು ನಿಗ್ರಹಿಸಬೇಕು. ದುರದೃಷ್ಟವೆಂದರೆ ಎಡಪಕ್ಷಗಳನ್ನುಳಿದು ಇನ್ಯಾವುದೇ ಪಕ್ಷಕ್ಕೆ ಚುನಾವಣಾ ಸುಧಾರಣೆಗಳನ್ನು ತರಲು ಮನಸಿಲ್ಲ. ಹಾಗಾಗಿ ರಾಜಕೀಯವನ್ನು ಶುದ್ಧಗೊಳಿಸಿ ಜನತೆಗೆ ಒಳಿತನ್ನುಂಟು ಮಾಡುವಲ್ಲಿ ಆಸಕ್ತವಾಗಿರುವ ರಾಜಕೀಯ ಪಕ್ಷಗಳು ಚುನಾವಣಾ ಸುಧಾರಣೆಗಳ ಪರವಾಗಿ ಜನತೆಯ ಅಭಿಪ್ರಾಯ ರೂಪಿಸಬೇಕಾಗಿದೆ ಮತ್ತು ರಾಜಕೀಯ–ಅಧಿಕಾರಿ–ಕಾರ್ಪೋರೇಟ್‌ಗಳ ಅಪವಿತ್ರ ಮೈತ್ರಿಯ ಬುಡಕ್ಕೇ ಪೆಟ್ಟುಕೊಡಬೇಕಿದೆ.

ಭ್ರಷ್ಟಾಚಾರದ ವಿರುದ್ಧದ ಹೋರಾಟಗಳಲ್ಲಿ ಕಾರ್ಮಿಕ ಸಂಘಟನೆಗಳಿಗೆ ಬಹುದೊಡ್ಡ ಜವಾಬ್ದಾರಿಯಿದೆ. ಭ್ರಷ್ಟಾಚಾರವು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ ಮತ್ತು ಇದರ ಪರಿಣಾಮವು ದುಡಿಯುವ ವರ್ಗದ ಮೇಲೆ, ಸಮಾಜದ ದುರ್ಬಲ ವರ್ಗದ ಮೇಲೆ ನೇರವಾಗಿ ಉಂಟಾಗುತ್ತದೆ ಎಂಬದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಹೀಗಾಗಿ ಕಾರ್ಮಿಕ ಸಂಘಟನೆಗಳ ಹೋರಾಟದಲ್ಲಿ ಭ್ರಷ್ಟಾಚಾರ ನಿರ್ಮೂಲನವೂ ಪ್ರಮುಖ ಅಂಶವಾಗಬೇಕು. ತಮ್ಮ ಸದಸ್ಯರುಗಳಿಗೆ ಈ ವಿಚಾರವನ್ನು ಮನದಟ್ಟು ಮಾಡುವ ಮೂಲಕ ತಾವು ದುಡಿಯುವ ಕಛೇರಿ & ಸಂಸ್ಥೆಗಳನ್ನು ಭ್ರಷ್ಟಾಚಾರ ಮುಕ್ತವಾಗಿರುವಂತೆ ನೋಡಿಕೊಳ್ಳಬೇಕು. ದೇಶದ ಸಾರ್ವಜನಿಕ ವಲಯದ ಆರ್ಥಿಕ ಸಂಸ್ಥೆಗಳು ಮತ್ತು ಉತ್ಪಾದನಾ ವಲಯದಲ್ಲಿ ಇದನ್ನು ಮಾಡಲು ಸಾಧ್ಯವಾಗಿರುವುದಕ್ಕೆ ಅಲ್ಲಿನ ಕಾರ್ಮಿಕ ಸಂಘಟನೆಗಳೇ ಕಾರಣ ಎಂಬುದನ್ನು ನಾವಿಲ್ಲಿ ಒಪ್ಪಿಕೊಳ್ಳಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಮಿಕ ಸಂಘಟನೆಗಳು ಇದರತ್ತ ಗಮನ ಹರಿಸಬೇಕು. ಕಾರ್ಮಿಕ ಸಂಘಟನೆಗಳು ತಮ್ಮ ಸದಸ್ಯರಿಗೆ ಉತ್ತಮ ಬದುಕಿನ ಮಟ್ಟ ಕಾಯ್ದುಕೊಳ್ಳಲು ಉತ್ತಮ ಪ್ರತಿಫಲ ದೊರಕಿಸುವುದಕ್ಕೆ ಬದ್ಧವಾಗಿರುವಂತೆಯೇ ಭ್ರಷ್ಟಾಚಾರ ವಿರೋಧಿ ನಿಲುವನ್ನು ಹೊಂದಿ ಕೆಲಸ ಮಾಡಬೇಕು. ಶುದ್ಧ ರಾಜಕೀಯದಲ್ಲಿ ವಿಶ್ವಾಸವಿರುವ ಕಾರ್ಮಿಕ ಸಂಘಟನೆಗಳು. ಸಾಮೂಹಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಒಂದಾಗಿ ಒಂದು ಸಮರ್ಥ ಮತ್ತು ಸಶಕ್ತ ಚಳುವಳಿ ಕಟ್ಟುವ ಮೂಲಕ ಭಾರತ ದೇಶವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಬೇಕಿದೆ.

ಲಂಚಾವತಾರ

ಮಹೇಶ್ ಮನ್ನಪೂರ
ಮುಧೋಳ, ಕೊಪ್ಪಳ ಜಿಲ್ಲೆ

ಲಂಚಾವತಾರ ಲಂಚಾವತಾರ ಲಂಚಾವತಾರ
ಎಲ್ಲೆಡೆ ಬೆಳೆದಿದೆ ಲಂಚಾವತಾರಾ
ಜನತೆಯ ಜೀವನ ದುಸ್ತಾರಾ
ಬಡ ಜನತೆಯ ಬದುಕೆ ದುಸ್ತಾರಾ ॥

ಕಾರ್ಯಾಲಯದಲಿ ಕೆಲಸವಾಗಲು
ಕೂಡಲೆಬೇಕು ಲಂಚ
ದೇವರ ಗುಡಿಗೂ ನಮಿಸಲು ಹೋದರೆ
ಪೂಜಾರಿ ಕೇಳುವ ಲಂಚ ॥ ೧ ॥

ಆಸ್ಪತ್ರೆಯಲಿ ರೋಗಿಯ ನೋಡಲು
ವೈದ್ಯರು ಬೇಡುವ ಲಂಚ
ಕಣ್ಣೀರಿಡುತೆ ಹೆಣವನ್ನು ಸಾಗಿಸೆ
ನೀಡಲೇ ಬೇಕು ಲಂಚ ॥ ೨ ॥

ತುತ್ತು ಕೂಳಿಗೂ ತುಂಡು ಅರಿವೆಗೂ
ಪುಡಿಗಾಸಿನ ಲಂಚ ಲಂಚ
ಬೊಗಸೆ ನೀರಿಗೂ ತಲೆಯ ಸೂರಿಗೂ
ನೀಡಲೇ ಬೇಕು ಲಂಚ ॥ ೩ ॥


ರಕ್ಷಣೆ ಶಸ್ತ್ರದ ವ್ಯಾಪಾರದಲಿ
ಕೋಟ್ಯಾಂತರ ಲಂಚದ ಸಂಚು
ಪಾರ್ಲಿಮೆಂಟಿನಲಿ ಪ್ರಶ್ನೆಕೇಳಲೂ
ನೋಟಿನ ಕಂತೆಯ ಹೊಂಚು ॥ ೪ ॥

ಖಾವಿಯ ಅಡಿಯಲ್ಲಿ ಸೀರೆಯ ಸೆರಗು
ಅಯ್ಯೊ ಲಂಚ ಲಂಚ
ಬಾಯಲಿ ಮಂತ್ರ ಬಗೆ ಬಗೆ ತಂತ್ರ
ಅಯ್ಯಯ್ಯೊ ಧರ್ಮ ಕುತಂತ್ರ ॥ ೫ ॥

ಖಾಕಿಯು ಎದ್ದು ಬಿಡುತಿದೆ ಬಾಯಿ
ಬೇಗನೇ ಲಂಚವ ನೀಡು
ಕಾನೂನೆಂಬ ರಾಯರ ಕುದುರೆ
ಕತ್ತೆಯು ಆಯಿತು ನೋಡು ॥ ೬ ॥

ಖಾದಿಯ ಮಾತು ಬೇಡವೇ ಬೇಡ
ನವದ್ವಾರದ ಬಾಯಲೂ ಲಂಚ
ಸ್ವಾರ್ಥ ಲಾಲಾಸೆಯಾಸರೆಯಲ್ಲೆ
ಮರೆದಿದೆ ಲಂಚ ಲಂಚ ॥ ೭ ॥

ಏಳಿ ಜನಗಳೆ ಎಚ್ಚರಗೊಳ್ಳಿ
ಕವಿದಾ ಜಡತೆಯ ಝಾಡಿಸುವಾ
ಎಲ್ಲರ ಬಾಳಿನ ಏಳಿಗೆಗಾಗಿ
ಲಂಚವನೊದ್ದು ಓಡಿಸುವಾ ॥ ೮ ॥



ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಗುಲಬರ್ಗಾ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಯುಜಿಸಿಯ ಒಂದು ವಿಶೇಷ ಚಿಕ್ಕ ಯೋಜನೆ. ವಿಜ್ಞಾನದ ಪಠ್ಯಗಳು, ಆಡಳಿತದ ಇಂಗ್ಲಿಷ ಪಠ್ಯಗಳು ಕನ್ನಡದಲ್ಲಿ ಅನುವಾದಿಸಿ ಕನ್ನಡದ ವ್ಯಾವಹಾರಿಕ ಜ್ಞಾನ ವಿಸ್ತಾರಗೊಳಿಸ ಬೇಕೆಂಬುವುದು ಇದರ ಆಶಯ. ವಿಶ್ವ ವಿದ್ಯಾಲಯದ ಪರಿಧಿಯಲ್ಲಿ ಬರುವ ಕಲಾ ವಿಜ್ಞಾನ ಪದವಿ ಮಹಾವಿದ್ಯಾಲಯ ಗಳಿಂದ ಆಯ್ದ ಸುಮಾರು ನಲವತ್ತು ಐವತ್ತು ಪ್ರಾಧ್ಯಾಪಕರನ್ನು ಈ ಕೆಲಸಕ್ಕಾಗಿ ಆಮಂತ್ರಿಸಲಾಗಿತ್ತು. ಬಸವ ಕಲ್ಯಾಣ, ಭಾಲ್ಕಿ ಹಾಗೂ ಬೀದರಿನ ಪ್ರಾಧ್ಯಾಪಕರೂ ಭಾಗಿಗಳಾಗಿದ್ದರು. ನಾನು ಇನ್ನಿಬ್ಬರು ಗೆಳೆಯರೊಂದಿಗೆ ಭಾಗಿಯಾಗಿದ್ದೆ. ಮೂರ್ನಾಲ್ಕು ದಿವಸಗಳವರೆಗೆ ಕೆಲಸ ನಿರ್ವಹಿಸಿ ಎಲ್ಲರೂ ಪ್ರವಾಸ ಭತ್ತೆ, ದಿನ ಭತ್ತೆ ಫಾರ್ಮ ತುಂಬಿ ಹಣ ಪಡೆಯಬೇಕು. ಬಸವ ಕಲ್ಯಾಣ ಹಾಗೂ ಕಲಬುರಗಿಯ ದಾರಿ ದೂರ ಒಂದು ನೂರು ಕಿ.ಮೀ., ವ್ಯಯಿಸಬೇಕಾದ ಹಣ ಹೋಗಿ ಬರಲು ಸುಮಾರು ರೂ.150 ರಿಂದ 200 ಮಾತ್ರ. ಒಂದೂ ವರಿಯಿಂದ ಎರಡು ಗಂಟೆಗಳ ಪ್ರವಾಸ.

ನಾನು ಅದೇ ರೀತಿ ರೂ. 200 ಬಿಲ್ ಮಾಡಿ ಸಲ್ಲಿಸಿದೆ. ಎಲ್ಲರೂ ನಗಲು, ವ್ಯಂಗ್ಯವಾಡಲು, ನೀನೊಬ್ಬ

ಒಡೆದ ವ್ಯಕ್ತಿತ್ವಗಳ ಸಮಾಜಕ್ಕೆ ಪಾಠ ಹೇಳುವುದು ಎಲ್ಲಿಂದ ಪ್ರಾರಂಭ ಮಾಡುವುದು!?

ನಮ್ಮ ಸುಶಿಕ್ಷಿತ ವರ್ಗದ ವಿಶ್ವಾಸಾರ್ಹತೆಯ ಪ್ರಶ್ನೆ ಇಲ್ಲಿದೆ. ಮಾನಸಿಕವಾಗಿ ವ್ಯಕ್ತಿತ್ವ ಭ್ರಷ್ಟವಾಯಿತಾದರೆ ಆಯ್ತು! ಈ ಅಸಮಾನತೆಯ ಕ್ರೌರ್ಯಗಳು, ಜಾತಿ ತಾರತಮ್ಯಗಳು, ದುಡಿಯುವ ವರ್ಗದ ಅಪಮಾನತೆಗಳು, ದಿನ ನಿತ್ಯದ ಮಹಿಳೆಯರ ಮೇಲಿನ ಅತ್ಯಾಚಾರಗಳು ಇವೆಲ್ಲವುಗಳು ಗಂಭೀರ ಪ್ರಶ್ನೆಗಳಾಗಿ ಕಾಡುವುದೇ ಇಲ್ಲ. ಮನಸ್ಸು ಸಂವೇದನಾಶೀಲತೆ ಕಳೆದುಕೊಂಡಿರುತ್ತದೆ ಎನ್ನುತ್ತಾರೆ **ಪ್ರೊ. ಕಾಶೀನಾಥ ಅಂಬಲಗೆ**, ನಿವೃತ್ತ ಹಿಂದಿ ಪ್ರಾಧ್ಯಾಪಕರು, ಗುಲ್ಬರ್ಗ, ತಮ್ಮ ಒಂದು ಅನುಭವವನ್ನು ನೆನೆಪಿಸಿಕೊಳ್ಳುತ್ತ


ಆದರ್ಶವಾದಿ ಬಿಡಪ್ಪ! ಎಂದು ಕಿಚಾಯಿಸಲು, ಕೆಲವರು 'ಹಾಂಗ ಮಾಡಬೇಡೋ ಮಾರಾಯ, ನಮ್ಮ ಬಿಲ್ಲೂ ಮಂಜೂರಾಗೋದಿಲ್ಲ' ಎಂದು ವಿನಂತಿಸಲು ಸುರು ಹಿಡ್ಕೊಂಡರು. ಏಕೆಂದರೆ ಬಸವ ಕಲ್ಯಾಣದವರು ಟಿಎ ಬಿಲ್ ಫಾರ್ಮನಲ್ಲಿ ಪ್ರವಾಸ ಕೈಕೊಳ್ಳುವುದು, ಬಕದಿಂದ ಮೂವತ್ತು ಕಿಮೀ ಭಾಲ್ಕಿವರೆಗೆ ಬಸ್ಸಿನಿಂದ– ಗುಲ್ಬರ್ಗಾದ ವಿರುದ್ಧ ದಿಕ್ಕಿನಲ್ಲಿ– ಭಾಲ್ಕಿ ರೇಲ್ವೇ ಸ್ಟೇಸನ್‌ದಿಂದ ವಿಕಾರಾಬಾದ,ಅಂದರೆಸು.120 ಕಿಮೀ, ವಿಕಾರಾಬಾದದಿಂದ ಗುಲಬರ್ಗಾ ಸುಮಾರು 200 ಕಿಮೀ ಸುಮಾರು ಹತ್ತು ಗಂಟೆಗಳ ಪ್ರವಾಸ ಮಾಡಿ ದಣಿಯುತ್ತಾರೆ. ಇಂತಿಷ್ಟು ಗಂಟೆಗಳ ಪ್ರವಾಸಕ್ಕೆ ಒಂದು ದಿವಸದ ಡಿಎ ಕ್ಲೇಮ್ ಮಾಡುತಿರ್ತಾರೆ. ಬಸವ ಕಲ್ಯಾಣ, ಭಾಲ್ಕಿ, ಬೀದರಿನವರೆಲ್ಲಾ ಹಾಗೇ ಮಾಡೋದು. ಅದೇನೋ ವಿಶ್ವ ವಿದ್ಯಾಲಯದ ನಿಯಮವಿದೆಯಂತೆ; ನಿಯರೆಸ್ಟ್ ರೇಲ್ವೇ ಸ್ಟೇಶನ್‌ದಿಂದ ಪ್ರವಾಸ ಭತ್ತೆಗೆ ನೀವು ಎಲಿಜಿಬಲ್ ಇದ್ದೀರಿ–ಎಂದು. ಹಲವು ಸಾವಿರ ರೂ.ಗಳ ಭತ್ತೆ! ವಿವಿ ಕೆಲಸಗಳಿಗೆಲ್ಲ ಹಾಗೇ ಪ್ರವಾಸ.

ಹಾಗೆ ನೋಡಿದರೆ ಈ ಅನುವಾದ ಯೋಜನೆ ವಿವಿಯ ನಿಯಮಿತವಾದ ಯೋಜನೆ ಅಲ್ಲ. ವಿಶೇಷ ಅನುದಾನ ಒದಗಿಸಿ ಆದಷ್ಟು ಸಾರ್ಥಕ ಕೆಲಸ ಮಾಡಿ ಮುಗಿಸುವುದು. ಈ ಯೋಜನೆಗೆ ಪ್ರೊ.ಜಿ.ಜಿ.ಹೆಂಡಿಯವರು ನಿರ್ದೇಶಕರು. ಅವರೊಬ್ಬ ಅತ್ಯಂತ ಪ್ರಾಮಾಣಿಕ ಹಾಗೂ ದಕ್ಷ ಆಡಳಿತಗಾರರು. ಸ್ಟಾಟಿಸ್ಟಿಕ್, ಕೂಡಿ ಕಳೆಯುವ ಲೆಕ್ಕದ ತಲೆಗಳು ಲೆಕ್ಕ ಹಾಕಿದರೆ,ಇದೆಂತಹ ಸ್ವರೂಪದ ಭ್ರಷ್ಟಾಚಾರದ ರೂಪ! ಇಲ್ಲಿ ಪ್ರಶ್ನೆ ಇರುವುದು ಕಣ್ಣಿಗೆ ಕಾಣುವ ಭ್ರಷ್ಟಾಚಾರವಲ್ಲ. ಅದು ಕುರಿತು ನಮ್ಮ ಮೈಂಡ್‌ಸೆಟ್ ಹೇಗಿದೆ, ಎನ್ನುವುದು. ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕರಿಗೆ ಸಮೃದ್ಧ ಸಂಬಳವಿದೆ. ಇವರಿಂದ ಹೆಚ್ಚುವರಿ ಕೆಲಸಗಳು; ಅಂದರೆ ಪ್ರಶ್ನೆ ಪತ್ರಿಕೆ ಮಾಡಿಸುವುದು, ಉತ್ತರ ಪತ್ರಿಕೆ ತಪಾಸಿಸುವುದು, ಪರೀಕ್ಷೆಯ ಇತರ ಕೆಲಸಗಳಿಗೆ ಗೌರವ ಧನ ಕೊಡಲಾಗುತ್ತದೆ. ಮತ್ತೊಂದು ರೋಚಕ ಹಾಗೂ ವಾಸ್ತವದ ಜೋಕ್ ನಮ್ಮ ಸಮಾನ ಮನಸ್ಕ ಗೆಳೆಯರ ನಡುವೆ ಸುಳಿಯುತ್ತಿತ್ತು. ಬೇರೆ ಬೇರೆ ಅಧ್ಯಯನ ವಿಭಾಗಗಳಿಗೆಲ್ಲ ಹತ್ತಾರು ಲಕ್ಷಗಳ ರಿಸರ್ಚ ಪ್ರಾಜೆಕ್ಟಗಳಿರುತ್ತವೆ. ಹೆಚ್ಚೂ ಕಡಿಮೆ ಶೇಕಡಾ ಐವತ್ತು ಇಪ್ಪತ್ತೈದು ರೂ.ಗಳೇ ಖರ್ಚಾಗುವುದು. ಉಳಿದೆಲ್ಲವೂ ಜಾಣ ಬಿಲ್ಲುಗಳ ಮೂಲಕ ಸೋಶಿಯಲ್ ವರ್ಕ ಆಗಿರುತ್ತದೆ. ಯಾವ ಕಾರಣಕ್ಕೋ ಒಂದೆರಡು ವರ್ಷಗಳು ಯಾವ ಪ್ರಾಜೆಕ್ಟಗಳು ಇರಲಿಲ್ಲ, ಅಥವಾ ಹೆಚ್ಚಿರಲಿಲ್ಲ. ನನ್ನೊಬ್ಬ ಗೆಳೆಯ ಕಾ.ಎಂ. ಜಿ. ಸಜ್ಜನ ವಿವಿಯಲ್ಲಿ ಲ್ಯಾಬ ಅಸಿಸ್ಟೆಂಟ. ಒಂದ್ನಮೂನಿ ಲೇಬರ್ ಲೀಡರ್. ಅವರೊಮ್ಮೆ ಹೇಳಿದ್ದರು. 'ಈಗ ಯುಜಿಸಿ ಪ್ರಾಜೆಕ್ಟಗಳು ಹೆಚ್ಚಿಗಿಲ್ಲ. ಕದಿಯುವ ಚಟ ಬಿದ್ದಿದೆ. ಏನ್ಮಾಡೋದು. ಒಂದೆರಡು ಗಂಟೆ ಬೇಗ ಮನೆಗೆ ಹೋಗಿ ಕೆಲವು ಗಂಟೆಗಳಾದರೂ ಕದಿಯಲು ಸಾಧ್ಯವಾಯಿತು ಎಂದು ಸುಖವಾಗಿ ಮಲಗುವುದು ಮಾಡುತ್ತಾರೆ."

ಹೀಗೆ ವಿಚಾರಿಸಲು ಸಾಧ್ಯವಾದರೆ, ಹೇಗೇ? ಈ ಸಮಾಜ ನನಗೆ ಕಟ್ಟಿ ನಿಲ್ಲಿಸಿ ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ನನಗಾಗಿ ನನ್ನೂರಲ್ಲಿ ಹತ್ತಾರು ಕೋಣೆಗಳ, ಹತ್ತಾರು ಶಿಕ್ಷಕರಿರುವ ಶಾಲೆ ನನಗೆ ಊರ ರೈತರು ಹಾಗೂ ಸರಕಾರ ಒದಗಿಸಿ ಕೊಟ್ಟಿದೆ. ಉನ್ನತ ಶಿಕ್ಷಣದ ಸವಲತ್ತುಗಳೆಲ್ಲ ದುಡಿಯುವ ಜನರ ಬೆವರಿನ ಫಲವಾಗಿದೆ. ನನ್ನನ್ನೂ ಸೇರಿ ಅವರೆಲ್ಲ ಕೊಟ್ಟ ತೆರಿಗೆಯಿಂದ ನಾನು ಹೀಗೆಲ್ಲ ಆದೆ. ಒಟ್ನೂ ನಮ್ಮ ಸುಶಿಕ್ಷಿತ ವರ್ಗದ 'ವಿಶ್ವಾಸಾರ್ಹತೆಯ ಪ್ರಶ್ನೆ ಇಲ್ಲಿದೆ. ಮಾನಸಿಕವಾಗಿ ವ್ಯಕ್ತಿತ್ವ ಭ್ರಷ್ಟವಾಯಿತಾದರೆ ಆಯ್ತು! ಈ ಅಸಮಾನತೆಯ ಕ್ರೌರ್ಯಗಳು, ಜಾತಿ ತಾರತಮ್ಯಗಳು, ದುಡಿಯುವ ವರ್ಗದ ಅಪಮಾನತೆಗಳು, ದಿನ ನಿತ್ಯದ ಮಹಿಳೆಯರ ಮೇಲಿನ ಅತ್ಯಾಚಾರಗಳು ಇವೆಲ್ಲವುಗಳು ಗಂಭೀರ ಪ್ರಶ್ನೆಗಳಾಗಿ ಕಾಡುವುದೇ ಇಲ್ಲ. ಮನಸ್ಸು ಸಂವೇದನಶೀಲತೆ ಕಳೆದುಕೊಂಡಿರುತ್ತದೆ.

ಒಡೆದ ವ್ಯಕ್ತಿತ್ವಗಳ ಸಮಾಜಕ್ಕೆ ಪಾಠ ಹೇಳುವುದು ಎಲ್ಲಿಂದ ಪ್ರಾರಂಭ ಮಾಡುವುದು!?

ಇವತ್ತಿನ ಪರಿಸರ ಸಮಸ್ಯೆಗಳು ಮತ್ತು ಅಭಿವೃದ್ಧಿ ರಾಜಕಾರಣ



ಜಯ

ಪರಿಸರ ಸಮಸ್ಯೆ ಇಡೀ ಭೂಮಂಡಲವನ್ನೇ ಬಲಿತೆಗೆದುಕೊಳ್ಳುವ ಮಟ್ಟಿಗೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಬಂಡವಾಳಶಾಹಿ ಬೆಳವಣಿಗೆಯ ಹಾದಿ ಪರಿಸರ ಮತ್ತು ಶ್ರಮ, ಇವೆರಡನ್ನೂ ಕಬ್ಬಿನ ಸಿಪ್ಪೆಯಿಂದ ರಸ ತೆಗೆಯುವಂತೆ ಶೋಷಿಸುತ್ತಾ ನಡೆದಿದೆ. ಅಭಿವೃದ್ಧಿ ಎಂಬುದು ಗುಣಮಟ್ಟದ ಜೀವನ ನಡೆಸುವ ಇಡೀ ಜನತೆಯ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲೇನೂ ಜರುಗುತ್ತಿಲ್ಲ. ಬದಲಿಗೆ, ಕೆಲವೇ ಕೆಲವು ಆಸ್ತಿವಂತ ಕುಟುಂಬಗಳು ನಿಸರ್ಗ ಸಂಪತ್ತು ಮತ್ತು ಬಹುಸಂಖ್ಯಾತ ಜನತೆಯ ಶ್ರಮ ಇವೆರಡನ್ನೂ ಕೊಳ್ಳೆ ಹೊಡೆಯುತ್ತಾ ಸಾಗಿದೆ. 2011 ರ ಹೊತ್ತಿಗೆ ಭಾರತದಲ್ಲಿ ಸುಮಾರು 59 ಡಾಲರ್ ಬಿಲಿಯಾಧಿಪತಿಗಳಿದ್ದರೆ, ಮುಕ್ಕಾಲು ಪಾಲು ಜನತೆ ಒಂದು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿಯಲ್ಲಿದೆ. ಜಾಗತೀಕರಣ~ಉದಾರೀಕರಣ~ಖಾಸಗೀಕರಣ ನೀತಿಗಳ ಲಾಭಪ್ರೇರಿತ ಅಭಿವೃದ್ಧಿಯಿಂದ ಅಸಮಾನತೆ ಮಾತ್ರವಲ್ಲ ಪರಿಸರ ಲೂಟಿಯಿಂದ ಕೂಡ ನಾಗರೀಕತೆಯೇ ಅಳಿಯುವ ಹಾದಿಯಲ್ಲಿದೆ. ಇವೊತ್ತು ಮನುಕುಲವನ್ನು ವಿಶೇಷವಾಗಿ ಕರ್ನಾಟಕ ಜನತೆಯನ್ನು ಕಾಡುತ್ತಿರುವ ಪರಿಸರ ಸಮಸ್ಯೆಗಳ ಕುರಿತು ದೃಷ್ಟಿ ಹಾಯಿಸೋಣ.

ಕೃಷಿ ಮೇಲೆ ಭೂ-ತಾಪಮಾನದ ಪರಿಣಾಮ

ವರ್ಷದಿಂದ ವರ್ಷಕ್ಕೆ ಭೂಮಿಯ ತಾಪಮಾನ ಏರಿಕೆಯಾಗುತ್ತಿರುವುದನ್ನು ಸುಮಾರು 100 ಕ್ಕೂ ಹೆಚ್ಚು ದೇಶಗಳ ಸುಮಾರು 10,000 ವಿಜ್ಞಾನಿಗಳ ಅಂತರಾಷ್ಟ್ರೀಯ ವೈಜ್ಞಾನಿಕ ತಂಡ ಸಾಬೀತುಪಡಿಸಿದೆ. ಹವಾಮಾನ ವೈಪರೀತ್ಯ, ಚಂಡಮಾರುತ, ಬಿರುಗಾಳಿ, ಬರ, ಅತಿವೃಷ್ಟಿ, ಅನಾವೃಷ್ಟಿ, ಇತ್ಯಾದಿಯಂತಹ ನೈಸರ್ಗಿಕ ವಿಕೋಪಗಳಿಗೆ ಮೂಲ ಕಾರಣ ಭೂಮಿಯ ತಾಪಮಾನ ಹೆಚ್ಚುತ್ತಿರುವುದು. ಭಾರತ ಕೃಷಿ ಸಂಶೋಧನಾ ಸಂಸ್ಥೆಯ 2012ರ ವರದಿ ಪ್ರಕಾರ ಏರುತ್ತಿರುವ ಭೂಮಿಯ ತಾಪಮಾನದಿಂದಾಗಿ ಬೆಳೆ ನಾಶ, ಮಣ್ಣಿನ ಫಲವತ್ತತೆ ನಾಶ, ಬೆಳೆ ಇಳುವರಿ ಕಡಿಮೆಯಾಗುವುದು, ಜೀವ ಪ್ರಭೇದಗಳ ನಾಶ, ಹೊಸ ರೂಪದ ಕೀಟಗಳು ಮತ್ತು ರೋಗಗಳು, ಸಮುದ್ರ ಮಟ್ಟ ಏರಿ ಸಮುದ್ರ ತೀರದ ಪ್ರದೇಶಗಳು ಮುಳುಗಡೆಯಾಗುವುದು, ಜನರ ಸ್ಥಳಾಂತರ, ಹೀಗೆ ಹತ್ತಲವು ಸಮಸ್ಯೆಗಳು ಉದ್ಭವಿಸಿವೆ.

ಭೂಮಿಯ ತಾಪಮಾನ ಹೆಚ್ಚುತ್ತಿರುವುದಕ್ಕೆ ಕಾರಣ ಮಾನವನ ಕೈಗಾರಿಕಾ ಚಟುವಟಿಕೆಗಳು ಪ್ರಮುಖ ಕಾರಣ. ಇಂತಹ ಚಟುವಟಿಕೆಗಳಿಂದ ವಾತಾವರಣಕ್ಕೆ ಬಿಡುಗಡೆಯಾಗುವ ಅನಿಲಗಳು ಭೂ-ತಾಪಮಾನ ಹೆಚ್ಚಳಕ್ಕೆ ಕಾರಣವಾಗಿವೆ. ಇವುಗಳನ್ನು ಹಸಿರುಮನೆ ಅನಿಲಗಳೆಂದೂ ಕರೆಯುತ್ತಾರೆ. ಇವುಗಳಲ್ಲಿ ಪ್ರಮುಖವೆಂದರೆ: ಇಂಗಾಲದ ಡೈಆಕ್ಸೈಡ್, ಮೀಥೇನ್, ಸಾರಜನಕದ ಆಕ್ಸೈಡ್, ಶೀತಲಯಂತ್ರಗಳಿಂದ ಕ್ಲೋರೋಫ್ಲೋರೋ ಇಂಗಾಲಗಳು, ಇತ್ಯಾದಿ.

ಭೂ-ತಾಪಮಾನಕ್ಕೆ ಕಾರಣವಾಗಿರುವ ಹಸಿರು ಮನೆ ಅನಿಲಗಳ ವಿಸರ್ಜನೆಯಲ್ಲಿ ಮುಂಚೂಣಿಯಲ್ಲಿರುವುದು ಶ್ರೀಮಂತ ರಾಷ್ಟ್ರಗಳಾದ ಅಮೇರಿಕಾ ಮತ್ತು ಯೂರೋಪ್ ದೇಶಗಳು. ವಿಶ್ವದ ಶೇ. 20 ರಷ್ಟು ಜನಸಂಖ್ಯೆ ಹೊಂದಿರುವ ಅಮೇರಿಕಾ ಮತ್ತು ಯೂರೋಪ್ ದೇಶಗಳು ವಿಶ್ವದ ಸುಮಾರು ಶೇ. 80 ರಷ್ಟು ಸಂಪನ್ಮೂಲಗಳನ್ನು ವ್ಯಯಿಸುತ್ತಿವೆ. ಆದರೆ ವಿಶ್ವದ ಶೇ. 80 ರಷ್ಟು ಜನಸಂಖ್ಯೆ ಹೊಂದಿರುವ ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮತ್ತು ಏಷ್ಯಾ ಖಂಡದ ದೇಶಗಳು ಶೇ. 20 ರಷ್ಟು ಸಂಪನ್ಮೂಲಗಳನ್ನು ವ್ಯಯಿಸುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿರುವ ಅಮೇರಿಕಾ ಮತ್ತು ಯೂರೋಪ್ ದೇಶಗಳು ಈ ಅನಿಲಗಳ

ವಿಸರ್ಜನೆ ತಡೆಯಲು ಕ್ರಮಕೈಗೊಳ್ಳುತ್ತಿಲ್ಲ ಮತ್ತು ಭಾರತದಂತಹ ದೇಶಗಳು ಹಸಿರುಮನೆ ಅನಿಲಗಳನ್ನು ತಡೆಯಲು ತಂತ್ರಜ್ಞಾನ ಕೊಡದೇ ಅಪಾರ ಹಣ ಮತ್ತು ರಾಯಲ್ಟಿ ಕೇಳುತ್ತಿವೆ.

ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲು ಗಣಿಗಳ ಲೂಟಿ

ಕರ್ನಾಟಕದಲ್ಲಿ ಸುಮಾರು 900 ಕೋಟಿ ಟನ್‌ಗಳಷ್ಟು ಕಬ್ಬಿಣದ ಸಂಪನ್ಮೂಲವಿದೆ. ಇದು ಕೇವಲ 70 ವರ್ಷಗಳು ನಮ್ಮ ಪೂರೈಕೆಗೆ ಸಾಕಾಗ ಬಹುದು. ಆದರೆ, ನಮ್ಮ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಇಂಥಹ ಬರಿದಾಗುವ ಸಂಪನ್ಮೂಲಗಳನ್ನು ಬಳಸದೇ 2006~10 ರ ಅವಧಿಯೊಂದ ರಲ್ಲೇ ಅಕ್ರಮವಾಗಿ ರಫ್ತಾಗಿರುವ ಅದಿರು ರೂ. 2 ಲಕ್ಷ ಕೋಟಿ ಮೊತ್ತದ 12.58 ಕೋಟಿ ಟನ್‌ಗಳಷ್ಟು. 10 ವರ್ಷಕ್ಕೂ ಹೆಚ್ಚು ಕಾಲ ಗಣಿ ಲೂಟಿ ಮಾಡಲು ಅವಕಾಶ ನೀಡಿ ನಂತರವಷ್ಟೇ ಬಂದೋಬಸ್ತ್ ಮಾಡುವ ನಾಟಕ ನಡೆದಿದೆ. ಬಳ್ಳಾರಿ, ಚಿತ್ರದುರ್ಗ, ತುಮಕೂರು, ಇತ್ಯಾದಿ ಪ್ರದೇಶಗಳಲ್ಲಿ ಗಣಿಗಾರಿಕೆಯಿಂದ ಅಂತರ್ಜಲ, ವಾಯು ಪರಿಸರ, ಕೃಷಿಯ ಫಲವತ್ತತೆ, ಜೀವ ವೈವಿಧ್ಯತೆ, ಅರಣ್ಯ ನಾಶ, ಇತ್ಯಾದಿಗಳಿಗೆ ಪೆಟ್ಟು ಬಿದ್ದಿದ್ದು ಅದನ್ನು ಸರಿಪಡಿಸಲು ರೂ. 30,000 ಕೋಟಿ ವೆಚ್ಚದಲ್ಲಿ ಪರಿಸರ ಸಂರಕ್ಷಣಾ ಕಾರ್ಯ ಗಳನ್ನು ಇದೀಗಷ್ಟೇ ಕೈಗೊಳ್ಳಲಾಗಿದೆ. ಇಂತಹ ಗಣಿ ಲೂಟಿ ಗೋವಾ, ಒಡಿಸ್ಸಾ, ಮಧ್ಯಪ್ರದೇಶ ಒಳಗೊಂಡಂತೆ ಭಾರತದ ಹಲವು ರಾಜ್ಯಗಳಲ್ಲಿ ನಡೆದಿದೆ.

ಕಲ್ಲಿದ್ದಲು ಗಣಿ ವಿಷಯದಲ್ಲೂ ಇದೇ ಆಗಿದೆ. 2007~11 ರ ಅವಧಿಯಲ್ಲಿ 8,284 ಯೋಜನೆಗಳನ್ನು ಮನಸ್ಸೋಇಚ್ಛೆ ಅನುಮೋದಿಸಿದ ಕೇಂದ್ರ ಸರ್ಕಾರ ಸುಮಾರು 2 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಕಲ್ಲಿದ್ದಲು ಗಣಿಗಾಗಿ ವರ್ಗಾಯಿಸಿದೆ. ಅಲ್ಲದೆ 1993~2011 ರವರೆಗೆ 206 ಕಲ್ಲಿದ್ದಲು ಗಣಿಗಳನ್ನು ಸರ್ಕಾರಿ ಮತ್ತು ಖಾಸಗಿ ಕಂಪನಿಗಳಿಗೆ ಉಚಿತವಾಗಿ ಹಂಚಿಕೆ ಮಾಡಿದೆ. ಇದರಿಂದ ಕಳೆದ 5 ವರ್ಷಗಳ ಅವಧಿಯಲ್ಲಿ ಸುಮಾರು ರೂ. 1.84 ಲಕ್ಷ ಕೋಟಿ ಸರ್ಕಾರಕ್ಕೆ ನಷ್ಟವಾಗಿದೆ ಎಂದು ಸಿಎಜಿ ಅಂದಾಜು ಮಾಡಿದೆ. ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಹೆಸರಿನಲ್ಲಿ ಖಾಸಗಿಯವರ ಲಾಭಕ್ಕಾಗಿ ಕೊಳ್ಳೆ ಹೊಡೆಯಲು ಬಿಡಲಾಗಿದೆ.

ರಾಜ್ಯದ ಜೀವನಾಡಿಯಾಗಿರುವ ಪಶ್ಚಿಮಘಟ್ಟಗಳ ಅಳಿವು?

ಗುಜರಾತ್ ಮತ್ತು ಮಹಾರಾಷ್ಟ್ರದ ಗಡಿ ಭಾಗದ ತಪ್ತಿ ನದಿಯ ಬಾಯಿಯಿಂದ ಆರಂಭಗೊಳ್ಳುವ ಪಶ್ಚಿಮ ಘಟ್ಟಗಳ ಶ್ರೇಣಿಯು ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಗೋವಾ, ಕೇರಳ ರಾಜ್ಯಗಳ ಮೂಲಕ 1600 ಕಿ.ಮೀ ಹಬ್ಬಿಕೊಂಡು ಕನ್ಯಾಕುಮಾರಿಯಲ್ಲಿ ಅಂತ್ಯಗೊಳ್ಳುತ್ತದೆ. ಪಶ್ಚಿಮಘಟ್ಟಗಳು ಈ ಆರೂ ರಾಜ್ಯಗಳಲ್ಲಿ ಒಟ್ಟಾಗಿ ಸುಮಾರು 1.6 ಲಕ್ಷ ಚ.ಕಿ.ಮೀ ವಿಸ್ತೀರ್ಣದಲ್ಲಿ ಹರಡಿ ಕೊಂಡಿದೆ. ಈ ಘಟ್ಟಗಳು ಮಳೆಯನ್ನು ಹಿಡಿದಿಟ್ಟು ಗೋದಾವರಿ, ಕೃಷ್ಣಾ, ಕಾವೇರಿ ನದಿಗಳ ಉಗಮ ಸ್ಥಾನವೂ ಆಗಿವೆ. ಇಲ್ಲಿ 1,741 ಹೂ ಬಿಡುವ ಸಸ್ಯ ಪ್ರಭೇದಗಳು, 403 ಪಕ್ಷಿ ಪ್ರಭೇದಗಳು, ವನ್ಯಜೀವಿಗಳು ಇತ್ಯಾದಿ ಇವೆ.

ಇಂಥಹ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗಣಿಗಾರಿಕೆ, ಮತ್ತು ಇತರೆ ಕೈಗಾರಿಕಾ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಕುರಿತು ವರದಿ ನೀಡಲು ಪ್ರೊ. ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಪರಿಣಿತರ ತಂಡವನ್ನು ನೇಮಿಸಲಾಗಿತ್ತು. ಈ ಸಮಿತಿಯು ಇಡೀ ಪಶ್ಚಿಮ ಘಟ್ಟಗಳ ಪ್ರದೇಶವನ್ನು 3 ವಲಯಗಳನ್ನಾಗಿ ವಿಂಗಡಿಸಿ ಕೆಲವು ಶಿಫಾರಸ್ಸುಗಳನ್ನು ಮಾಡಿತು: 1) ಇಡೀ ಪ್ರದೇಶದ ಶೇ. 60 ರಷ್ಟು ಭಾಗ **ಅತಿ ಸೂಕ್ಷ್ಮ ವಲಯ**ವಾಗಿದ್ದು ಇಲ್ಲಿ ಯಾವುದೇ ಕೈಗಾರಿಕಾ ಯೋಜನೆಗಳನ್ನು ಸ್ಥಾಪಿಸಬಾರದು ಬದಲಿಗೆ ಪರಿಸರ ಸಂರಕ್ಷಣೆ ಕ್ರಮಗಳನ್ನು ಅನುಸರಿಸಬೇಕು. 2) ಇಡೀ ಪ್ರದೇಶದ ಶೇ. 15 ರಷ್ಟು ವಿಸ್ತೀರ್ಣವು ಮಧ್ಯಮ ಸೂಕ್ಷ್ಮ ವಲಯವಾಗಿದ್ದು, ಕಟ್ಟುನಿಟ್ಟಾದ ನಿಯಂತ್ರಣಗಳೊಂದಿಗೆ ಹಗುರ ಕೈಗಾರಿಕೆ ಗಳನ್ನು ಮಾತ್ರವೇ ಸ್ಥಾಪಿಸಬಹುದು. 3) ಇಡೀ ಪ್ರದೇಶದ ಶೇ. 25 ರಷ್ಟು ವಿಸ್ತೀರ್ಣವು **ಸೂಕ್ಷ್ಮ ವಲಯ**ವಾಗಿದ್ದು, ಸೂಕ್ತ ಅನುಮೋದನೆಯೊಂದಿಗೆ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಬಹುದು. ಜನತೆಯ ಸ್ಥಳಾಂತರ ಕುರಿತಂತ ಪ್ರಶ್ನೆಗಳಿಗೆ ಸ್ಥಳೀಯರೊಂದಿಗೆ ಚರ್ಚಿಸಿ ಸೂಕ್ತ ಮಾರ್ಪಾಟಿನೊಂದಿಗೆ ಈ ವರದಿಯನ್ನು ಬಳಸಿಕೊಳ್ಳಲು ಸಾಧ್ಯವಿತ್ತು. ಆದರೆ ಕೇಂದ್ರ ಸರ್ಕಾರ ಮತ್ತು ಬಂಡವಾಳಶಾಹಿಗೆ ಈ ವರದಿಯು ಬಹಳ ವಿರೋಧಾಭಾಸದಂತೆ ಕಂಡುಬಂದು, ವರದಿಯನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಲೇ ಇಲ್ಲ.

ಬದಲಿಗೆ, ಕಸ್ತೂರಿರಂಗನ್ ನೇತೃತ್ವದಲ್ಲಿ ಮತ್ತೊಂದು ತಜ್ಞರ ತಂಡ ರಚಿಸಿ ತನಗೆ ಬೇಕೆನಿಸಿದ ವರದಿಗಾಗಿ ನಿರೀಕ್ಷಿಸಿತು. ಈ ತಜ್ಞರ ತಂಡವು ಸೀಮಿತ ಅಧ್ಯಯನ ನಡೆಸಿ ಇಡೀ ವಿಸ್ತೀರ್ಣದಲ್ಲಿ ಕೇವಲ ಶೇ. 37 (60,000 ಚ.ಕಿ.ಮೀ) ದಷ್ಟು ಭಾಗವನ್ನು ಮಾತ್ರ ಸೂಕ್ಷ್ಮ ವಲಯವೆಂದು ನಿಗದಿಪಡಿಸಿತು. ಉಳಿದ ಶೇ. 57ರಷ್ಟು ವಿಸ್ತೀರ್ಣದಲ್ಲಿ ಅಭಿವೃದ್ಧಿಯ ದುರಾಕ್ರಮಣಕ್ಕೆ ಶಿಫಾರಸ್ಸು ಮಾಡಿದೆ. ಪಶ್ಚಿಮ ಘಟ್ಟಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಗಣಿ, ಪ್ಲಾಂಟೇಷನ್, ಪ್ರವಾಸೋದ್ಯಮ, ಟಿಂಬರ್ ಮತ್ತು ಇತರೆ ಕೈಗಾರಿಕಾ ಮಾಫಿಯಾಗಳು ಹಂಚಿಕೆ ಹಾಕಿವೆ. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಪಶ್ಚಿಮಘಟ್ಟಗಳಲ್ಲಿ ಅಭಿವೃದ್ಧಿ ನೀತಿ ರೂಪಿಸಿದೆ.

ನಗರೀಕರಣ ಸಮಸ್ಯೆ

ಅಸಮಾನ ಕೈಗಾರಿಕಾ ಬೆಳವಣಿಗೆಯು ನಗರೀಕರಣ ಸಮಸ್ಯೆಯನ್ನು ಹುಟ್ಟು ಹಾಕಿದೆ. ರಾಜ್ಯದ ಜನತೆಯು ಬೆಂಗಳೂರಿನಂತಹ ಬೃಹತ್ ನಗರಗಳಿಗೆ ವಲಸೆ ಬರುತ್ತಿದೆ. ಇಂಥಹ ನಗರಗಳಲ್ಲಿ ಶೇ. 50 ಜನತೆ ಸ್ಲಮ್‌ಗಳಲ್ಲಿ ಅತಿ ಕಡಿಮೆ ಕೂಲಿಕೆಲಸಗಳಲ್ಲಿ ಜೀವನ ಸವೆಸುತ್ತಿದ್ದಾರೆ. ಘನ ತ್ಯಾಜ್ಯ ವಿಲೇವಾರಿ, ನೈರ್ಮಲ್ಯ, ಕುಡಿಯುವ ನೀರು, ಸಾರಿಗೆ, ವಸತಿ, ಇತ್ಯಾದಿ ಮೂಲ ಸೌಕರ್ಯಗಳಿಲ್ಲದೆ ಜನ ಹಲವು ಸಾಮಾಜಿಕ ಮತ್ತು ಆರೋಗ್ಯ ಸಮಸ್ಯೆಗಳಿಂದ ನರಳುತ್ತಿದ್ದಾರೆ.

ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ಮೇಲೆ ಲೂಟಿಕೋರತನ

ಅಮೇರಿಕಾ, ಚೀನಾ ಹೊರತು ಪಡಿಸಿದರೆ ವಿಶ್ವದಲ್ಲಿ ಭಾರತದಲ್ಲಿ ಅತಿ ಹೆಚ್ಚು ಪರಿಸರ ಜೀವವೈವಿಧ್ಯ ಸಂಪತ್ತಿದೆ. ಇದರಲ್ಲಿ ಮೊದಲ 0.01% ಶ್ರೀಮಂತ ಜನ


ಶೇ. 40 ರಷ್ಟು ಬಡಜನರು ಬಳಸುತ್ತಿರುವುದಕ್ಕಿಂತ 330 ಪಟ್ಟು ಜೀವ ವೈವಿಧ್ಯ ಸಂಪತ್ತನ್ನು ಬಳಸುತ್ತಿದ್ದಾರೆ. ಭಾರತದಲ್ಲಿ 1,30,000 ಕ್ಕೂ ಹೆಚ್ಚು ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿವೆ. ನಮ್ಮ ಭೂಮಿಯ ತಾಪಮಾನವೇನಾದರೂ 2 ಡಿಗ್ರಿ ಸೆ. ಜಾಸ್ತಿಯಾದರೂ ಶೇ. 15~40 ರಷ್ಟು ಪ್ರಭೇದಗಳು ಸಾಯುತ್ತವೆ. ಅಲ್ಲದೆ, ಜಲಸಂಪತ್ತು ಕೂಡ ದೇಶದ ಜನತೆಯ ಅವಶ್ಯಕತೆಗಿಂತ ಹೆಚ್ಚಾಗಿ ಹೊರದೇಶಗಳಿಗೆ ಲಾಭಕ್ಕಾಗಿ ರಫ್ತಾಗುತ್ತಿದೆ. ಉದಾಹರಣೆಗೆ, ವಿಶ್ವದಲ್ಲಿ ಭಾರತವೇ 2ನೇಯ ದೊಡ್ಡ ರಫ್ತು ದೇಶವಾಗಿದ್ದು, 2008~09 ರ ಹೊತ್ತಿಗೆ 6,02,835 ಟನ್ ಜಲಪ್ರಾಣಿ ಸಂಪತ್ತನ್ನು ರಫ್ತು ಮಾಡಿದೆ.

ವಂಶವಾಹಿನ ತಳಿಗಳ ಪ್ರವೇಶ

ಜೈವಿಕ ತಂತ್ರಜ್ಞಾನ ಬಳಸಿ ರೋಗ~ನಿರೋಧಕ ಸತ್ವವುಳ್ಳ ಫಲವತ್ತತೆ ಮತ್ತು ಇಳುವರಿ ಹೆಚ್ಚಿಸುವ ವಂಶವಾಹಿನ ತಳಿಗಳನ್ನು ಬಹುರಾಷ್ಟ್ರೀಯ ಕಂಪನಿಗಳ ಆಣತಿಯ ಮೇರೆಗೆ ಆತುರಾತುರವಾಗಿ ಬಳಕೆಗೆ ತರಲು ಕೇಂದ್ರ ಸರ್ಕಾರ ಹೊರಟಿದೆ. ನಮ್ಮ ಆಹಾರ ವ್ಯವಸ್ಥೆ, ಆರೋಗ್ಯ ಮತ್ತು ಪರಿಸರ ಸಮತೋಲನದ ಮೇಲೆ ಇಂಥಹ ತಳಿಗಳು ಬೀರಬಹುದಾದ ಅಪಾಯಗಳ ಕುರಿತು ಇನ್ನಷ್ಟು ಪ್ರಯೋಗಗಳನ್ನು ನಡೆಸಿದ ನಂತರವಷ್ಟೇ ಇವುಗಳನ್ನು ಬಳಸಬೇಕು. ಜೈವಿಕ ಸುರಕ್ಷೆಯನ್ನು ಮೊದಲಿಗೆ ಖಾತರಿಪಡಿಸಿಕೊಳ್ಳಬೇಕು.

ಪರಿಸರ ಸಂರಕ್ಷಣೆಗಾಗಿ ಜನಾಂದೋಲನ

ಪರಿಸರದ ಸಮಸ್ಯೆಗಳ ಒಂದೊಂದು ಎಳೆಯನ್ನು ಹೂವಿನ ಎಸಳಿನಂತೆ ಕಿತ್ತುಕೊಂಡು ಕಾರ್ಪೊರೇಟ್ ಕೃಪಾಪೋಷಿತ ಸರ್ಕಾರೇತರ ಸಂಸ್ಥೆಗಳು ಜನರನ್ನು ವಿಭಜಿಸುತ್ತಿವೆ. ಪರಿಸರ ಸಮಸ್ಯೆ ಮತ್ತು ಅಭಿವೃದ್ಧಿಯನ್ನು ಜನಪರ ಹಿನ್ನೆಲೆಯಿಂದ ವಿಶ್ಲೇಷಿಸಿ ಪರಿಸರದ ಇವೆಲ್ಲ ಆಯಾಮಗಳ ಆಧಾರದ ಮೇಲೆ ಸಮಗ್ರ ಪರಿಸರ ಸಂರಕ್ಷಣೆಗಾಗಿ ಜನಾಂದೋಲನ ರೂಪಿಸಬೇಕಿದೆ. ಇಂಥಹ ಪರಿಸರ ಜನಾಂದೋಲನವನ್ನು ದುಡಿಯುವ ಜನತೆಯು ತನ್ನ ವಿಮೋಚನೆಗಾಗಿ ನಡೆಸುತ್ತಿರುವ ವಿಶಾಲ ಹೋರಾಟಗಳ ಜೊತೆ ಬೆಸೆಯಬೇಕಿದೆ. ■



ಗಣಿ ಧೂಳು

ಮಹೇಶ್ ಮನ್ನಪೂರ
ಮುಧೋಳ, ಕೊಪ್ಪಳ ಜಿಲ್ಲೆ

ಕುಂತೋರು ನಿಂತೋರು
ದೊಡ್ಡೋರು ಸಣ್ಣೋರು
ಮಕ್ಕಳು ಮರಿಗಳು ಕೇಳಿರಿ
ಮಕ್ಕಳು ಮರಿಗಳು ಕೇಳಿರಿ
ಭಾರತ ದೇಶದ
ಕಣ್ಣೀರ ಕಥೆಯನ್ನು
ಹಾಡುವೆವಿಂದು ಆಲಿಸಿರಿ ॥ ೧ ॥

ದುಡಿಯುವ ವರ್ಗದ
ದೀನ ದಲಿತರ
ಬಡವರ ಒಡಲಿನ ಬೆಂಕಿಯಿದು
ನಡು ಹಗಲ ನೆತ್ತಿಯ
ಸುಡು ಸುಡುವ ಸೂರ್ಯನೆ
ತಡವರಿಸಿ ನಿಂತ ದುಡಿಮೆಯಿದು ॥ ೨ ॥

ಹಗಲಿರುಳು ಎನ್ನದೆ
ರಕ್ತ ಬೆವರನೆ ಬಸಿದು
ಗಣಿಯ ಆಳಕ್ಕೂ ತುಂಬಿದೆವು
ಉಸಿರ ಉಸಿರಗೊಮ್ಮೆ
ಉಗುಳನ್ನೇ ನುಂಗುತ್ತ
ಗಣಿಧೂಳ ಕುಡಿಯುತ್ತ ಕೊರಗಿದೆವು ॥ ೩ ॥

ಹಸಿ ಹಸಿರು ಎಲೆಯಲ್ಲೂ
ಧೂಳನ್ನೇ ತುಂಬುತ್ತ
ಕಾಡನ್ನು ಕಡಿಯುತ ಕುಣಿದವರು
ಅರಳುವ ಹೂವಿನ
ಕತ್ತನ್ನು ಕೊಯ್ಯುತ
ಹಸಿ ಹಸಿ ನೆತ್ತರು ಸೆಕ್ಕಿದರು ॥ ೪ ॥

ಕುಡಿಯುವ ನೀರಲ್ಲೂ
ತಿನ್ನುವ ಕೂಳಲ್ಲೂ
ಧೂಳಿನ ಕಣಕಣ ಸೇರಿಹುವು
ಪಂಚಭೂತವೆಲ್ಲ
ಮಂಕಾಗಿ ಹೋದವು
ಇನ್ನೆಂತು ಜೀವನ ಅರಳುವುದು ॥ ೫ ॥

ಭೂ ತಾಯಿ ಒಡಲನ್ನೇ
ಬಗೆ ಬಗೆದು ತಗೆದು
ಪರದೇಶಕ್ಕೆಲ್ಲಾ ಮಾರಿದರು
ಗರಿ ಗರಿಯ ನೋಟಲ್ಲಿ
ಅರಮನೆ ಕಟ್ಟುವ
ದೇಶಕ್ಕೆ ದ್ರೋಹ ಬಗೆದವರು ॥ ೬ ॥

ನಾಡಿನ ಉದ್ದಗಲ
ರಕ್ಕಸರ ನರ್ತನ
ಭೂಮಿಯ ಕಬಳಿಸುತ ಸಾಗಿದರು
ಯಾರಪ್ಪನ ಆಸ್ತಿ
ಯಾರಪ್ಪನ ಪಾಸ್ತಿ
ತಿನ್ನುತ್ತ ಥರಕಿಯ ಹೊಡೆದವರು ॥ ೭ ॥

ಯಾರೇನು ಮಾಡುವರು
ಯಾರೇನು ಕೇಳುವರು
ನನ್ನದೇ ದರಬಾರು ಎಂದವರು
ಜೊಲ್ಲನ್ನು ಸುರಿಸುವ
ನಾಯಿಯ ಬಾಯಿಗೆ
ನೋಟಿನ ಕಂತೆ ಎಸೆದವರು ॥ ೮ ॥

ಏಳೇಳಿ ಜನರೆ
ಇನ್ನಾದರೂ ಏಳಿ
ಗಣಿಧಣಿಗೆ ಧಿಕ್ಕಾರ ಹೇಳೋಣ
ನಾಳಿನ ಮಕ್ಕಳು
ನಗುವನ್ನು ಬೀರಲು
ಅಕ್ರಮ ಗಣಿಗಳ ತಡೆಯೋಣ ॥ ೯ ॥ ■

ಜೀವಂತವಾಗಿವೆ ಅಸ್ಪೃಶ್ಯತಾ ಆಚರಣೆಗಳು ಹಳೆಯ ರೂಪಗಳಲ್ಲೂ ಹೊಸ ರೂಪಗಳಲ್ಲೂ


ಕೃಷ್ಣಪ್ಪ ಕೊಂಚಾಡಿ



ಕಾನೂನು ಶಾಸ್ತ್ರದ ಪ್ರಕಾರ ಯಾವುದೇ ಓರ್ವ ವ್ಯಕ್ತಿಗೆ ಶಿಕ್ಷೆ ವಿಧಿಸಬೇಕಾದರೆ ಸಂಬಂಧಪಟ್ಟ ವ್ಯಕ್ತಿಯಲ್ಲಿ "ಅಪರಾಧಿ ಕೃತ್ಯದ ಪೂರ್ವಯೋಜನೆ ಮೆದುಳಿನಲ್ಲಿ (Mens ria)" ರೂಪಣೆಯಾಗಿರಬೇಕು ಮತ್ತು ಆ ಯೋಜನೆಯನ್ನು "ವ್ಯವಸ್ಥಿತವಾಗಿ ಕಾರ್ಯಗೊಳಿಸಬೇಕು (Actus ria)". ಇವೆರಡು ಅಂಶಗಳು ಸಾಬೀತುಗೊಂಡರೆ ಅಪರಾಧಿಯ ಅಪರಾಧ ಸಾಬೀತು ಪಡಿಸಿದಂತಾಗುತ್ತದೆ. ಆದರೆ ಚಾರಿತ್ರಿಕ ಕಾಲದಿಂದಲೇ ದಲಿತ ಸಮುದಾಯಗಳು ತಾವು ಮಾಡದ ತಪ್ಪಿಗಾಗಿ ನಿರಂತರವಾಗಿ ಅಪಮಾನ ಮಾನಸಿಕ ಹಿಂಸೆಯಂತಹ ಶಿಕ್ಷೆ ಅನುಭವಿಸುತ್ತಿರುವ ಒಂದು ನೇರ ಸಾಮಾಜಿಕ ಪ್ರಕ್ರಿಯೆ ಅಸ್ಪೃಶ್ಯತಾ ಆಚರಣೆಯಾಗಿದೆ. ತಪ್ಪು ಮಾಡದೇ ಶಿಕ್ಷೆ ಅನುಭವಿಸುವ ವಿಶಿಷ್ಟ ಪ್ರಕ್ರಿಯೆ ಇದೊಂದೇ ಆಗಿದೆ. ತಾನು ಮಾಡದ ತಪ್ಪಿಗಾಗಿ ಶಿಕ್ಷೆ ಅನುಭವಿಸುವ ದಲಿತ ಸಮಾಜದ ಈ ನತದೃಷ್ಟ ಪರಿಸ್ಥಿತಿಯ ಬಗ್ಗೆ ಶ್ರೇಣೀಕೃತ ಸಮಾಜ ಎಂದೂ ಅಪರಾಧಿ ಮನೋಭಾವ ಹೊಂದಿಲ್ಲ ಅಥವಾ ಅಸ್ಪೃಶ್ಯತಾ ಆಚರಣೆ ಬಗ್ಗೆ ಸಾಮಾಜಿಕ ಮತ್ತು ನೈತಿಕ ಹೊಣೆಗಾರಿಕೆಯನ್ನು ಎಂದೂ ವಹಿಸಿಕೊಂಡಿಲ್ಲ. ಲಿಖಿತ ಸಂವಿಧಾನದ ಪಡಿಯಚ್ಚಿನಲ್ಲಿ ಅಲಿಖಿತ ಸಂವಿಧಾನದ ಕಾರುಬಾರು ನಡೆಯುತ್ತಿರುವ ಭಾರತದಲ್ಲಿ ಪ್ರಜಾಪ್ರಭುತ್ವ ನಾಗರೀಕ ಹಕ್ಕು, ಸಾಮಾಜಿಕ ನ್ಯಾಯ, ದಲಿತ ಸಬಲೀಕರಣ, ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು, ಕಾನೂನಿನ ಆಡಳಿತ ಇವೇ ಮೊದಲಾದುವುಗಳು ಅಸ್ಪೃಶ್ಯತಾ ಆಚರಣೆಯ ಹಿನ್ನೆಲೆಯಲ್ಲಿ ತನ್ನ ಮೌಲ್ಯವನ್ನು ಕಳೆದುಕೊಂಡು ಕೇವಲ ರಾಜಕೀಯ ಪರಿಭಾಷೆಗಳಾಗಿ ಮಾತ್ರ ಉಳಿದುಕೊಂಡಿವೆ. ಅಸ್ಪೃಶ್ಯತಾ ಆಚರಣೆಯ ವಿರುದ್ಧ 19ನೇ ಶತಮಾನದ ಸಮಾಜ ಸುಧಾರಣಾ ಚಳವಳಿಗಳು, 20ನೇ ಶತಮಾನದ ಜನಪರ ಹೋರಾಟಗಳು, ಕಾನೂನಿನ ಮೂಲಕ ನಿಷೇಧ ಮತ್ತು ಶಿಕ್ಷಾರ್ಹತೆಯ ಪರಿಚೇದ್ಧಗಳಿದ್ದರೂ, ಪ್ರಸ್ತುತ ಸಮಕಾಲೀನ ಸನ್ನಿವೇಶದಲ್ಲಿ ಸಾಮಾಜಿಕ ನ್ಯಾಯದ ಹೋರಾಟಗಳು ಪ್ರತಿಕ್ರಿಯೆ ನೀಡುತ್ತಿದ್ದರೂ ಇವುಗಳಾವುದೂ ನಿರೀಕ್ಷಿತ ಫಲವನ್ನು ನೀಡುತ್ತಿಲ್ಲ. ಸಂವಿಧಾನದ ಪರಿಚೇದ್ಧದ 17ನೇ ವಿಧಿ ಹಾಗೂ ಇತರೆ ಶಿಕ್ಷಾರ್ಹ ಅಪರಾಧ ಪರಿಚೇದ್ಧಗಳನ್ನು ಒಳಗೊಂಡಿರುವ ಕಾನೂನುಗಳಿದ್ದರೂ ಇವುಗಳು ಯಾವುದೇ ರೀತಿಯಲ್ಲಿ ಅಸ್ಪಶ್ರ್ಯತಾ ಆಚರಣೆಯ ಕದಂಬ ಬಾಹುಗಳನ್ನು ತಾತ್ತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಬಗ್ಗು ಬಡಿಯುವಲ್ಲಿ ಗಂಭೀರವಾದ ಸಾಧನೆಗಳನ್ನು



ಗ್ರಾಮೀಣ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಆಚರಣೆಗಳು ಒಳಗೊಂಡಂತೆ ಮಹಾನಗರ ಪೇಟೆ ಪಟ್ಟಣಗಳಲ್ಲಿ ಅಷ್ಟು ಮಾತ್ರವೇ ಅಲ್ಲದೆ ವಾಣಿಜ್ಯ ಮತ್ತು ಕೈಗಾರಿಕಾ ನಗರಗಳಲ್ಲೂ ಅಸ್ಪಶ್ಯತೆ ಜೀವಂತವಿದೆ. ಗ್ರಾಮೀಣ ಪ್ರದೇಶ ಹೊರತು ಪಡಿಸಿದಂತೆ ಉಳಿದಂತಹ ಮಹಾ ನಗರಗಳಲ್ಲಿ ಅಸ್ಪಶ್ಯತಾ ಆಚರಣೆಗಳು ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ಹೊಸ ಸ್ವರೂಪ ಮತ್ತು ಆಯಾಮವನ್ನು ಪಡೆದುಕೊಂಡಿವೆ. ಇವನ್ನು ಚಾಲ್ತಿಯಲ್ಲಿರುವ ಕಾನೂನಿನ ವ್ಯಾಖ್ಯೆಯ ಅಡಿಯಲ್ಲಿ ಅದು ಅಸ್ಪಶ್ಯತಾ ಆಚರಣೆ ಎಂದು ನಮೂದಿಸಲು ತಾಂತ್ರಿಕವಾಗಿ ಬರುವುದಿಲ್ಲ. ಆದರೆ ಈ ರೀತಿಯ ಸಂದಿಗ್ಧತೆಗೆ ಒಳಗಾದ ದಲಿತ ವ್ಯಕ್ತಿಗಳಿಗೆ ಮಾತ್ರವೇ ಅಂತಹ ಸಂದರ್ಭಗಳು, ಸನ್ನಿವೇಶಗಳು ನಿರ್ಮಿಸುವ ಮನೋಸ್ಥಿತಿಯಲ್ಲಿ ಇದು ಅನುಭವಕ್ಕೆ ಬರುತ್ತದೆ.



ಮಾಡಿಲ್ಲವೆಂಬುದು ಹೆಚ್ಚುತ್ತಿರುವ ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳಿಂದ ಅಭಿವ್ಯಕ್ತವಾಗುತ್ತದೆ. ಇದೇ ಸಮಯದಲ್ಲಿ ಅಸ್ಪೃಶ್ಯತೆ, ಜಾತಿ ಭೇದದ ವಿರುದ್ಧದ 19ನೇ ಶತಮಾನದ ಸಮಾಜ ಸುಧಾರಣಾ ಚಳವಳಿಗಳು, 20ನೇ ಶತಮಾನದ ಜನಪರ ಹೋರಾಟಗಳು ಮತ್ತು ಪ್ರಸ್ತುತ ಸಮಕಾಲೀನ ಸನ್ನಿವೇಶದ ಸಾಮಾಜಿಕ ನ್ಯಾಯದ ಹೋರಾಟಗಳು ಅಪಮಾನಕ್ಕೆ ಒಳಗಾದ ಸಮುದಾಯದ ನೇರ ಪ್ರತಿಕ್ರಿಯೆಯಾಗಿದ್ದರೂ ಗಂಭೀರವಾದ ಅಸ್ಪೃಶ್ಯತಾ ಸವಾಲುಗಳು ಇನ್ನೂ ಸವಾಲುಗಳಾಗಿಯೇ ಇವೆ.

(2)

ಸಾಮಾಜಿಕ ಅನಿಷ್ಟಗಳಿಗೂ ರಾಜಕೀಯ ಹೋರಾಟಗಳಿಗೂ ಯಾವುದೇ ಸಂಬಂಧವಿಲ್ಲವೆಂಬ ವಾದ ಈಗ ಪ್ರಚಲಿತದಲ್ಲಿರುವಾಗಲೇ ಸಮಕಾಲಿನ ಸನ್ನಿವೇಶದಲ್ಲಿ ಅಸ್ಪೃಶ್ಯತಾ ಸಮಸ್ಯೆಯ ಬಗ್ಗೆ ರಾಜಕೀಯ ದೃಷ್ಟಿಕೋನವನ್ನು ನೀಡಿ ಇದನ್ನು ಜ್ವಲಂತ ಸಮಸ್ಯೆಯಾಗಿ ಬಿಂಬಿಸಿದ್ದು ಸಿ.ಪಿ.ಐ(ಎಂ) ಮತ್ತು ಕರ್ನಾಟಕದ ದಲಿತ ಹಕ್ಕುಗಳ ಸಮಿತಿಯಂತೆಯೇ ಇರುವ ತಮಿಳುನಾಡು ಮತ್ತು ಆಂಧ್ರಪ್ರದೇಶದ ಸಮಾನ ಮನಸ್ಕ ದಲಿತ ಸಂಘಟನೆಗಳು. ಇವೆರಡು ಸಂಘಟನೆಗಳು ಆಯಾಯ ರಾಜ್ಯಗಳಲ್ಲಿ ಪ್ರಪಥಮ ಬಾರಿಗೆ ಆ ರಾಜ್ಯಗಳಲ್ಲಿ ರಾಜಾರೋಷವಾಗಿ ಆಚರಿಸಲಾಗುತ್ತಿರುವ 150ಕ್ಕೂ ಮಿಕ್ಕಿದ ವಿವಿಧ ವಿಧವಾದ ಅಸ್ಪೃಶ್ಯತಾ ಆಚರಣೆಗಳನ್ನು ಪಟ್ಟಿ ಮಾಡಿವೆ. ಪಟ್ಟಿ ಮಾಡಿರುವುದು ಮಾತ್ರವಲ್ಲದೆ ತಮಿಳುನಾಡಿನಲ್ಲಿ ಕುಖ್ಯಾತಿಯ ಜಾತಿ ಗೋಡೆ ಒಡೆಯುವಂತಹ ಐತಿಹಾಸಿಕ ಹೋರಾಟಗಳನ್ನು ರೂಪಿಸಿದೆ.

ಈ ಹೋರಾಟ ಮತ್ತು ಅನುಭವಗಳ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಸಹ ದಲಿತ ಹಕ್ಕುಗಳ ಸಮಿತಿ 4 ವರ್ಷಗಳ ಹಿಂದೆ ರಾಜ್ಯದಲ್ಲೂ ವಿವಿಧೆಡೆಗಳಲ್ಲಿ ಆಚರಣೆಯಲ್ಲಿರುವ ಅಸ್ಪೃಶ್ಯತಾ ಆಚರಣೆಗಳನ್ನು ಗುರುತಿಸಿ ಪಟ್ಟಿಮಾಡುವ ಪ್ರಯತ್ನವನ್ನು ನಡೆಸಿತು. ಕರ್ನಾಟಕದಲ್ಲಿ ಸರಿಸುಮಾರು 53 ನಮೂನೆಯ ಅಸ್ಪೃಶ್ಯತಾ ಆಚರಣೆಗಳು ಜ್ಯಾರಿಯಲ್ಲಿರುವುದನ್ನು ಪಟ್ಟಿ ಮಾಡಲಾಯಿತು. ಕರ್ನಾಟಕದಲ್ಲಿ ರುವ ಆಚರಣೆಗಳ ಪ್ರಮಾಣವನ್ನು ಗಮನಿಸಿದಾಗ ತಮಿಳುನಾಡು, ಆಂಧ್ರಪ್ರದೇಶಗಳಿಗಿಂತ ಕಡಿಮೆ ಸಂಖ್ಯೆಯಲ್ಲಿ ಅಸ್ಪೃಶ್ಯತಾ ಆಚರಣೆಗಳು ಇವೆ ಎಂಬ ಅಭಿಪ್ರಾಯ ಸಹಜವಾಗಿ ಮೂಡಿಬರುತ್ತದೆ. ಆದರೆ ಇದು ಸರಿಯಾದ ಅಭಿಪ್ರಾಯವಲ್ಲ. ಏಕೆಂದರೆ ಕರ್ನಾಟಕದಲ್ಲಿ ನಡೆಸಲಾಗಿರುವ ಸರ್ವೆ ಕೇವಲ ಪ್ರಾತಿನಿಧಿಕ ಸ್ವರೂಪದ್ದಾಗಿದೆ. ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ನಡೆಸಿದ್ದಂತೆ ವ್ಯಾಪಕವಾದ ತಯಾರಿ, ಸಿದ್ದತೆ ಮತ್ತು ಸುವ್ಯವಸ್ಥಿತವಾದ ಸಂಘಟನಾ ಜಾಲ, ಸೂಕ್ಮವಾದ ವಿಚಾರಗಳನ್ನು ಗ್ರಹಿಸುವ ತಾತ್ವಿಕತೆ, ಇವೇ ಮುಂತಾದುವುಗಳ ಇತಿಮಿತಿ ಯೊಡನೆ ಸರ್ವೆಯನ್ನು ಮಾಡಲಾಗಿತ್ತು. ಇದರ ಬದಲಾಗಿ ಸಮಗ್ರ ಅಧ್ಯಯನವನ್ನು ವಿಕೇಂದ್ರಿಕರಣ ನೆಲೆಯಲ್ಲಿ ವರ್ಷದ ವಿವಿಧ ಸಂದರ್ಭಗಳಲ್ಲಿ ಭೌಗೋಳಿಕ ನೆಲೆಗಳಲ್ಲಿ ಭಿನ್ನತೆಗಳನ್ನು ಪರಿಗಣನೆಗೆ ತಂದುಕೊಂಡು ಸರ್ವೆ ನಡೆಸಿದ್ದೇ ಆದಲ್ಲಿ ಮೇಲ್ಕಂಡ ಎರಡು ರಾಜ್ಯಗಳಿಗಿಂತ ಹೆಚ್ಚಿನ ಪ್ರಮಾಣದ ಅಸ್ಪೃಶ್ಯತಾ ಆಚರಣೆಗಳು ಜ್ಯಾರಿಯಲ್ಲಿರುವುದನ್ನು ಗುರುತಿಸ ಬಹುದು. ಅಸ್ಪೃಶ್ಯತಾ ಆಚರಣೆಗೆ ಭೌಗೋಳಿಕ ನೆಲೆಗಟ್ಟು ಮತ್ತು ಋತುಮಾನಗಳ ಸ್ವರೂಪವಿದೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ.

(3)

ಜಾಗತೀಕರಣದ ಈ ಸಂದರ್ಭದಲ್ಲಿ ಎಲ್ಲಾ ನೋವುಗಳನ್ನು ಮರೆಯಬೇಕು; ಶೋಷಣೆಯನ್ನು ಸಹಿಸಬೇಕು; ಅನ್ಯಾಯ ದೌರ್ಜನ್ಯಗಳು ಸಹಜ ಮತ್ತು ಅನಿವಾರ್ಯ ಎಂಬ ಸೈದ್ಧಾಂತಿಕತೆಯನ್ನು ಕಟ್ಟಿಕೊಡುವ ಕಾರ್ಪೊರೇಟ್–ಬಂಡವಾಳಶಾಹಿಗಳು, ಪ್ರತಿಗಾಮಿಗಳು, ಜಾತಿವಾದಿಗಳು, ಯಥಾಸ್ಥಿತಿವಾದಿಗಳು, ಊಳಿಗಮಾನ್ಯ ಜಮಿನ್ದಾರಿಗಳು ಇದೇ ಮಾನದಂಡವನ್ನು ಅಸ್ಪೃಶ್ಯತೆ ಮತ್ತು ಜಾತಿಭೇದದ ಘಟನೆಗಳಿಗೂ ಅನ್ವಯಿಸಬೇಕೆಂದು ಹೇಳುತ್ತವೆ. ಮಾತ್ರವಲ್ಲದೆ ಜಾತಿಭೇದ, ಅಸ್ಪೃಶ್ಯತೆಯ ಬಗ್ಗೆ ಚರ್ಚೆ, ವಿಮರ್ಶೆ, ಚಳವಳಿಗಳು ನಡೆದರೆ ಹೌಹಾರಿ ಬೀಳುತ್ತವೆ. ಅವರ ಪ್ರಕಾರ ಇವುಗಳೆಲ್ಲ ಕಣ್ಮರೆಯಾಗಿ ಇತಿಹಾಸದ ಬುಟ್ಟಿಗೆ ಸೇರಿ ಹೋಗಿದೆ ಎಂಬ ನಂಬುವಂಚಕತನವನ್ನು ಭೋಧಿಸುತ್ತಿವೆ.

ಇವರ ತುತ್ತೂರಿ ವಾದಕ ಮಾಧ್ಯಮಗಳು ಮತ್ತು ಪ್ರತಿಪಾದಕರು, ಬುದ್ಧಿಜೀವಿಗಳು, ಪ್ರಗತಿಪರರು ಎಡಪಂಥಿಯರು ಅನಗತ್ಯವಾಗಿ ಕ್ಷುಲ್ಲಕ ವಿಷಯಗಳನ್ನು ವೈಭವೀಕರಿಸಿ ಸಮಾಜವನ್ನು ಒಡೆಯುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಸಮಕಾಲೀನ ಸಮಾಜದಲ್ಲಿ ಯುವಜನರಿಗೆ ಅಸ್ಪೃಶ್ಯತೆಯ ಅನುಭವವಾಗಲೀ, ಕಲ್ಪನೆಯಾಗಲೀ ಇಲ್ಲದಿರುವಾಗ ಭಯಾನಕ ಸನ್ನಿವೇಶ ವನ್ನು ಸೃಷ್ಟಿಸುತ್ತಿದ್ದಾರೆ ಎಂಬ ವಾದವನ್ನು ಮುಂದಿಡುತ್ತಿದ್ದಾರೆ. ಭಾರತದಲ್ಲಿ ಜ್ಯಾರಿಯಲ್ಲಿರುವ ಬಿಗಿಯಾದ ವಿವಿಧ ಕಾನೂನುಗಳಿಂದಾಗಿ ಮತ್ತು ಸಾಮಾಜಿಕ ಜಾಗೃತಿಯಿಂದಾಗಿ ಅಸ್ಪೃಶ್ಯತಾ ಆಚರಣೆಯು ತನ್ನ ಈ ಮೊದಲಿನ ತೀವ್ರತೆಯನ್ನು ಕಳೆದುಕೊಂಡಿದೆ ಎಂಬ ಅಭಿಪ್ರಾಯವನ್ನು ವ್ಯವಸ್ಥಿತವಾಗಿ "ಉತ್ಪಾದಿಸಿ" ಅವರ ಯೋಜನಾ ಬದ್ಧವಾದ ವಿತರಣಾ ಜಾಲದ ಮೂಲಕ ವ್ಯಾಪಕವಾಗಿ ಹಂಚಲಾಗುತ್ತಿದೆ.

ಇದು ಎಂತಹ ಸಂದರ್ಭವನ್ನು ನಿರ್ಮಿಸಿದೆ ಎಂದರೆ ಮೇಲ್ನೋಟಕ್ಕೆ ಇದರಲ್ಲಿ ಸತ್ಯಾಂಶವಿದೆ ಎಂದು ಜನ ನಂಬುವಂತಹುದು ಸಹಜವೇ ಆಗಿದೆ. ವಿಚಿತ್ರವೆಂದರೆ ಜಾಗತೀಕರಣದ ಕೊಳ್ಳುಬಾಕ ಸಂಸ್ಕೃತಿ ಮತ್ತು ವ್ಯಕ್ತಿವಾದದ ಪ್ರಭಾವಕ್ಕೆ ಒಳಗಾಗಿರುವ ಶಿಕ್ಷಿತ ಮಧ್ಯಮ ವರ್ಗದ ದಲಿತರೂ ಸಹ ಇದೇ ವಾದವನ್ನು ಬೆಂಬಲಿಸುತ್ತಿದ್ದಾರೆ. ತನ್ಮೂಲಕ ವಿವೇಕ ಶೂನ್ಯತೆಗೆ ದಲಿತ ಸಮುದಾಯವೂ ಬಲಿಯಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆಯಾಗಿದೆ.

ಒಂದು ವರ್ಗ ವ್ಯವಸ್ಥಿತವಾಗಿ ಪ್ರಸರಿಸುತ್ತಿರುವ ಈ ವಾದದಲ್ಲಿ ಸತ್ಯಾಂಶವಿದೆಯೇ? ಖಂಡಿತವಾಗಿಯೂ ಇದು ವಾಸ್ತವವಲ್ಲ. ಏಕೆಂದರೆ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಆಚರಣೆಗಳು ಒಳಗೊಂಡಂತೆ ಮಹಾನಗರ ಪೇಟೆ ಪಟ್ಟಣಗಳಲ್ಲಿ ಅಷ್ಟು ಮಾತ್ರವೇ ಅಲ್ಲದೆ ವಾಣಿಜ್ಯ ಮತ್ತು

ಶುಭಾಶಯಗಳೊಂದಿಗೆ



ಡಿ. ಕೆ. ಹಳ್ಳಿ ಗ್ರಾಮ ಪಂಚಾಯತಿ,

ಬಂಗಾರಪೇಟೆ ತಾಲೂಕು, ಕೋಲಾರ ಜಿಲ್ಲೆ

ಅಧ್ಯಕ್ಷರು:
ಶ್ರೀಮತಿ ಮಂಜುಳ

ಉಪಾಧ್ಯಕ್ಷರು:
ಶ್ರೀಮತಿ ಪದ್ಮಾ

ಸದಸ್ಯರು:

ಶ್ರೀ ಜಿ.ಡಿ.ಶ್ರೀನಿವಾಸಗೌಡ, ಶ್ರೀಮತಿ ಫ್ಲೋರಾ ಅಚ್ಯುತ, ಶ್ರೀಮತಿ ನಾರಾಯಣಮ್ಮ,
ಶ್ರೀ ಜಿ.ಗಣೇಶನ್, ಶ್ರೀಮತಿ ಶಾಂತಮ್ಮ, ಶ್ರೀ ಡಿ.ವಿ.ರಘುರಾಂ, ಶ್ರೀಮತಿ ಯಲ್ಲಮ್ಮ,
ಶ್ರೀಮತಿ ಎನ್.ಭಾಗ್ಯಮ್ಮ, ಶ್ರೀ ಎಲ್. ಚಂದ್ರಶೇಖರ್, ಶ್ರೀ ಎಂ.ದಶರಥನ್, ಶ್ರೀ ನಾರಾಯಣಪ್ಪ,
ಶ್ರೀ ಸಿ.ಮೋಹನ್ ಕುಮಾರ್, ಶ್ರೀಮತಿ ರತ್ನಮ್ಮ, ಶ್ರೀ ಎಂ.ಗೋಪಿನಾಥ್, ಶ್ರೀ ನಾಗರಾಜ್,
ಶ್ರೀ ಕೆ.ಲಕ್ಷ್ಮಣ್‌ಕುಮಾರ್, ಶ್ರೀಮತಿ ಸುಜಾತಮ್ಮ, ಶ್ರೀಮತಿ ಆರ್.ಶ್ರೀದೇವಿ, ಶ್ರೀ ಮುನಿಯಪ್ಪ,
ಶ್ರೀಮತಿ ಕೆ.ರಾಧಮ್ಮ, ಶ್ರೀ ಡಿ.ಆರ್.ವಿಜಯಕುಮಾರ್, ಶ್ರೀ ಸಿ.ನಾಗರಾಜ್

ಸಿ.ವಿ.ಶಂಕರ್	ಮುನಿಯಪ್ಪ	ಎನ್.ಕೇಶವರೆಡ್ಡಿ	ಮುನಿರತ್ನಂ
ಪಂಚಾಯತಿ ಅಭಿವೃದ್ಧಿ ಅಧಿಕಾರಿ	ಕಾರ್ಯದರ್ಶಿ	ಲೆಕ್ಕ ಸಹಾಯಕರು	ಬಿಲ್ ಕಲೆಕ್ಟರ್

ಶ್ರೀನಿವಾಸ
ಕಂಪ್ಯೂಟರ್ ಆಪರೇಟರ್



ಅಸ್ಪೃಶ್ಯತೆಯ ಗೋಡೆ



ಕೈಗಾರಿಕಾ ನಗರಗಳಲ್ಲೂ ಅಸ್ಪೃಶ್ಯತೆ ಜೀವಂತವಿದೆ. ಗ್ರಾಮೀಣ ಪ್ರದೇಶ ಹೊರತು ಪಡಿಸಿದಂತೆ ಉಳಿದಂತಹ ಮಹಾ ನಗರಗಳಲ್ಲಿ ಅತ್ಯಂತ ಮೇಲ್ಮಟ್ಟದ ತಾಂತ್ರಿಕತೆಯ, ನಯ ನಾಜೂಕಿನ ಮತ್ತು ಅಷ್ಟೇ "ಶಿವಿತ"ದ ಅಸ್ಪೃಶ್ಯತಾ ಆಚರಣೆಗಳು ಚಾಲ್ತಿಯಲ್ಲಿವೆ. ಇಲ್ಲಿ ಅಸ್ಪೃಶ್ಯತಾ ಆಚರಣೆಗಳು ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ಹೊಸ ಸ್ವರೂಪ ಮತ್ತು ಆಯಾಮವನ್ನು ಪಡೆದುಕೊಂಡಿವೆ. ಇಲ್ಲಿ ಆಚರಿಸಲ್ಪಡುವ ಅಸ್ಪೃಶ್ಯತಾ ಆಚರಣೆಗಳನ್ನು ಮೇಲ್ಮಟ್ಟದಲ್ಲಿ ವಿಶ್ಲೇಷಿಸಿದಾಗ ಚಾಲ್ತಿಯಲ್ಲಿರುವ ಕಾನೂನಿನ ವ್ಯಾಖ್ಯೆಯ ಅಡಿಯಲ್ಲಿ ಅದು ಅಸ್ಪೃಶ್ಯತಾ ಆಚರಣೆ ಎಂದು ನಮೂದಿಸಲು ತಾಂತ್ರಿಕವಾಗಿ ಬರುವುದಿಲ್ಲ. ಆದರೆ ಈ ರೀತಿಯ ಸಂದಿಗ್ಧತೆಗೆ ಒಳಗಾದ ದಲಿತ ವ್ಯಕ್ತಿಗಳಿಗೆ ಮಾತ್ರವೇ ಅಂತಹ ಸಂದರ್ಭಗಳು, ಸನ್ನಿವೇಶಗಳು ನಿರ್ಮಿಸುವ ಮನೋಸ್ಥಿತಿಯಲ್ಲಿ ಅಸ್ಪೃಶ್ಯತೆಯು ಅನುಭವಕ್ಕೆ ಬರುತ್ತದೆ.

(4)

ಅಸ್ಪೃಶ್ಯತೆ ಎಂದರೆ ಭೇದಭಾವದ ವರ್ತನೆ, ಜಾತಿ ನಿಂದನೆ, ಮಡಿವಂತಿಕೆ, ಬಾವಿ, ಕೆರೆ, ಮನೆಗಳಿಗೆ ಪ್ರವೇಶಿಸಲು ಅನುಮತಿ ನೀಡದೆ ಅವಮಾನ, ಪಂಕ್ತಿಭೇದ, ಹೊಟೇಲ್‌ಗಳಲ್ಲಿ ಎರಡು ಗ್ಲಾಸ್ ಪದ್ಧತಿ, ಕ್ಷೌರ ಮಾಡಲು ನಕಾರ ಇವೇ ಮೊದಲಾದುವುಗಳೆಂದು ಸಾಮಾನ್ಯವಾಗಿ ಜನತೆ ಭಾವಿಸುತ್ತದೆ. ಆದರೆ ಇವುಗಳನ್ನು ಹೊರತಾಗಿಯೂ ವಿವಿಧ ಸಂದರ್ಭ ಸನ್ನಿವೇಶಗಳಲ್ಲಿ ಮಾನಸಿಕವಾಗಿ ಅಸ್ಪೃಶ್ಯತೆಯು ಕಹಿ ಅನುಭವಗಳ ಸನ್ನಿವೇಶ ಉದ್ದೇಶ ಪೂರ್ವಕವಾಗಿ ನಿರ್ಮಾಣ ವಾಗುತ್ತದೆ ಎಂಬುದನ್ನು ಗುರುತಿಸಬೇಕಾಗಿದೆ ಮತ್ತು ಇದನ್ನು ಅಸ್ಪೃಶ್ಯತೆಯು ಪರಿಕಲ್ಪನೆಯಡಿಯಲ್ಲಿ ತರಬೇಕಾಗಿದೆ.

ಸಮಕಾಲೀನ ಸನ್ನಿವೇಶದಲ್ಲಿ ಎಲ್ಲೆಡೆಯಲ್ಲೂ ಹಿಂದುಳಿದ ಜಾತಿಗಳಿಂದ ಹಿಡಿದು ಸಾಮಾಜಿಕವಾಗಿ ಆರ್ಥಿಕವಾಗಿ ಮುಂದುವರಿದ ಜಾತಿ/ಸಮುದಾಯಗಳವರೆಗೆ, ದಲಿತ ಸಮುದಾಯಗಳು ಸೇರಿದಂತೆ ಜಾತಿ ಸಮ್ಮೇಳನಗಳ ವಿರಾಟ ದರ್ಶನ ನಡೆಯುತ್ತದೆ. ಈ ಸಮ್ಮೇಳನಗಳ ತಾತ್ವಿಕತೆಯಾದರೂ ಪ್ರಶ್ನಾರ್ಹವಾಗಿದೆ. ತಮ್ಮ ಜಾತಿ ಸಮುದಾಯಗಳನ್ನು ಪೌರಾಣಿಕ, ಧಾರ್ಮಿಕ ಐತಿಹ್ಯಗಳೊಂದಿಗೆ ಕಪೋಲ ಕಲ್ಪಿತ ಸಂಬಂಧಗಳನ್ನು ಪೋಣಿಸಿ ತಮ್ಮ ತಮ್ಮ ಜಾತಿಗಳು ಶ್ರೇಷ್ಠ ಪರಂಪರೆಯ ವಾರೀಸುದಾರರೆಂಬ ಹುಂಬತನವನ್ನು ಪ್ರಜ್ಞಾಪೂರ್ವಕವಾಗಿ ಬಿತ್ತಿ ಜಾತೀಯ ಅಮಲಿನಲ್ಲಿ ಓಲಾಡುವಂತೆ ಮಾಡುವುದೇ ಇದರ ಬಂಡವಾಳವಾಗಿದೆ.

ಒಂದು ಜಾತಿಯ ಶ್ರೇಷ್ಠ ಸ್ಥಾನಮಾನದ ಕಲ್ಪನೆ ಎಂದರೆ ಉಳಿದೆಲ್ಲ ಜಾತಿ/ಸಮುದಾಯಗಳು ತನಗಿಂತ ಕೀಳು ಎಂಬಂತಹ ಕಲ್ಪನೆ ಸಹಜವಾಗಿಯೇ ಉಂಟಾಗುತ್ತದೆ. ತನ್ಮೂಲಕ ಜಾತಿ–ಭೇದಕ್ಕೆ ಅನಿವಾರ್ಯವಾಗಿ ಶಾಶ್ವತ ಸ್ಥಾನ ಕಲ್ಪಿಸಲಾಗುತ್ತದೆ. ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ ಎಂಬ ಅಮಾನವೀಯ ಮನೋಭಾವ ರಾರಾಜಿಸಲು ಕಾರಣವಾಗುವ ಜಾತಿ ಸಮಾವೇಶ, ಸಂಘಟನೆಗಳ ಭರಾಟೆಯಲ್ಲಿ ಸಹಜವಾಗಿಯೇ ತುಳಿತಕ್ಕೊಳಗಾಗಿರುವ ಅತೀ ಕೆಳ ಸ್ತರದಲ್ಲಿರುವ ಶೋಷಿತ ಜಾತಿ/ಸಮುದಾಯಗಳ ಬಗ್ಗೆ ಸಹಜವಾಗಿಯೇ ತನಗಿಂತ ಕೀಳು ಎಂಬ ಅಸ್ಪೃಶ್ಯತಾ ಭಾವನೆಗಳೇ 'ಕ್ರಿಯಾಶೀಲ ಉಡುಗೊರೆ'ಗಳಾಗುತ್ತವೆ.

> ಸಾಮಾಜಿಕ ಅನಿಷ್ಟಗಳಿಗೂ ರಾಜಕೀಯ ಹೋರಾಟಗಳಿಗೂ ಯಾವುದೇ ಸಂಬಂಧವಿಲ್ಲ ಎಂಬ ವಾದ ಈಗ ಪ್ರಚಲಿತದಲ್ಲಿರುವಾಗಲೇ ಸಮಕಾಲಿನ ಸನ್ನಿವೇಶದಲ್ಲಿ ಅಸ್ಪೃಶ್ಯತಾ ಸಮಸ್ಯೆಯ ಬಗ್ಗೆ ರಾಜಕೀಯ ದೃಷ್ಟಿಕೋನವನ್ನು ನೀಡಿ ಇದನ್ನು ಜ್ವಲಂತ ಸಮಸ್ಯೆಯಾಗಿ ಬಿಂಬಿಸಿದ್ದು ಸಿ.ಪಿ.ಐ(ಎಂ) ಮತ್ತು ಕರ್ನಾಟಕದ ದಲಿತ ಹಕ್ಕುಗಳ ಸಮಿತಿಯಂತೆಯೇ ಇರುವ ತಮಿಳುನಾಡು ಮತ್ತು ಆಂಧ್ರಪ್ರದೇಶದ ಸಮಾನ ಮನಸ್ಕ ದಲಿತ ಸಂಘಟನೆಗಳು.

ಆದುದರಿಂದ ಜಾತಿ ಸಮಾವೇಶಗಳು ಯಾವತ್ತೂ ಮಾನವತೆಯ ಹರಿಕಾರನಾಗಲು ಸಾಧ್ಯವಿಲ್ಲ. ಅದೆಂದೂ ವಿಮೋಚನೆಯ ಅಸ್ತ್ರವಾಗಲಾರದು. ಅದೊಂದು ಶೋಷಣೆಯ ಮುಂದುವರಿಕೆಯ ಭಾಗವಾಗಿರುತ್ತದೆ. ಯಥಾಸ್ಥಿತಿಯ ಮುಂದುವರಿಕೆಯನ್ನು ಬಯಸುವ ಸಾಧನವಾಗಿದೆ.

(5)

ಆದುದರಿಂದ ಅಸ್ಪೃಶ್ಯತಾ ಆಚರಣೆಯ ಮುಂದುವರಿಕೆಗೆ ಜಾತಿ ಸಂಘಟನೆಗಳ ಕೊಡುಗೆಯನ್ನು ಗಮನಿಸಬೇಕಾಗಿದೆ. ಜಾತಿ ಸಂಘಟನೆ–ಮುಂದುವರಿದ ಜಾತಿಗಳದ್ದೇ ಆಗಿರಲಿ ಅಥವಾ ಹಿಂದುಳಿದ ಜಾತಿಗಳದ್ದೇ ಆಗಿರಲಿ ಅಥವಾ ಶೋಷಿತ ಜಾತಿಗಳದ್ದೇ ಆಗಿರಲಿ

ಅವೆಲ್ಲವುಗಳು ಅಸ್ಪೃಶ್ಯತೆಯಂತಹ ಅಮಾನವೀಯ ಆಚರಣೆಗೆ ತಮ್ಮ ತಮ್ಮ ಪಾಲಿನ ಕೊಡುಗೆ ಕೊಟ್ಟೇ ಕೊಡುತ್ತವೆ. ಅಸ್ಪೃಶ್ಯತೆಯನ್ನು ವಿರೋಧಿಸುವವರೂ ಜಾತಿ ಸಂಘ, ಸಮ್ಮೇಳನಗಳನ್ನು ಅಷ್ಟೇ ಬಲವಾಗಿ ವಿರೋಧಿಸಲು ತಯಾರಿಲ್ಲದಿರುವುದೊಂದು ವಿಪರ್ಯಾಸವಾಗಿದೆ. ಆದುದರಿಂದ ಬಲವಾದ ತಾತ್ವಿಕತೆಯಿಂದ ಮಾತ್ರ ಈ ಸಾಮಾಜಿಕ ಪಿಡುಗಿಗೆ ಉತ್ತರ ಕೊಡಲು ಸಾಧ್ಯ ಎಂಬುದು ಶ್ರುತವಾಗುತ್ತದೆ.

ಅಸ್ಪೃಶ್ಯತಾ ಆಚರಣೆಯು ಕಾನೂನು ಪ್ರಕಾರ ಶಿಕ್ಷಾರ್ಹವಾಗಿದ್ದರೂ ಈ ತನಕದ ಅನುಭವ ಕೇವಲ ಕಾನೂನಿನ ಚೌಕಟ್ಟಿನಲ್ಲಿ ಮಾತ್ರ ಇದನ್ನು ತಡೆಯಲು ಸಾಧ್ಯವಿಲ್ಲವೆಂಬುದನ್ನು ತೋರಿಸಿ ಕೊಡುತ್ತದೆ. ಬಹುಸ್ತರೀಯ ವಿಶಾಲ ವ್ಯಾಪ್ತಿಯ ಆಂತರಾವುಗಳೊಂದಿಗೆ ನಡೆಯುವ ಸಂಘರ್ಷ ಅನಿವಾರ್ಯವಾಗಿದೆ. ಕಾನೂನಿನ ಮೂಲಕ ಅಸ್ಪೃಶ್ಯತಾ ಆಚರಣೆಗಳನ್ನು ತಡೆಯಲು ಹಾಗೂ ಇವೆಲ್ಲವನ್ನು ಸಾಬೀತು ಪಡಿಸಲು ಗಂಭೀರವಾದ ಅಡೆತಡೆಗಳು ಇವೆ. ಈ ಅಡೆತಡೆಗಳು ಕಾನೂನಿನ ವ್ಯಾಪ್ತಿಯಿಂದ ಹೊರತಾಗಿಯೂ ಅಸ್ತಿತ್ವದಲ್ಲಿರುತ್ತವೆ. ಅದೇ ರೀತಿ ಬಹಳಷ್ಟು ಅಸ್ಪೃಶ್ಯತಾ ಆಚರಣೆಗಳು ಮನೋಸ್ಥಿತಿಯ ಮಟ್ಟದಲ್ಲಿರುತ್ತವೆ. 'ಭಾವನಾತ್ಮಕ' ನೆಲೆಯಲ್ಲಿ ನಿರ್ಮಿತವಾಗುವ ಅಸ್ಪೃಶ್ಯತಾ ಆಚರಣೆಯ ಸನ್ನಿವೇಶವನ್ನು ಅಸ್ಪೃಶ್ಯತೆ ಎಂದು ನಮ್ಮ ಕಾನೂನು ಮತ್ತು ನಾಗರೀಕ ಸಮುದಾಯ ಪರಿಗಣಿಸುವುದಿಲ್ಲ. ಸಾಕ್ಷ್ಯಾಧಾರಗಳೂ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತವೆ. ಅದೇ ರೀತಿ 'ತೀರಾ ಪರೋಕ್ಷ' ಮಾತು ಕೃತಿಯ ಮೂಲಕ ಹಾಗೂ ದೈನಂದಿನ ಆಚಾರ ವಿಚಾರ, ಹಾವಭಾವಗಳಲ್ಲಿ ರೂಪಿತವಾಗುವ ಅಸ್ಪೃಶ್ಯತೆಯನ್ನು ನಮ್ಮ ಸಮುದಾಯ ಅಸ್ಪೃಶ್ಯತಾ ಆಚರಣೆ ಎಂದು ಪರಿಗಣಿಸುವುದಿಲ್ಲ. ಆದರೆ ಸಂಬಂಧಿತ ಪರಿಣಾಮ ಮಾತ್ರ ಸನ್ನಿವೇಶಕ್ಕೆ ಒಳಗಾದ ವ್ಯಕ್ತಿಗೆ ಒಂದೇ ತರವಾಗಿರುತ್ತದೆ. ಈ ಪರಿಸ್ಥಿತಿ ಎಂತಹ ಇರಿಸು ಮುರಿಸಿನ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ ಎಂದರೆ ನೇರವಾಗಿ ಅದನ್ನು ಪ್ರತಿಭಟಿಸುವಂತೆಯೂ ಇಲ್ಲ. ಏಕೆಂದರೆ ಸರಳವಾದ ಕಾನೂನು ಮತ್ತು ಸಾಮಾಜಿಕ ಆಚಾರ ವಿಚಾರಗಳ ವ್ಯಾಪ್ತಿಯಲ್ಲಿ ಅದು ನೇರವಾಗಿ ಅಸ್ಪೃಶ್ಯತಾ ಆಚರಣೆಗೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಶಿಕ್ಷಿತ ಮಧ್ಯಮ ವರ್ಗದ ನಡುವೆ ನಗರ ಮಟ್ಟದಲ್ಲಿ ಇಂತಹ ಘಟನೆಗಳು ನೂರಾರು ನಡೆಯುತ್ತದೆ. ಉದಾಹರಣೆಗೆ ಮೀಸಲಾತಿಗೆ ಸಂಬಂಧಿಸಿ ನಡೆಯುವ ಚರ್ಚೆ ವ್ಯಾಖ್ಯಾನ, ಜಾತಿಗಳನ್ನು ವೈಭವೀಕರಿಸುವ ಸನ್ನಿವೇಶಗಳು, ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ವ್ಯಾಖ್ಯಾನಗಳು, ಕಲೆ ಮತ್ತು ಸಂಪ್ರದಾಯಗಳ ಕುರಿತು ನಡೆಯುವ ವ್ಯಾಖ್ಯಾನಗಳು, ನಿರ್ದಿಷ್ಟವಾಗಿ ದಲಿತರನ್ನು ಒಳಗೊಂಡತತಹುಗಳಾಗಿದ್ದರೆ ಮೇಲೆ ತಿಳಿಸಿದ ವಿಚಿತ್ರ ಸನ್ನಿವೇಶದ ಅಸ್ಪೃಶ್ಯತೆಗಳು ಅನುಭವಕ್ಕೆ ಬರುತ್ತದೆ.

(6)

ನಗರಗಳಲ್ಲಿ ಸಾಮಾನ್ಯವಾಗಿ ಅನೌಪಚಾರಿಕ ಸಂಬಂಧಗಳೇ ಜಾಸ್ತಿ. ಇಂತಹ ಸನ್ನಿವೇಶದಲ್ಲಿ ಹೆಚ್ಚಿನ ದಲಿತ ಸಮುದಾಯ ಅನುಭವಿಸುವ ಅಸ್ಪೃಶ್ಯತಾ ಸ್ಥಿತಿಯೊಂದಿದೆ. ಉದಾಹರಣೆಗೆ ಮಾತುಕತೆಯಲ್ಲಿ ಭಾಗವಹಿಸುತ್ತಿರುವ ವ್ಯಕ್ತಿಯು ಒರ್ವ ಶೋಷಿತ ದಲಿತ ಸಮುದಾಯಕ್ಕೆ ಸೇರಿರುವ ಹಿನ್ನೆಲೆ ತಿಳಿಯದೇ ಆತನ ಸಮ್ಮುಖದಲ್ಲೇ ಅಸ್ಪೃಶ್ಯತೆಯನ್ನು ಸಮರ್ಥಿಸಿ ದಲಿತರನ್ನು ಅವಮಾನಕಾರಿಯಾಗಿ ನಿಂದಿಸುವ ಸನ್ನಿವೇಶ ನಿರ್ಮಾಣವಾಗುತ್ತದೆ. ಇಂತಹ ಪ್ರಕರಣಗಳನ್ನು ಸಾಮಾನ್ಯವಾಗಿ ಪ್ರತಿಭಟಿಸುವ ಸ್ಥಿತಿಯಲ್ಲಿ ಇರದೆ ಮೂಕ ಪ್ರೇಕ್ಷಕರಾಗಿ ಒಡಲೊಳಗೆ ಕುಬ್ಜವಾಗುವ ಪರಿಸ್ಥಿತಿಯೇ ಜಾಸ್ತಿ. ಈ ಸನ್ನಿವೇಶ ಹೃದಯದಲ್ಲಿ ಆಳವಾಗಿ ಅಸ್ಪೃಶ್ಯತಾ ಮನೋಭಾವನೆ ಮನೆಮಾಡಿಕೊಂಡಿದ್ದು ಬಾಹ್ಯ ತೋರಿಕೆಗೆ ಮಾತ್ರ ಮಾನವತಾ ಪ್ರೇಮಿಯಂತೆ ವರ್ತಿಸುವುದನ್ನು ತೋರ್ಪಡಿಸುತ್ತದೆಯೇ ಹೊರತು ಬೇರೆ ಯಾವುದನ್ನೂ ಅಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕಾನೂನಿನ ಚೌಕಟ್ಟಿಗೆ ಹೆದರಿ 'ನಾಟಕೀಯ ವರ್ತನೆ'ಯಾಗಿದೆ. ಇದೇ ಮನೋಭಾವ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಬಗ್ಗೆಯೂ ಕ್ರಿಯಾಶೀಲವಾಗಿರುವುದನ್ನು ನಾವು ಗಮನಿಸಬಹುದು.

ಇನ್ನೊಂದು ಇಂತಹುದೇ ಸಂದರ್ಭವೆಂದರೆ ಅಸ್ಪೃಶ್ಯತೆಗೆ ಒಳಗಾಗಿರುವ ಜಾತಿಗಳಲ್ಲಿ ಈ ಉಪ ಜಾತಿಗಳ ಬಗ್ಗೆ ಇತರ ಸಮುದಾಯದ ಜನರಿಗೆ ಅಲ್ಪ ವಿವರ ತಿಳಿದಿರುತ್ತದೆ. ಹಾಗಿರುವಾಗ ಒರ್ವ ದಲಿತ ಸಮುದಾಯದ ವ್ಯಕ್ತಿಯುಲ್ಲಿ ಮತ್ತೊಂದು ದಲಿತ ಸಮುದಾಯದ ಬಗ್ಗೆ ಪ್ರಚಲಿತವಿರುವ ಅಸ್ಪೃಶ್ಯತಾ ಮನೋಭಾವದ ವಿಚಾರಗಳನ್ನು ಯಾವುದೇ ಮುಲಾಜಿಲ್ಲದೆ ಸಂಕೋಚ ಪಡದೆ ವಿವರಿಸುತ್ತಾರೆ. ಅಸ್ಪೃಶ್ಯ ಜಾತಿ ಸಮುದಾಯದ ಮಧ್ಯೆ ಭೇದಭಾವಗಳು ಇವೆ ಎಂಬ ಕಾರಣಕ್ಕೆ ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸುವ ವ್ಯಕ್ತಿಗೆ ಮತ್ತೊರ್ವ ದಲಿತನ ಹಿನ್ನೆಲೆಯಲ್ಲಿ ಅಸ್ಪೃಶ್ಯತಾ ಆಚರಣೆಗೆ ಸಂಬಂಧಿಸಿದಂತೆ ವ್ಯತ್ಯಾಸವಿರುವುದಿಲ್ಲ ಎಂಬುದನ್ನು ಗ್ರಹಿಸದೆ ಮೇಲ್ಕಂಡ ವಿಚಾರಗಳನ್ನು ಹರಿಯ ಬಿಡುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ಸಂಬಂಧಿತ ವ್ಯಕ್ತಿಗಳಲ್ಲಿ ಇರುವ ಪ್ರಜ್ಞೆಯೆಂದರೆ "ತಾನು ಎದುರಿಗಿರುವ ವ್ಯಕ್ತಿಯನ್ನು ಅವಮಾನಿಸುತ್ತಿಲ್ಲ" ಎಂಬ ಪ್ರಜ್ಞೆ, ಆದರೆ ವಾಸ್ತವಿಕವಾಗಿ ಅಸ್ಪೃಶ್ಯತೆಗೆ ಒಳಗಾದ ಎಲ್ಲರ ನೋವು ಒಂದೇ ಆದ ಕಾರಣ ಜಾತಿ ಉಪಜಾತಿ ಎಂಬ ಭೇದವಿದ್ದರೂ ಅಸ್ಪೃಶ್ಯತೆಯ ಪ್ರಶ್ನೆ ಬಂದಾಗ ಇಡೀ ಸಮುದಾಯವೇ ಒಂದು ಎಂಬ ಸಮಷ್ಟಿ ಪ್ರಜ್ಞೆ ಜಾಗೃತವಾಗಿರುತ್ತದೆ. ಒಟ್ಟಾರೆಯಾಗಿ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅಸ್ಪೃಶ್ಯತೆಯನ್ನು ಕಾನೂನು ರೀತ್ಯಾ ನಿಲ್ಲಿಸಲು ಸಾಧ್ಯವಿಲ್ಲ. ಅಷ್ಟೇ ಮುಖ್ಯ ಪ್ರಶ್ನೆ ಎಂದರೆ ಇಂತಹ ಸನ್ನಿವೇಶಗಳಲ್ಲಿ ನಡೆಯುವ ಅಸ್ಪೃಶ್ಯತಾ ಆಚರಣೆಯನ್ನು ಸಮಾಜ "ಅಸ್ಪೃಶ್ಯತೆ" ಎಂದು ಪರಿಗಣಿಸಲು ಸಿದ್ಧವಿಲ್ಲದಿರುವುದು ಕೂಡಾ ಆಗಿದೆ.

(7)

ಇಂತಹ ಘಟನೆಗಳು ಸರಿಸುಮಾರು ತಿಂಗಳಿಗೆ ಒಂದೆರಡು ಆದರೂ ನಗರಗಳಲ್ಲಿರುವ ದಲಿತರಿಗೆ ಅನುಭವಕ್ಕೆ ಬರುತ್ತವೆ. ನಗರಗಳಲ್ಲೇ ವಸ್ತು ಸ್ಥಿತಿ ಹೀಗಿರುವಾಗ ಜಾತಿ ಕೇಂದ್ರೀಕೃತವಾದ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಅಸ್ಪೃಶ್ಯತೆಯು ದಿನ ನಿತ್ಯ ದಲಿತ

ಸಮುದಾಯ ಅನುಭವಿಸುವ ನರಕ ಯಾತನೆಯಾಗಿದೆ. ಬಹಳಷ್ಟು ನೊಂದ ಜನತೆ ತಾತ್ಕಾಲಿಕವಾಗಿ ತನ್ನನ್ನು ತಾನು ಪಾರು ಮಾಡಲು "ಅವರು ಅಂದದ್ದು - ಹೇಳಿದ್ದು ನನಗಲ್ಲ" ಎಂಬ ದೃಷ್ಟಿಕೋನಕ್ಕೆ ತಮ್ಮ ಮನೋಭಾವವನ್ನು ಹೊಂದಾಣಿಕೆ ಮಾಡಿಕೊಂಡಿರುತ್ತಾರೆ. ಬಹಳಷ್ಟು ಮಧ್ಯಮ ವರ್ಗದ ದಲಿತರು "ಪಲಾಯನವಾದಿ" ಮನೋಸ್ಥಿತಿ ನಿರ್ಮಿಸಿಕೊಂಡು ಇದ್ದಾರೆ. ಕೆಲವರು ಈ ಬಗ್ಗೆ ಸಂವೇದನಾ ಶೀಲತೆಯಿಂದ ವಿಮುಕ್ತರಾಗುವ ಪರ್ಯಾಯ ಮಾರ್ಗ ಅನುಸರಿಸುತ್ತಿದ್ದಾರೆ. ಕೆಲವರು ದಲಿತ ಬ್ರಾಹ್ಮಣತ್ವದ ಮೊರೆ ಹೋಗುತ್ತಿದ್ದಾರೆ. ಮತ್ತೆ ಕೆಲವರು ಆರ್ಥಿಕ ಶ್ರೀಮಂತಿಕೆಯಿಂದ ಮಾತ್ರ ಮುಕ್ತಿ ಎಂದು ನಂಬಿದ್ದಾರೆ. ಇದಲ್ಲದೆ ಒಂದು ದೊಡ್ಡ ವಿಭಾಗ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವುದೇ ಪರ್ಯಾಯ ಎಂದು ಕ್ರಿಯಾಶೀಲರಾಗುತ್ತಿ ದ್ದಾರೆ. ವಿಚಿತ್ರವೆಂದರೆ ಇನ್ನೊಂದು ವಿಭಾಗ ಪುನರುತ್ಥಾನವಾದಿ ಮಡಿವಂತಿಕೆಯ ವೈಧಿಕಶಾಹಿ ಆಚರಣೆಗಳನ್ನು ಜಾಸ್ತಿ ಜಾಸ್ತಿ ನಡೆಸುವುದರಿಂದ ಆಯಾಯ ಪ್ರದೇಶದ ಮಠ ಮಂದಿರ ದೇವಸ್ಥಾನಗಳಲ್ಲಿ ಅಧಿಕಾರವನ್ನು ಹೊಂದುವುದರಿಂದ ಅಸ್ಪೃಶ್ಯತೆಯಂತಹ ಆಚರಣೆಗಳಿಗೆ ಕಡಿವಾಣ ಹಾಕಲು ಸಾಧ್ಯವಿದೆ ಎಂದು ವಾದಿಸುತ್ತಿದ್ದಾರೆ.

ಆದರೆ ಅನುಭವ ಮತ್ತು ಆಚರಣೆಗಳು ಚಾರಿತ್ರಿಕವಾಗಿ ತೋರಿಸಿಕೊಡುವುದೆಂದರೆ ಇವೆಲ್ಲವುಗಳು ಅಸ್ಪೃಶ್ಯತೆಯ ಆಚರಣೆ ಮತ್ತು ಸಿದ್ಧಾಂತದ ಕನಿಷ್ಟ ಪರಿಧಿಯನ್ನು ಸಂಧಿಸಲಾರವು. ಆದುದರಿಂದ ಇದು ಯಾವುದೂ ನಿಜವಾದ ಪರ್ಯಾಯವೇ ಅಲ್ಲ.

ಈ ಹಿನ್ನೆಲೆಯಲ್ಲಿ ಗಂಭೀರವಾಗಿ ಗಮನಿಸಿದಾಗ ಅಸ್ಪೃಶ್ಯತಾ ಆಚರಣೆಯ ಬಗ್ಗೆ ಸಮಸ್ತ ಸಮಾಜವೇ ಪ್ರಜ್ಞಾಪೂರ್ವಕ ರಾಜಕೀಯ ಮತ್ತು ಸಾಮಾಜಿಕ ಆಂದೋಲನ ರೂಪಿಸುವ ಮೂಲಕ ನಿರ್ಮಿಸಲ್ಪಡುವ ಮನೋಭಾವವೇ ಪರ್ಯಾಯವಾಗಲು ಸಾಧ್ಯ ಅಂದರೆ ವರ್ಗ ರಹಿತ ಸಮಾಜವೇ ಜಾತಿ ರಹಿತ ಸಮಾಜದ ಆಧಾರಸ್ತಂಭವಾಗಿದೆ. ■

ಅಸ್ಪೃಶ್ಯತೆಯ ಸೋಂಕಿಗೆ ಕಮಲಿದ ತುಂಬುಜೀವ



• ಸುಶೀಲ ನಾಡ

ಇತ್ತೀಚಿಗೆ ಅಂದರೆ 2013ರ ನವೆಂಬರ್‌ನಲ್ಲಿ ನಮ್ಮ ಕೊರಗ ಸಮುದಾಯದ ಮುತ್ತಕ್ಕ ತೀರಿಕೊಂಡರು ಎಂದು ತಿಳಿದಾಗ ನನಗೊಮ್ಮೆ ದಿಗ್ಭ್ರಮೆ ಮೂಡಿತು. ಯಾಕೆಂದರೆ ಮುತ್ತಕ್ಕನಿಗೆ ಸಾಯುವ ವಯಸ್ಸಾಗಿರಲಿಲ್ಲ. 58 ವರ್ಷ ವಯಸ್ಸಿನ ನಿರಂತರ ಕಾಯಕ ಜೀವಿ, ಬೆವರು ಹರಿಸಿ ಸ್ವಾಭಿಮಾನಿಯಾಗಿ ಬದುಕುತ್ತಿದ್ದವರು. 6 ಅಡಿ ಎತ್ತರ ನಿಲುವಿನ ಈ ಕಾಯಕ ಜೀವಿ ಯಾವುದೇ ಕಾಯಿಲೆ ಕಸಾಲೆಗೂ ತುತ್ತಾದವರಲ್ಲ. ಅವರ ಸ್ವಾಭಿಮಾನಿ ಬದುಕೇ ಮಾದರಿಯಾಗಿತ್ತು. ಇಂತಹ ಮುತ್ತಕ್ಕ ತೀರಿಕೊಂಡಾಗ ನಿಜಕ್ಕೂ ಮನಸ್ಸಿಗೆ ನೋವಾಗಿತ್ತು.

ನಾನು ಮತ್ತು ಮುತ್ತಕ್ಕ ಒಂದೇ ಊರಿನವರಾಗಿದ್ದು ಕೇವಲ 5 ಕಿ.ಮೀ. ದೂರದಲ್ಲಿ ವಾಸವಾಗಿದ್ದೇವೆ. ನಾನು ಮುತ್ತಕ್ಕ ಇರುವ ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಮುತ್ತಕ್ಕ ತೀರಿಕೊಂಡ ಮಾರನೆ ದಿನ ನನಗೆ ವಿಷಯ ತಿಳಿಯುವಾಗ ಅವರ ಶವ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರದ ಶವಾಗಾರದಲ್ಲಿದ್ದು, ನನಗೆ ವಿಷಯ ತಿಳಿದದ್ದು ಬೇರೆ ಸಮುದಾಯದವರಿಂದ. ಇದು ಯಾಕಾಯಿತು, ಹೇಗಾಯಿತು ಎಂದು ಆಲೋಚಿಸಿದಾಗ ವ್ಯವಸ್ಥಿತ ರೀತಿಯಲ್ಲಿ ಸಾವಿನ ಕಾರಣವನ್ನು ಮುಚ್ಚಿಡುವ ಪಯತ್ನದ ಭಾಗವಾಗಿತ್ತು.

ಮುತ್ತಕ್ಕ ಕೆಲಸಕ್ಕೆ ಹೋಗಿ ಹುಲ್ಲು ತರಲು ಗುಡ್ಡಕ್ಕೆ ಹೋದಾಗ ಅಂದರೆ ಅದೇ ಕೆಲಸದ ಮನೆಯವರ ಜಾಗದಲ್ಲಿ ಮನೆಯೊಡತಿ, ಮುತ್ತಕ್ಕ ಹಾಗೂ ಇನ್ನೊಬ್ಬ ಕೆಲಸದಾಳು ಇದ್ದರು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಸುಡುಬಿಸಿಲಿನಲ್ಲಿ ಹುಲ್ಲು ಕಡಿಯುವಾಗ ಕಾಳಿಂಗ ಸರ್ಪ ಮುತ್ತಕ್ಕನ ಕಾಲಿಗೆ ಕಚ್ಚಿದೆ. ಆ ಕ್ಷಣದಲ್ಲಿ ಗಾಬರಿಯಿಂದ ಬಿದ್ದಾಗ ಸರ್ಪ ಪುನಃ ಕಚ್ಚಿದೆ. ಆದರೆ ಮನೆಯೊಡತಿ ಹಾವು ಕಡಿದ ಕಾಲಿನ ಮೇಲ್ಭಾಗಕ್ಕೆ ಮೊದಲು ಬಟ್ಟೆ ಕಟ್ಟಿ ವಿಷ ಏರುವುದನ್ನು ತಪ್ಪಿಸಿ ತಡೆದಿದ್ದರೆ, ಮುತ್ತಕ್ಕನಿಗೆ ಸಾಂತ್ವನ ನೀಡಿದ್ದರೆ ಬಹುಶಃ ಮುತ್ತಕ್ಕ ಬದುಕುತ್ತಿದ್ದರು. ಆದರೆ ಹಾಗಾಗಲಿಲ್ಲ. ಮನೆಯೊಡತಿ ಆಕೆಯನ್ನು ಸ್ಪರ್ಶಿಸಲಿಲ್ಲ. 2 ಕಿ.ಮೀ. ದೂರದಲ್ಲಿರುವ ಅವರ ಮನೆಗೆ ಹೋಗಿ ಸುದ್ದಿ ಮುಟ್ಟಿಸಿ ನಂತರ ಅವರು ಬಂದು 108 ಆಂಬ್ಯುಲೆನ್ಸ್‌ಗೆ ಫೋನ್ ಮಾಡಿ ಅದು ಬರುವುದರೊಳಗೆ ಅವರ ಪ್ರಾಣಪಕ್ಷಿ ಹಾರಿ ಹೋಗಿದೆ. ಸಂಜೆಯಾದ್ದರಿಂದ ಶವವನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾಗಿಸಲಾಯಿತು. ಈ ಘಟನೆ ನಡೆದು ಪೊಲೀಸರಿಗೆ ತಿಳಿಸಿದ ಮಾಹಿತಿಯಲ್ಲಿ ಅವರ ಮನೆಯ ಜಾಗದಲ್ಲೇ ಹುಲ್ಲು ಕಡಿಯುವಾಗ ಹಾವು ಕಚ್ಚಿತು ಎಂದು ತಿಳಿಸಿದ್ದರು.

ಯಾಕೆಂದರೆ ಬೇರೆಯವರ ಜಾಗದಲ್ಲಿ ಹಾವು ಕಚ್ಚಿದ್ದು ಎಂದರೆ ಪರಿಹಾರ ಸಿಗುವುದಿಲ್ಲ ಎಂಬ ಆಮಿಷವೊಡ್ಡಿ ಇಡೀ ಕುಟುಂಬದವರಿಂದ ಸುಳ್ಳು ಹೇಳಿಸಿದರು. ಈ ರೀತಿಯಾಗಿ ನನಗೂ ತಿಳಿಸದೇ ಶವ ಸಂಸ್ಕಾರ ಮಾಡುವವರಿದ್ದರು. ಆದರೆ ಅದೇ ಸಮಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತರಬೇತಿಗೆ ಹೋಗಿದ್ದರಿಂದ ಬೇರೆ ವೈದ್ಯಾಧಿಕಾರಿಗಳು ಬರುವುದು ತಡವಾಗಿತ್ತು. ಈ ಮಧ್ಯದಲ್ಲಿ ನನಗೆ ವಿಷಯ ತಿಳಿದಿದ್ದು ಅವರ ಮುಖ ನೋಡಲು ಸಾಧ್ಯವಾಗಿತ್ತು. ಇಷ್ಟೆಲ್ಲ ಘಟನೆಗಳ ವಿವರ ಅವರ ಶವ ಸಂಸ್ಕಾರದ ನಂತರ ನನಗೆ ತಿಳಿದದ್ದು. ಅಸ್ಪೃಶ್ಯತೆಯ

ಶುಭಾಶಯಗಳೊಂದಿಗೆ



Estd : 1931

Grams : "Tiles"

M/S. PRABHAKARA TILE WORKS

(Manufacturers of famous LIGHT HOUSE brand roofing tiles)

POST BOX NO. 3,
KUNDAPURA UDUPI (Dist) – 576 201
Phone : 08254 – 230306, 231946

ಶುಭಾಶಯಗಳೊಂದಿಗೆ

ಶ್ರೀ ಮಾರುತಿ ಸಹಕಾರಿ ಪತ್ತಿನ ಸಂಘ ನಿ.

ಶಿರಾಲಿ ತಾ॥ ಭಟ್ಕಳ (ಉ.ಕ)

ಶೇರು ಬಂಡವಾಳ	ರೂ. 1,64,39,300.00
ನಿಧಿಗಳು	ರೂ. 3,85,94,666.24
ಠೇವಣಾತಿಗಳು	ರೂ. 28,28,52,222.13
ವಿನಿಯೋಗಗಳು	ರೂ. 8,87,68,094.00
ಸಾಲಗಳು ಮತ್ತು ಮುಂಗಡಗಳು	ರೂ. 27,07,13,261.19
ದುಡಿಯುವ ಬಂಡವಾಳ	ರೂ. 33,78,86,188.37

ಶ್ರೀ ಅಶೋಕ ಎಸ್. ಪೈ
ಅಧ್ಯಕ್ಷರು

ಶ್ರೀ ಸುರೇಂದ್ರ ಎಚ್. ಶ್ಯಾನಭಾಗ
ಉಪಾಧ್ಯಕ್ಷರು

With Best Compliments



ಹೆಸರಘಟ್ಟ ಗ್ರಾಮ ಪಂಚಾಯತಿ


ಬೆಂಗಳೂರು ಉತ್ತರ ತಾಲ್ಲೂಕು
ಬೆಂಗಳೂರು – 560088

ಸೋಂಕಿಗೆ ತುಂಬು ಜೀವ ಕಮರಿ ಹೋಗಿತ್ತು. ಹಿರಿಯರಾದ ಗೋಕುಲ ದಾಸ್‌ರವರು ಹೇಳುವಂತೆ ಹುಟ್ಟು ಬಯಸಿ ಬಂದುದಲ್ಲ, ಸಾವು ಬಯಸದಿದ್ದರೂ ಬರಲೇಬೇಕಾದದ್ದು. ಇದು ಎಲ್ಲರಿಗೂ ಅನ್ವಯಿಸುವಂತದ್ದು. ಆದರೆ ಸಾವು ಕೂಡ ನೈಸರ್ಗಿಕವಾಗಿಯೂ, ನ್ಯಾಯೋಚಿತ ವಾಗಿರಬೇಕಲ್ಲವೇ?

ಎಷ್ಟೋ ದಶಕಗಳ ಹಿಂದಿನ ಡಾ| ಶಿವರಾಮ ಕಾರಂತರ "ಚೋಮನ ದುಡಿ" ಕಾದಂಬರಿಯಲ್ಲಿ ಬರುವ ಅಸ್ಪೃಶ್ಯತೆ ಕಾರಣದಿಂದ ಚೋಮನ ಮಗ ಕಾಳ ನೀರಿನಲ್ಲಿ ಮುಳುಗಿ ಸತ್ತ ರೀತಿಯಲ್ಲಿ ತೀರಾ ಇತ್ತೀಚಿಗೆ ಈ ಹಿರಿಯ ಜೀವ ಅದೇ ಅಸ್ಪೃಶ್ಯತೆಗೆ ಬಲಿಯಾದ ಘಟನೆ ಈಗಲೂ ನನ್ನ ಮನಸ್ಸನ್ನು ಘಾಸಿಗೊಳಿಸುತ್ತಿದೆ.

ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯತೆಯಿಂದ ಕೂಡಿದ ನಮ್ಮ ದೇಶದಲ್ಲಿ ಶ್ರೇಣೀಕೃತ ವೃತ್ತಿ ಆಧಾರಿತ ಜಾತಿ ಪದ್ಧತಿಯು ಅದರಿಂದ ಉಂಟಾದ ಧಾರ್ಮಿಕ ಆಚರಣೆಗಳು, ನಂಬಿಕೆಗಳು ಅದರ ಭಾಗವಾಗಿ ನಡೆಯುವ ಮೂಢ ನಂಬಿಕೆಗಳು, ಕಂದಾಚಾರ, ಅಸ್ಪೃಶ್ಯತೆ ಮುಂತಾದ ಅನಿಷ್ಠ ಪದ್ಧತಿಗಳು ಸಮಾಜವನ್ನು ಶೋಚನೀಯವಾಗಿ ಇಬ್ಭಾಗಿಸಿವೆ. ಕುಡಿಯುವ ನೀರು, ಸೇವಿಸುವ ಗಾಳಿ, ದೇಹದಲ್ಲಿ ಹರಿಯುವ ರಕ್ತ ಒಂದೇ ಆಗಿದ್ದರೂ ಇಂದು ಅಸ್ಪೃಶ್ಯತೆಯ ಅನಿಷ್ಠಗಳಿಂದ ಮನುಷ್ಯ-ಮನುಷ್ಯರ ನಡುವೆ ಜೀವ ಸೆಲೆಯಾಗಿರ ಬೇಕಾದ ಮಾನವೀಯತೆಯ ಮೌಲ್ಯಗಳು ನಶಿಸುವಂತಾಗಿದೆ.

ಅಸ್ಪೃಶ್ಯತೆ ಎಂಬುವುದು ವಂಚನೆ, ಆತ್ಮಘಾತುಕತನದ್ದು. ಧರ್ಮ ನಂಬಿಕೆಗಳು ಮನುಷ್ಯನನ್ನು ಹೀನಾಯವಾಗಿ ಕಾಣುವುದನ್ನು ಅನುಮೋದಿಸುವುದಿಲ್ಲ. ಪ್ರಜಾಪ್ರಭುತ್ವದ ಆಶಯದಲ್ಲಿ ಬದುಕುತ್ತಿರುವ ಮನುಷ್ಯ-ಮನುಷ್ಯರ ನಡುವೆ ಅಸ್ಪೃಶ್ಯತೆ ಆಚರಿಸುವುದು ಸಂವಿಧಾನ ಬಾಹಿರ ಕೂಡ. ಮನುಷ್ಯರ ನಡುವೆ ಸಮಾನತೆಯ ತತ್ವ ನಮ್ಮನ್ನು ಅಸ್ಪೃಶ್ಯತೆಯ ಚಿಂತನೆಗಳಿಂದ ಮುಕ್ತಗೊಳಿಸಬೇಕು.



ಬರ ಮತ್ತು ರಣಹದ್ದುಗಳ ವಲಸೆ !

– ಬಸು, ಬಳ್ಳಾರಿ

ಅದೊಂದು ಚಿಂತನ ಮಂಥನ ಸಭೆ, ಅಲ್ಲಿ ದೇಶದ ಮೂಲೆಮೂಲೆಯಿಂದ ಬಂದ ಸಾವಿರಾರು ಸಂಖ್ಯೆಯ ರಣಹದ್ದುಗಳು ಸೇರಿವೆ. ವಲಸೆ ಕುರಿತು ಗಂಭಿರ ಚರ್ಚೆ ನಡೆದಿದೆ. "ನಾವೆಲ್ಲಾ ಎಲ್ಲೂ ಹೋಗ ಬೇಕಿಲ್ಲಾ, ಭಾರತದಲ್ಲಿಯೇ ಎಲ್ ನಿನೊ ಬರವಿದೆ. ಇಲ್ಲಿಯೇ ಪುಷ್ಕಳ ಭೋಜನ ಲಭ್ಯವಿದೆ" – ಯುವ ಹದ್ದೊಂದು ವಲಸೆಯ ಕುರಿತು ತನ್ನ ಅಸಮ್ಮತಿ ಸೂಚಿಸಿ ಮಾತು ಮುಗಿಸಿತು.

ಛೇ ಅಷ್ಟು ಮಾತ್ರವೇ ಅಲ್ಲಾ! ಇಲ್ಲಿ ರೈತರು ಯಥೇಚ್ಛವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಮತ್ತು ಅಕಾಲಿಕ ಮರಣಗಳು ಹೆಚ್ಚುತ್ತಿವೆ, ಈ ಬಗ್ಗೆ ಮಾಧ್ಯಮಗಳ ವರದಿ ಇದೆಯೆಂದು ಬುದ್ಧಿಜೀವಿ ಹದ್ದು ನಡುವೆ ಬಾಯಿ ಹಾಕಿ ನರಮಾಂಸದ ಸವಿಯನುಭವಿಸುತ್ತಾ ವಲಸೆ ಬೇಡವೆಂದಿತು.

ಇದ್ಯಾಕೋ ಚರ್ಚೆ ದಾರಿ ತಪ್ಪುತ್ತಿದೆಯೆಂದರಿತ ಹಿರಿಯ ರಣಹದ್ದೊಂದು ಎದ್ದು ನಿಂತಿತು. ಹೌದು! ಭಾರತದಲ್ಲಿ ಎಲ್ ನಿನೋ ಬರವಿದೆ ಎಂಬುದು ನಿಜವೇ. ಅದೇ ರೀತಿ, ಪ್ರತಿ ಅರ್ಧ ಗಂಟೆಗೊಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಮತ್ತು ಪ್ರತಿ ನಿಮಿಷಕ್ಕೆ 5 ಹಸಿವಿನ ಅಥವಾ ಅಪೌಷ್ಟಿಕತೆಯ ಸಾವುಗಳು ಸಂಭವಿಸುತ್ತಿರುವುದು ನಿಜವೇ, ಇದನ್ನು ಪಾರ್ಲಿಮೆಂಟೇ ಒಪ್ಪಿಕೊಂಡಿದೆ. ಆದರೇ ಹಾಗಂತಾ, ನಾವು ವಲಸೆ ಹೋಗದೇ ಇಲ್ಲಿಯೆ ಉಳಿಯುವುದು ಆತ್ಮಹತ್ಯೆಕಾರಿಯಾಗುತ್ತದೆಯೆಂದಿತು.

ಇಡೀ ಸಭೆಯೇ ಈ ಮಾತಿನ ಅರ್ಥಕ್ಕಾಗಿ ಯಾಕೆಂಬ ಪ್ರಶ್ನೆಯನ್ನೆಸೆಯಿತು. ಹಿರಿಹದ್ದು ಗಂಭೀರವಾಗಿ ಮುಂದುವರೆಸಿತು. 'ಯಾಕೆಂದರೇ, ನಮ್ಮ ಬಹುರಾಷ್ಟ್ರೀಯ ಕಂಪೆನಿಗಳ ಸೋದರರು ಅವರ ಏಜೆಂಟರು ಈ ಹೆಣಗಳ ಮೇಲೆ ಒಂದು ತೊಲೆ ಮಾಂಸವನ್ನೂ ಮತ್ತು ರಕ್ತವನ್ನೂ ಉಳಿಸಿಲ್ಲ! ಇಲ್ಲಿ ನರ ಮಾಂಸವಲ್ಲಾ, ದನಗಳ ಮಾಂಸವೂ ಸಿಗದು! ಹೀಗಾಗಿ, ಇಲ್ಲಿ ಉಳಿಯುವುದು ಸಾಹಸವೇ ಸರಿ, ವಲಸೆ ಅನಿವಾರ್ಯ" ಎಂದಿತು.

ಸಭೆಯು ಮರು ಮಾತಿಲ್ಲದೇ, ಸರ್ವಾನುಮತದಿಂದ ವಲಸೆಗೆ ಸಮ್ಮತಿಸಿತು.

ಹರ್ಷವರ್ಧನ



ಲಕ್ಷ್ಮೀಸಾಗರದ ದಟ್ಟದರಿದ್ರ ದಲಿತ ಮಹಿಳೆ

ರಾತ್ರಿ ಪೂರಾ ಚಳಿಯಿಂದ ಆಗಾಗ್ಗೆ ಎಚ್ಚರಾಗ್ತಾಯಿತ್ತು. ಹೊದ್ದುಕೊಂಡಿದ್ದ ರಗ್ಗಿನ ದುರ್ವಾಸನೆ ಅಸಹನೆ ತರ್ತಾ ಇತ್ತು. ಆದರೂ ಚಳಿಯಿಂದ ನಿರ್ವಾಹವಿಲ್ಲದೆ ಮೂಗಿಗೆ ದೂರವಾಗಿ ಹೊದ್ದುಕೊಂಡು ನಿದ್ದೆ ಹೋರಾಟ ಮುಂದುವರಿಸಿತ್ತು. ಮುಂಜಾವಲ್ಲಿ ಯಾರೋ ಕದ ತೆಗೆದಾಗ ಎಚ್ಚರವಾಯಿತು. ಊಹೂಂ! ಇನ್ನು ನಿದ್ದೆ ಸಾಧ್ಯವಿಲ್ಲ ಎಂದು ಖಾತರಿಯಾಯ್ತು. ಮನೆಯಾಚೆ ಬಂದು ನೋಡಿದರೆ ಮಂಜಿನಿಂದ ಕೂಡಿದ ಹೊಲ ಗದ್ದೆಗಳ ಬಯಲು ಕಂಗೊಳಿಸ್ತಾ ಇವೆ. ಸೂರ್ಯ ಆಗ ತಾನೆ ಕೆಂಪಗಿನ ಉಂಡೆಯಂತೆ ಮೇಲೆದ್ದು ಬರ್ತಾ ಇತ್ತು. ಜೀರುಂಡೆಗಳು ಇನ್ನೂ ಬೆಳಗಾಗಿಲ್ಲವೆಂಬಂತೆ ಗುಯ್ಯ್.. ಎಂದು ರಚ್ಚೆ ಹಿಡಿದಿವೆ. ಅವುಗಳನ್ನು ಎಚ್ಚರಿಸಲೋ ಎಂಬಂತೆ ಗುಬ್ಬಚ್ಚಿಗಳ ಹಿಂಡು ಚಿಲಿಪಿಲಿ ಹೊರಡಿಸುತ್ತಾ ಆಗಸದಲ್ಲಿ ಚಿತ್ತಾರ ಮೂಡಿಸುತ್ತಾ ಹಾರಾಡುತ್ತಿದ್ದರೆ, ನವಿಲುಗಳು ಕೂಗುತ್ತಿವೆ. ಚಳಿ ಇನ್ನೂ ತಬ್ಬಿ ಹಿಡಿಯುತ್ತಿದೆ. ಮನೆಯ ಹೊರಗೆ ಅರೆ ಮಲೆನಾಡಿನ ಮೋಹಕ ಚಿತ್ರಣವನ್ನು ತುಂಬಿಕೊಡುತ್ತಿದ್ದ ಪರಿಸರ....

ಹೌದು! ಆಯಮ್ಮ, ಸುಮಾರು 55 ವರ್ಷವಿರಬಹುದು, ದೇಹ ಸರಿಯಾದ ಪೌಷ್ಟಿಕಾಹಾರ ಇಲ್ಲದೆ ಸವೆದು ಸವಕಲಾಗಿದೆ. ಒಬ್ಬಳೇ ಬಿಂದಿಗೆ ಹೊತ್ತು ನೀರು ಹೊರುತ್ತಾ ಬರ್ತಾಯಿದ್ದಾಳೆ. ಅಷ್ಟೊಂದು ದೂರದಿಂದ ನೀರು ತರ್ತಾ ಇದಾರಲ್ಲಾ! ಅದೂ ಮನೆ ಮುಂದೇನೇ ನಲ್ಲಿ ಇದ್ದರೂ! ಅವರ ಮನೆಗೆ ರಾತ್ರಿ ಸುಮಾರು 11 ಘಂಟೆಯಲ್ಲಿ ನಡೆದು ಬರುವಾಗ ಹಳ್ಳಿಯ ಬೀದಿಗೂ ಅವರ ಮನೆಗೂ ಇರುವ ದೂರದ ಅಂದಾಜು ಸಿಕ್ಕಿತ್ತು. ಹಳ್ಳಿಯ ಬೀದಿಯಿಂದ ಇವರ ಮನೆಗೆ ರಸ್ತೆ ಇರುವುದಿರಲಿ, ಕಾಲು ಹಾದಿಯೂ ಇಲ್ಲ. ಮೇಲ್ಜಾತಿಯವರ ಹೊಲಗಳ ತುಂಬಾ ಬೆಳೆದು ನಿಂತ ಜೋಳ, ಮುಳ್ಳು ಬೇಲಿಗಳು, ಒಬ್ಬೆಗಳು. ಅವುಗಳ ನಡುವೆಯೇ, ಮೇಲೆಯೇ ತುಳಿದು ಸುಮಾರು 500 ಅಡಿ ನಡೆಯಬೇಕು. ವಿದ್ಯುತ್ ದೀಪಗಳು ಬೀದಿಗಿವೆಯೇ ಹೊರತು, ರಸ್ತೆಯಿಂದ ಸುಮಾರು 500 ಅಡಿ ದೂರದಲ್ಲಿರುವ ಇವರ ಮನೆಗೆ ಪೂರಾ ಬೆಳಕೇ ಇಲ್ಲದ ಕಾಡೊಳಗೆ ಕಗ್ಗತ್ತಲಲ್ಲಿ ನಡೆದು ಹೋಗಬೇಕು. ಯಾವಾಗ ಹಾವೋ, ಚೇಳೋ ಕಡಿದುಬಿಡಬಹುದೆಂಬ ಭಯ ಸದಾ ಇದ್ದದ್ದೇ. ಅಂತೂ ಸಾಹಸದಿಂದ ಮನೆ ತಲುಪಿದ್ದೆವು.

ಆಯಮ್ಮನ ಗಂಡ ತೀರಿ ಹೋಗಿ ನಾಲ್ಕೈದು ವರ್ಷ ಗತಿಸಿವೆ. ಹಿರಿಯ ಮಗಳನ್ನು ಮದುವೆ ಮಾಡಿದ್ದಾರೆ, ಆದರೆ ಅಳಿಯ ಸರಿಯಿಲ್ಲ. ಎರಡನೇ ಮಗಳು ಪದವಿ ಓದ್ತಾ ಇದ್ದಾಳೆ. ಇವಳನ್ನೂ ಮದ್ವೆ ಮಾಡ್ಕೊಂಡ್ರೆ ಆಸ್ತಿ ನನಗೆ ಸಿಗ್ತದೆಂತ ಅಳಿಯ ಇವಳನ್ನೂ ತನಗೇ ಮದುವೆ ಮಾಡಿಕೊಡಬೇಕೆಂದು ಹೆಣಗಾಡಿದ. ಪೇಪರ್‌ನಲ್ಲಿ ಇವರಿಬ್ಬರ ಪೋಟೋ ಹಾಕಿಸಿ ತಮಗೆ ಮದುವೆ ಆಗಿದೆ ಎಂದು ಪ್ರಚಾರ ಮಾಡಿದ. ಇವಳು ತಪ್ಪಿಸಿಕೊಂಡು ಬೆಂಗಳೂರಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ಸೇರಿದಳು. ಊರಿಗೊಮ್ಮೆ ಬಂದಿದ್ದಾಗ ಮಚ್ಚಿನಲ್ಲಿ ಭಾವ ಇವಳ ತಲೆಗೆ ಹೊಡೆದಿದ್ದ. ಇವಳು ಉಳಿದುಕೊಂಡದ್ದೇ ಪವಾಡ! ನಂತರ ಸಂಘಟನೆಯವರು ಮಧ್ಯಪ್ರವೇಶ ಮಾಡಿ ಅವನಿಗೆ ಬೆದರಿಸಿದ್ದರು, ಮನೆಯವರಿಗೆ ಸಾಂತ್ವನ ಹೇಳಿದ್ದರು. ಆಗ ಇವಳನ್ನು ಮೋಹಿಸಿದ ಹುಡುಗ ಇವಳನ್ನು ತನ್ನೂರಿಗೆ ಕರೆ ತಂದು ಓದಿಸತೊಡಗಿದ. ಮುಂದೆ ತಾನೇ ಮದುವೆಯಾಗುವುದಾಗಿ ಭರವಸೆ ನೀಡಿದ್ದರಿಂದ ಜೋಡಿ ಹಕ್ಕಿಯಂತಿದ್ದರು.

'ಮನೆ ಮುಂದೆ ನಲ್ಲಿಲೀ ಯಾಕಮ್ಮ ನೀರು ಬರ್ತಾಯಿಲ್ಲ' ಎಂದು ಕೇಳಿದೆ. ಆಯಮ್ಮ ಉತ್ತರಿಸಲಿಲ್ಲ. ಮನೆಯೊಳಗಿದ್ದಾಗ ಮತ್ತೊಮ್ಮೆ ಕೇಳಿದೆ. ಆಗ ಮೆಲುದನಿಯಲ್ಲಿ ಮಾತಾಡಿದರು. 'ಪಕ್ಕದ ಮನೇವ್ರು ನಮ್ಮೋರೇ ಆದ್ರೂ, ನಲ್ಲಿ ಇದ್ರೆ ಅವರ ಮನೆ ಮುಂದೆ ಇರ್ಬೇಕು, ಇಲ್ಲಾಂದ್ರೆ ಬೇಡವೇ ಬೇಡ ಎಂದು ಯಾರೂ ಇಲ್ದಿದ್ದಾಗ ಕಿತ್ತಾಕ್ ಬಿಟ್ಟಿದ್ದಾರೆ, ಮನೆ ಮುಂದಿನ ವಿದ್ಯುತ್ ಕಂಬದ ದೀಪಕ್ಕೆ ಕಲ್ಲೆಸೆದು ಹೊಡೆದಾಕಿದ್ದಾರೆ' ಎಂದರು. ನಮ್ಮ ಅಣ್ಣ-ತಮ್ಮಂದಿರೆಲ್ಲ ಇಲ್ಲೇ ಇದ್ರು, ಆವಾಗ ಚೆನ್ನಾಗಿತ್ತು. ಅವರೆಲ್ಲ ಈಗ ಪಕ್ಕದ ಚಿಕ್ಕ ಭುವನಹಳ್ಳಿ ಗ್ರಾಮದಲ್ಲಿ ಸರ್ಕಾರ್‌ದೋರು ಕೊಟ್ಟಿರೋ ಸೈಟ್‌ಲ್ಲಿ ಮನೆ ಮಾಡ್ಕೊಂಡು ಅಲ್ಗೇ ಹೋಗಿ ನೆಲೆಸಿದ್ದಾರೆ, ನಮ್ಗೆ ಒಂದೆಕ್ರೆ ಹೊಲ

ಆತಂಕದಲ್ಲಿದ್ದ ಹುಡುಗಿ ಮತ್ತು ಅವಳ ತಾಯಿಗೆ ಸ್ವಲ್ಪ ನಿರಾಳ ಅನಿಸಿತ್ತು. ಆದರೆ ಹುಡುಗನ ಅಪ್ಪ ಅಮ್ಮನಿಗೆ ನಡೆದುದೆಲ್ಲವನ್ನೂ ಕುರಿತು ವಿವರಿಸಿದಾಗ ಮದುವೆ ನಡೆಸುವುದಕ್ಕೆ ಇವರ ಒಪ್ಪಿಗೆ ಪಡೆಯುವುದೂ ಸೇರಿದಂತೆ ಇನ್ನೂ ಬಲು ಪ್ರಯಾಸ ಪಡಬೇಕೆಂದು ಅನ್ನಿಸಿದ್ದು ಮಾತ್ರ ಸುಳ್ಳಲ್ಲ.

ಇಲ್ಲಿರುದ್ರಿಂದ ಇಲ್ಲೇ ಬವಣೆ ಪಡ್ತಾವ್ನಿ ಜೋಳ ರಾಗಿ ಬೆಳಕಂದು' ಎಂದರು.

ಹಿಂದಿನ ದಿನ ರಾತ್ರಿ ನಾವು ನಾಲ್ವರು ಅವರ ಮನೆಗೆ ಹೊರಟಿದ್ದೆವು. ವಿದ್ಯಾರ್ಥಿ ಚಳುವಳಿಯಲ್ಲಿ ನಮ್ಮ ಕಡೆಯ ಹುಡುಗ ಮತ್ತು ಅವನ ಸಹಪಾಠಿಯಾಗಿದ್ದ ಆಯಮ್ಮನ ಮಗಳು ಪರಸ್ಪರ ಇಷ್ಟಪಟ್ಟಿದ್ದ ಹಿನ್ನೆಲೆಯಲ್ಲಿ ಮದುವೆ ಕುರಿತು ಮಾತನಾಡಲು ಹೋಗಿದ್ದೆವು. ಹಾಸನ ಜಿಲ್ಲೆಯ ಲಕ್ಷ್ಮಿ ಸಾಗರ ಹಳ್ಳಿ ಅದು, ಹಾಸನ ನಗರದಿಂದ ಕೇವಲ 8 ಕಿ.ಮೀ ದೂರ. ಆ ಹಳ್ಳಿಗೆ ಯಾವ ಬಸ್ಸೂ ಹೋಗೋದಿಲ್ಲ. ಆಟೋಗಳೇ ಗತಿ. ಅಲ್ಲಿಗೆ ತಲುಪಲು ಹಾಸನ ಮುಖ್ಯ ರಸ್ತೆಯಿಂದ ಎರಡು ಹಳ್ಳಿಗಳನ್ನು ಹಾಯ್ದು ಹಳ್ಳ ತಗ್ಗಿನ ಬಂಡಿ ಹಾದೀಲಿ ಹೋಗಬೇಕು. ಮನೆಗೆ ಬರುವುದಿದ್ದರೆ ಸಂಜೆ 6 ಘಂಟೆಯೊಳಗೆ ಮಾತ್ರ ಬನ್ನಿ, ಆಮೇಲೆ ಕಳ್ಳರು ಕಾಮುಕರ ಕಾಟ ಜಾಸ್ತಿ ಅಲ್ಲಿ ಎಂದು ಮುಂಚೆಯೇ ತಿಳಿಸಿದ್ದರು. ಆ ಹಳ್ಳಿಯಲ್ಲಿ ಸುಮಾರು 20 ಒಕ್ಕಲಿಗರು, 20 ಲಿಂಗಾಯಿತರು, 15 ಅರಸು, 2-3 ದಲಿತರ ಕುಟುಂಬಗಳು ನೆಲೆಸಿವೆ. ದಲಿತರ ಮನೆಗಳು 70ರ ದಶಕದಲ್ಲಿ ಅರಸು ಕಾಲದಲ್ಲಿ ಸರ್ಕಾರ ದಿಂದ ಹಂಚಿಕೆಯಾಗಿದ್ದ ಮನೆಗಳಲ್ಲೇ ವಾಸ ಇವೆ. ಮನೆ ಅಳತೆ ಕೇವಲ 8 ಅಡಿ * 15 ಅಡಿ ಇದೆ. ಅವುಗಳಿಗೆ ಸಂಪರ್ಕ ಕಲ್ಪಿಸುವ ನೀರಾಗಲಿ, ಕಾಲುಹಾದಿ ಯಾಗಲಿ, ಚರಂಡಿಯಾಗಲಿ, ಮನೆಗಳಿಗೆ ಶೌಚಾಲಯವಾಗಲಿ ಏನೂ ಇಲ್ಲವೇ ಇಲ್ಲ. ಪ್ರತಿ ದಿನ ಮೇಲ್ಜಾತಿಯವರ ಕರುಣೆ ಪಡೆದು ಅವರ ಹೊಲಗಳಲ್ಲಿ ಹಾದು ಬೀದಿಗೆ ಹೋಗಬೇಕು. ಈ ಕುಟುಂಬಕ್ಕೆ ತಮ್ಮದು ಅಂತ ಇರೋದು ಈ ಮುರುಕಲು ಮನೆ, ಒಂದೆಕರೆ ಹೊಲ, ಒಂದು ಎಮ್ಮೆ ಇಷ್ಟು ಮಾತ್ರವೇ.

ನಮ್ಮ ಕಡೆಯ ಹುಡುಗ ಹೊಲೆಯ ಜಾತಿಯವನು. ಹುಡುಗಿ ಮಾದಿಗರ ಜಾತಿಯವರು. ಹುಡುಗನ ಕಡೆಯವರು ನಾವೇ ಮಾದಿಗರಿಗಿಂತ ಮೇಲ್ಜಾತಿ ಎಂದರೆ, ಹುಡುಗಿ ಕಡೆಯುವರು ಹೊಲೆಯರಿಗಿಂತ ನಾವು ಮೇಲ್ಜಾತಿ ಅಂದುಕೊಂಡಿದ್ದಾರೆ. ಅಲ್ಲದೆ ಹುಡುಗನ ಅಪ್ಪ ಅಮ್ಮ ದಲಿತ ಚಳುವಳಿಯ ಹಿನ್ನೆಲೆಯಿಂದ ಬಂದವರಾದ್ದರಿಂದ ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದ್ದೆವು. ಆದ್ರೆ ಅಂತಸ್ತು ಅಡ್ಡಿ ಬರ್ತಿತ್ತು. ಹುಡುಗನ ಕುಟುಂಬ ಕೂಲಿಕಾರ ಕುಟುಂಬವಾದರೂ ಹುಡುಗನಿಗೆ ಅತಿಥಿ ಉಪನ್ಯಾಸಕ ಕೆಲಸವಿರುವುದರಿಂದ ಇನ್ನೂ ಒಳ್ಳೆಯ ಅಂತಸ್ತಿನ ಹುಡುಗಿ ಮದುವೆ ಮಾಡಬಹುದೆಂಬ ಲೆಕ್ಕಾಚಾರದಿಂದ ಮದುವೆಗೆ ಅವನ ಅಪ್ಪ ಅಮ್ಮ ಒಪ್ಪಿರಲಿಲ್ಲ. ತಮ್ಮ ಮಗಳನ್ನು ಚಳುವಳಿಯ ಹಿನ್ನೆಲೆ ಯಿರುವ ಮೇಲ್ಜಾತಿಯ ಉದ್ಯೋಗಸ್ಥ ಯಾವುದೇ ಖರ್ಚಿಲ್ಲದೆ ಮದುವೆಯಾಗಿ ಹೊರೆ ಕಡಿಮೆಯಾಗಿದ್ದರೂ, ಮಗನ ಮದುವೆ ವಿಚಾರದಲ್ಲಿ ಜಾತಿ ಕಾರಣ ವಾಗಿಯೋ ಅಂತಸ್ತಿನ ಕಾರಣವಾಗಿಯೋ ಅಪ್ಪಅಮ್ಮ ತಕರಾರು ತೆಗಿದಿದ್ದರು. ಇದು ಇನ್ನಷ್ಟು ಸಂದಿಗ್ಧಕ್ಕೆ ಸಿಲುಕಿಸಿತ್ತು.

ಮದುವೆ ಕುರಿತು ಪ್ರಸ್ತಾಪ ಮಾಡಿದಾಗ ಹುಡುಗಿಯ ತಾಯಿ ಹೇಳಿದರು: 'ಏನೋ ಇಬ್ಬರೂ ಇಷ್ಟ ಪಟ್ಟವ್ರೆ, ನಾನೇಕೆ ಬ್ಯಾಡ ಅನ್ಲಿ. ಆದ್ರೆ ನಮ್ಮ ಅಣ್ಣ–ತಮ್ಮಂದಿರೇನಾದ್ರೂ ನೀವು ಯಾವ ಜಾತಿ ಅಂತ ಕೇಳಿದ್ರೆ ಬೇರೆ ಯಾವ್‌ದಾದ್ರೂ ಮೇಲ್ಜಾತಿ ಅಂತ ಹೇಳಿ ಪುಣ್ಯ ಕಟ್ಟಿಕೊಳ್ಳಿ. ಇಲ್ಲಾಂದ್ರೆ ಅವ್ರು ಮದುವೆ ಕಿತ್ತಾಕ್ತಾರೆ'.

ಮಾರನೇ ದಿನ ಹುಡುಗಿಯ ಸೋದರ ಮಾವ ಬಂದವ್ನೇ ನೇರವಾಗಿ ಹೇಳಿದ: 'ಇಬ್ರೂ ಇಷ್ಟಪಟ್ಟವ್ರೆ. ನಾವೇ ಮದ್ವೆ ಮಾಡ್ಕೋತೀವಿ ಅಂತ ಹುಡುಗ ಹೇಳವ್ನೆ. ನಾವು 50,000 ಅಷ್ಟೇ ಕೊಡಕ್ಕಾಗೋದು. ಇನ್ನು ಮದುವೆ ಖರ್ಚು, ಹುಡುಗಿಗೆ ಒಡ್ವೆ ಏನೇ ಬೇಕು ಅಂದ್ರೂ ನೀವೇ ಹಾಕಂದು ಮಾಡ್ಬೇಕು' ಅಂದ. ಈ ಮಧ್ಯೆ ಹುಡುಗಿಯ ಅಕ್ಕ ಮತ್ತು ತಾಯಿ ಅವನನ್ನು ದೂರದ ಬದಿಗೆ ಕರೆದೊಯ್ದು ಏನೋ ಪಿಸುಗುಟ್ಟುತ್ತಿದ್ದರು.

ನಂತರ ಬಂದವ್ನೇ 'ಒಂದೆಕ್ರೆ ಹೊಲಯಿದೆ. ಅದನ್ನು ಮಾರಿ ಸ್ವಲ್ಪ ಕೊಡೋಣ ಅಂದ್ರೂ ನೀರಾವರಿ ಇಲ್ದಿರೋ ಹೊಲ ತಗೊಳ್ಳಕೆ ಯಾರೂ ಬರುದಿಲ್ಲ ಅಂತರೆ' ಎಂದ.

ಹುಡುಗ ಕೂಡ ತನ್ನೂರಲ್ಲೇ ಬಾಡಿಗೆ ಮನೇಲೀ ವಾಸ ಇದ್ದು, ಹುಡುಗನಿಗೆ ಸ್ನಾತಕೋತ್ತರ ಪದವಿಯಿದ್ದರೂ ತಿಂಗಳಿಗೆ 2 ಸಾವಿರ ಮನೆ ಬಾಡಿಗೆ ಕಟ್ಟೋ ಆದಾಯ ಇಲ್ಲ! ಮನೆ ಭೋಗ್ಯಕ್ಕೆ ಹಾಕಿಸಿಕೊಳ್ಳೋಕೆ ಹುಡುಗಿ ಏನಾದರೂ ಮಾಡಿ ಅವಳ ಮನೆಯಿಂದ 1 ಲಕ್ಷ ದುಡ್ಡು ತರಬೇಕು, ಹುಡುಗಿ ಕುಟುಂಬಕ್ಕೆ ಇರುವ ಒಂದೆಕ್ರೆ ಹೊಲ ಮಾರಿ ಅದ್ರಿಂದ ನನಗೆಷ್ಟು ಬರುತ್ತೋ ಅದನ್ನು ಈಸ್ಕಂಬಾ ಎಂದು ಹುಡುಗ ಸೇರಿದಂತೆ ಅವನ ಕುಟುಂಬ ಹುಡುಗಿ ಮೇಲೆ ಒತ್ತಡ ಹಾಕುತ್ತಿರುವುದೂ ಪರೋಕ್ಷವಾಗಿ ತಿಳಿದಿತ್ತು.

'ನಾವು ಜನಪರ ಚಳುವಳಿ ಹಿನ್ನೆಲೆಯವರು. ವರದಕ್ಷಿಣೆ ಅನ್ನೋದೇ ಇಲ್ಲವೇ ಇಲ್ಲ. ನೀವು ಐದು ಸಾವಿರ ಕೊಡ್ತೀರೋ, ಐವತ್ತು ಸಾವ್ರ ಕೊಡ್ತೀರೋ ಅದು ನಿಮಗೆ ಬಿಟ್ಟಿದ್ದು. ಮದುವೆ ಸಂಪ್ರದಾಯ ಇಲ್ದೆ ಸರಳವಾಗಿರುತ್ತದೆ, ಮದುವೆಯಾದ ಹೊಸ ಕುಟುಂಬ ನೆಲೆ ನಿಲ್ಲೋಕಂತ ಹುಡುಗ–ಹುಡುಗಿ ಕಡೆಯ ಕುಟುಂಬಗಳು ತಮ್ಮ ಶಕ್ತಿಯಾಧಾರಿತ ವಾಗಿ ಎಷ್ಟು ಕೊಡ್ಬಹುದೋ ಕೊಡ್ಲಿ. ಎರಡೂ ಕಡೆಯವರ ಹತ್ರ ಕೊಡೋಕೆ ಏನೂ ಇಲ್ಲ ಅಂತ ನಮಗೂ ಗೊತ್ತು. ಸಂಘಟನೆಯೇ ನಿಂತು ಮದುವೆ ಮಾಡುತ್ತೆ, ಹೊಲ ಮಾರಿದ್ರೆ ಮತ್ತೆ ಕೊಂಡು ಕೊಳ್ಳೋದು ಎಷ್ಟು ಕಷ್ಟ ಅಂತ ಗೊತ್ತು. ಹಾಗಾಗಿ ಅವೆಲ್ಲ ಮಾರೋಕೆ ಹೋಗ್ಬೇಡಿ' ಎಂದು ಹೇಳಿ ಹುಡುಗನಿಗೂ ಮನವರಿಕೆ ಮಾಡಿ ಹೊರಟೆವು.

ಆತಂಕದಲ್ಲಿದ್ದ ಹುಡುಗಿ ಮತ್ತು ಅವಳ ತಾಯಿಗೆ ಸ್ವಲ್ಪ ನಿರಾಳ ಅನಿಸಿತ್ತು. ಆದರೆ ಹುಡುಗನ ಅಪ್ಪ ಅಮ್ಮನಿಗೆ ನಡೆದುದೆಲ್ಲವನ್ನೂ ಕುರಿತು ವಿವರಿಸಿದಾಗ ಮದುವೆ ನಡೆಸುವುದಕ್ಕೆ ಇವರ ಒಪ್ಪಿಗೆ ಪಡೆಯುವುದೂ ಸೇರಿದಂತೆ ಇನ್ನೂ ಬಲು ಪ್ರಯಾಸ ಪಡಬೇಕೆಂದು ಅನ್ನಿಸಿದ್ದು ಮಾತ್ರ ಸುಳ್ಳಲ್ಲ. ■

ಮುಸುಕಿನೊಳಗೆ ದೇವದಾಸಿ ಪದ್ಧತಿ




– ಬಸವ್ವ

ನಿರೂಪಣೆ: ಹೆಚ್. ರಹಮತ್ ಉಲ್ಲಾ,
ಹರಪನಹಳ್ಳಿ

ನನಗೆ ದೇವರಿಗಾಗಿ ಇಟ್ಟ ಹೆಸರು 'ಬಸವಿ' ಎಂದು. ಜನರು ಕರೆದಿದ್ದು 'ಬಸವ್ವ' ಎಂದು. ನಾನು ಒಬ್ಬ 'ದೇವದಾಸಿ'. ಅತ್ಯಂತ ಕೆಳ ಸಮುದಾಯದಲ್ಲಿ ಹುಟ್ಟಿ ಬೆಳೆದವಳು. ನಾನು ಈಗಲೂ ಕೂಡ 'ಅಸ್ಪೃಶ್ಯತೆ' ಕಾರಣ ಸಾಕಷ್ಟು ನೋವು ಅನುಭವಿಸುತ್ತಿರುವವಳು. ನಾನು ದೈಹಿಕವಾಗಿ ಕೂಡ ತೊಂದರೆ ಅನುಭವಿಸುತ್ತಿದ್ದೇನೆ. ನನಗೆ ಕಳೆದ 5 ವರ್ಷದಿಂದ 'ಕುಷ್ಟರೋಗ' ಸಹ ವ್ಯಾಪಿಸಿದೆ. ನನ್ನ ಕಾಲು-ಕೈ ಸಹ ಸದಾ ಬ್ಯಾಂಡೇಜ್‌ನಂದ ಕೂಡಿರುತ್ತವೆ. ನನ್ನ ತಂದೆ ಸಹ ದೇವದಾಸಿಯ ಮಗನಾಗಿದ್ದರು. ಅವರಿಂದ 5–6 ಎಕರೆ ಭೂಮಿ ಇದ್ದರೂ ಸಹ ಅದು ಆರ್ಥಿಕ ಪ್ರಾಬಲ್ಯದ ಜನರಿಗೆ 'ಲಾವಣಿ' (ಭೂಮಿಯನ್ನು ಇಂತಿಷ್ಟು ವರ್ಷ ಕಾಲ ಬೆಳೆ ಬೆಳೆದುಕೊಳ್ಳಲು ಬಿಟ್ಟುಕೊಡುವುದು) ಹಾಕಿರುತ್ತೇನೆ.

ನನಗೆ ಇಬ್ಬರು ಪುತ್ರರು ಒಬ್ಬ ಪುತ್ರಿ–ಮಗನ ವಿವಾಹವನ್ನು ಮಾಡಿರುತ್ತೇನೆ. ಒಬ್ಬ ಮಗ ಇನ್ನೂ ಸಹ ಆಡು ಮೇಯಿಸುವ 'ಜೀತದಾಳು'. ನನಗೆ ಸ್ವಂತ ಭಾಗವಿದ್ದರೂ ಮನೆಯನ್ನು ಕಟ್ಟಲು ಸಹ ಇಂದಿಗೂ ಸಾಧ್ಯವಾಗಿಲ್ಲ. ದೇವದಾಸಿ ಮಾಸಾಶನ ಸರಿಯಾಗಿ ಸಿಗುತ್ತ ಇಲ್ಲ. ಜೀವನ ನಡೆಸುವುದೇ ದುಸ್ತರವಾಗಿದೆ. ಇಂದಿಗೂ ಸಹ ನಾನು ಅವರಿವರ ಸಹಾಯದಿಂದ ಬದುಕುಳಿದ್ದೇನೆ. ನಾನು ನಿರಂಜನರ ಸಣ್ಣ ಕಥೆ 'ಕೊನೆಯ ಗಿರಾಕಿ'ಯಂತೆ.

ನನ್ನ ಪಕ್ಕದ ಗ್ರಾಮ ಕುಂಚೂರಿನಲ್ಲಿ ನನ್ನ ಸಮುದಾಯದ ಯುವತಿಯನ್ನು ಸಹ ದೇವದಾಸಿಯನ್ನಾಗಿ ಮಾಡಲಾಯಿತು. ಇದನ್ನು ಪತ್ತೆ ಹಚ್ಚಿದ ದೇವದಾಸಿ ವಿಮೋಚನಾ ಸಂಘಟನೆ ದೇವದಾಸಿ ಪದ್ಧತಿಯನ್ನು ವಿರೋಧಿಸಿದಾಗ ಪೊಲೀಸ್ ದೂರು ದಾಖಲಾಗಿ ನನ್ನ ಸಮುದಾಯದ 'ಮಾದಾರ ಚನ್ನಯ್ಯ ಸ್ವಾಮೀಜಿ'ಯವರು ಬಂದು ತಂದೆ–ತಾಯಿಗಳಿಗೆ ಬುದ್ದಿವಾದ ಹೇಳಿದರು. ಆದರೆ ಪೋಷಕರು ಬೇರೆ ತಂತ್ರ ಮಾಡಿದರು. ಯುವತಿಯ ತಾಯಿಯು "ನನ್ನ ಮಗಳನ್ನು ನನ್ನ ಅಣ್ಣನಿಗೆ ಕೊಟ್ಟು ವಿವಾಹ ಮಾಡಿದ್ದೇನೆ." ಎಂದಳು. "ನಾನು, ಮಗಳನ್ನು ತಾಯಿಯ ತಮ್ಮನಿಗೆ ಕೊಟ್ಟು ವಿವಾಹ ಮಾಡುವುದನ್ನು ಕೇಳಿದ್ದೇನೆ, ಆದರೆ ಅಣ್ಣನಿಗೆ ಮದುವೆ ಮಾಡಿಕೊಡುವುದು ಕೇಳಿಲ್ಲ." ಎಂದು ಸಮಾಜ ಕಲ್ಯಾಣ ಸಚಿವರಾದ ಹೆಚ್. ಅಂಜನೇಯ ಅವರು ಹೇಳಿದಾಗ, "ನನ್ನ ಕುಟುಂಬದ ವಿಚಾರದಲ್ಲಿ ನೀವೇಕೆ ತಲೆ ಹಾಕುತ್ತೀರಿ" ಎಂದು ಪೋಷಕರು ಸಚಿವರನ್ನೇ ಹಿಗ್ಗಾ–ಮುಗ್ಗ ತರಾಟೆಗೆ ತೆಗೆದುಕೊಂಡರು. ನಮ್ಮಂತಹ ಕೆಳ ಸಮುದಾಯದವರು ಮಾತ್ರ ತಮ್ಮ ಹೆಣ್ಣುಮಕ್ಕಳನ್ನು ದೇವದಾಸಿಯರಾಗಿ ಮಾಡುವುದು. ಈ ಅಮಾನವೀಯ ಪದ್ಧತಿಯನ್ನು ಹಾಗು ಅಸ್ಪೃಶ್ಯತೆಯನ್ನು ರಕ್ಷಿಸಿಕೊಂಡು ಹೋಗುವುದನ್ನು ಕಂಡಾಗ ಮನಸ್ಸಿಗೆ ತುಂಬಾ ನೋವಾಗುತ್ತದೆ.



ನಾನೊಂದು ಹೆಣ್ಣು ಬೊಂಬೆಯಲ್ಲ ನಾನು

ಪದ್ಮ ವೈ ಅರಳೇರಿ, ಮಾಲೂರು

ನಾನೊಂದು ಹೆಣ್ಣು ಬೊಂಬೆಯಲ್ಲ ನಾನು.
ಚಿವುಟಿ ಚಿವುಟಿ ಗಾಯಮಾಡಿದಿರಿ...
ತಿರುಗುವ ಬುಗುರಿಯಲ್ಲ ನಾನು
ಚಾಟಿ ನೀವಾಗಿ ಬುಗುರಿ ನನ್ನ
ಮಾಡಿತ್ತಿರುವಿರಲ್ಲೋ

ಮನಸಾಕ್ಷಿ ಇಲ್ಲವೇ ನಿಮಗೆ ಪಾಪಿಗಳಾ..
ಹೆಣ್ಣುರಕ್ತ ಕುಡಿಯುವ ನರಜಂತುಗಳಾ..
ಹೆಣ್ಣೆಂದರೆ ಕಾಮದ ಪ್ರತಿರೂಪವಲ್ಲ,
ಹೆಣ್ಣು ಎಂದರೇ ಪ್ರೇಮದ ಸಂಕೇತ
ತಾಯಿಯಾಗಿ ಅಮೃತ
ಉಣಬಡಿಸಿದವಳು
ಅಕ್ಕನಾಗಿ ಅಕ್ಕರೆಯಿಂದ ನಡೆಸಿದವಳು
ಹೆಂಡತಿಯಾಗಿ ಹೆಜ್ಜೇನು ಸವಿಸಿದವಳು
ಅವಳ ಯಾರೆಂದು ಮರೆತು
ಹೋದಿರಾ ಇಂದು .. ..
ಬಲೆಗಳ ಮಧ್ಯೆ ಬಂಧಿಸಿ ಹೆಣ್ಣಿ
ಅಟ್ಟಹಾಸದಿ ನಗುತಲಿಹುವುವು
ದುಷ್ಟಶಕ್ತಿಗಳು
ಹೆಣ್ಣಿನ ರಕ್ತಮಾಂಸಕ್ಕಾಗಿ ಕಾಯುತ್ತಿವೆ
ಸುತ್ತುವರೆದಿದೆ ಅವಳನ್ನು ಹೆಕ್ಕಿ ತಿನ್ನಲು


ಹೆಣ್ಣೇ, ಎಚ್ಚೆತ್ತುಕೊ ನೀನು ಎಚ್ಚೆತ್ತುಕೊ
ತಿರುಗುವ ಬುಗುರಿ ನೀನಾಗಬೇಡ
ಈ ಅಟ್ಟಹಾಸವನ್ನು ಕೊನೆಗಾಣಿಸು
ಎದ್ದು ಎಚ್ಚರಗೊಳಿಸು ಹೋರಾಡಿ
ಜಯಿಸು



ಸ್ವಾತಂತ್ರ್ಯದ ಏಳು ದಶಕಗಳು ಮತ್ತು ಇಳಿಯುತ್ತಿರುವ ಮಹಿಳಾ ಶ್ರಮದ ಬೆಲೆ

ಎಸ್. ವರಲಕ್ಷ್ಮಿ

ಇತ್ತೀಚಿನ ದಿನಗಳಲ್ಲಿ ಮಹಿಳೆಯ ಉದ್ಯೋಗಾವಕಾಶಗಳು ಹೆಚ್ಚಿವೆ ಎಂಬ ತಿಳುವಳಿಕೆಯಿದೆ. ಆದರೆ ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ವರದಿ (NSSO) ಯ ಪ್ರಕಾರ ಇದು ನಿಜವಲ್ಲ. 2009–10ರಲ್ಲಿ ದೇಶದ ಒಟ್ಟು ಮಹಿಳೆಯರಲ್ಲಿ ಕೇವಲ ಶೇ. 14 ರಷ್ಟು ಸಂಬಳ/ಆದಾಯವನ್ನು ಗಳಿಸುತ್ತಿದ್ದಾರೆ. ಶೇ. 85 ರಷ್ಟು ಮಹಿಳೆಯರು ಉತ್ಪಾದನೆಯಲ್ಲಿ ತೊಡಗಿದ್ದರೂ ಯಾವುದೇ ಆದಾಯವಿಲ್ಲದೆ ಆರ್ಥಿಕವಾಗಿ ಅವಲಂಬಿತರಾಗಿದ್ದಾರೆ. ಇಂತಹ ತೀವ್ರ ಆರ್ಥಿಕ ಅವಲಂಬನೆಯು ನಮ್ಮ ಸಮಾಜದಲ್ಲಿ ಮಹಿಳೆಯರಿಗಿರುವ ಕೀಳು ಸ್ಥಾನಮಾನದ ದ್ಯೋತಕ. ವಿಶ್ವ ಶ್ರಮ ಮಾರುಕಟ್ಟೆಯಲ್ಲಿಯೂ ಮಹಿಳೆಯ ಸ್ಥಾನ ಕುಸಿತ ಕಂಡಿದೆ ಎಂದು 'ವಿಶ್ವ ಶ್ರಮ ಮಾರುಕಟ್ಟೆಯಲ್ಲಿ ಮಹಿಳೆಯರ ಸ್ಥಾನ' ಎಂಬ ಒಂದು ಜಾಗತಿಕ ವರದಿ ಹೇಳಿದೆ. ಇದು 2008 ರ ಆರ್ಥಿಕ ಮುಗ್ಗಟ್ಟು ಒಂದು ದೊಡ್ಡ ಪರಿಣಾಮ ಬೀರಿದೆ.



ಸಾಂಪ್ರದಾಯಿಕ ಮನೋಭಾವದ ಜನರು 'ಉದ್ಯೋಗಂ ಪುರುಷ ಲಕ್ಷಣಂ' ಎಂದು ಆಗಾಗ್ಗೆ ಮಾತನಾಡಿಕೊಳ್ಳುವುದುಂಟು. ಅಂದರೆ 'ಕೆಲಸ'ಕ್ಕೆ ಹೋಗುವುದು ಪುರುಷರ ಲಕ್ಷಣ. ಮಹಿಳೆಯರು ಬಹುತೇಕ ಅಷ್ಟೇನೂ ಮುಖ್ಯವಲ್ಲದ್ದೇನನ್ನೋ ಮಾಡಿಕೊಂಡು ಇರುತ್ತಾರೆ ಎಂಬ ಭಾವನೆ ಈ ಮಾತಿನಲ್ಲಿದೆ.

ಆದರೆ ನಮ್ಮ ಸಮಾಜದ ವಾಸ್ತವಕ್ಕೆ ಕಣ್ಣು ಬಿಟ್ಟು ನೋಡಿದರೆ ಮನೆ, ಬೀದಿ, ಮಾರುಕಟ್ಟೆ, ಅಂಗಡಿ, ತೋಟ, ಹೊಲ, ಗದ್ದೆ, ಗಣಿ, ಕಾರ್ಖಾನೆ, ಕಚೇರಿ ಎಲ್ಲಿ ನೋಡಿದರೂ ಮಹಿಳೆಯರು ದುಡಿಯುತ್ತಿರುವ ಚಿತ್ರಗಳು, ಎಷ್ಟೋ ಸಾರಿ ಪುರುಷರಿಗಿಂತಲೂ ಅಗಾಧ ಪ್ರಮಾಣದಲ್ಲಿ ದುಡಿಯುತ್ತಿರುವ ಚಿತ್ರಗಳು ನಮ್ಮ ಸಮಾಜದಲ್ಲಿ ಯಥೇಚ್ಛವಾಗಿ ಎಲ್ಲೆಲ್ಲೂ ನೋಡಲು ಸಿಗುತ್ತವೆ. ಆದರೂ ಇಂತಹ ಮಾತುಗಳು ಚಾಲ್ತಿಯಲ್ಲಿ ಇದ್ದೇ ಇವೆ. ಮಹಿಳೆಯರ ದುಡಿಮೆಯನ್ನು ಕಣ್ಣು ತೆರೆದು ನೋಡಲು ತಯಾರಿಲ್ಲದ ಪುರುಷ ಪ್ರಧಾನ ಮೌಲ್ಯಗಳು, ಉದ್ದೇಶಪೂರ್ವಕ ಮತ್ತು ಅಪ್ರಜ್ಞಾಪೂರ್ವಕ ತಾತ್ಸಾರಗಳು ಈ ಪ್ರವೃತ್ತಿಗೆ ಕಾರಣ. ಬಹಳಷ್ಟು ಸಾರಿ ಮಹಿಳೆಯ ದುಡಿಮೆಯನ್ನು 'ದುಡಿಮೆ' ಅಂತಲೆ ಒಪ್ಪಿಕೊಳ್ಳದ ಮನಸ್ಥಿತಿ ನಮ್ಮ ಸಮಾಜದಲ್ಲಿದೆ.

ಬೆಂಗಳೂರು ಮಹಾನಗರದಲ್ಲಿ ಬಿಎಂಟಿಸಿ ಬಸ್ ಓಡಿಸುವುದರಿಂದ ಹಿಡಿದು, ಐಟಿ ಕಂಪನಿಗಳ ಉನ್ನತ ಹುದ್ದೆಗಳ ವರೆಗೆ, ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಹಾಕುವುದರಿಂದ ಹಿಡಿದು, ಹೋಟೇಲು ನಡೆಸುವವರು, ಸ್ಕೂಟರು–ಕಾರು ರಿಪೇರಿ ಮಾಡುವ ರಂಗಗಳಲ್ಲಿ ದುಡಿಯುವ ಮಹಿಳೆಯರಿದ್ದಾರೆ. ರಸ್ತೆ ಬದಿಯಲ್ಲಿ ಕೇಬಲ್ ಹಾಕಲು ಅಗೆಯುವವರಲ್ಲಿ ಗಂಡ ಜೂಪನೆ ಹಾರೆ ಹಾಕಿ ಅಗೆದಂತೆ ಸನಿಕೆಯಿಂದ ಮಣ್ಣು ತೆಗೆದು ಮೇಲೆ ಹಾಕುವ ಮಹಿಳೆಯರನ್ನು, ಇಲ್ಲ ಹಾರೆ ಹಿಡಿದು ನೆಲವನ್ನು ಅಗೆದು ಅಗೆದು ಮಣ್ಣು ಬಿಡಿಸುವ ಮಹಿಳೆಯರನ್ನು ನಾವು ಎಷ್ಟೋ ಕಡೆ ನೋಡಬಹುದು. ಯಾರ ಕೆಲಸ ಕಡಿಮೆ!! ಯಾರದು ಜಾಸ್ತಿ !! ಎಂಬುದೇನಲ್ಲ. ವೀರಗಚ್ಚೆಯಂತೆ ಸೀರೆತೊಟ್ಟು ಮಹಿಳೆ ಕೆಲಸಕ್ಕೆ ಇಳಿದಳೆಂದರೆ ಸೈ. ಇಟ್ಟಿಗೆ, ಕಲ್ಲು ಹೊರುವುದೇನು ? ಸಿಮೆಂಟ್ ಕಲೆಸುವುದೇನು ಯಾವುದಕ್ಕೂ ಹಿಂಜರಿಕೆ ಏನಿಲ್ಲ.

ಸಂಘಟಿತ ವಲಯದಲ್ಲೂ ಅಷ್ಟೆ. ಉತ್ಪಾದನಾ ಕ್ಷೇತ್ರವೇ ಇರಲಿ, ಸೇವಾ ಕ್ಷೇತ್ರವೇ ಇರಲಿ ಮಹಿಳೆಯರು ಕೆಲಸದಲ್ಲಿ ಶ್ರದ್ಧೆ, ತಲ್ಲೀನತೆಯಿಂದ ದಕ್ಷ ಉತ್ಪಾಕತೆಯಿಂದ ಮುಂದೆ ಮುಂದೆ ಹೊರಟಿದ್ದಾರೆ. ಆದರೆ ಇವೆಲ್ಲಾ ಏನೇ ಆದರೂ ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಅಭದ್ರತೆಯಿಲ್ಲದ ಸುರಕ್ಷಿತ ಕೆಲಸದ ಪರಿಸ್ಥಿತಿಗಳು ದೊರಕಿವೆಯೇ ಎಂದರೆ ಉತ್ತರ ಇಲ್ಲ ಎಂಬುದೇ ಆಗಿದೆ. ಉದ್ಯೋಗದಾತರು ಮಹಿಳೆಯರಿಗೆ ಉದ್ಯೋಗ ನೀಡುತ್ತಿರುವುದು ಮಹಿಳೆಯರು ಪುರುಷರಿಗೆ ಸಮಾನವಾಗಲಿ ಎಂದೇನು ಅಲ್ಲ. ಮಹಿಳೆಯರು ಕಡಿಮೆ ಕೂಲಿ, ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಾರೆ. ಕಾರ್ಮಿಕ ಸಂಘ ರಚಿಸಿ ಸಂಘಟಿತರಾಗಿ ಮುಷ್ಕರಕ್ಕಿಳಿದು ಸಾಮೂಹಿಕ ಚೌಕಾಸಿ ಮಾಡಲಾರರು. ಬೇಡವೆಂದಾಗ ಅವರನ್ನು

ಸುಲಭವಾಗಿ ಹೊರ ಹಾಕಬಹುದು .. ಇತ್ಯಾದಿ ಕಲ್ಪನೆಗಳಿಂದ.

ಶ್ರಮ ಮಾರುಕಟ್ಟೆಯಲ್ಲಿ ಕುಸಿದ ಸ್ಥಾನ

ಈ ಎಲ್ಲ ಕಾರಣಗಳಿಂದ ದುಡಿಯುವ ಮಹಿಳೆ ನಾನಾ ರೀತಿಯ ತಲ್ಲಣಗಳಿಗೆ ಗುರಿಯಾಗುತ್ತಿದ್ದಾಳೆ. ಅದರಲ್ಲೂ 2008 ರಲ್ಲಿ ಜಾಗತಿಕ ಆರ್ಥಿಕತೆಯ ಭೀಕರ ಕುಸಿತ ಆರಂಭವಾದ ಮೇಲೆ ಮಹಿಳೆಯು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಮೊದಲ ಬಲಿಪಶು ಆಗಿದ್ದಾಳೆ.

'ವಿಶ್ವ ಶ್ರಮ ಮಾರುಕಟ್ಟೆಯಲ್ಲಿ ಮಹಿಳೆಯರ ಸ್ಥಾನ' ಎಂಬ ಒಂದು ಜಾಗತಿಕ ವರದಿಯ ಪ್ರಕಾರ ಇಂದು ಎಲ್ಲೆಲ್ಲೂ ಮಹಿಳೆಯರ ಉದ್ಯೋಗ ಮತ್ತು ಬದುಕಿನ ಮೇಲೆ 2008 ರ ಆರ್ಥಿಕ ಮುಗ್ಗಟ್ಟು ಒಂದು ದೊಡ್ಡ ಪರಿಣಾಮ ಬೀರಿದೆ. ಆರ್ಥಿಕ ಬಿಕ್ಕಟ್ಟು ವಿಶ್ವದ ಎಲ್ಲ ದೇಶಗಳ ಆರ್ಥಿಕತೆಯ ಮೇಲೆ ಪ್ರಭಾವ ಬೀರಿದೆ. ಆದ್ದರಿಂದ ವಿಶ್ವ ಶ್ರಮ ಮಾರುಕಟ್ಟೆಯಲ್ಲಿ (Wolrd Labour Market) ಮಹಿಳೆಯ ಸ್ಥಾನ ಕುಸಿತ ಕಂಡಿದೆ.

ಈ ವರದಿ ಮಹಿಳೆಯ ಸ್ಥಾನ ಎಂತಹದು ಎಂಬುದನ್ನು ವಿವರಿಸುತ್ತಾ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಗೆ ಸಮಾನತೆ ಎಂಬುದಿಲ್ಲ, ವಿಶ್ವ ಮಾರುಕಟ್ಟೆಯಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆ ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದಾಳೆ, ಹಾಗೆಯೇ ದುಡಿಮೆಯಲ್ಲಿಯೂ ಕೂಡಾ ಪುರುಷರಿಗಿರುವಷ್ಟು ಸ್ವಾತಂತ್ರ್ಯವಿಲ್ಲ ಎಂದಿದೆ. 2008ರ ವರದಿಯ ಪ್ರಕಾರ ವಿಶ್ವದಲ್ಲಿ ಶೇ. 6.3 ರಷ್ಟು ಮಹಿಳೆಯರು ಕೆಲಸ ಹುಡುಕುತ್ತಿದ್ದರು.

ಆರ್ಥಿಕತೆಯಲ್ಲಿ ಹಲವಾರು ರಂಗಗಳು ಇವೆ. ಆದರೆ ಹೆಚ್ಚಿನ ಮಹಿಳೆಯರು ತನ್ನನ್ನು ತಾನು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗೆಯೇ ಕೆಲಸದಲ್ಲಿ ತೊಡಗಿಸಿ ಕೊಂಡಿರುವಾಕೆಗೆ ಘಾಸಿಗೊಳಿಸು ವಂತಹ ಪ್ರಸಂಗಗಳು ಹೆಚ್ಚು, ನಿರಂತರ ದುಡಿಮೆ ಮಾಡಿಯೂ ಕೈಗೆ ವರಮಾನವಿಲ್ಲದ, ತಮ್ಮ ಪಾಡನ್ನು ತಾವೇ ನೋಡಿಕೊಳ್ಳಬೇಕಾದ ಮಹಿಳೆಯರು ಹೆಚ್ಚಿರುತ್ತಾರೆ. ಇವರನ್ನು ಭದ್ರತೆಯಿಲ್ಲದ ದುಡಿಯುವ ಮಹಿಳೆಯರು ಎನ್ನಬಹುದು.

ಕೆಲಸದ ಭದ್ರತೆಯಿರುವ ಮಹಿಳೆಯೂ ಸಹ ಸಮಾನ ಕೆಲಸ ಮಾಡುವ ಪುರುಷರಿಗಿಂತಲೂ ಕಡಿಮೆ ಸಂಬಳ ಪಡೆಯುತ್ತಾಳೆ. ಕೌಶಲ್ಯ, ದಕ್ಷತೆ, ನೈಪುಣ್ಯತೆ ಇದ್ದರೂ ಮೇಲ್ದರ್ಜೆಯ ಸ್ಥಾನಮಾನ ಕೊಡುವುದಿಲ್ಲ, ನಿರಾಕರಿಸಲಾಗುತ್ತದೆ. ಕಡಿಮೆ ಕೂಲಿ, ಹೆಚ್ಚು ಶ್ರಮ ಇರುವ ಕೆಲಸಗಳಲ್ಲಿ ಹೆಚ್ಚಾಗಿ ನೇಮಿಸುತ್ತಾರೆ. ಕೆಲಸದ ಅನುಭವ ಇದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳದೇ ತಾರತಮ್ಯ ಮಾಡಲಾಗುತ್ತದೆ. ಭಾರತದಲ್ಲಷ್ಟೇ ಅಲ್ಲ ಇದು ವಿಶ್ವವ್ಯಾಪಿಯಾಗಿ ನಡೆಯುತ್ತದೆ. ಆರ್ಥಿಕ ಮುಗ್ಗಟ್ಟಿನ ಪರಿಣಾಮ ಮತ್ತು ಜಾಗತೀಕರಣ ನೀತಿಗಳ ಪರಿಣಾಮ ವಾಗಿ ಒಟ್ಟು ದುಡಿಯುವ ಜನತೆಯ ಸಮಸ್ಯೆಗಳು ತೀವ್ರ ಸ್ವರೂಪ ಪಡೆಯುತ್ತಿವೆ. ನಿರುದ್ಯೋಗ ಸಮಸ್ಯೆಯೂ ಹೆಚ್ಚಾಗತೊಡಗಿದೆ. ಇದರ ಸಂಪೂರ್ಣ ಪರಿಣಾಮ ದುಡಿಯುವ ಮಹಿಳೆಯರ ಮೇಲೆ ಬೀರುತ್ತದೆ.


ಮಹಿಳಾ ಶ್ರಮಶಕ್ತಿಯ ಪ್ರಮಾಣದಲ್ಲಿ ಇಳಿತ

ಇತ್ತೀಚಿನ ದಿನಗಳಲ್ಲಿ ಮಹಿಳೆಯ ಉದ್ಯೋಗಾವಕಾಶಗಳು ಹೆಚ್ಚಿವೆ ಎಂಬ ತಿಳುವಳಿಕೆಯಿದೆ. ಆದರೆ ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ವರದಿ (NSSO) ಯ ಪ್ರಕಾರ ಇದು ನಿಜವಲ್ಲ. ಈ ವರದಿಯ ಮಾಹಿತಿಗಳು ಈ ವಾಸ್ತವವನ್ನು ತೋರಿಸಿವೆ. 2004–05 ರಲ್ಲಿ ಮಹಿಳಾ ದುಡಿಮೆಗಾರರ ಸಂಖ್ಯೆ 14.85 ಕೋಟಿಯಿತ್ತು. 2011–12 ರಲ್ಲಿ 47.91 ಕೋಟಿ (ಶೇ. 227.3 ಹೆಚ್ಚಳ) ಎಂದು ಅಂದಾಜು ಮಾಡಲಾಗಿತ್ತು. ಕಳೆದ 5–6 ವರ್ಷಗಳಲ್ಲಿ 2 ಕೋಟಿಯಷ್ಟು ಕಡಿಮೆಯಾಗಿದೆ. ಅಂಕಿ ಅಂಶಗಳ ಪ್ರಕಾರ 1983 ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. 34, ನಗರ ಪ್ರದೇಶದಲ್ಲಿ ಶೇ. 15. ದುಡಿಯವ ಮಹಿಳೆಯರಿದ್ದರು. ಇಲ್ಲಿ ಉದ್ಯೋಗ ಎಂದರೆ ತಾತ್ಕಾಲಿಕ ಮತ್ತು ಗುತ್ತಿಗೆ ಮತ್ತಿತರ ಕೆಲಸಗಳನ್ನು ಒಳಗೊಂಡಿದೆ. ಗಮನಿಸಬೇಕಾದ ಅಂಶ ಎಂದರೆ ದೇಶದ ಬೆಳವಣಿಗೆಯ ದರ ಹೆಚ್ಚಳವಿದ್ದ ವರ್ಷಗಳಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣದಲ್ಲಿ ಇಳಿತವುಂಟಾಗಿದೆ.

2004–05 ರಲ್ಲಿ ಮತ್ತು 2011–12 ರ ಅವಧಿಯಲ್ಲಿ ಕೃಷಿಯಲ್ಲಿ ತೊಡಗಿದ ಮಹಿಳೆಯರ ಸಂಖ್ಯೆ 2.6 ಕೋಟಿಗಿಂತ ಹೆಚ್ಚಾಗಿ ಇಳಿಮುಖವಾಯಿತು. ದೇಶದಲ್ಲಿ ಉಂಟಾಗಿರುವ ತೀವ್ರ ಕೃಷಿ ಬಿಕ್ಕಟ್ಟು ಇದಕ್ಕೆ ಪ್ರಮುಖ ಕಾರಣ. ಆದರೆ ಕೃಷಿಯೇತರ ವಲಯದಲ್ಲಿ ಮಹಿಳ ಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಲಭಿಸಿಲ್ಲ. ಕೃಷಿಯಲ್ಲಿ ಇಳಿಮುಖವಾಗುತ್ತಿರುವ ಸಾಮಾಜಿಕ ಹೂಡಿಕೆ, ಸಬ್ಸಿಡಿಗಳ ಕಡಿತ, ಹೆಚ್ಚುತ್ತಿರುವ ಯಾಂತ್ರೀಕರಣ, ನೀರಾವರಿ ಮತ್ತು ವಿದ್ಯುತ್ ಪ್ರಸರಣದ ಕೊರತೆ ಇತ್ಯಾದಿಗಳು ಕೃಷಿ ಬಿಕ್ಕಟ್ಟಿಗೆ ಕಾರಣವಾಗಿದೆ. ಹಾಗಿದ್ದು ಒಟ್ಟು ಮಹಿಳೆಯರಲ್ಲಿ ಕೃಷಿ ಕೆಲಸಗಾರರ ಪ್ರಮಾಣ ಶೇ. 62.7 ರಷ್ಟಿದೆ. ಇದಕ್ಕೆ ಪ್ರತಿಯಾಗಿ ಪುರುಷರ ಪಾಲು ಶೇ. 43.6 ರಷ್ಟಿದೆ. ದೇಶದ ಒಟ್ಟು ಕೃಷಿ ಕೆಲಸಗಾರರಲ್ಲಿ ಶೇ. 35 ಮಹಿಳೆಯರು 2011–12 ರ ವರದಿಯಂತೆ ಗ್ರಾಮೀಣ ಪ್ರದೇಶದ ಶೇ. 59.3, ನಗರ ಪ್ರದೇಶದ ಶೇ. 42.8 ರಷ್ಟು ಮಹಿಳೆಯರು ಸ್ವಯಂ ಉದ್ಯೋಗಿಗಳು. ಇವರಲ್ಲಿ ಶೇ. 11 ಷ್ಟು ಮಾತ್ರ ಸ್ವಂತ ಮಾಲೀಕರು. ಉಳಿದವರು ಸ್ವತಃ ಕೆಲಸಗಾರರು ಮತ್ತು ಸಹಾಯಕರು. ಇವರಿಗೆ ಕೂಲಿ/ ಆದಾಯವಿರುವುದಿಲ್ಲ.

> ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಅಭದ್ರತೆಯಿಲ್ಲದ ಸುರಕ್ಷಿತ ಕೆಲಸದ ಪರಿಸ್ಥಿತಿಗಳು ದೊರಕಿವೆಯೇ ಎಂದರೆ ಉತ್ತರ ಇಲ್ಲ ಎಂಬುದೇ ಆಗಿದೆ. ಉದ್ಯೋಗದಾತರು ಮಹಿಳೆಯರಿಗೆ ಉದ್ಯೋಗ ನೀಡುತ್ತಿರುವುದು ಮಹಿಳೆಯರು ಪುರುಷರಿಗೆ ಸಮಾನವಾಗಲಿ ಎಂದೇನು ಅಲ್ಲ. ಮಹಿಳೆಯರು ಕಡಿಮೆ ಕೂಲಿ, ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಾರೆ. ಕಾರ್ಮಿಕ ಸಂಘ ರಚಿಸಿ ಸಂಘಟಿತರಾಗಿ ಮುಷ್ಕರಕ್ಕಿಳಿದು ಸಾಮೂಹಿಕ ಚೌಕಾಸಿ ಮಾಡಲಾರರು. ಬೇಡವೆಂದಾಗ ಅವರನ್ನು ಸುಲಭವಾಗಿ ಹೊರಹಾಕಬಹುದು .. ಇತ್ಯಾದಿ ಕಲ್ಪನೆಗಳಿಂದ. ಈ ಎಲ್ಲ ಕಾರಣಗಳಿಂದ ದುಡಿಯುವ ಮಹಿಳೆ ನಾನಾ ರೀತಿಯ ತಲ್ಲಣಗಳಿಗೆ ಗುರಿಯಾಗುತ್ತಿದ್ದಾಳೆ. ಅದರಲ್ಲೂ 2008 ರಲ್ಲಿ ಜಾಗತಿಕ ಆರ್ಥಿಕತೆಯ ಭೀಕರ ಕುಸಿತ ಆರಂಭವಾದ ಮೇಲೆ ಮಹಿಳೆಯು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಮೊದಲ ಬಲಿಪಶು ಆಗಿದ್ದಾಳೆ.

ಶುಭಾಶಯಗಳೊಂದಿಗೆ



ದೊಡ್ಡ ಯಲ್ಲಪ್ಪ

ಸಮಾಜಸೇವಕರು

ಮಾರಗೊಂಡನಹಳ್ಳಿ, ಬೆಂಗಳೂರು



Yame Gowda
Proprietor

Mob.: 9611794259
9880461419



G.C.C

Rajkumar Circle, Kalkere,
Ramamurthy Nagar Main Road,
Bangalore - 560 043.



MOUNT CARMEL HIGH SCHOOL

Classes Pre K.G. to Std X
Excellent Coaching &
100% Pass Result in Std X

8th Cross, Sir M.V. Nagar, R.M. Nagar,
BANGALORE - 560 016
e-mail : mchs@gmail.com

ಹೀಗೆ ಆದಾಯವಿರದ ಕೆಲಸಗಳಲ್ಲಿಯೇ ಹೆಚ್ಚಿನ ಮಹಿಳೆಯರು ಕೇಂದ್ರೀಕೃತ ರಾಗಿದ್ದಾರೆ.

1993–94 ರಿಂದ 2007–8 ರ ಅವಧಿಯಲ್ಲಿ ವೇತನ ರಹಿತ ಉದ್ಯೋಗಗಳಲ್ಲಿ ಶೇ. 70 ರಷ್ಟು ಮಹಿಳೆಯರು ವೇತನ ರಹಿತ ಉದ್ಯೋಗಗಳಲ್ಲಿ ಇದ್ದಾರೆ. 2009–10 ರಲ್ಲಿ ಇದರ ಪ್ರಮಾಣ ಶೇ. 71 ಕ್ಕೇರಿದೆ. ಇದೇ ವರದಿ ಪ್ರಕಾರ 2004–05 ರ ಅವಧಿಯಲ್ಲಿ 35 ಲಕ್ಷ ಮಹಿಳೆಯರು ಕೆಲಸ ಕಳೆದುಕೊಂಡಿದ್ದಾರೆ. ಇದು ನವ ಉದಾರೀಕರಣ ಅವಧಿಯ ಉದ್ಯೋಗಗಳ ಅಭದ್ರತೆ ಮತ್ತು ಡೋಲಾಯಮಾನ ಸ್ಥಿತಿಯನ್ನು ಸೂಚಿಸುತ್ತದೆ.

ಜಾಗತಿಕ ಆರ್ಥಿಕ ಕುಸಿತ ಮತ್ತು ಜಾಗತಿಕ ಬೇಡಿಕೆಯಲ್ಲುಂಟಾದ ಕುಸಿತದಿಂದಾಗಿ ಹಲವು ಸಾಂಪ್ರದಾಯಿಕ ಗೃಹಾಧಾರಿತ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ಗೃಹಾಧಾರಿತ ಕೆಲಸಗಾರರಿಗೆ ಹೊರಗುತ್ತಿಗೆಯೂ ದೊರೆಯುತ್ತಿದ್ದ ಉತ್ಪಾದನಾ ಕೆಲಸಗಳಲ್ಲಿ ಕುಸಿತವುಂಟಾಗಿದೆ. ಗೃಹಾಧಾರಿತ ಕೆಲಸವೂ ಸೇರಿದಂತೆ ಉತ್ಪಾದನಾ ಕ್ಷೇತ್ರದಲ್ಲಿನ ಕೆಲಸಗಳಲ್ಲಿ ಅನಿಶ್ಚಿತತೆ ಮತ್ತು ಡೋಲಾಯಮಾನ ಪರಿಸ್ಥಿತಿ ಒಂದು ಶಾಶ್ವತ ಲಕ್ಷಣವಾಗಿದೆ.

ಬಟ್ಟೆ ಹೊಲಿಯುವುದು, ಲೇಸ್, ಹೊಲೆಯುವುದು, ನೇಯುವುದು ಗಾಳಿಪಟ, ಕಾಗದದ ಚೀಲ ತಯಾರಿಕೆ, ಎಲೆಕ್ಟ್ರಾನಿಕ್ ಉಪಕರಣ ಜೋಡಣೆ, ಆಟದ ಸಾಮಗ್ರಿಗಳ ತಯಾರಿಕೆಯಂತಹ ನೂರಾರು ಕೆಲಸಗಳ ಗೃಹಾಧಾರಿತ ಕೆಲಸಗಳು ಅತ್ಯಂತ ಕಡಿಮೆ ಆದಾಯವಿದ್ದರೂ ಈಗ ಆ ಕೆಲಸಗಳು ಸಿಗುತ್ತಿಲ್ಲ. ಕೃಷಿ ವಲಯದಲ್ಲಿ ಕೆಲಸ ಕಳೆದುಕೊಂಡವರಿಗೆ ಉದ್ಯೋಗಾವಕಾಶ ಒದಗಿಸುವಲ್ಲಿ ಉತ್ಪಾದನಾ ಕ್ಷೇತ್ರ ಸೋತಿದೆ. ವಿಮೆ, ಅಂಚೆ, ಬ್ಯಾಂಕ್, ರಾಜ್ಯ ಮತ್ತು ಕೇಂದ್ರ ಸೇವೆ, ಮಾಹಿತಿ ತಂತ್ರಜ್ಞಾನ ಆಧಾರಿತ ಕೆಲಸಗಳ ಪ್ರಮಾಣ ಅತ್ಯಂತ ಕಡಿಮೆ. ಮಾಹಿತಿ ಮತ್ತು ಸಂಪರ್ಕ ವಲಯದಲ್ಲಿ ಒಟ್ಟು ಉದ್ಯೋಗಗಳ ಸಂಖ್ಯೆ ಹೆಚ್ಚಾಗಿದ್ದರೂ ಮಹಿಳೆಯರ ಸಂಖ್ಯೆ 2010 ರಲ್ಲಿ ಶೇ. 26 ಇದ್ದದ್ದು 2012 ರಲ್ಲಿ ಶೇ. 22 ಕ್ಕಿಳಿದಿದೆ. ಸೇವಾ ಕ್ಷೇತ್ರದಲ್ಲಿ ಒಟ್ಟು ಮಹಿಳಾ ಕೆಲಸಗಾರರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಶೇ. 25.47, ವ್ಯಾಪಾರದಲ್ಲಿ ಶೇ. 19.1, ಮನೆಕೆಲಸಗಾರರು ಶೇ. 15.88. ಆರ್ಥಿಕ ಮತ್ತು ವಿಮಾ ವಲಯದಲ್ಲಿ ಕೇವಲ 5.26 ರಷ್ಟಿದ್ದಾರೆ.

ಶಾಶ್ವತ ತಾತ್ಕಾಲಿಕತೆ
ಮತ್ತು 'ಅತಿಥಿ' ದುಡಿಮೆ!

ಇದೇ ಅವಧಿಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿರುವ ಕ್ಷೇತ್ರ ಕಟ್ಟಡ ನಿರ್ಮಾಣ. ಈ ವಲಯದ ಮುಖ್ಯ ಲಕ್ಷಣವೆಂದರೆ ಶಾಶ್ವತವಾಗಿರುವ ತಾತ್ಕಾಲಿಕತೆ ಕಾರ್ಪೋರೇಟ್ ಮತ್ತು ರಿಯಲ್ ಎಸ್ಟೇಟ್ ದಂಧೆಕೋರರು ಲಾಭವನ್ನು ಕೊಳ್ಳೆ ಹೊಡೆಯುತ್ತಿರುವಾಗ ಇಲ್ಲಿ ದುಡಿಮೆಗಾರರ ಪರಿಸ್ಥಿತಿ ದಿನೇ ದಿನೇ ಕ್ಷೀಣಿಸುತ್ತಿದೆ.

2004–05 ರಿಂದೀಚೆಗೆ ಮಹಿಳಾ ಕೆಲಸಗಾರರ ಸಂಖ್ಯೆ 51 ಲಕ್ಷಕ್ಕಿಂತ ಹೆಚ್ಚಾಗಿದೆ. ಇದರಲ್ಲಿ ಶೇ. 15.6 ನರೇಗಾ ಯೋಜನೆಯಡಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ. ಕಟ್ಟಡ ಮತ್ತು ನಿರ್ಮಾಣ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ.

ಅಧಿಕಾರ ನಡೆಸುವ ಸರ್ಕಾರಗಳು ತಮ್ಮ ವಿವಿಧ ಸ್ಕೀಮುಗಳನ್ನು ಗರಿಷ್ಠ ರಾಜಕೀಯ ಲಾಭಕ್ಕೆ ಇದನ್ನು ಬಳಸುತ್ತಿದ್ದು, ಇವನ್ನು ಯಾವುದೇ ಸಮಯದಲ್ಲಿ ಬೇಕಾದರೂ ಹಿಂತೆಗೆದುಕೊಳ್ಳಬಹುದಾಗಿದೆ. ಒಂದು ಕಡೆ ಈ ಸ್ಕೀಮುಗಳ ಲಾಭ ಪಡೆಯಬೇಕಾದ ಜನತೆಯನ್ನು ವಂಚಿಸಿದರೆ ಇನ್ನೊಂದೆಡೆ ಇವುಗಳಲ್ಲಿ ದುಡಿಯುವವರನ್ನು ಕೆಲಸಗಾರರೆಂದೂ ಗುರುತಿಸಲಾಗುತ್ತಿಲ್ಲ. ಬದಲಾಗಿ ಸಮಾಜಸೇವಕರು, ಸೇವಾ ಕಾರ್ಯಕರ್ತರು, ಅತಿಥಿಗಳು, ಸ್ವಯಂ ಸೇವಕರು, ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತಿದೆ.

ಅಂಗನವಾಡಿ, ಬಿಸಿಯೂಟ, ರಾಷ್ಟ್ರೀಯ ಆರೋಗ್ಯ ಮಿಷನ್, ಸರ್ವ ಶಿಕ್ಷಣ ಅಭಿಯಾನ, ಅಂಚೆ ಮತ್ತು ಸಣ್ಣ ಉಳಿತಾಯ ಯೋಜನೆ, ಕೃಷಿ ತಂತ್ರಜ್ಞಾನ ನಿರ್ವಹಣೆಗೆ ಹೀಗೆ ಸರ್ಕಾರದ ಒಟ್ಟು 72 ವಿವಿಧ ಯೋಜನೆಗಳಲ್ಲಿ, ಸ್ಕೀಮುಗಳಲ್ಲಿ 1 ಕೋಟಿಯಷ್ಟು ಜನ ದುಡಿಯುತ್ತಿದ್ದಾರೆ. ಇವರಲ್ಲಿ ಶೇ. 80 ರಷ್ಟು ಮಹಿಳೆಯರು. ಗೌರವಧನ, ಪ್ರೋತ್ಸಾಹ ಧನಗಳ ಹೆಸರಿನಲ್ಲಿ ಅವರಿಗೆ ನಿಕೃಷ್ಟ ಸಂಭಾವನೆ ನೀಡಲಾಗುತ್ತಿದೆ. ಕೆಲವರಿಗೆ ಅದೂ ದೊರೆಯುತ್ತಿಲ್ಲ. ಬದಲಿಗೆ ಯೋಜನೆಗಳ ಫಲಾನುಭವಿಗಳಿಂದಲೇ ಬಳಕೆಯ ಶುಲ್ಕ ವಸೂಲಿ ಮಾಡುವಂತೆ ಹೇಳಲಾಗುತ್ತಿದೆ. ಮನೆಯೊಳಗೆ ಆಹಾರ ತಯಾರಿಸುವ, ಮಕ್ಕಳನ್ನು, ಮುದುಕರನ್ನು, ಖಾಯಿಲೆ ಬಿದ್ದವರನ್ನು ನೋಡಿಕೊಳ್ಳುವ ಮಹಿಳೆಯರಿಗೆ ಮನೆಯ ಹೊರಗೂ ಅದೇ ಕೆಲಸವನ್ನು ಯಾವುದೇ ವೇತನ ಇಲ್ಲದೆ ಸಾಮಾಜಿಕ ಭದ್ರತೆಯಿಲ್ಲದೇ

ಅಂಗನವಾಡಿ, ಬಿಸಿಯೂಟ, ರಾಷ್ಟ್ರೀಯ ಆರೋಗ್ಯ ಮಿಷನ್, ಸರ್ವ ಶಿಕ್ಷಣ ಅಭಿಯಾನ, ಅಂಚೆ ಮತ್ತು ಸಣ್ಣ ಉಳಿತಾಯ ಯೋಜನೆ, ಕೃಷಿ ತಂತ್ರಜ್ಞಾನ ನಿರ್ವಹಣೆಗೆ ಹೀಗೆ ಸರ್ಕಾರದ ಒಟ್ಟು 72 ವಿವಿಧ ಯೋಜನೆಗಳಲ್ಲಿ, ಸ್ಕೀಮುಗಳಲ್ಲಿ 1 ಕೋಟಿಯಷ್ಟು ಜನ ದುಡಿಯುತ್ತಿದ್ದಾರೆ. ಇವರಲ್ಲಿ ಶೇ. 80 ರಷ್ಟು ಮಹಿಳೆಯರು. ಗೌರವಧನ, ಪ್ರೋತ್ಸಾಹಧನಗಳ ಹೆಸರಿನಲ್ಲಿ ಅವರಿಗೆ ನಿಕೃಷ್ಟ ಸಂಭಾವನೆ ನೀಡಲಾಗುತ್ತಿದೆ.



ದುಡಿಸಿಕೊಳ್ಳಲಾಗುತ್ತಿದೆ.

ದೀರ್ಘ ಲಭ್ಯವಿರುವ ಮತ್ತು ಉತ್ತಮ ವೇತನ ನೀಡುವ ಮೂಲ ಕೆಲಸಗಳಲ್ಲಿ ಮಹಿಳೆಯರು ಸಂಖ್ಯೆ ಕುಸಿದಿದೆ. ಅಲ್ಪಾವಧಿಯ, ಕಡಿಮೆ ಸಂಭಾವನೆಯ ಕೆಲಸಗಳಲ್ಲಿ ಈ ಇಳಿತದ ಪ್ರಮಾಣ ಕಡಿಮೆಯಿದೆ. ಹೆಚ್ಚಿನ ಮಹಿಳೆಯರಿಗೆ ತಮ್ಮ ಮತ್ತು ಕುಟುಂಬದ ಉಳಿವಿಗಾಗಿ ಎಷ್ಟೇ ಅವಧಿಗೆ ಯಾವುದೇ ಪರಿಸ್ಥಿತಿ ಇದ್ದರೂ, ಯಾವುದೇ ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ.

2009-10ರಲ್ಲಿ ದೇಶದ ಒಟ್ಟು ಮಹಿಳೆಯರಲ್ಲಿ ಕೇವಲ ಶೇ. 14 ರಷ್ಟು ಸಂಬಳ/ಆದಾಯವನ್ನು ಗಳಿಸುತ್ತಿದ್ದಾರೆ. ಶೇ. 85 ರಷ್ಟು ಮಹಿಳೆಯರು ಉತ್ಪಾದನೆಯಲ್ಲಿ ತೊಡಗಿದ್ದರೂ ಯಾವುದೇ ಆದಾಯವಿಲ್ಲದೆ ಆರ್ಥಿಕವಾಗಿ ಅವಲಂಬಿತರಾಗಿದ್ದಾರೆ.

ಇಂತಹ ತೀವ್ರ ಆರ್ಥಿಕ ಅವಲಂಬನೆಯು ನಮ್ಮ ಸಮಾಜದಲ್ಲಿ ಮಹಿಳೆಯರಿಗಿರುವ ಕೀಳು ಸ್ಥಾನಮಾನದ ದ್ಯೋತಕ. ಈ ಅಂಶವು ಮಹಿಳೆಯರ ದಿನನಿತ್ಯದ ಬದುಕಿನಲ್ಲಿ ಕೆಲವು ರೂಪಗಳಲ್ಲಿ ಹುಟ್ಟಿನಿಂದ ಸಾವಿನವರೆಗೆ ತಾರತಮ್ಯದಲ್ಲಿರಲು ಕಾರಣವಾಗಿದೆ.

ದುಡಿಮೆಯ ಸ್ಥಿತಿಗತಿಗಳು

ಶೇ. 96 ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಬಹುತೇಕ ಕಾರ್ಮಿಕ ಕಾನೂನುಗಳು ಅವರಿಗೆ ಅನ್ವಯಿಸುತ್ತಿಲ್ಲ. ಅನ್ವಯುವಾಗುವ ಕಾನೂನುಗಳನ್ನು ಅನುಷ್ಠಾನಗೊಳಿಸುತ್ತಿಲ್ಲ. ಬಹುತೇಕ ಮಹಿಳೆಯರಿಗೆ ಕನಿಷ್ಠ ವೇತನ, ಸಮಾನ ವೇತನ ಇಲ್ಲದೆ ಸಾಮಾಜಿಕ ಭದ್ರತಾ ಯೋಜನೆಗಳ ಲಾಭ ದೊರೆಯುತ್ತಿಲ್ಲ.

ಅಸಮಾನ ವೇತನ: ಸಮಾನ ವೇತನ ಕಾನೂನು 1976 ಸಮಾನ ಅಥವಾ ಸಮಾನ ರೀತಿಯ ಕೆಲಸಗಳಿಗೆ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಸಮಾನ ವೇತನ ನೀಡುವುದು ಮಾಲೀಕರ ಕರ್ತವ್ಯ ಎಂದೂ ಹೇಳಿದೆ. ಕೆಲಸಕ್ಕೆ ನೇಮಿಸಿಕೊಳ್ಳುವಾಗಲೂ ಯಾವುದೇ ತಾರತಮ್ಯ ಮಾಡಬಾರದು. ಈ ಕಾಯ್ದೆ ಅಂಗೀಕಾರವಾದ 38 ವರ್ಷಗಳ ನಂತರವೂ ಮಹಿಳೆಯರ ವೇತನ ಕಡಿಮೆ ಇದೆ. ಉದಾ: ಕೃಷಿ ವಲಯ ಮತ್ತು ಕಟ್ಟಡ ನಿರ್ಮಾಣ ಮತ್ತು ಇತರೆ ಅಸಂಘಟಿತ ವಲಯಗಳು.

ಸೇವಾ ವಲಯದಲ್ಲಿ ಭಡ್ತಿ, ತರಬೇತಿ, ವರ್ಗಾವಣೆಗಳಲ್ಲಿ ಯಾವುದೇ ತಾರತಮ್ಯ ನಿವಾರಿಸಲು 1987 ರ ಸಮಾನ ವೇತನ ಮಸೂದೆಗೆ ತಿದ್ದುಪಡಿ ತರಲಾಗಿದೆ. ಸಂಘಟಿತ ವಲಯ ದಲ್ಲಿಯೂ ತಾರತಮ್ಯ ಮುಂದು ವರೆದಿದೆ. ಕೆಲಸಗಳ ವರ್ಗೀಕರಣ ಮತ್ತು ಮಹಿಳೆಯರ ಕೆಲಸಗಳನ್ನು ಸುಲಭವೆಂದು ಭಾವಿಸಿ ಕಡಿಮೆ ವೇತನ ನೀಡುವ ಕ್ರಮ ಮುಂದುವರಿದಿದೆ. ಕಾನೂನು ಉಲ್ಲಂಘಿಸಿದವರಿಗೆ ಇದುವರೆಗೂ ಶಿಕ್ಷೆ ಆಗಲಿಲ್ಲ. ಇದಕ್ಕಾಗಿ ಕೇಂದ್ರ ಸಲಹಾ ಮಂಡಳಿಯಿದೆ. ಇದು ಸಭೆಗಳಿಗೆ ಮಾತ್ರ ಸೀಮಿತವಾಗಿ, ನಿಷ್ಕ್ರಿಯವಾಗಿದೆ.

ಹೆರಿಗೆ ಸವಲತ್ತುಗಳು:

1961 ರಿಂದಲೇ ಹೆರಿಗೆ ರಜೆ ಮತ್ತು ಸಂಬಂಧಿಸಿದ ಸವಲತ್ತುಗಳು ಇವೆ. ಇದರ ಪ್ರಕಾರ 6 ತಿಂಗಳ ಹೆರಿಗೆ ರಜೆ, ಗರ್ಭಪಾತ, ಗರ್ಭಿಣಿಯರಿಗುಂಟಾಗುವ ಅನಾರೋಗ್ಯ, ಹೆರಿಗೆ ಅವಧಿ ಮುನ್ನ ಪ್ರಸವ, ಮಗುವಿಗೆ 15 ತಿಂಗಳು ಆಗುವವರೆಗೆ ರಜೆಯ ಅವಧಿಯಲ್ಲಿ ಅವಕಾಶವಿದೆ. 2008 ರಲ್ಲಿ ಈ ಮಸೂದೆಗೆ ತಿದ್ದುಪಡಿ ತಂದು ವೈದ್ಯಕೀಯ ಬೋನಸ್ಸು 250 ರಿಂದ 1000 ಕ್ಕೇರಿಸಲಾಗಿದೆ.

ಶಿಶುಪಾಲನಾ ಕೇಂದ್ರಗಳು:

ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ 6 ವರ್ಷಕ್ಕಿಂತ ಕಡಿಮೆ ವಯಸ್ಸಿನ 20 ಮಕ್ಕಳಿದ್ದರೆ ಶಿಶುಪಾಲನಾ ಕೇಂದ್ರಗಳನ್ನು ಒದಗಿಸಬೇಕೆಂಬುದು ಕಡ್ಡಾಯವಾಗಿದೆ. ಗಣಿಗಾರಿಕಾ ಶಿಶುಪಾಲನಾ ಕಾಯ್ದೆ 1966ರಂತೆ ಶಿಶುಪಾಲನಾ ಮಾತ್ರವಲ್ಲದೆ ಮಕ್ಕಳ ಮತ್ತು ತಾಯಂದಿರ ಆರೋಗ್ಯ ತಪಾಸಣೆ ಮಾಡಬೇಕೆಂದೂ ತಿಳಿಸಿದೆ.

> ದೇಶದ ಆರ್ಥಿಕತೆಗೆ, ಉತ್ಪಾದನೆಗೆ ದುಡಿಯುವ ಮಹಿಳೆಯರ ಕಾಣಿಕೆ ಹೆಚ್ಚಿದ್ದರೂ ಕೂಡಾ ಇಂದಿನ ವ್ಯವಸ್ಥೆ ಅದು ಬೆಳಕಿಗೆ ಬರದಂತೆ ಮರೆಮಾಚುವ ಪ್ರಯತ್ನಗಳನ್ನು ನಡೆಸುತ್ತಿದೆ. ಆರೋಗ್ಯಕರವಾದ, ಸಮ-ಸಮಾಜ ನಿರ್ಮಾಣ ವಾಗಬೇಕಾದರೆ ದುಡಿಮೆಯಲ್ಲಿ ಲಿಂಗ ತಾರತಮ್ಯವನ್ನು ತೆಗೆಯಬೇಕಿದೆ. ಅದು ದುಡಿಯುವ ಮಹಿಳೆಯರ ಚಳುವಳಿಯ ಪ್ರಶ್ನೆ ಮಾತ್ರವಲ್ಲ. ಸಮಗ್ರ ದುಡಿಯುವ ಜನರ ಚಳುವಳಿಯ ಪ್ರಶ್ನೆಯಾಗಿದೆ ಮತ್ತು ಅದು ಎಲ್ಲ ಪ್ರಗತಿಪರ ಶಕ್ತಿಗಳ ಕರ್ತವ್ಯವೂ ಆಗಿದೆ.

ರಾತ್ರಿ ಪಾಳೆಯ ಕೆಲಸ:

ರಾತ್ರಿ 7 ರಿಂದ ಬೆಳಿಗ್ಗೆ 6 ಗಂಟೆವರೆಗಿನ ಮಹಿಳೆಯರ ದುಡಿಮೆಯನ್ನು 1948 ರ ಫ್ಯಾಕ್ಟರಿ ಕಾಯ್ದೆ ನಿಷೇಧಿಸಿದೆ. ಇದನ್ನು ಬದಲಿಸಲು ರಾಜ್ಯ ಸರ್ಕಾರಗಳಿಗೆ ಹಕ್ಕಿದ್ದರೂ ಮಹಿಳೆಯರನ್ನು ರಾತ್ರಿ 10 ರಿಂದ ಬೆಳಿಗ್ಗೆ 5 ರ ವರೆಗೆ ಕೆಲಸಕ್ಕೆ ನೇಮಿಸುವಂತೆ ಇರಲಿಲ್ಲ.

2005 ರಲ್ಲಿ ಗೆಜೆಟ್ ಪ್ರಕಟಣೆಯ ಮುಖಾಂತರ ತಿದ್ದುಪಡಿ ತರಲಾಯಿತು. ನಿರ್ಬಂಧಿತವಾಗಿದ್ದ ಈ ಅವಧಿಯಲ್ಲಿ ಕೆಲಸ ಮಾಡಿಸಿಕೊಂಡರೆ ಸಾರಿಗೆ ವ್ಯವಸ್ಥೆ, ರಕ್ಷಣೆ ಒದಗಿಸಬೇಕೆಂದಿದೆ. ಮಾಹಿತಿ ತಂತ್ರಜ್ಞಾನ, ಮೀನು ಪರಿಷ್ಕರಣೆ, ವಿಶೇಷ ಆರ್ಥಿಕ ವಲಯ, ಜವಳಿ, ಸಿದ್ಧ ಉಡುಪು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವು ಇಲಾಖೆಗಳಲ್ಲಿ ಲಕ್ಷಾಂತರ ಮಹಿಳೆಯರು ರಾತ್ರಿ ಪಾಳಿಯಲ್ಲಿ ದುಡಿಯುತ್ತಿದ್ದಾರೆ. ಇವರಿಗೆ ಸೂಕ್ತ ರಕ್ಷಣೆಯ ವ್ಯವಸ್ಥೆ, ಸಾರಿಗೆ ಸೌಕರ್ಯ ಒದಗಿಸಲಾಗಿಲ್ಲ. (ಬೆಂಗಳೂರಿನ ಐ.ಟಿ. ಕ್ಷೇತ್ರದಲ್ಲಿ ಕೆಲವೆಡೆ ಮಾತ್ರ ಸಾರಿಗೆ ವ್ಯವಸ್ಥೆ ಇದೆ.)

ಪ್ರತ್ಯೇಕ ಶೌಚಾಲಯ ಮತ್ತು ವಿಶ್ರಾಂತಿ ಕೊಠಡಿ : ಫ್ಯಾಕ್ಟರಿ ಕಾಯ್ದೆ ಮತ್ತು ಗಣಿ ಕಾಯ್ದೆಯಡಿ ಮಹಿಳಾ ಕೆಲಸಗಾರರಿಗೆ ಪ್ರತ್ಯೇಕ ಶೌಚಾಲಯ ಒದಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಗಣಿ, ಫ್ಯಾಕ್ಟರಿ, ಕೃಷಿ, ಕಟ್ಟಡ, ಇಟ್ಟಿಗೆ, ಅಂಗಡಿ, ಎಸ್ಟೇಟ್, ಕಛೇರಿಗಳು, ಶಾಲೆಗಳು, ಅಂಗನವಾಡಿ ಕೇಂದ್ರಗಳು, ಅಂಚೆ ಇಲಾಖೆಗಳಲ್ಲಿ ಈ ವ್ಯವಸ್ಥೆ ಇಲ್ಲ. ಕೆಲವೆಡೆ ಇದ್ದರೂ ವ್ಯವಸ್ಥಿತವಾಗಿಲ್ಲ. ವಿಶ್ರಾಂತಿ ಕೊಠಡಿಗಳೂ ಇಲ್ಲವೇ ಇಲ್ಲ.

ಹೆಚ್ಚುತ್ತಿರುವ ಲೈಂಗಿಕ ಕಿರುಕುಳ : ಮಹಿಳಾ ದೌರ್ಜನ್ಯಗಳು, ಅತ್ಯಾಚಾರಗಳು ಮಾತ್ರ ಇಂದು ಬಹಳಷ್ಟು ಪ್ರಯತ್ನಗಳ ನಂತರ ಬೆಳಕಿಗೆ ಬರುತ್ತವೆ. ಆದರೆ ಲೈಂಗಿಕ ಕಿರುಕುಳ ಹೆಚ್ಚುತ್ತಿದ್ದರೂ ಅದನ್ನು ಅನುಭವಿಸಿಕೊಂಡೇ ಕೆಲಸ ಮಾಡಬೇಕಾದ ಪರಿಸ್ಥಿತಿ ಲಕ್ಷಾಂತರ

ಮಹಿಳೆಯರದ್ದಾಗಿದೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ 'ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾನೂನು" ರೂಪುಗೊಂಡಿದೆ. ಆದರೆ ಅದರ ಜಾರಿಗೆ ಹೆಚ್ಚಿನ ಕ್ರಮಗಳನ್ನು ರಾಜ್ಯ ಸರ್ಕಾರಗಳು ಮತ್ತು ಮಾಲೀಕರು ತೆಗೆದುಕೊಂಡಿಲ್ಲ.

ಒಂದು ವರದಿಯ ಪ್ರಕಾರ ನಗರ ಪ್ರದೇಶಗಳಲ್ಲಿ ಶೇ. 91 ರಷ್ಟು ಮಹಿಳೆಯರು ಒಂದಲ್ಲ ಒಂದು ಬಗೆಯ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. 12 ರಿಂದ 15 ವರ್ಷದ ನಡುವಿನ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಕಿರುಕುಳಗಳ ಪ್ರಮಾಣ ಹೆಚ್ಚುತ್ತಿದೆ. ಲೈಂಗಿಕ ಕಿರುಕುಳ ಅನುಭವಿಸಿದ ಶೇ. 88 ರಷ್ಟು ಮಹಿಳೆಯರು ದೂರು ನೀಡಿಲ್ಲ. ಏಕೆಂದರೆ ಅಂತಹ ಕೌಟುಂಬಿಕ, ಸಾಮಾಜಿಕ ವಾತಾವರಣ ಇಲ್ಲ. ಜೊತೆಗೆ ಇಂತಹ ಸಂತ್ರಸ್ತರಿಗೆ ಸಹಾನುಭೂತಿಯಿಂದ ಸಹಾಯ ಮಾಡುವ ಕಾನೂನು ಮತ್ತು ನ್ಯಾಯ ವ್ಯವಸ್ಥೆ ನಮ್ಮಲ್ಲಿಲ್ಲ. ಅಥವಾ ಇರುವ ವ್ಯವಸ್ಥೆಗಳು ನೊಂದವರಲ್ಲಿ ವಿಶ್ವಾಸ ಹುಟ್ಟಿಸುವಂತಿಲ್ಲ.

ಲೈಂಗಿಕ ದೌರ್ಜನ್ಯ ವಿರೋಧಿ ಕಾನೂನು, ದೈಹಿಕ ಸಂಪರ್ಕ, ಲೈಂಗಿಕ ಸಂಪರ್ಕದ ಬೇಡಿಕೆ, ಲೈಂಗಿಕ ಛಾಯೆಯ ಹೇಳಿಕೆ, ಅಶ್ಲೀಲ ಚಿತ್ರಗಳನ್ನು ತೋರಿಸುವುದು, ಅಸಭ್ಯ ಎನಿಸುವ ಯಾವುದೇ ಮಾತು ಮತ್ತು ನಡವಳಿಕೆಯನ್ನು ಲೈಂಗಿಕ ಕಿರುಕುಳವೆಂದೂ ಗುರುತಿಸಿದೆ.

ಕೆಲಸದ ಸ್ಥಳದಲ್ಲಿ ಆಕೆಯ ಉದ್ಯೋಗ ರಕ್ಷಣೆ, ಅಥವಾ ಬಡ್ತಿಯ ಸಂಬಂಧವಾಗಿ ಲೈಂಗಿಕ ಇಚ್ಛೆ ಪೂರೈಕೆಯ ಒತ್ತಡಗಳು, ಆಕೆಯಲ್ಲಿ ಭಯ ಹುಟ್ಟಿಸುವುದು, ಆಕೆಗೆ ಕಠಿಣವಾದ ಕೆಲಸದ ವಾತಾವರಣ ನಿರ್ಮಾಣ ಮಾಡುವುದು ಅಥವಾ ಆಕೆಯ ಆರೋಗ್ಯ ಮತ್ತು ಕ್ಷೇಮದ ಮೇಲೆ ತೀವ್ರ ಪರಿಣಾಮ ಬೀರುವಂತಹ ಪರಿಸ್ಥಿತಿಯನ್ನು ಈ ಕಾನೂನು ನಿರ್ದಿಷ್ಟಗೊಳಿಸಿದೆ. ಎಲ್ಲಾ ಆಡಳಿತಾತ್ಮಕ ಕಛೇರಿ ಮತ್ತು ಘಟಕಗಳಲ್ಲಿ ದೂರು ಸಮಿತಿಗಳನ್ನು ರಚಿಸುವುದನ್ನು ಕಾಯ್ದೆ ಕಡ್ಡಾಯಗೊಳಿಸಿದೆ. ಆದರೆ ಸಮಾಜ ಮತ್ತು ಮನೆಯವರಿಗೆ ಹೆದರಿ ಬಹುತೇಕ ಮಹಿಳೆಯರು ದೂರು ನೀಡಲು ಮುಂದಾಗುತ್ತಿಲ್ಲ.

ಭಾರತದಲ್ಲಿ ಇಂದು ಬಲಪಂಥೀಯ ಶಕ್ತಿಗಳು ಅಧಿಕಾರದಲ್ಲಿ ಮೇಲುಗೈ ಪಡೆದಿವೆ. ಇದರ ಹಿಂದೆ ಬಾರಿ ಬಂಡವಾಳಗಾರರ ವ್ಯವಸ್ಥಿತ ಹುನ್ನಾರ ಇದೆ. ಇದರ ಉದ್ದೇಶವೇ ಬಂಡವಾಳದ ಲಾಭವನ್ನು ಮತ್ತಷ್ಟು ಹೆಚ್ಚಿಸುವುದಾಗಿದೆ. ಈ ಲಾಭ ಅತ್ಯಧಿಕವಾಗಬೇಕಾದರೆ ಮತ್ತಷ್ಟು, ಮಗದಷ್ಟು ಶೋಷಣೆಯ ಅಗತ್ಯವಾಗಿದೆ. ಈ ಶೋಷಣೆಯ ಮೊದಲ ಬಲಿಪಶು ಕಾರ್ಮಿಕ ವರ್ಗ. ಈ ಕಾರ್ಮಿಕ ವರ್ಗದಲ್ಲಿ ಮೊದಲು ದುಡಿಯುವ ಮಹಿಳೆ. ಕೆಲವೊಂದು ದುಡಿಯುವ ಮಹಿಳೆಯರಿಗೆ ಕಾನೂನುಗಳು ಇದ್ದರೂ 'ಬಳಸಿ ಬಿಸಾಡು' ನೀತಿಗಳೇ ಮೇಲುಗೈ ಸಾಧಿಸಿವೆ. ಈ ನೀತಿಗಳ ಫಲವಾಗಿ ಇಂದು ಉದ್ಯೋಗಸ್ಥ ಮಹಿಳೆಯರಿಗೆ ಕನಿಷ್ಠ ಕೂಲಿ, ಕೆಲಸದ ಭದ್ರತೆ, ಹೆರಿಗೆ ಭತ್ಯೆ, ಶಿಶು ಪಾಲನಾ ಕೇಂದ್ರಗಳು, ವಿಶ್ರಾಂತಿ ಕೊಠಡಿಗಳು ಮರೀಚಿಕೆಯಾಗಿವೆ.

ದೇಶದ ಆರ್ಥಿಕತೆಗೆ, ಉತ್ಪಾದನೆಗೆ ದುಡಿಯುವ ಮಹಿಳೆಯರ ಕಾಣಿಕೆ ಹೆಚ್ಚಿದ್ದರೂ ಕೂಡಾ ಇಂದಿನ ವ್ಯವಸ್ಥೆ ಅದು ಬೆಳಕಿಗೆ ಬರದಂತೆ ಮರೆಮಾಚುವ ಪ್ರಯತ್ನಗಳನ್ನು ನಡೆಸುತ್ತಿದೆ. ಆರೋಗ್ಯಕರವಾದ, ಸಮ-ಸಮಾಜ ನಿರ್ಮಾಣವಾಗಬೇಕಾದರೆ ದುಡಿಮೆಯಲ್ಲಿ ಲಿಂಗ ತಾರತಮ್ಯವನ್ನು ತೆಗೆಯಬೇಕಿದೆ. ಅದು ದುಡಿಯುವ ಮಹಿಳೆಯರ ಚಳುವಳಿಯ ಪ್ರಶ್ನೆ ಮಾತ್ರವಲ್ಲ. ಸಮಗ್ರ ದುಡಿಯುವ ಜನರ ಚಳುವಳಿಯ ಪ್ರಶ್ನೆಯಾಗಿದೆ ಮತ್ತು ಅದು ಎಲ್ಲ ಪ್ರಗತಿಪರ ಶಕ್ತಿಗಳ ಕರ್ತವ್ಯವೂ ಆಗಿದೆ.

ಈಗೀಗ ಅಪ್ಪ ಸಿಟ್ಟು ಮಾಡುವುದಿಲ್ಲ

ರೇಣುಕಾ ರಮಾನಂದ. ಉತ್ತರ ಕನ್ನಡ

ಹಗಲಿರುಳು
ಮನೆಮಂದಿಯ ಹಸಿವನ್ನೆಲ್ಲ
ಒನಕೆಯಡಿಯಿಟ್ಟು
ಭತ್ತ ಕುಟ್ಟುತ್ತಾಳೆ
ನನ್ನವ್ವ


ಬಳ್ಳು ಮೀರಿದ
ಕಳ್ಳ ಬೀಜವನ್ನೆಲ್ಲ
ಮತ್ತೆ ಒಟ್ಟುವ ಅವಳ
ಪಾದದ ಲಯಬದ್ಧ ಕುಣಿತಕ್ಕೆ
ಕುಳಿತಲ್ಲೇ ಕೂರುತ್ತಾನೆ
ಮಗುವಿನಂತಹ ಅಪ್ಪ
ಸಿಕ್ಕವರ ಮೇಲೆಲ್ಲ ಸಿಡುಕುವ
ಸಿಟ್ಟು ಮರೆತು.

ಜಡ್ಡುಗಟ್ಟಿದೆ ಹಸ್ತ
ಒನಕೆ ಕುಣಿತಕ್ಕೆ (ಹಿಡಿತಕ್ಕೆ)
ಅನುಕೂಲವೇ ಅದು
ಒಲೆಯ ಮೇಲಿನ ತಪ್ಪಲೆ
ಬರಿಗೈಯಲ್ಲೇ ಇಳಿಸಲಿಕ್ಕೆ.
ಕಾಯುತ್ತದೆ ಕೇರುವ ಮೊರ
ಹೊಟ್ಟು- ಕಾಳುಗಳ ಬೇರ್ಪಡಿಸುವ
ಕಾಯಕದ ಕೈಲಾಸಕ್ಕೆ
ಹೆಚ್ಚೇನೂ ಬೇಡುವುದಿಲ್ಲ
ವರ್ಷಕ್ಕೊಮ್ಮೆ ಮುಷ್ಠಿ ಸಗಣಿ
ಬಳಿದು ಬಿಸಿಲಿಗಿಟ್ಟರೆ
ಬರುವರ್ಷವೂ ಗಟ್ಟಿಮುಟ್ಟು

ಪುರಲೆ ಧಗಧಗ ಉರಿದು
ಅರಳುತ್ತದೆ ಅನ್ನ ಮಲ್ಲಿಗೆಯಂತೆ
ನುಚ್ಚು – ಉರಿಮೆಣಸು
ಉಪ್ಪಿನೊಂದಿಗೆ ಸೇರಿ
ರಸ ಒಸರುವ ರೊಟ್ಟಿ-
ಯಾಗುತ್ತದೆ ಕೆಂಡದಲ್ಲಿ.

ಹೇಳಬೇಕೆಂದರೆ
ಈಗೀಗ ನನ್ನಪ್ಪ, ತಂಟೆ
ಮಾಡುವುದಿಲ್ಲ, ರಟ್ಟೆ ಎತ್ತು
ವುದಿಲ್ಲ, ಕಟ್ಟೆ ಮೇಲೆ ಕುಳಿತು
ಹಾಳು ಹರಟೆ ಹೊಡೆಯುವುದಿಲ್ಲ.

ಅವ್ವ ಬರುವುದಕ್ಕೂ
ಮೊದಲು ಗುತ್ತಿಗೆಗೆ ಕೊಟ್ಟ
ಅಬ್ಬಲಿಗೆ ಜಳಿಯ ಬಿದ್ದ
ಹೂವನ್ನೆಲ್ಲ ಆರಿಸಿ ಮಾಲೆ
ಮಾಡಿಡುತ್ತಾನೆ ದೇವರಿಗೆಂದು.
ಅಸಲಿಗೆ ದೇವರ ಪಟವೇ
ಇಲ್ಲದ ಮನೆಯಲ್ಲಿ
ಮಾಲೆ ಮುಡಿದು
ಮುಸಿಮುಸಿ ನಗುತ್ತಾಳೆ
ನನ್ನವ್ವ ಸೆರಗು ಮುಚ್ಚಿ
ಬೆಚ್ಚಗಾಗುತ್ತದೆ ಮುಳಿಹುಲ್ಲ
ಮಾಡು – ಹೊಗೆಯ ಭರತಕ್ಕೆ.



ಇವು ಸಮಾಜಕ್ಕೆ, ಪ್ರಜಾಪ್ರಭುತ್ವಕ್ಕೆ ಅವಮರ್ಯಾದೆಯ ಹತ್ಯೆಗಳು

ಹೆತ್ತವರು ಮಕ್ಕಳನ್ನು ಕೊಲ್ಲುವಷ್ಟು ಕ್ರೂರಿಯನ್ನಾಗಿ ಈ ನಿಸರ್ಗ ಸೃಷ್ಟಿ ಮಾಡಿಲ್ಲ. ಆದರೆ ಉಳ್ಳವರು ಸಮಾಜದ ಮೇಲೆ ತಮ್ಮ ಸ್ವಾರ್ಥಕ್ಕಾಗಿ ಮೌಲ್ಯಗಳನ್ನು ಹೇರಿರುವರು. ಪಾಳೇಗಾರಿ ಜಮೀನ್ದಾರಿ ಮತ್ತು ಪುರುಷಪ್ರಧಾನ ವ್ಯವಸ್ಥೆಯು ತನ್ನ ಲಾಭಕ್ಕಾಗಿ ಸ್ವಾರ್ಥಕ್ಕಾಗಿ ಹೆತ್ತವರ ಹೃದಯದಲ್ಲಿ ವಿಷದ ಬಟ್ಟಲು ಇಟ್ಟಿದೆ. ಹೆತ್ತವರ ಮತ್ತು ಸಂಬಂಧಿಕರ ಕರುಳಿನಲ್ಲಿ ಕತ್ತರಿಯಾಡಿಸುತ್ತಿದೆ. ಹೀಗಾಗಿ ಸಮಾಜದಲ್ಲಿ ಅವಮರ್ಯಾದಾ ಹತ್ಯೆಗಳು ನಿರಂತರವಾಗಿ ಘಟಿಸುತ್ತಿವೆ.



ಕೆ. ನೀಲಾ

ಬೆಂಗಳೂರಿನ ನಿವಾಸಿಯೊಬ್ಬರು ತಮ್ಮ ಹದಿನಾಲ್ಕು ವರ್ಷದ ಮಗಳನ್ನು ಪ್ರೀತಿಸಿದ 19 ವಯಸ್ಸಿನ ಯುವಕನ ಹತ್ಯೆ ಮಾಡಿ ಶವವನ್ನು ಮೂಟೆಯಲ್ಲಿ ಕಟ್ಟಿಕೊಂಡು ದ್ವಿಚಕ್ರ ವಾಹನದ ಮೇಲಿಟ್ಟುಕೊಂಡು ಪೋಲಿಸ್ ಸ್ಟೇಷನ್ನಿಗೆ ಬಂದು ಶವ ಒಪ್ಪಿಸಿ ಶರಣಾದ ಪ್ರಕರಣವೊಂದು ನಡೆಯಿತು. ಕಳೆದ ಎರಡು ವರ್ಷದ ಹಿಂದೆ ಮಂಡ್ಯದ ಆಬಲವಾಡಿ ಎಂಬ ಗ್ರಾಮದಲ್ಲಿ ಹೆತ್ತ ತಂದೆಯೇ ದಲಿತ ಯುವಕನನ್ನು ಪ್ರೀತಿಸಿದ ಮಗಳಿಗೆ, ಸಾರ್ವಜನಿಕವಾಗಿ ಥಳಿಸಿ ನಡುರಸ್ತೆಯ ಮರಕ್ಕೆ ನೇಣು ಹಾಕಿದನು. ಈ ತಲ್ಲಣದ ಘಟನೆಗೆ ಹೆತ್ತ ತಾಯಿಯೂ ಸಾಕ್ಷಿಯಾಗಿ ಪ್ರೇಕ್ಷಕಿಯಾಗಿದ್ದಳು. ಮಾತ್ರವಲ್ಲ ಸಂಬಂಧಿಕರೆಲ್ಲ ನೇಣು ಹಾಕುವುದನ್ನು ನೋಡುತ್ತ ವಿಕೃತವಾಗಿ ತಮ್ಮ ಅಂತರಂಗವನ್ನು ಸಂತೈಸಿಕೊಳ್ಳುತ್ತಿದ್ದರು. ಇನ್ನು ಮುಂದೆ ತಮ್ಮ ಮಕ್ಕಳು ಜಾತಿ ಮೀರಿ ಮನ ಒಲಿಯದಂಥ ಬೇಲಿ ಬಿಗಿದ ನಿರಾಳತೆ ಅನುಭವಿಸುತ್ತಿದ್ದರು. ತಮ್ಮ ಮಗನು ಯಾಕಾದರೂ ಮೇಲ್ಜಾತಿ ಹುಡುಗಿಗೆ ಹೃದಯ ಕೊಟ್ಟನು? ಎಂದು ಮಮ್ಮಲ ಮರುಗುತ್ತ ಮುಚ್ಚಿದ ಬಾಗಿಲಿನ ಸಂದಿಯಿಂದ ಈ ಭೀಕರ ಸನ್ನಿವೇಶವನ್ನು ನೋಡಲಾಗದೆ ಭೋರೆಂದು ಅತ್ತ ಹುಡುಗನ ಹೆತ್ತವರು ಕತ್ತಲ ಕೋಣೆಯಲ್ಲಿ ಕಣ್ಣೀರಾಗಿದ್ದರು. ಉಪನ್ಯಾಸಕಿ ತಂಗಿಯು ದಲಿತ ಹುಡುಗನನ್ನು ಪ್ರೀತಿಸಿದ್ದಕ್ಕಾಗಿ ಸ್ವತಃ ಅಣ್ಣನೇ ಪೆಟ್ರೋಲು ಸುರುವಿ ತಂಗಿಯನ್ನು ಸಾಯಿಸಿದ ಪ್ರಕರಣವು ಮೈಸೂರಿನಲ್ಲಿ ನಡೆಯಿತು. ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಪ್ರೀತಿಸಿ ಮದುವೆಯಾದ ಬೇರೆ ಬೇರೆ ಜಾತಿಯ ಜೋಡಿಯು ಇದ್ದಕ್ಕಿದ್ದಂಗೆ ಕಾಣೆಯಾಯಿತು. ಮತ್ತು ತಿಂಗಳ ತರುವಾಯ ಕೊಲೆಯಾಗಿ ಹೋದರು. ಕೊಂದವರು ಯಾರೆಂದು ಭೇದಿಸದ ಪೋಲಿಸರ ಹೃದಯು ಖಾಕಿಯಲ್ಲಿ ಕಲ್ಲಾಗಿಯೇ ಇತ್ತು.

ಎಷ್ಟು ಪ್ರಕರಣಗಳನ್ನು ನೆನಪು ಮಾಡುವುದು? ಬೆಳಕಿಗೆ ಬಂದ ಪ್ರಕರಣಗಳು ಒಂದೆಡೆಯಾದರೆ ಅಲ್ಲಲ್ಲಿಯೇ ಹೊಸಕಿ ಇನ್ನಿಲ್ಲದಂತೆ ಮುಗಿಸಿ ಹಾಕಿದ ಘಟನೆಗಳು ಕಾಲ ಚಕ್ರದಲ್ಲಿ ಲೀನವಾಗಿವೆ. 'ತಾಯಿಗಿಂತ ಬಂಧುವಿಲ್ಲ. ಉಪ್ಪಿಗಿಂತ ರುಚಿಯಿಲ್ಲ. ಕರುಳಿಗೆ ನಾಚಿಕೆಯಿಲ್ಲ ಅಂಗಾಲಿಗೆ ಹೇಸಿಗೆಯಿಲ್ಲ. ಹೆತ್ತವರೆಂದರೆ ದೇವರ ಸ್ವರೂಪಿ'. ಮುಂತಾದ ಗಾದೆ ಮಾತುಗಳನ್ನು ಕೇಳುತ್ತ ಬೆಳೆದ ಮಕ್ಕಳ ಮುಂದೆಯೇ, ಹೆತ್ತವರೇ ಕಟುಕರಂತೆ ಕರುಳ ಕುಡಿಗಳನ್ನು ಕತ್ತರಿಸಿ ಹಾಕುವುದು ನೋಡುವ ಪರಿಸ್ಥಿತಿ ಎಲ್ಲೆಡೆಯೂ ಕಾಣಿಸುತ್ತಿದೆ. ಕರುಳಿನೊಳಗೆಯೇ ಕತ್ತರಿಯಾಡುತ್ತಿರುವ ಕಾರಣಗಳನ್ನು ಬಗೆಯಬೇಕಿದೆ.

ಈ ರೀತಿಯ ಹತ್ಯೆಯ ಪ್ರಕರಣಗಳನ್ನು ಬಗೆಯುತ್ತ ಹೋದಂತೆ ಬಂಧುಗಳು ಎಸಗುವ ಕ್ರೌರ್ಯದ ಸಂಚು ಗಾಬರಿ ಹುಟ್ಟಿಸುತ್ತದೆ. ಗಂಗಾವತಿಯಲ್ಲಿ ದಲಿತ ಹುಡುಗನಿಗೆ ಮದುವೆಯಾದ ಬಸುರಿ ಮಗಳನ್ನು ಮಾತಾಡಿಸಲೆಂದು ಮನೆಗೆ ಹೋದ ತಂದೆಯು, ಮಮತೆಯ ಮುಖವಾಡ ಧರಿಸಿಯೇ ಮಗಳ ಮನಗೆದ್ದು ನಂತರ ಪೆಟ್ರೋಲು ಸುರಿದು ಸಾಯಿಸಿದ್ದ. ಮೊನ್ನೆ ಬೆಂಗಳೂರಿನ ಪ್ರಕರಣವೂ ಹೀಗೆಯೇ. ಯುವಕನನ್ನು ರಮಿಸಿ ಮಾತಿಗೆ ಕರೆದು ಕೊಚ್ಚಿ ಕೊಲೆ ಮಾಡಲಾಯಿತು. ಓಡಿ ಹೋದ ಜೋಡಿಯನ್ನು ಮದುವೆ ಮಾಡುತ್ತೇವೆ, ಸಿಟ್ಟು ಬಿಟ್ಟು ನೋವು ಮರೆತು ನಿಮ್ಮನ್ನು ಒಪ್ಪುತ್ತೇವೆ-ಅಪ್ಪುತ್ತೇವೆ ಎಂದು ಕರುಳು ಕರಗುವಂಥ ಮಾತಾಡಿಯೇ ಕರೆಯುವರು. ಮತ್ತು ಮೋಸದಿಂದ ಅವರನ್ನು ಕೊಲೆ ಮಾಡುವರು. ಬಹಳಷ್ಟು ಪ್ರಕರಣಗಳು ಹೀಗೆಯೇ ಅಂತ್ಯ ಕಂಡಿವೆ. ನೀವರಿಸಿ ಕರೆದು ಗೃಹ ಬಂಧನದಲ್ಲಿಡುವುದು. ಇಲ್ಲವೇ ಗಡಿಬಿಡಿಯಲ್ಲಿ ದೂರದ ಸಂಬಂಧ ಕುದುರಿಸಿ ಮದುವೆ ಮಾಡಿ ಕೈತೊಳೆದುಕೊಳ್ಳುವುದು ಇತ್ಯಾದಿ ಪ್ರಕರಣಗಳಿಗೂ ಕೊರತೆಯಿಲ್ಲ. ಆದರೆ ಎಲ್ಲವೂ ಒಂದರ್ಥದಲ್ಲಿ ಜೀವ ಹತ್ಯೆ ಅಥವ ಭಾವ(ನೆ) ಹತ್ಯೆಯೋ ಆಗಿರುತ್ತದೆ. ಒಟ್ಟಾರ್ಥವೆಂದರೆ ಯುವಕರು ಸಾಮಾಜಿಕ ಮೌಲ್ಯದ ಚೌಕಟ್ಟು ಮೀರಿ ಆಯ್ಕೆ ಮಾಡಿಕೊಳ್ಳದಂಥ ಬಂಧನ ಬಿಗಿಯಲಾಗುತ್ತದೆ. ಮೀರಿದರೆ ಸಾಮಾಜಿಕ ಮೌಲ್ಯಕ್ಕಾಗಿ ಯಾವ ಮಟ್ಟದ ಕ್ರೌರ್ಯಕ್ಕಾದರೂ ಸಿದ್ಧ ಎಂಬಂಥ ಸಂದೇಶ ಈ ಮೇಲಿನ ಎಲ್ಲ ಪ್ರಕರಣಗಳಲ್ಲಿ ಧ್ವನಿತವಾಗಿದೆ.

ಈ ಮರ್ಯಾದಾ ಹತ್ಯೆಯೆಂಬುದು ಈಗ ಕರ್ನಾಟಕದಲ್ಲಿಯೂ ಎಲ್ಲರ ಕಿವಿಗೂ

ಹೃದಯಕ್ಕೂ ಕೇಳಿಸುವಂತೆ ಸುದ್ದಿಯಾಗುತ್ತಿದೆ. ಇದೊಂದು ಅವಮರ್ಯಾದಾ ಹತ್ಯೆ. ಅತ್ಯಂತ ಕ್ರೌರ್ಯದ ಈ ಪದ್ಧತಿಯು ಭಾರತಕ್ಕೆ ಹೊಸದಲ್ಲ. ಹಾಗೆ ಕರ್ನಾಟಕಕ್ಕೂ. ಉತ್ತರ ಭಾರತದಲ್ಲಿ ಸಮಾಜ ಒಪ್ಪಿತದಂತೆ ಈ ಪದ್ಧತಿಯು ಕಾಣಿಸಿಕೊಂಡರೆ ಮಹಿಳಾ ಸಮಾನತೆಗಾಗಿ ನಿರಂತರ ಚಳುವಳಿ ಮತ್ತು ಚಿಂತನೆ ಕಂಡ ಕರ್ನಾಟಕದಲ್ಲಿ ಬಹಿರಂಗವಾಗಿ ಇಂಥ ಹತ್ಯೆಗಳನ್ನು ಸಮರ್ಥಿಸಲಾಗದು. ಆದರೆ ಸತಿ ಪದ್ಧತಿ, ಬಾಲಹತ್ಯೆ, ವಿಧವಾ ಬಹಿಷ್ಕಾರ, ಮರ್ಯಾದಾ ಹತ್ಯೆಯಂಥ ಮಹಿಳೆಯರ ಅಸ್ತಿತ್ವವನ್ನೇ ಹೊಸಕಿ ಹಾಕುವಂತಹ ಪ್ರವೃತ್ತಿಯು ಉತ್ತರ ಭಾರತದಲ್ಲಿ ಬಹಿರಂಗವಾಗಿಯೇ ನಡೆಯುತ್ತ ಬಂದಿದೆ. ಏಕೆಂದರೆ ಅಲ್ಲಿ ಜಮೀನ್ದಾರಿ ಶಕ್ತಿಯು ಗ್ರಾಮಗಳ ಮೇಲೆ ಹಿಡಿತ ಸಾಧಿಸಿದೆ. ಖ್ವಾಫ್ ಪಂಚಾಯತಿಯಲ್ಲಿರುವವರು ಠಾಕೂರ, ರಾಜಪೂತರೆಲ್ಲ ಜಮೀನ್ದಾರರೇ. ಈ ಪಂಚಾಯತಿಯಲ್ಲಿ ಆಗುವ ತೀರ್ಮಾನಗಳು ಹೃದಯ ಕಲಕುವಂತಹವು. ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಮತ್ತು ಚಾತುರ್ವರ್ಣ ಪದ್ಧತಿಯನ್ನು ಅನೂಚಾನವಾಗಿ ನಡೆದುಕೊಂಡು ಬರುವಂತೆ 'ಖ್ವಾಫ್' ಪಂಚಾಯತ್ ಕಾರ್ಯ ನಿರ್ವಹಿಸುತ್ತ ಬಂದಿದೆ. ಭಾರತದ ಸಾಂವಿಧಾನಿಕ ಕಾನೂನು ಕಾಯ್ದೆ, ಮಾನವ ಹಕ್ಕುಗಳು ಎಲ್ಲವನ್ನೂ ಮೀರಿ ತಾನೇ ಸುಪ್ರಿಂ ಎಂಬಂತೆ ಈ ಪಂಚಾಯತು ನಡೆದುಕೊಂಡು ಬಂದಿದೆ.

ರಾಜಸ್ತಾನ್, ಹರ‍್ಯಾಣ, ಮಧ್ಯಪ್ರದೇಶದಂಥ ರಾಜ್ಯಗಳಲ್ಲಿ ಜಾತಿ ಮೀರಿ ಯುವಕರು ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಂಡರೆ ಅವರಿಗೆ ಕೊಡುವ ಶಿಕ್ಷೆಯು ಸಹ ಮನುಸ್ಮೃತಿಯ ಬೋಧನೆಯಂತಿರುತ್ತದೆ. ಅಂದರೆ ಇಬ್ಬರಲ್ಲಿ ಒಬ್ಬರು ಯಾರು ದಲಿತ ಸಮುದಾಯಕ್ಕೆ ಸೇರಿರುತ್ತಾರೋ ಅವರನ್ನು ಸಾವಿಗೆ ಗುರಿ ಮಾಡಲಾಗುತ್ತದೆ. ವಿಷಪ್ರಾಷನಕ್ಕೆ ಆದೇಶ ಮಾಡಲಾಗುತ್ತದೆ. ಇಲ್ಲವೇ ಗಡಿಪಾರು ಮಾಡಿ ಅವರ ಆಸ್ತಿಯನ್ನು ಕವಡಿ ಕಿಮ್ಮತ್ತಿಗೆ ಹರಾಜು ಹಾಕಲಾಗುತ್ತದೆ. ಹೀಗೆ ನಾನಾ ಪ್ರಕಾರದ ಕ್ರೂರ ತೀರ್ಮಾನಗಳನ್ನು ಹೇರಲಾಗುತ್ತದೆ. ಜಾರಿ ಮಾಡದಿದ್ದರೆ ಕೊಲೆ ಮಾಡಿಸಲಾಗುತ್ತದೆ. ಮತ್ತು ಅದನ್ನು ಸಮರ್ಥಿಸಲಾಗುತ್ತದೆ.

ಬಬಲಿ ಮನೋಜ ಪ್ರಕರಣದಂಥ ಲೆಕ್ಕವಿಲ್ಲದಷ್ಟು ಘಟನೆಗಳು ಹರ‍್ಯಾಣದಲ್ಲಿ ಈಗಲೂ ಜಾರಿಯಲ್ಲಿವೆ. ದಂಗು ಬಡಿಸುವಂಥ ಕ್ರೌರ್ಯ ಇದು ಅನ್ನುವಿರೇನು? ಕರ್ನಾಟಕದಲ್ಲಿಯೂ ನಡೆದ ಇಂಥ ಅನೇಕ ಪ್ರಕರಣಗಳನ್ನು ಈಗಾಗಲೇ ನಿಮ್ಮ ಗಮನಕ್ಕೆ ತಂದಿರುವೆನು. ಹರ‍್ಯಾಣದಂಥ ಪ್ರಕರಣಕ್ಕೆ ಸಾಟಿಯೆನ್ನುವಂಥ ಘಟನೆ ನಡೆದಿದ್ದು ಕರ್ನಾಟಕದ ರಾಜ್ಯದ ಬಸವಕಲ್ಯಾಣದಲ್ಲಿ.


ಹನ್ನೆರಡನೆಯ ಶತಮಾನದಲ್ಲಿ ಕಾಯಕ ಜೀವಿಗಳು ವರ್ಗ–ವರ್ಣ–ಜಾತಿ–ಲಿಂಗ ತಾರತಮ್ಯವನ್ನು ಕಿತ್ತೊಗೆಯಲು ಚಳುವಳಿ ನಡೆಸಿರುವುದು ಈಗಾಗಲೇ ಇತಿಹಾಸದಲ್ಲಿ ದಾಖಲಾಗಿದೆ. ಈ ಚಳುವಳಿಯ ನಿರ್ಣಾಯಕ ಘಟ್ಟವೇ ಜಾತಿ ಧಿಕ್ಕರಿಸಿದ ಯುವಕರ ಮದುವೆಯ ಪ್ರಸಂಗವಾಗಿದೆ. ಹರಳಯ್ಯ ಮತ್ತು ಮಧುವರಸರ ಮಕ್ಕಳಾದ ಕಲಾವತಿ ಮತ್ತು ಶೀಲವಂತ ಪರಸ್ಪರ ಇಷ್ಟ ಪಡುತ್ತಾರೆ. ಮತ್ತು ತಮ್ಮ ಹೆತ್ತವರ ಗಮನಕ್ಕೂ ತರುತ್ತಾರೆ. ಅನುಭವ ಮಂಟಪದಲ್ಲಿ ಚಿಂತನೆ ಮತ್ತು ಚಳುವಳಿಯನ್ನು ಬೆಸೆಯುವ ಕನಸು ಕಂಡ ಎರಡೂ ಕುಟುಂಬದ ಪೋಷಕರು ತಮ್ಮ ಮಕ್ಕಳ ಆಯ್ಕೆಯನ್ನು ಅನುಭವ ಮಂಟಪದ ಶರಣರಿಗೂ ತಿಳಿಸುವರು.

ಜಾತಿ ತಾರತಮ್ಯವೇ ಪ್ರಧಾನವಾಗಿ ಹೊಂದಿದ ಊಳಿಗಮಾನ್ಯ ವ್ಯವಸ್ಥೆಯು ತನ್ನ ಶೋಷಣಾ ಪದ್ಧತಿಯನ್ನು ಗಟ್ಟಿಗೊಳಿಸಿಕೊಳ್ಳಲು ಮದುವೆಯೆಂಬ ಸಂಸ್ಥೆಯ ಮೇಲೆ ಸಂಪೂರ್ಣ ಹಿಡಿತ ಹೊಂದಿರುತ್ತದೆ. ಆದ್ದರಿಂದಲೇ ಮದುವೆಯು ಜಾತಿಯ ಚೌಕಟ್ಟಿನೊಳಗೆ ನಡೆಯಬೇಕೆನ್ನುತ್ತದೆ. ಮೀರದಂತೆ ನೋಡಿಕೊಳ್ಳಲು ಅದು ಮನುಸ್ಮೃತಿಯ ಕಾವಲು ಇಟ್ಟುಕೊಂಡಿರುತ್ತದೆ. ಮೀರಿದಲ್ಲಿ ಕಠೋರ ಶಿಕ್ಷೆಗೆ ಒಳಪಡಿಸುತ್ತದೆ.

ಈ ಬಾರ್ಬರಿಕ ವ್ಯವಸ್ಥೆಯನ್ನೇ ಮೂಲೋತ್ಪಾಟನೆ ಮಾಡಲೆಂದು ನುಡಿದಂತೆ ನಡೆಯುವ ಕಠಿಣ ಬದ್ಧತೆಗೆ ಒಳಗಾಗಿದ್ದ ಶರಣರು (ಕಾಯಕ ಜೀವಿಗಳು) ಕಲಾವತಿ ಶೀಲವಂತರ ಮದುವೆ ಮಾಡಲು ತೀರ್ಮಾನ ಮಾಡುತ್ತಾರೆ. ಮದುವೆ ನಡೆದರೆ ಸಮಾಜದಲ್ಲಿ ಬಹು ದೊಡ್ಡ ವಿಪ್ಲವ ನಡೆಯುವುದು ಎಂಬುದು ಅವರಿಗೆ ಗೊತ್ತಿತ್ತು. ಮದುವೆ ನಡೆಯದಿದ್ದರೆ 'ನುಡಿಯೊಳಗಾಗಿ ನಡೆಯದಿದ್ದರೆ ಹಿಡಿದಿರ್ಪ ಲಿಂಗ ಘಟಸರ್ಪ ನೋಡಾ' ಎಂಬ ನಂಬಿಕೆ ಅವರದ್ದಾಗಿರುವುದರಿಂದ ಎಲ್ಲ ಮಟ್ಟದ ಬಲಿದಾನಕ್ಕೆ ಸಿದ್ಧರಾಗಿ ಮದುವೆಗೆ ತೀರ್ಮಾನ ಮಾಡುವರು. ಇದರ ಫಲಿತವೆಂದರೆ ಕಲ್ಯಾಣದ ಕ್ರಾಂತಿ.

ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿ ನಡೆದ ಮದುವೆಯ ಘಟ್ಟವೇ ವಿಪ್ಲವಕ್ಕೆ ಜನ್ಮ ಕೊಟ್ಟಿತು. ಕಲಾವತಿ ಶೀಲವಂತರ ಹೆತ್ತವರನ್ನು ಆನೆ ಕಾಲಿಗೆ ಕಟ್ಟಿ ಕಲ್ಯಾಣದ ಪಟ್ಟಣದ ತುಂಬ ಎಳೆಸಲಾಯಿತು. ಅವರ ಕಣ್ಣುಗಳನ್ನು ಕೀಳಲಾಯಿತು. ಸಮಸ್ತ ಜನತೆಯನ್ನು ಇದಕ್ಕೆ ಸಾಕ್ಷಿಯಾಗಿಸಿ, ಜಾತಿವ್ಯವಸ್ಥೆ ಮುರಿದಲ್ಲಿ ಒದಗುವ ದಾರುಣತೆಯನ್ನು ಜಾಹಿರುಗೊಳಿಸುವ ಮೂಲಕ ಭಯ ತಲ್ಲಣ ಹುಟ್ಟಿಸಲು ಪ್ರಯತ್ನಿಸಿದರು. ಕರ್ಮಸಿದ್ಧಾಂತವನ್ನು ಧಿಕ್ಕರಿಸಿ ಸಮ ಸಮಾಜವನ್ನು ನಿರ್ಮಿಸಲು ತೊಡಗಿಸಿಕೊಂಡ ಸಕಲ ಶರಣರನ್ನು ಇದೇ ಹೊತ್ತಿನಲ್ಲಿ ಹಣಿಯಲು ಸಂಚು ಮಾಡಿದರು. ಕಲ್ಯಾಣ ಪಟ್ಟಣವೆಂಬುದು ರಣರಂಗವಾಯಿತು. ಕಾಯಕಜೀವಿಗಳ

ಜಾತಿ ತಾರತಮ್ಯವೇ ಪ್ರಧಾನವಾಗಿ ಹೊಂದಿದ ಊಳಿಗಮಾನ್ಯ ವ್ಯವಸ್ಥೆಯು ತನ್ನ ಶೋಷಣಾ ಪದ್ಧತಿಯನ್ನು ಗಟ್ಟಿಗೊಳಿಸಿಕೊಳ್ಳಲು ಮದುವೆಯೆಂಬ ಸಂಸ್ಥೆಯ ಮೇಲೆ ಸಂಪೂರ್ಣ ಹಿಡಿತ ಹೊಂದಿರುತ್ತದೆ. ಆದ್ದರಿಂದಲೇ ಮದುವೆಯು ಜಾತಿಯ ಚೌಕಟ್ಟಿನೊಳಗೆ ನಡೆಯಬೇಕೆನ್ನುತ್ತದೆ. ಮೀರದಂತೆ ನೋಡಿಕೊಳ್ಳಲು ಅದು ಮನುಸ್ಮೃತಿಯ ಕಾವಲು ಇಟ್ಟುಕೊಂಡಿರುತ್ತದೆ. ಮೀರಿದಲ್ಲಿ ಕಠೋರ ಶಿಕ್ಷೆಗೆ ಒಳಪಡಿಸುತ್ತದೆ. ಈ ಬಾರ್ಬರಿಕ ವ್ಯವಸ್ಥೆಯನ್ನೇ ಮೂಲೋತ್ಪಾಟನೆ ಮಾಡಲೆಂದು ನುಡಿದಂತೆ ನಡೆಯುವ ಕಠಿಣ ಬದ್ಧತೆಗೆ ಒಳಗಾಗಿದ್ದ ಶರಣರು (ಕಾಯಕ ಜೀವಿಗಳು) ಕಲಾವತಿ ಶೀಲವಂತರ ಮದುವೆ ಮಾಡಲು ತೀರ್ಮಾನ ಮಾಡುತ್ತಾರೆ........



ಮಹಿಳೆಯನ್ನು ಮಕ್ಕಳು ಹೆರಲು ಮತ್ತು ಬಿಟ್ಟಿ ಚಾಕರಿ ಮಾಡಲು ಮಾತ್ರ ಬಳಸಿಕೊಳ್ಳುವ ಈ ಸಮಾಜದ ಮೌಲ್ಯವು ಅವಳು ತನ್ನ ಆಯ್ಕೆ ಪ್ರಕಟಿಸಿದ ಕೂಡಲೇ ವ್ಯಗ್ರವಾಗುತ್ತದೆ. ಶ್ರೇಣೀಕೃತ ಜಾತಿವ್ಯವಸ್ಥೆ ಉಳಿದರೆ ಮಾತ್ರ ಜಮೀನ್ದಾರಿಕೆ ಉಳಿಯುತ್ತದೆ. ಜಾತಿ ವ್ಯವಸ್ಥೆ ಉಳಿಸುವುದು ಹೇಗೆ? ಜಾತಿಯೊಳಗೇ ಮದುವೆಯಾಗುವಂತೆ ಅದರಲ್ಲಿಯೂ ರಕ್ತ ಸಂಬಂಧದಲ್ಲಿಯೇ ಮದುವೆಯಾಗುವಂತೆ ಸಂಪ್ರದಾಯ ಮಾಡಿದಲ್ಲಿ ಮಾತ್ರ ಜಾತಿವ್ಯವಸ್ಥೆ ಉಳಿಯುತ್ತದೆ.

ಮೇಲೆ ಹಲ್ಲೆ ಮಾಡಲಾಯಿತು. ಅಟ್ಟಾಡಿಸಿ ಬೆನ್ನು ಹತ್ತಿ ಹೊಡೆದರು. ರಾಜಶಾಹಿಯು ಪುರೋಹಿತ ಶಾಹಿತ್ವದ ಸಿದ್ಧಾಂತವನ್ನು ಉಳಿಸಿಕೊಳ್ಳಲಿಕ್ಕಾಗಿ ಎಲ್ಲ ಮಟ್ಟದ ಕ್ರೌರ್ಯಕ್ಕೆ ತೊಡಗಿತು. ಬಸವಣ್ಣನ ಕನಸುಗಳಿಗೆ ಆಗಾಗ ಬಣ್ಣ ತುಂಬುತ್ತಿದ್ದ ಬಿಜ್ಜಳನ ಕೊಲೆಯೂ ನಡೆದು ಹೋಗುತ್ತದೆ. ಬಸವಣ್ಣನನ್ನು ಗಡಿಪಾರು ಮಾಡಲಾಗುತ್ತದೆ. ಶರಣರು ತಮ್ಮ ಜೀವ ಉಳಿಸಿಕೊಳ್ಳಲಿಕ್ಕಾಗಿ ಅಲ್ಲಿಂದ ಪಲಾಯನ ಮಾಡಲಿಲ್ಲ. ಬದಲಿಗೆ ಸಕಲ ಜೀವಾತ್ಮರಿಗೆ ಲೇಸು ಬಯಸುವ ವಚನ ಸಿದ್ಧಾಂತ ಉಳಿಸಲಿಕ್ಕಾಗಿ ಅವುಗಳನ್ನು ಗಂಟು ಕಟ್ಟಿಕೊಂಡು ಕಲ್ಯಾಣ ಪಟ್ಟಣದಿಂದ ಹೊರಬೀಳುತ್ತಾರೆ.

ಹೀಗೆ ವಿಪ್ಲವದ ಘಟ್ಟವು ಅನೇಕ ಸಂಘರ್ಷನಾತ್ಮಕ ಪಲಕುಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿದೆ. ಆದರೆ ಮದುವೆಯ ಸಂದರ್ಭವೇ ಇಲ್ಲಿ ಕೇಂದ್ರ ವಿಷಯವಾಗಿದೆ. ಮದುವೆಯನ್ನು ಜಾತಿವ್ಯವಸ್ಥೆಯ ರಕ್ಷಣೆಗಾಗಿ ಬಳಸಿಕೊಳ್ಳುತ್ತಿರುವ ಪುರೋಹಿತಶಾಹಿಯ ಕುತಂತ್ರವನ್ನು ಶರಣರು ಧಿಕ್ಕರಿಸಿದರು. ಚರಿತ್ರೆ ಓದುವಾಗ ಈ ಪ್ರಸಂಗವು ಹರ್ಯಾಣದಲ್ಲಿ ಅಥವ ಈಚೆಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಅವಮರ್ಯಾದಾ ಹತ್ಯೆಗಳನ್ನೇ ಮತ್ತೆ ಮತ್ತೆ ನೆನಪಿಸುವುದು.

ಅವಮರ್ಯಾದೆ ಹತ್ಯೆಯೆಂಬುದು ಕೇವಲ ಯುವಜನತೆಯ ಆಯ್ಕೆಯ ಪ್ರಶ್ನೆ ಮಾತ್ರವಲ್ಲ. ಈ ಹತ್ಯೆಯ ಹಿಂದೆ ವರ್ಗ ಪ್ರಶ್ನೆಯು ಅಡಕವಾಗಿದೆ. ಅಂತೆಯೇ ಸಂಪತ್ತು ಮತ್ತು ಅಧಿಕಾರವನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಳ್ಳುವ ಮೇಲ್ವರ್ಗವು ಯಾವತ್ತೂ ಜಾತಿ ವ್ಯವಸ್ಥೆಯನ್ನು ಜೀವಂತವಾಗಿಡುವುದು. ಲಿಂಗ ತಾರತಮ್ಯವೆಂಬುದು ಜಾತಿ ವ್ಯವಸ್ಥೆಯ ರಕ್ಷಣೆಗೆ ಬೇಕಾದ ಪ್ರಬಲವಾದ ಅಸ್ತ್ರವಾಗಿದೆ. ಜಮೀನ್ದಾರಿ ಪಾಳೇಗಾರಿ ವ್ಯವಸ್ಥೆಯು ತನ್ನ ಸ್ವಾರ್ಥಕ್ಕಾಗಿ ಶ್ರಮಿಕ ವರ್ಗವನ್ನು ಶೋಷಿಸಲು ಯೋಜನೆ ಹೆಣೆಯುತ್ತಿರುತ್ತದೆ. ಅದರಲ್ಲಿಯೂ ಸಾಂಸ್ಕೃತಿಕ ಶೋಷಣೆಯು ಅದರ ಆದ್ಯತಾ ಕಾರ್ಯಯೋಜನೆಯಾಗಿರುತ್ತದೆ. ಹೀಗಾಗಿ ಮದುವೆಯೆಂಬ ಸಂಸ್ಥೆಯನ್ನು ಜಾತಿಯ ಮತ್ತು ರಕ್ತ ಸಂಬಂಧದ ಚೌಕಟ್ಟಿನೊಳಗೆ ಬಿಗಿಗೊಳಿಸಿ ಅದನ್ನು ಮೀರದಂತೆ ನೋಡಿಕೊಳ್ಳುತ್ತದೆ. ಈ ಸಮಸ್ತ ಕುಟಿಲತೆಯ ಹಿಂದೆ ಸಂಪತ್ತು ಮತ್ತು ಅಧಿಕಾರವು ಕೇಂದ್ರವಾಗಿರುತ್ತದೆ. ಸಂಪತ್ತು ಅಧಿಕಾರದ ಮೇಲಿನ ಹಿಡಿತ ಸಡಿಲವಾಗದಂತೆ 'ಖ್ಯಾಫ್' ಪಂಚಾಯತಗಳು ಕೆಲಸ ಮಾಡುತ್ತಿರುತ್ತವೆ. ಈಚೆಗೆ ಖ್ಯಾಫ್ ಪಂಚಾಯತಿನಲ್ಲಿ ಮಹಿಳೆಯರು ಚೂಡಿದಾರ ಧರಿಸಬಾರದು ಮತ್ತು ಮೊಬೈಲ್ ಇಟ್ಟಕೊಳ್ಳಬಾರದು ಎಂದು ಫರಮಾನು ಹೊರಡಿಸಿದೆ. ಅಂತೆಯೇ ಇತರೆ ಧರ್ಮದ ಮೂಲಭೂತವಾದಿಗಳೂ ಇಂಥಹದೇ ಫತ್ವಾ ಅಥವ ಅಪ್ಪಣೆ ಹೊರಡಿಸಿದ ಘಟನೆಗಳಿಗೆ ಭಾರತದಲ್ಲಿ ಕೊರತೆಯೇನಿಲ್ಲ.

ಮಹಿಳೆಯೆಂದರೆ ದುಡಿಮೆಗೆ ಇನ್ನೊಂದು ಹೆಸರು. ಮಹಿಳೆಯರ ದುಡಿಮೆಯನ್ನು ಬಿಟ್ಟಿಯಾಗಿ ಪಡೆಯಲು ಮತ್ತು ಅವಳು ಯಾವತ್ತೂ ಗುಲಾಮಿ ಚಿಂತನಾ ಕ್ರಮದಲ್ಲಿಯೇ ಗಿರಕಿ ಹೊಡೆಯುವಂತೆ ಮಾಡಲು 'ಮದುವೆ' ಘಟ್ಟವನ್ನು ಬಳಸಿಕೊಳ್ಳುತ್ತದೆ. ಮದುವೆಯಾಗುವುದೆಂದರೆ ಒಂದು ಮನೆಯಿಂದ ಇನ್ನೊಂದು ಮನೆಗೆ ಸಂತಾನಾಭಿವೃದ್ಧಿಗಾಗಿ ಮತ್ತು ಮನೆಗೆಲಸಕ್ಕಾಗಿ. ಇದಕ್ಕೆ ಪುರಾಣಗಳಲ್ಲಿ ಬೇಕಾದಷ್ಟು ಕತೆಗಳು ಸಿಗುತ್ತವೆ. ಪುತ್ರಫಲಕ್ಕಾಗಿ ಮಾಧವಿಯನ್ನು ದುಡಿಸಿಕೊಂಡ ಕತೆಯು ಇದಕ್ಕೊಂದು ಉಧಾಹರಣೆಯಾಗಿದೆ. ಮಹಿಳೆಯನ್ನು ಮಕ್ಕಳು ಹೆರಲು ಮತ್ತು ಬಿಟ್ಟಿ ಚಾಕರಿ ಮಾಡಲು ಮಾತ್ರ ಬಳಸಿಕೊಳ್ಳುವ ಈ ಸಮಾಜದ ಮೌಲ್ಯವು ಅವಳು ತನ್ನ ಆಯ್ಕೆ ಪ್ರಕಟಿಸಿದ ಕೂಡಲೇ ವ್ಯಗ್ರವಾಗುತ್ತದೆ. ಶ್ರೇಣೀಕೃತ ಜಾತಿವ್ಯವಸ್ಥೆ ಉಳಿದರೆ ಮಾತ್ರ ಜಮೀನ್ದಾರಿಕೆ ಉಳಿಯುತ್ತದೆ. ಜಾತಿ ವ್ಯವಸ್ಥೆ ಉಳಿಸುವುದು ಹೇಗೆ? ಜಾತಿಯೊಳಗೇ ಮದುವೆಯಾಗುವಂತೆ ಅದರಲ್ಲಿಯೂ ರಕ್ತ ಸಂಭಂಧದಲ್ಲಿಯೇ ಮದುವೆಯಾಗುವಂತೆ ಸಂಪ್ರದಾಯ ಮಾಡಿದಲ್ಲಿ ಮಾತ್ರ ಜಾತಿವ್ಯವಸ್ಥೆ ಉಳಿಯುತ್ತದೆ.

ಹಾಗೆ ನೋಡಿದರೆ ರಕ್ತ ಸಂಬಂಧದಲ್ಲಿ ಮದುವೆಯಾದರೆ ಅವರಿಗೆ ಹುಟ್ಟುವ 25%ರಷ್ಟು ಸಂತಾನವು ಅಂಗವೈಕಲ್ಯ ಹೊಂದುವುದು ಖಾತ್ರಿಯಾಗಿರುತ್ತದೆ. ವಿಜ್ಞಾನವು ಇದನ್ನು ರುಜುಗೊಳಿಸಿದೆ. ಕರುಳ ಕುಡಿಗಳ ನೋವು-ಸಂಕಟವನ್ನು ಮೂಕವಾಗಿ ನೋಡುವ ಕಟುಕ ಹೃದಯವನ್ನು ಈ ಸಮಾಜವು ವೈಭವೀಕರಿಸುತ್ತದೆ. ಮಾತ್ರವಲ್ಲ ತನ್ನ ವಿರೋಧಿ ಮೌಲ್ಯಗಳನ್ನು ತಾನೇ ಸುಖಿಸುವ ಆರಾಧಿಸುವ ಮತ್ತು ಆಗು ಮಾಡುವ ಪ್ರವೃತ್ತಿಯನ್ನು ಮನುಷ್ಯರ ಮನಸಿನೊಳಗೆ ಕಸಿ ಮಾಡಲಾಗುತ್ತದೆ. ಆದ್ದರಿಂದಲೇ ತಮ್ಮ ಮಕ್ಕಳು ಯಾವ ಕಾರಣಕ್ಕೂ ಜಾತಿ ಮೀರಿ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದನ್ನು ಹೆತ್ತವರು ಸಹಿಸುವುದಿಲ್ಲ.

ಸಹಜವಾಗಿ ಕರುಣಾಪೂರಿತ ಸ್ವಭಾವ ಹೊಂದುವ ಹೆತ್ತವರನ್ನು ಕಟುಕರನ್ನಾಗಿ ಮಾಡುವುದು ಈ ಪಾಳೇಗಾರಿ ಸಮಾಜದ ಮೌಲ್ಯಗಳು. ಯಾವುದೇ ವ್ಯಕ್ತಿಯೂ ತನ್ನ ತಾನೇ ಕ್ರೂರಿಯಾಗುವುದಿಲ್ಲ. ಅದರಲ್ಲಿಯೂ ಹೆತ್ತವರು ಮಕ್ಕಳನ್ನು ಕೊಲ್ಲುವಷ್ಟು ಕ್ರೂರಿಯನ್ನಾಗಿ ಈ ನಿಸರ್ಗ ಸೃಷ್ಟಿ ಮಾಡಿಲ್ಲ. ಆದರೆ ಉಳ್ಳವರು ತಮ್ಮ ಸ್ವಾರ್ಥಕ್ಕಾಗಿ ಸಮಾಜದ ಮೇಲೆ ತಮ್ಮ ಮೌಲ್ಯಗಳನ್ನು ಹೇರಿರುವರು. ಪಾಳೇಗಾರಿ ಜಮೀನ್ದಾರಿ ಮತ್ತು ಪುರುಷಪ್ರಧಾನ ವ್ಯವಸ್ಥೆಯು ತನ್ನ ಲಾಭಕ್ಕಾಗಿ ಸ್ವಾರ್ಥಕ್ಕಾಗಿ ಹೆತ್ತವರ

ಹೃದಯದಲ್ಲಿ ವಿಷದ ಬಟ್ಟಲು ಇಟ್ಟಿದೆ. ಹೆತ್ತವರ ಮತ್ತು ಸಂಬಂಧಿಕರ ಕರುಳಿನಲ್ಲಿ ಕತ್ತರಿಯಾಡಿಸುತ್ತಿದೆ. ಹೀಗಾಗಿ ಸಮಾಜದಲ್ಲಿ ಅವಮರ್ಯಾದಾ ಹತ್ಯೆಗಳು ನಿರಂತರವಾಗಿ ಘಟಿಸುತ್ತಿವೆ.

ಪ್ರಜಾಪ್ರಭುತ್ವದ ಹೆಸರಿನ ಮೇಲೆ ಅಧಿಕಾರ ನಡೆಸುತ್ತಿರುವ ಇಂದಿನ ಸರಕಾರಗಳು ಸಹ ಅದೇ ಪಾಳೇಗಾರಿ ಮತ್ತು ಕರ್ಮಸಿದ್ಧಾಂತದ ಮೌಲ್ಯಗಳನ್ನೇ ತಮ್ಮ ಅಂತರಂಗದಲ್ಲಿ ಹುದುಗಿಸಿಕೊಂಡಿವೆ. ಭಾರತದಲ್ಲಿ ಪ್ರಜಾಪ್ರಭುತ್ವವೆನ್ನುವುದು ಸಕಲ ಜೀವಾತ್ಮರಿಗೆ ಲೇಸು ಬಯಸುವ ಪ್ರಜಾಪ್ರಭುತ್ವವಾಗಿ ಉಳಿದಿಲ್ಲ. ಅದು ಉಳ್ಳವರಿಗಾಗಿ ಇರುವ ವ್ಯವಸ್ಥೆಯಾಗಿದೆ. ಆದ್ದರಿಂದಲೇ ರಾಜ್ಯದಲ್ಲಿ ನಡೆಯುತ್ತಿರುವ ಅವಮರ್ಯಾದಾ ಹತ್ಯೆಗಳನ್ನು ಅದು ಯಾವ ಕಾರಣಕ್ಕೂ ತಡೆಯಲು ಮನಸು ಮಾಡುವುದಿಲ್ಲ. ಮಂಡ್ಯದ ಆಬಲವಾಡಿಯಲ್ಲಿ ನಡೆದ ಮರ್ಯಾದಾ ಹತ್ಯೆಯನ್ನು ಅಂದಿನ ಬಿಜೆಪಿ ಸರಕಾರವು ಸಮರ್ಥಿಸಿಕೊಂಡಿತು. ಕಾಂಗ್ರೆಸ್ ಸಹ ಇದೇ ಮನೋಭಾವ ಹೊಂದಿದೆ. ಆದ್ದರಿಂದಲೇ ವಿಜ್ಞಾನ ತಂತ್ರಜ್ಞಾನ ಬೆಳೆಯುತ್ತಿದ್ದರೂ ಪುರೋಹಿತಶಾಹಿಯ ಕರ್ಮಸಿದ್ಧಾಂತವು ನಮ್ಮ ಸಮಾಜ ಆಳುತ್ತಿರುವುದರಿಂದ ಈಗಲೂ ಅವಮರ್ಯಾದಾ ಹತ್ಯೆಗಳು ನಿರಂತರ ನಡೆಯುತ್ತಲೇ ಇವೆ.

ಇದನ್ನು ತಡೆಗಟ್ಟಲು ಮತ್ತೆ ನಮ್ಮ ಮುಂದೆ ಚಿಂತನೆ ಮತ್ತು ಚಳುವಳಿಗಳು ದಾರಿದೀಪವಾಗಿ ಬೆಳಗುತ್ತವೆ. ಈ ಕ್ರೌರ್ಯದ ಸಂಪ್ರದಾಯಕ್ಕೆ ಎದುರಾಗಿ ನಡೆದ ಅನೇಕ ಚಳುವಳಿಗಳು ಈಗಲೂ ನಮ್ಮ ಮುಂದೆ ಚರಿತ್ರೆಯಾಗಿ ನಿಂತಿವೆ. ಬಹು ದೊಡ್ಡ ಪರಂಪರೆಯ ಹಾದಿಯಲ್ಲಿ ಬುದ್ಧ, ವಚನಕಾರರು, ಸೂಫಿಗಳು, ಸಂತರು ಕಿರಣಗಳಾಗಿ ಕಂಡರೆ, ಸಾವಿತ್ರಿಬಾಯಿ ಫುಲೆ, ಅಂಬೇಡ್ಕರ್, ಜ್ಯೋತಿಬಾ, ಸಾಹು ಮಹಾರಾಜ ಇವರೆಲ್ಲರ ಬದುಕ ಗಾಥೆಯೇ 'ಮರ್ಯಾದವಂತ ಸಂಸ್ಕೃತಿ'ಯನ್ನು ಕಟ್ಟಿಕೊಟ್ಟಿದೆ. ಮಾತ್ರವಲ್ಲ ದೇಶ ಕಂಡ ಎಡ ಚಳುವಳಿಗಳು ಈ ನೆಲದ ಜೀವಪರ ಚಳುವಳಿಯೊಂದಿಗೆ ಬೆಸೆದುಕೊಂಡು ಮಾನವೀಯ ಸಂಸ್ಕೃತಿಯನ್ನು ಗಟ್ಟಿಗೊಳಿಸುತ್ತ ಬಂದಿವೆ. ■

ಅವರಿಗೆ...... ಇವರಿಂದ

ರೇಣುಕಾ ರಮಾನಂದ
ಶೆಟಗೇರಿ ಅಂಕೋಲ, ಉತ್ತರ ಕನ್ನಡ

ಹೋಗುತ್ತಿದ್ದಾರೆ ಹುಡುಗರು ಕಾಲೇಜಿಗೆ
ಜೊತೆ ಜೊತೆಗೆ ಮತ್ತಿವರು ಹುಡುಗಿಯರು
ಬೆಟ್ಟಕ್ಕೆ.
ಅವರು ತೂಗಿದ್ದಾರೆ ಪುಸ್ತಕದ ಬ್ಯಾಗು
ಜೊತೆ ಐಡೆಂಟಿಟಿ ಕಾರ್ಡು
ಇವರಲ್ಲೂ ಇದೆ ಸಾಣೆ ಹಿಡಿಯದೆಯೂ
ಬರೀ ಕೊಯ್ತಕ್ಕೆ ಫಳಗುಡುವ ಕತ್ತಿ
ಬಿಗಿತಕ್ಕೊಂದು ಬಳ್ಳಿ ಹಿಂದೆಯೂ ಇದ್ದದ್ದು
ಮುಂದೆಯೂ ಬರುವುದು ಬಲು ಮಜಕೂರು
ಮಜಬೂತು ಆಸ್ತಿ.

ತರುತ್ತಾರೆ ಇವರು ಬರುವಾಗ ಹೊರಲಾರದ ಹೊರೆಯನ್ನ
ಇನ್ನೇನು ಉಳುಕಿಯೇ ಬಿಟ್ಟೀತು ಎಂಬ ಕತ್ತನ್ನ
ಬರುವವರಿಗೆ ಕಾಸಿಡಬೇಕು ಅಂಬಲಿ
ಸುಟ್ಟು ತಲೆತಿರುಪಿ ಇಡಬೇಕು ಒಣಜಬ್ಬು
ಎಂಬ ಆತುರದ ಹೆಜ್ಜೆ ಸವೆತಕ್ಕೆ ಟಾಂಗ್
ಕೊಡುತ್ತಾ ಹರಕು ಹವಾಯಿ ಮುಳ್ಳನ್ನ.

ಕಡುಕಷ್ಟ-ಕಡುಕಪ್ಪಿಗೇ ಎದ್ದು ರಕ್ತ
ಕತ್ತರಿಸುವ ಚಳಿಯಲ್ಲಿ ಅಂಗಳ ಗುಡಿಸುವುದು
ಅವರ ಸ್ನಾನಕ್ಕೆ ನೀರು ಕಾಯಿಸಲು ಬೆಂಕಿ ಹೊತ್ತಿಸುವುದು
ನಗಿನಗಿ ಕೆಂಡವಾಗುವವರೆಗೆ ಕಾದು ಚಳಿ ಕಾಯಿಸಬೇಕು
ಎಂಬಾಸಗೆ ತಣ್ಣೀರು ಎರಚಿ ಒಳಗೋಡುವುದು
ದೋಸೆ ಎರೆಯಲು ಇನ್ನೊಮ್ಮೆ
ಬೆಂಕಿ ಹೊತ್ತಿಸುವುದು.

ಇವರವ್ವ, ಅವಳವ್ವ ಎಲ್ಲರೂ ಹೀಗೆಯೇ
ಸಾಯುವ ಮೊದಲು ಮಗಳಿಗೆ
'ನನ್ನಪ್ಪ ಕುಡುಕ ಇದ್ನು ನಿನ್ನ ತಮ್ಮಂದಿರು ನಿನ್ನ ಮಡಿಲಿಗೆ'
ಎಂಬ ದೇಖರೇಖಿಯ ಹಿಲಾಲು ಒಪ್ಪಿಸಿ ಹೋದವರೇ...
ಅವರಿಗಾಗಿ ಇವರು ಬಿತ್ತುಕೊಳ್ಳಬೇಕು
ಸತ್ತುಕೊಳಬೇಕು ಮತ್ತೆ ಮತ್ತೆ ತೆತ್ತುಕೊಳಬೇಕು
ಹಾಗಾಗಿ.....
ಅವರು ಹೋಗುತ್ತಾರೆ ಕಾಲೇಜಿಗೆ
ಉಪ್ಪು ಹುಳಿ ಖಾರ ಒಗ್ಗೂಡಿಸಲು ಹೋಗಬೇಕಿದೆ
ಮತ್ತೆ ಇವರು ಬೆಟ್ಟಕ್ಕೆ.



ನಮ್ಮ ದೇವರು

ಮೋಹನ್ ಕುಮಾರ್,
ಯಲಹಂಕ, ಬೆಂಗಳೂರು.

ದೇಶದ ಪ್ರತಿಷ್ಠಿತ ವಿಜ್ಞಾನ ಸಂಶೋಧನಾ ಸಂಸ್ಥೆಯ ಆವರಣವದು. ದಟ್ಟ ಅರಣ್ಯವನ್ನು ನೆನಪಿಸುವ ದೇಶೀಯ ಮರಗಿಡಗಳಷ್ಟೇ ಅಲ್ಲದೆ ವಿವಿಧ ದೇಶಗಳ ಸಸ್ಯ ಸಂಪತ್ತನ್ನು ಹೊಂದಿದ್ದು, ಎಂಥಹ ಕಡುಬೇಸಿಗೆಯಲ್ಲೂ ತಂಪಾದ ಗಾಳಿ ಬೀಸುತ್ತಾ ನಳನಳಿಸುವ ಆವರಣವದು. ನೂರಾರು ಎಕರೆಯಷ್ಟು ಹರಡಿರುವ ಆವರಣದಲ್ಲಿ ವಿಜ್ಞಾನ ಪ್ರಯೋಗಾಲಯಗಳು, ಕ್ಲಾಸ್ ರೂಮುಗಳು, ವಿದ್ಯಾರ್ಥಿ ನಿಲಯಗಳು, ಕ್ಯಾಂಟೀನ್‌ಗಳು, ವಿಜ್ಞಾನಿಗಳ ವಸತಿ ನಿಲಯಗಳು ಯೋಜಿತ ರೀತಿಯಲ್ಲಿ ವಿಶ್ವದರ್ಜೆಗೆ ಸರಿಸಮನಾಗಿ ಅರಣ್ಯದಂಥಹ ಆವರಣದಲ್ಲಿ ಅಡಗಿ ಕುಳಿತಂತಿವೆ.


ಅದೊಂದು ದಿನ ಮಧ್ಯಾಹ್ನದ ಹೊತ್ತು ರಸ್ತೆಯಲ್ಲಿ ಜನ ತಮ್ಮ ಪಾಡಿಗೆ ತಾವು ಸಾಗುತ್ತಿದ್ದಾರೆ. ಸೂರ್ಯನ ಕಿರಣಗಳು ಮರಗಳ ಎಲೆಗಳ ನಡುವಿನ ಸಂದುಗಳನ್ನು ತಡಕಾಡುತ್ತಾ ಅಲ್ಲೊಂದು ಇಲ್ಲೊಂದೆಡೆ ಎನ್ನುವಂತೆ ನೆಲವನ್ನು ಮುಟ್ಟುತ್ತಿವೆ. ತಂಪನೆಯ ಗಾಳಿ ನಿಟ್ಟುಸಿರು ಬಿಡುತ್ತಿರುವಂತಿದೆ. ಅತ್ತ ಕಡೆಯಿಂದ ಬೈಸಿಕಲ್ ಮೇಲೆ ವಿಚಿತ್ರ ವೇಷಧಾರಿ ಬರುತ್ತಿದ್ದಾನೆ. ತನ್ನದೇ ಹಾವ-ಭಾವ, ಭಂಗಿಯ ಮೂಲಕ ಆತ ದಾರಿಹೋಕರ ಗಮನ ಸೆಳೆಯತೊಡಗಿದ. ಎಲ್ಲರ ಮೊಗದ ಮೇಲೂ ನಗು ಹರಡತೊಡಗಿದ. ಗಂಭೀರ ಚಿತ್ತದಿಂದ ಒಬ್ಬಂಟಿ ಹೋಗುತ್ತಿದ್ದವರು, ಆತ್ಮೀಯರೊಂದಿಗೆ ಮಾತನಾಡುತ್ತಾ ಸಾಗುತ್ತಿದ್ದವರು, ರಸ್ತೆ ಬದಿಯ ಮೈದಾನದಲ್ಲಿ ಆಟವಾಡುತ್ತಿದ್ದ ಮಕ್ಕಳು, ಹೀಗೆ ಎಲ್ಲರ ಮುಖ-ಮನಸ್ಸುಗಳು ಅವನನ್ನು ಕಂಡು ಹರುಷ ತುಂಬಿಕೊಳ್ಳತೊಡಗಿದವು. ತನ್ನನ್ನು ಕಂಡು ಮಕ್ಕಳು ಖುಷಿಗೊಂಡ ಆ ಜಾಗದಲ್ಲಿ ಒಂದರೆ ಕ್ಷಣ ಬೈಸಿಕಲ್ ನಿಲ್ಲಿಸಿ ಇನ್ನಷ್ಟು ಖುಷಿ ಹಂಚಲು ಯತ್ನಿಸಿ ಮುನ್ನಡೆಯುತ್ತಿದ್ದ.

ಈ ವಿಲಕ್ಷಣ ಬೈಸಿಕಲ್ ಸವಾರನ ಕುರಿತು ನನ್ನ ಸ್ನೇಹಿತನೊಬ್ಬ ಒಂದೊಮ್ಮೆ ಹೇಳಿದ್ದ. 'ಸರ, ವಿಚಿತ್ರ ವೇಷ ಹಾಕೊಂಡ್, ಕೈಯಲ್ಲಿ ಗದೆ ಹಿಡ್ಕೊಂಡು, ಬೈಸಿಕಲ್ ಪೂರಾ ಎಂತೆಂತದೋ ವಸ್ತುಗಳಿಂದ ಅಲಂಕಾರ ಮಾಡ್ಕೊಂಡು ಓಡಾಡ್ತಾನೆ. ಇಲ್ಲೇ ಕೆಲಸ ಮಾಡ್ತಾನೆ ಅನ್ನಿಸ್ತದೆ. ಅವನ ಹಾವ-ಭಾವ ನೋಡಿದ್ರೆ, ಮೆಂಟಲ್ ಕೇಸ್ ಇರ್ಬೋದೇನೋ ಅನ್ಸುತ್ತೆ, ಸರ' ಅಂದಿದ್ದ. ಹಾಗಾಗಿ ಅವನೇನಾದ್ರೂ ಸಿಕ್ಕರೆ ಮಾತಾಡ್ಸಿ ಒಂದಷ್ಟು ಅವನ ವಿವರ ತಿಳ್ಕೋಬೇಕು ಅನ್ಕೊಂಡಿದ್ದೆ.

ಇನ್ನು ಸ್ವಲ್ಪ ಹೊತ್ತಿನಲ್ಲಿ ನಾನು ನಿಂತಿರುವ ಜಾಗದ ಮುಂದೆಯೇ ಹಾದು ಹೋಗುವವನಿದ್ದ ಆ ವಿಚಿತ್ರ ವ್ಯಕ್ತಿ. ನನ್ನ ಮುಂದೆಯೇ ಸಾಗಿ ಹೋಗುತ್ತಿದ್ದವನನ್ನು 'ನೀವು ಒಂದೈದು ನಿಮಿಷ ಬಿಡುವಾಗಿದ್ದರೆ, ಬೈಸಿಕಲ್ ನಿಲ್ಲಿಸಬಹುದಾ? ನಿಮ್ ಜೊತೆ ಸ್ವಲ್ಪ ಮಾತಾಡ್ಬೇಕು' ಅಂದೆ. ಒಂದೆಡೆ ಎಚ್ಚರಿಕೆಯ ಕಣ್ಣುಗಳಿಂದ ನನ್ನನ್ನು ಗಮನಿಸುತ್ತಾ, ಮತ್ತೊಂದೆಡೆ 'ಬನ್ನಿ ಸಾರ್, ಮಾತಾಡೋಣ' ಎಂದು ಸೌಜನ್ಯಯುತವಾಗಿಯೇ ಬದಿಗೆ ಬೈಸಿಕಲ್ ನಿಲ್ಲಿಸಿದ. ಹಾಗೇ ಅವನನ್ನು ಮತ್ತು ಬೈಸಿಕಲ್‌ನ್ನು ದಿಟ್ಟಿಸಿ ನೋಡುವಂತೆ ಗಮನ ಸೆಳೆದವು. ಬೈಸಿಕಲ್‌ನ ಪ್ರತಿಯೊಂದು ಭಾಗಕ್ಕೂ ಹತ್ತಲವು ಬಣ್ಣ ಬಣ್ಣದ ವಸ್ತುಗಳಿಂದ ಅಲಂಕಾರ ಮಾಡಲಾಗಿತ್ತು. ತ್ರಿಶೂಲ, ಕ್ರಾಸ್‌ಬಾರ್, ಹನುಮನ ಗದೆ, ಹಿಂದೂ-ಕ್ರಿಶ್ಚಿಯನ್-ಮುಸ್ಲಿಂ-ಇತ್ಯಾದಿ ದೇವರುಗಳ ಸಣ್ಣ ಸಣ್ಣ ವಿಗ್ರಹಗಳನ್ನು ಹ್ಯಾಂಡಲ್ ಬಾರ್‌ಗೆ ಕಟ್ಟಲಾಗಿತ್ತು. ಎರಡೂ ಚಕ್ರಗಳ ಸ್ಪೋಕ್ಸ್ ಕಡ್ಡಿಗಳಿಗೆ ಬಣ್ಣ ಹಚ್ಚಲಾಗಿತ್ತು. ಮಕ್ಕಳನ್ನು ಮಾತ್ರವೇ ಅಲ್ಲ, ದೊಡ್ಡವರನ್ನೂ ಅದು ತನ್ನೆಡೆಗೆ ಸೆಳೆಯದೇ ಬಿಡುತ್ತಿರಲಿಲ್ಲ. ಆ ವ್ಯಕ್ತಿಯ ವೇಷ ಭೂಷಣ ಕೂಡ ಹಾಗೆಯೇ ವಿಶಿಷ್ಟವಾಗಿದ್ದವು. 'ನಿಮ್ಮ ವೇಷ ಭೂಷಣ ಮತ್ತು ಬೈಸಿಕಲ್ ಓಟದ ಕುರಿತು ಸ್ವಲ್ಪ ವಿಷಯ ಹಂಚಿಕೊಳ್ತೀರಾ, ನನ್ನ ಕುತೂಹಲ ತಣಿಸೋದಿಕ್ಕೆ ಸಹಾಯ ಮಾಡಿದ ಹಾಗಾಗುತ್ತೆ' ಎಂದದ್ದೇ ಖುಷಿಯಿಂದ ಮಾತನಾಡತೊಡಗಿತು ಆ ವ್ಯಕ್ತಿ. ಮೊದಲ ಪರಿಚಯದಲ್ಲೇ ತನ್ನ ವೈಯಕ್ತಿಕ ವಿಷಯಗಳನ್ನೂ ಕೂಡ ಅಚ್ಚರಿಯಾಗುವಂತೆ ಬಿಚ್ಚಿ ಹೇಳತೊಡಗಿದ.

"ಸಾರ್, ನನ್ನ ಹೆಸರು ಇಮಾನ್ಯುಯೆಲ್ ಅಂತ. ಇಲ್ಲೇ ಔಟ್‌ಸೋರ್ಸಿಂಗ್ ಆಧಾರದಲ್ಲಿ ಕೆಲ್ಸ ಮಾಡ್ತಿದೀನಿ. ನನಗೆ ರೋಗದಿಂದ ಹಾಸಿಗೆ ಹಿಡಿದಿರುವ ತಾಯಿ ಮಾತ್ರವೇ ಇರೋದು. ನನಗೆ ಬದುಕ್ಬೇಕು ಅನ್ನೋ ಆಸೇನೇ ಹೊರಟ್ಹೋಗಿತ್ತು. ನನಗೋಸ್ಕರ ಇಡೀ ಜೀವನಾನೇ ಮುಡಿಪಾಗಿಟ್ಟಿದ್ದು ನನ್ ತಾಯಿ. ನನ್ನ ತಾಯಿಗೋಸ್ಕರ ಬದುಕ್ತಿದೀನಿ. ಚಿಕ್ಕವನಿದ್ದಾಗ ನಾನು ಅತಿ ನಾಚಿಕೆ ಸ್ವಭಾವ, ಕೀಳರಿಮೆ ಮತ್ತು ಬಡತನದಿಂದಾಗಿ ಯಾರೊಂದಿಗೂ ಅಷ್ಟಾಗಿ ಮಾತಾಡದೆ ಇರ್ತಿದ್ದೆ. ನನ್ನನ್ನು ಎಲ್ರೂ ರೇಗಿಸ್ತಿದ್ರು. ನನಗೊಬ್ಬ ಅಣ್ಣ ಕೂಡ ಇದ್ದ. ಆದ್ರೆ ಅಣ್ಣ ಮತ್ತು ಅಪ್ಪ ಒಂದೇ ತಿಂಗಳ ಅವಧಿಯಲ್ಲಿ ರೋಗದಿಂದ ತೀರ್ಕೊಂಡರು. ಅಪ್ಪ ಒಬ್ಬ ಗುತ್ತಿಗೆ ಕಾರ್ಮಿಕನಾಗಿದ್ದ, ಅಮ್ಮ ಮನೆಗೆಲಸ ಮಾಡ್ತಿದ್ಳು. ಅಣ್ಣ ಓದು

"ಅಯ್ಯೋ, ಅವನಾ? ಪಾಪ ಏನೋ ಹೇಗೋ ಬದುಕ್ತಾಯಿತ್ತು, ಬಡಪಾಯಿ ಎಲ್ರಿಗೂ ಖುಷಿಪಡಿಸ್ತಾ. ಅದೇ ಡಿಪಾರ್ಟ್‌ಮೆಂಟ್‌ನ ಅಧೀಕ್ಷಕ ಅವನಿಗೆ ಮೊನ್ನೆ ಚೆನ್ನಾಗಿ ಹೊಡೆದುಬಿಟ್ನಂತೆ. ನೀನು ನಮ್ಮ ರಾಮ, ಕೃಷ್ಣ ದೇವರುಗಳ ಚಿತ್ರಗಳನ್ನು ಬೇರೆ ಧರ್ಮದ ಚಿತ್ರಗಳ ಜೊತೆ ಯಾಕೆ ಸೇರಿಸಿ, ಮೈಲಿಗೆ ಮಾಡ್ತೀಯಾ, ಆಂಜನೇಯ ಬಳಸ್ತಿದ್ದಂತ ಗದೆ ಹೊತ್ಕೊಂಡು ಆಂಜನೇಯನ್ನ ಅವಮಾನ ಮಾಡ್ತೀಯಾ ಅಂತ ಹೊಡೆದು ಬಿಟ್ರು. ನಾವೆಲ್ಲಾ ಹೋಗಿ ಬಿಡ್ಸಿದ್ವಿ"



ಮುಗಿಯುವ ಮುಂಚೆಯೇ ಅಚಾನಕ್ಕಾಗಿ ತೀರಿಹೋದ. ನಾನು ಅಮ್ಮನ ಮನೆಗೆಲಸದಿಂದಾಗಿ ಪದವಿ ಓದ್ತಾ ಇದ್ದೆ."

"ಒಮ್ಮೆ ಒಂದು ಹುಡುಗಿ, ಮಧ್ಯಮ ವರ್ಗದ ಮನೆತನದವಳು, ನನ್ನನ್ನು ಕಾಲೇಜಿನಲ್ಲಿ ತುಂಬಾ ಹಚ್ಕೊಂಡಿದ್ಲು. ಮೊದಲಿಗೆ ದೂರವಿದ್ದ ನಾನು, ಅವಳ ಪ್ರೀತಿಗೆ ಸೋತು ನಾನೂ ತೀರಾ ಹಚ್ಕೊಂಡೆ. ಪದವಿ ಮುಗಿಯೋದ್ರೊಳಗೆ ಅವಳ ಮನೇಲಿ ಬೇರೊಬ್ಬರೊಡನೆ ಮದ್ವೆಗೆ ಏರ್ಪಾಡು ಮಾಡಿದ್ರು. ಅವರ ಮನೆಯವರೆಗೂ ನನ್ ವಿಷಯ ತಿಳೀತು. ಅವರಪ್ಪ ಒಮ್ಮೆ ನನ್ನ ಭೇಟಿ ಮಾಡಿ 'ನಿನ್ನಂಥ ಚಿಲ್ರೆಯವರಿಗೆಲ್ಲ ನಮ್ಮಗಳನ್ನು ಕೊಡೋಕ್ಕಾಗಲ್ಲ. ಇನ್ನೊಮ್ಮೆ ಅವ್ಳ ಸಂಪರ್ಕ ಮಾಡಿದ್ರೆ ಮರ್ಡರ್ ಮಾಡಿಸ್ತೀನಿ ಹುಷಾರ್' ಎಂದ. ನಾನವಳ ಅಂತಿಮ ಅಭಿಪ್ರಾಯ ಕೇಳಿದಾಗ ಅವಳು ಕೂಡ 'ನನ್ನನ್ನು ಕ್ಷಮ್ಸು, ಮರೆತುಬಿಡು' ಅಂದ್ಲು. ಜೀವನ ನನ್ನನ್ನು ತೀವ್ರ ಘಾಸಿಗೊಳಿಸಿತ್ತು. ಪದವಿ ಪೂರ್ಣಗೊಳಿಸಲಾಗದೇ ಮಾನಸಿಕನಾದೆ. ಮನೆಯಿಂದ ಹೊರಗೇ ಹೋಗದೆ ಹಲವು ವರ್ಷ ರೋಗಿಯಂತೆ ಮನೆಯೊಳಗೆ ಖಿನ್ನತೆಯಿಂದ ಬಳಲಿದೆ."

"ಅಮ್ಮನ ಸ್ಫೂರ್ತಿ ಮಾತುಗಳು ಕೊನೆಗೂ ನನಗೆ ಧೈರ್ಯ ತುಂಬಿದವು. ಹೀಗಿದ್ರೆ ಆಗೋದಿಲ್ಲ, ನಾನು ಎಲ್ಲರೂ ಗಮನಿಸುವ ರೀತೀಲಿ ಜೀವನ ಮಾಡ್ಬೇಕು. ವಿಶಿಷ್ಟವಾಗಿರ್ಬೇಕು. ಮಕ್ಕಳಿಗೆ, ಜನರಿಗೆ ಖುಷಿ ಕೊಟ್ಟು ಬದುಕ್ಬೇಕು ಅಂತ ತೀರ್ಮಾನ ಮಾಡಿದೆ. ಬೈಸಿಕಲ್ ಹೊಡೆಯೋಕೆ ಬರ್ತಿರ್ಲಿಲ್ಲ. ಬೈಸಿಕಲ್ ಕಲಿತೆ. ಅರೆ–ಉದ್ಯೋಗಕ್ಕೆ ಸೇರಿದೆ. ಬೈಸಿಕಲ್‌ನಲ್ಲಿ ಎಲ್ಲ ಧರ್ಮದ ದೇವರುಗಳ ಚಿತ್ರವನ್ನೂ ಹಾಕೊಂಡಿದೀನಿ. ನಾನು ಕ್ರಿಶ್ಚಿಯನ್ ಆದ್ರೂ ಚರ್ಚ್‌ಗೆ ಅಮ್ಮನಿಗೋಸ್ಕರ ಮಾತ್ರವೇ ಹೋಗೋದು. ಆದ್ರೆ ಎಲ್ಲಾ ಧರ್ಮದ ದೇವರುಗಳನ್ನು ಮನೇಲೇ ಇಟ್ಕೊಂಡು ಪೂಜೆ ಮಾಡ್ತೀನಿ. ರಸ್ತೇಲಿ ಬೈಸಿಕಲ್ ಹ್ಯಾಂಡಲ್ ಕೈಬಿಟ್ಟು ಓಡಿಸೋದು, ಹನುಮನ ಗದೆ ಹಿಡಿಯೋದು, ಹೀಗೆ ರಸ್ತೇಲಿ ಮಕ್ಕಳ ಗಮನ ಸೆಳೆಯೋದಿಕ್ಕೆ ಶುರು ಮಾಡಿದೆ. ಮಕ್ಕಳಷ್ಟೇ ಅಲ್ಲ ಜನ ಕೂಡ ಖುಷಿಪಡೋರು. ನನಗೆ ನಿರಾಳ ಅನ್ನಿಸ್ತಿತ್ತು. ನನ್ ನೋವು ಕೂಡ ಶಮನ ಆದಂಗಾಯ್ತು. ಬಡವನಾಗಿದ್ರೂ ಜಗತ್ತಿಗೆ ವಾಪಸ್ ಏನಾದ್ರೂ ಕೊಡ್ತಿದೀನಿ ಅನ್ನಿಸೋಕೆ ಶುರು ಆಯ್ತು. ಈಗ ನನ್ನ ಮನೆಯಿಂದ ಕೆಲಸಕ್ಕೆ ಹೋಗೋ ಸ್ಥಳದವರೆಗೂ ಉದ್ದಕ್ಕೂ ಪರಿಚಿತ ಜನರಿದ್ದಾರೆ, ಮಕ್ಕಳು ನನ್ ಸುತ್ತ ಮುತ್ತಿಕೊಳ್ತವೆ. ಇಂಡಿಯನ್ ಎಕ್ಸ್‌ಪ್ರೆಸ್ ಪೇಪರ್ ನವ್ರು ಒಮ್ಮೆ ನನ್ನನ್ನು ರಸ್ತೇಲಿ ನೋಡಿ ಫೋಟೋ ಹೊಡೆದು ವರದಿ ಪ್ರಕಟಿಸಿದಾರೆ" ಎಂದು ಹೇಳಿದ.

ಅವನಿಗೆ ಸಾಕಷ್ಟು ಹೊತ್ತಾಯಿತೇನೋ ಅನ್ನಿಸಿತು. ಮತ್ತೆ ಸಿಗೋಣ, ನಿಮ್ಮ ಸಮಯಕ್ಕೆ ತುಂಬಾ ಥ್ಯಾಂಕ್ಸ್ ಎಂದು ಹೇಳಿ ಹೊರಟೆ.

ಕೆಲವು ದಿನಗಳ ನಂತರ ಸಂಶೋಧನಾ ಸಂಸ್ಥೆಯ ಆವರಣದೊಳಗೆ ಪರಿಚಿತರೊಬ್ಬರನ್ನು ಭೇಟಿಯಾಗಲು ಹೋಗಿದ್ದಾಗ, ಈ ವ್ಯಕ್ತಿ ಅದೇಕೋ ನೆನಪಾದ. ನನ್ನ ಪರಿಚಿತರನ್ನು ಈ ವಿಶಿಷ್ಟ ವ್ಯಕ್ತಿಯ ಕುರಿತು ಕೇಳಿದೆ. "ಅಯ್ಯೋ, ಅವನಾ? ಪಾಪ ಏನೋ ಹೇಗೋ ಬದುಕ್ತಾಯಿತ್ತು, ಬಡಪಾಯಿ ಎಲ್ರಿಗೂ ಖುಷಿಪಡಿಸ್ತಾ. ಅದೇ ಡಿಪಾರ್ಟ್‌ಮೆಂಟ್‌ನ ಅಧೀಕ್ಷಕ ಅವನಿಗೆ ಮೊನ್ನೆ ಚೆನ್ನಾಗಿ ಹೊಡೆದುಬಿಟ್ನಂತೆ. ನೀನು ನಮ್ಮ ರಾಮ, ಕೃಷ್ಣ ದೇವರುಗಳ ಚಿತ್ರಗಳನ್ನು ಬೇರೆ ಧರ್ಮದ ಚಿತ್ರಗಳ ಜೊತೆ ಯಾಕೆ ಸೇರಿಸಿ, ಮೈಲಿಗೆ ಮಾಡ್ತೀಯಾ, ಆಂಜನೇಯ ಬಳಸ್ತಿದ್ದಂತ ಗದೆ ಹೊತ್ಕೊಂಡು ಆಂಜನೇಯನ್ನ ಅವಮಾನ ಮಾಡ್ತೀಯಾ ಅಂತ ಹೊಡೆದು ಬಿಟ್ರು. ನಾವೆಲ್ಲಾ ಹೋಗಿ ಬಿಡ್ಸಿದ್ವಿ" ಅಂದ್ರು!

'ಅಂಥ ಮುಗ್ಧ ಜೀವಿಗೆ ಹೊಡೆದವನ ಮೇಲೆ ಏನೂ ಕ್ರಮ ತಗೋಳ್ಲಿಲ್ವೇ' ಎಂದು ಕೇಳಿದೆ.

'ಅಯ್ಯೋ, ಮತಾಂಧನ ರೀತಿ ಹೊಡೆದವನೊಬ್ಬ ಮೂಢ, ಜೊತೆಗೆ ಪರ್ಮನೆಂಟ್ ನೌಕರ ಬೇರೆ. ಹೊಡೆಸಿಕೊಂಡವನು ಟೆಂಪರರಿ ನೌಕರ. ಕಂಪ್ಲೆಂಟ್ ಕೊಟ್ರೂ ಏನೂ ಮಾಡಲ್ಲ. ಇಲ್ಲಿ ಕೆಲವು ವೃತ್ತಿಪರ ವಿಜ್ಞಾನಿಗಳ ಮನಸ್ಸುಗಳು ಕೂಡ ಧಾರ್ಮಿಕವಾಗಿ ರೋಗಗ್ರಸ್ತವಾಗಿವೆ, ಏನ್ಮಾಡೋದು?' ಅಂದ್ರು.

ನನ್ನ ಕೆಲಸ ಮುಗಿಸಿ ರಸ್ತೆಯಲ್ಲಿ ಬರುತ್ತಿದ್ದಾಗ ಆ ವಿಶಿಷ್ಟ ವ್ಯಕ್ತಿ ಮತ್ತೆ ಕ್ಯಾಂಪಸ್‌ನಲ್ಲಿ ಗದೆ ತಿರುವುತ್ತಾ ಬೈಸಿಕಲ್ ಮೇಲೆ ಸರ್ಕಸ್ ತರಹದ ಭಂಗಿಗಳನ್ನು ತೋರಿಸುತ್ತಾ ಮಕ್ಕಳನ್ನು ಖುಷಿಪಡಿಸುತ್ತಿರುವುದು, ಮಕ್ಕಳು ಅವನ ಸುತ್ತ ಮುತ್ತಿಕೊಳ್ಳಲು ಹಾತೊರೆಯುತ್ತಿರುವುದು ಕಾಣಿಸಿತು. ■





ಗ್ಯಾಸ್ ಪ್ರಯೋಗಕ್ಕೆ ಬಲಿಯಾದ ಇಟಾಲಿಯನ್ ಸೈನಿಕರು

ಒಂದು ಕೋಟಿ ಎಪ್ಪತ್ತು ಲಕ್ಷ ಮಂದಿಯ ಬಲಿ ಪಡೆದ ಮೊದಲ ಮಹಾಯುದ್ಧಕ್ಕೆ ನೂರು ವರ್ಷ

ಶರತ್‌ಚಂದ್ರ

ಇದೇ ಅಗಸ್ಟ್ 4. ಬ್ರಿಟನಿನ ಎಲ್ಲೆಡೆ 10ಗಂಟೆ ರಾತ್ರಿಯಿಂದ ಒಂದು ಗಂಟೆ ಕಾಲ ಹಲವು ಸಾರ್ವಜನಿಕ ಸ್ಥಳಗಳಲ್ಲಿ (ಅರಮನೆ, ಪಾರ್ಲಿಮೆಂಟು, ಲಂಡನ್ ಬ್ರಿಜ್ ಸೇರಿದಂತೆ) ಎಲ್ಲಾ ದೀಪಗಳನ್ನು ಆರಿಸಿ ದೀಪ ಅಥವಾ ಮೇಣದ ಬತ್ತಿಗಳನ್ನು ಉರಿಸಲಾಯಿತು. ದೇಶದ ತುಂಬಾ ಹಲವು ಮನೆಗಳಲ್ಲೂ ಅದನ್ನು ಅನುಸರಿಸಲಾಯಿತು. ಇದು ಬ್ರಿಟನ್ ಮೊದಲ ಮಹಾಯುದ್ಧಕ್ಕೆ ಬ್ರಿಟನ್ ಸೇರಿಕೊಂಡ ದಿನವನ್ನು ಒಂದು ಶತಮಾನದ ನಂತರ ಸಾಂಕೇತಿಕವಾಗಿ ನೆನಪಿಸಿಕೊಂಡ ಬಗೆ. "ಯುರೋಪಿನ ತುಂಬಾ ದೀಪ ಆರುತ್ತಿದೆ. ನಮ್ಮ ಜೀವಮಾನದಲ್ಲಿ ಪುನಃ ದೀಪ ಹೊತ್ತಿಸುವುದನ್ನು ನೋಡುತ್ತೇವೆ ಇಲ್ಲವೋ" ಎಂದು ಆ ದಿನ ಆಗಿನ ಬ್ರಿಟಿಷ್ ವಿದೇಶ ಮಂತ್ರಿ ಎಡ್ವರ್ಡ್ ಗ್ರೆ ಉದ್ಗಾರದ ಮೇಲೆ ಆಧಾರಿತವಾಗಿತ್ತು. ನೂರು ವರ್ಷಗಳ ಹಿಂದೆ ನಿಜವಾಗಿಯೂ ಆ ದಿನಕ್ಕೂ ಕೆಲವು ದಿನಗಳ ಮೊದಲೇ ಆರಂಭವಾಗಿ ಯುರೋಪಿನ ಮಾತ್ರವಲ್ಲ ಜಗತ್ತಿನ ತುಂಬಾ ನಾಲ್ಕು ವರ್ಷಗಳ ಕಾಲ ಕತ್ತಲು ತುಂಬಿತ್ತು. ಹಿಂದೆಂದೂ ಕಾಣದ ನರಮೇಧ ನಡೆಯಿತು. ಇದು ಜಗತ್ತಿನ ಮೊದಲ ಮಹಾಯುದ್ಧ ಮಾತ್ರವಲ್ಲ, ಮಹಾ ನರಮೇಧವೂ ಆಗಿತ್ತು.

ಮಹಾಯುದ್ಧವಲ್ಲ, ಮಹಾ ನರಮೇಧ

ಮೊದಲ ಮಹಾಯುದ್ಧದಲ್ಲಿ 1.7 ಕೋಟಿ ಜನ ಸತ್ತರು. ಅವರಲ್ಲಿ ಒಂದು ಕೋಟಿ ಯುದ್ಧದಲ್ಲಿ ತೊಡಗಿದ ಸೈನಿಕರಾದರೆ, 70 ಲಕ್ಷ ನಾಗರಿಕರು. ಯಾವುದೇ ಹಿಂದಿನ ಯುದ್ಧದಲ್ಲಿ ಇಷ್ಟು ದೊಡ್ಡ ಪ್ರಮಾಣದ ನಾಗರಿಕರ ಸಾವು ಆಗಿರಲಿಲ್ಲ. ಎರಡು ಕೋಟಿ ಜನ ತೀವ್ರವಾಗಿ ಗಾಯಗೊಂಡರು. ಸೈನಿಕರಲ್ಲಿ ಮೂರನೇ ಎರಡು ಭಾಗ ರಣರಂಗದಲ್ಲಿ ಸತ್ತರು. ಇನ್ನುಳಿದ ಮೂರನೇ ಒಂದು ಭಾಗ ಸೈನಿಕರು ಹಸಿವು-ಬಲಹೀನತೆ, ರೋಗ ರುಜಿನಗಳಿಂದ ಸತ್ತರು. ನಾಗರಿಕ ಸಾವುಗಳಲ್ಲಿ 24 ಲಕ್ಷ ನೇರ ಮಿಲಿಟರಿ ದಾಳಿ, ಮಿಲಿಟರಿ ನಡೆಸಿದ ನರಮೇಧಗಳಲ್ಲಿ ಸತ್ತರು. 46 ಲಕ್ಷ ಯುದ್ಧದ ಕಾರಣದಿಂದ ಆದ ಕ್ಷಾಮ, ರೋಗ ರುಜಿನಗಳಿಂದ ಸತ್ತರು. ಭಾರತ ಆಗ ಬ್ರಿಟಿಷ್ ವಸಾಹತು ಆಗಿದ್ದು ಜನತೆಯ ಒಪ್ಪಿಗೆ ಇಲ್ಲದೆ ಮಹಾಯುದ್ಧಕ್ಕೆ ಎಳೆಯಲ್ಪಟ್ಟಿತ್ತು. ಬ್ರಿಟಿಷ್ ವಸಾಹತುಗಳಲ್ಲೇ ಅತ್ಯಂತ ಹೆಚ್ಚು ಸೈನಿಕರನ್ನು ಮಹಾಯುದ್ಧಕ್ಕೆ ಕಳಿಸಿತ್ತು. ಮಾತ್ರವಲ್ಲ, ಅತಿ ಹೆಚ್ಚು ಸಾವು-ನೋವುಗಳನ್ನೂ ಅನುಭವಿಸಿತು. 75 ಸಾವಿರ ಭಾರತೀಯ ಸೈನಿಕರು ಸತ್ತರು. 70 ಸಾವಿರ ಸೈನಿಕರು ತೀವ್ರವಾಗಿ ಗಾಯಗೊಂಡರು. ಕೆಲವು ದೇಶಗಳಲ್ಲಿ ಆ ದೇಶದ ಜನಸಂಖ್ಯೆಯ ಗಮನಾರ್ಹ ಭಾಗದ ಜನ ಸತ್ತರು. ಸರ್ಬಿಯಾದಲ್ಲಿ ಶೇ.18, ಒಟ್ಟೊಮನ್ ಸಾಮ್ರಾಜ್ಯ (ಈಗಿನ ತುರ್ಕಿ ಮತ್ತು ಪಶ್ಚಿಮ ಏಶ್ಯಾದ ಅರಬ್ ದೇಶಗಳು ಸೇರಿದ್ದ) ಶೇ. 15, ರೋಮೆನಿಯಾ ಶೇ.9, ಹಾಗೂ ಜರ್ಮನಿ, ಫ್ರಾನ್ಸ್, ಇಟಲಿ, ಆಸ್ಟ್ರಿಯ-ಹಂಗರಿ ಬಲ್ಗೇರಿಯ ಸುಮಾರು ಶೇ. 4ರಷ್ಟು ದೇಶದ ಜನಸಂಖ್ಯೆಯ ಭಾಗ ಸತ್ತರು. ಸತ್ತವರಲ್ಲಿ ಹೆಚ್ಚಿನವರು ಯುವ-ಪುರುಷರಾದ್ದರಿಂದ ಆ ಜನವಿಭಾಗದಲ್ಲಿ ಬಲಿಯಾದವರ ಪ್ರಮಾಣ ಇನ್ನೂ ಹೆಚ್ಚಿನದಾಗಿತ್ತು. ಆಸ್ಟ್ರೋ-ಹಂಗರಿ ಕೆಲಸ ಮಾಡಬಲ್ಲ ಪುರುಷರ ಶೇ.17, ಜರ್ಮನಿ ಶೇ.15, ಫ್ರಾನ್ಸ್ ಶೇ.10 ಯುದ್ಧಕ್ಕೆ ಬಲಿಯಾದರು. ಯುರೋಪಿನಿಂದ ಯುದ್ಧಕ್ಕೆ ಕಳಿಸಲ್ಪಟ್ಟ 6 ಕೋಟಿ ಸೈನಿಕರಲ್ಲಿ ಅರ್ಧದಷ್ಟು ಮಾತ್ರ ಸಾಮಾನ್ಯ ಜೀವನ ಮುಂದುವರೆಸುವ ಸ್ಥಿತಿಯಲ್ಲಿ ಇದ್ದರು. 80ಲಕ್ಷ ಸೈನಿಕರು ಸತ್ತರು. 70 ಲಕ್ಷ ಶಾಶ್ವತ ಅಂಗವಿಕಲರಾದರು. 1.5 ಕೋಟಿ ಸೈನಿಕರು ತೀವ್ರವಾಗಿ ಗಾಯಗೊಂಡಿದ್ದರು.

ಇಂತಹ ದೊಡ್ಡ ನರಮೇಧ ಯಾಕಾಯಿತು? ಇದು ಅನಿವಾರ್ಯವಾಗಿತ್ತೇ? ಈ ಮಹಾ ನರಮೇಧದ ಪರಿಣಾಮಗಳೇನು? ಇದನ್ನು ಯಾಕೆ ನೆನಪಿಸಿಕೊಳ್ಳಬೇಕು? ಇದರಿಂದ

ಮನುಕುಲದ ಭವಿಷ್ಯದ ದೃಷ್ಟಿಯಿಂದ ಏನು ಕಲಿಯಬಹುದು? ಎಂದು ತಿಳಿದುಕೊಳ್ಳಲು ಪ್ರಯತ್ನಿಸುವುದು ಮೂರನೇ ಮಹಾಯುದ್ಧಕ್ಕೆ ಎಳೆದೊಯ್ಯಬಹುದಾದ ಹಲವು ಯುದ್ಧಗಳು ನಡೆಯುತ್ತಿರುವಾಗ ಈಗಿನ ಸಂದರ್ಭದಲ್ಲಿ ಹಾಗೂ ಈ ಶತಮಾನ ಆಚರಣೆಯ ಸಂದರ್ಭದಲ್ಲಿ ಬಹಳ ಪ್ರಸ್ತುತ.

ಮಹಾಯುದ್ಧಕ್ಕೆ ಕಾರಣಗಳು

ಇಂತಹ ಮಹತ್ವದ ಘಟನೆಗೆ ಹಲವು ಕಾರಣಗಳಿರುತ್ತವೆ. ಮತ್ತು ಅವು ಪರಸ್ಪರ ಹೆಣೆದುಕೊಂಡಿದ್ದು ಸಂಕೀರ್ಣವಾಗಿರುತ್ತವೆ. ಸರ್ಬಿಯನ್ ಉಗ್ರ ರಾಷ್ಟ್ರೀಯವಾದಿಯೊಬ್ಬ ಆಸ್ಟ್ರೋ–ಹಂಗೇರಿಯನ್ ಸಾಮ್ರಾಜ್ಯದ ರಾಜಕುಮಾರ ಮತ್ತು ಅವನ ಪತ್ನಿಯನ್ನು ಸರಯೇವೋ ಭೇಟಿ ಸಂದರ್ಭದಲ್ಲಿ 1914ರ ಜೂನ್ 28ರಂದು ಗುಂಡಿಟ್ಟು ಕೊಲೆ ಮಾಡಿದ್ದು, ಮಹಾಯುದ್ಧ ಆರಂಭಕ್ಕೆ ಸಾಮಾನ್ಯವಾಗಿ ಕೊಡುವ ಕಾರಣ. ಆದರೆ ಇದು ಒಂದು ನೆಪಮಾತ್ರವಾಗಿತ್ತು. ಕಿಡಿ ಮಾತ್ರವಾಗಿತ್ತು.

ಪ್ರಬಲ ಶಕ್ತಿ ರಾಷ್ಟ್ರಗಳ ನಡುವೆ ಬಡ ದುರ್ಬಲ ದೇಶಗಳ ಸಂಪನ್ಮೂಲಗಳನ್ನು, ಮಾರುಕಟ್ಟೆಯನ್ನು ಪಡೆಯಲು ಕೊಳ್ಳೆ ಹೊಡೆಯಲು ತೀವ್ರ ಪೈಪೋಟಿ ನಡೆಯುತ್ತಿತ್ತು. 1876–1914ರ ನಡುವೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ವಿಸ್ತಾರ ಶೇ.60ರಷ್ಟು ಹೆಚ್ಚಿತ್ತು. ಬ್ರಿಟನ್ ಫ್ರಾನ್ಸ್, ರಶ್ಯಾ ಮತ್ತು ಜಪಾನ್‌ಗಳು ನಾಲ್ಕು ಅತಿ ದೊಡ್ಡ ಸಾಮ್ರಾಜ್ಯಶಾಹಿ ರಾಷ್ಟ್ರಗಳಾಗಿದ್ದವು. ಇವಲ್ಲದೆ ಕೈಗಾರಿಕಾ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ಬಲಾಢ್ಯಗೊಂಡಿದ್ದ ಅಮೆರಿಕ, ಜರ್ಮನಿ, ಇಟಲಿಗಳು ತಮ್ಮ ಸಾಮ್ರಾಜ್ಯ ವಿಸ್ತರಿಸಲು ಹವಣಿಸುತ್ತಿದ್ದವು. ಹಳೆಯ ಆಸ್ಟ್ರೋ–ಹಂಗೇರಿ ಮತ್ತು ಒಟ್ಟೊಮನ್ ಸಾಮ್ರಾಜ್ಯಗಳೂ ತಮ್ಮ ಸಾಮ್ರಾಜ್ಯವನ್ನು ಕಾಪಾಡಿಕೊಳ್ಳಲು ವಿಸ್ತರಿಸಲು ಹೆಣಗಾಡುತ್ತಿದ್ದವು.

ಜಗತ್ತಿನ ಬಹುಭಾಗ ಅದಾಗಲೇ ವಸಾಹತುಗಳಾಗಿ ಆದ್ದರಿಂದ ಹೊಸ ವಸಾಹತುಗಳನ್ನು ವಶಪಡಿಸಿಕೊಳ್ಳುವ ಸಾಧ್ಯತೆ ಕಡಿಮೆ ಇದ್ದು, ಬೇರೆ ಸಾಮ್ರಾಜ್ಯಶಾಹಿಗಳಿಂದ ವಸಾಹತುಗಳನ್ನು ಕಿತ್ತುಕೊಳ್ಳುವ ಹುನ್ನಾರ ನಡೆಸುತ್ತಿದ್ದವು. ಅವಕಾಶಕ್ಕಾಗಿ ಕಾಯುತ್ತಿದ್ದವು. ಇದಕ್ಕಾಗಿ ಸಿದ್ಧವಾಗಿರಲು ಭಾರೀ ಪ್ರಮಾಣದಲ್ಲಿ ಮಿಲಿಟರಿ ವೆಚ್ಚ ಮಾಡುತ್ತಿದ್ದವು. 1908–1913 ಅವಧಿಯಲ್ಲಿ ಯುರೋಪಿಯನ್ ಪ್ರಬಲ ಶಕ್ತಿ ರಾಷ್ಟ್ರಗಳ ಮಿಲಿಟರಿ ವೆಚ್ಚ ಶೇ.50ರಷ್ಟು ಹೆಚ್ಚಿತ್ತು. ಮಾತ್ರವಲ್ಲ, ಪೈಪೋಟಿಯಲ್ಲಿ ತಮ್ಮ ಪ್ರಮುಖ 'ವೈರಿ'ಯನ್ನು ದುರ್ಬಲಗೊಳಿಸಲು ಅಥವಾ ಸೋಲಿಸಲು ಇತರ ಸಾಮ್ರಾಜ್ಯಶಾಹಿಗಳ ಜತೆ ಮಿಲಿಟರಿ ಒಪ್ಪಂದ ಮಾಡಿಕೊಳ್ಳುತ್ತಿದ್ದವು. 1914ರ ಹೊತ್ತಿಗೆ ಇಂತಹ ಹಲವು – ಬ್ರಿಟನ್–ಫ್ರಾನ್ಸ್ ನಡುವೆ, ಫ್ರಾನ್ಸ್–ರಶ್ಯ ನಡುವೆ, ಜರ್ಮನಿ–ಆಸ್ಟ್ರೋ ಹಂಗರಿಗಳ ನಡುವೆ – ಹಲವು ಒಪ್ಪಂದಗಳಿದ್ದವು. ಒಟ್ಟಾರೆಯಾಗಿ ಹೇಳುವುದಾದರೆ ಬ್ರಿಟನ್, ಫ್ರಾನ್ಸ್ ಮತ್ತು ರಶ್ಯದ ತ್ರಿವಳಿ ಕೂಟ ಒಂದು ಕಡೆ. ಮಧ್ಯ ಯುರೋಪಿನ ಜರ್ಮನಿ, ಆಸ್ಟ್ರೋ–ಹಂಗರಿ ಮತ್ತು ಒಟ್ಟೊಮನ್ ಸಾಮ್ರಾಜ್ಯಗಳ ಕೂಟ ಇನ್ನೊಂದು ಕಡೆ. ಇಟಲಿ ಮೊದಲಿಗೆ ಮಧ್ಯ ಯುರೋಪಿನ ಕೂಟದ ಸದಸ್ಯನಾಗಿದ್ದರೂ ತ್ರಿವಳಿ ಕೂಟದ ಜತೆ ಗುಪ್ತ ಮಾತುಕತೆ ನಡೆಸಿತ್ತು.

ಬಹುಶಃ ಯಾವ ಯುದ್ಧವೂ ಜಗತ್ತಿನ ರಾಜಕೀಯ ನಕ್ಷೆಯನ್ನು ಇಷ್ಟು ಬದಲಾಯಿಸಲಿಲ್ಲ. ಕೆಳಗೆ ಕೊಟ್ಟಿರುವ ನಕಾಶೆಗಳಲ್ಲಿ ಎಡಗಡೆಯದ್ದು ಮಹಾಯುದ್ಧ ಆರಂಭವಾದಾಗ ಇದ್ದ ನಕಾಶೆ, ಬಲಗಡೆಯದ್ದು ಯುದ್ಧಾನಂತರದ್ದು. ಮಹಾಯುದ್ಧದ ಪರಿಣಾಮವಾಗಿ ನಾಲ್ಕು ಸಾಮ್ರಾಜ್ಯಗಳು – ಜರ್ಮನ್, ರಶ್ಯನ್, ಆಸ್ಟ್ರೋ–ಹಂಗರಿಯನ್ ಮತ್ತು ಒಟ್ಟೊಮನ್ – ಇಲ್ಲವಾದವು. ಕೊನೆಯ ಎರಡು ಪೂರ್ಣವಾಗಿ ಇಲ್ಲವಾದವು. ಮೊದಲ ಎರಡು ಸಾಕಷ್ಟು ಪ್ರದೇಶ ಕಳೆದುಕೊಂಡು ಹೊಸ ರೂಪದಲ್ಲಿ ಕಾಣಿಸಿಕೊಂಡವು. ನಾಲ್ಕು ಸಾಮ್ರಾಜ್ಯಗಳು ಇಲ್ಲವಾದ್ದರಿಂದ ಹಲವು ದಮನಿತ ದೇಸಿ–ಜನಾಂಗೀಯ ಗುಂಪುಗಳು ಸ್ವತಂತ್ರ ದೇಶಗಳಾದವು. ರಶ್ಯದಲ್ಲಿ ಕ್ರಾಂತಿ ನಡೆದು ಜಗತ್ತಿನಲ್ಲೇ ಮೊದಲ ಬಾರಿಗೆ ಹೊಸ ಸಾಮಾಜಿಕ–ಆರ್ಥಿಕ ವ್ಯವಸ್ಥೆ ಬಂದಿತು. ಎಸ್ಟೋನಿಯ, ಲ್ಯಾಟವಿಯ, ಲಿಥುವಾನಿಯ, ಫಿನ್‌ಲ್ಯಾಂಡ್, ಪೋಲೆಂಡ್ ಸ್ವತಂತ್ರ ದೇಶಗಳಾದವು. ಆಸ್ಟ್ರೋ–ಹಂಗರಿಯನ್ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಿ ಸ್ವತಂತ್ರ ದೇಶಗಳಾಗಿ ಆಸ್ಟ್ರಿಯ, ಹಂಗರಿ, ಚೆಕೊಸ್ಲಾವೆಕಿಯ, ಯುಗೊಸ್ಲಾವಿಯಗಳು ಉದಯವಾದವು. ಮಹಾಯುದ್ಧ ಮುಗಿದ ಕೂಡಲೇ ತುರ್ಕಿಯ ರಾಷ್ಟ್ರೀಯ ಕ್ರಾಂತಿಯಾಗಿ ಅದು ಗಣತಂತ್ರವಾಯಿತು. ಒಟ್ಟೊಮನ್ ಸಾಮ್ರಾಜ್ಯದ ವಿಘಟನೆ ನಂತರ ಹಲವು ಪಶ್ಚಿಮ ಏಶ್ಯಾದ ಹೊಸ (ಹೆಚ್ಚಾಗಿ ಅರಬ್)ದೇಶಗಳು–ಇರಾಕ್, ಸಿರಿಯಾ–ಲೆಬನಾನ್ ಇತ್ಯಾದಿ – ಉದಯವಾದವು.









ಮೊದಲ ಮಹಾಯುದ್ಧದಲ್ಲಿ 1.7 ಕೋಟಿ ಜನ ಸತ್ತರು. ಅವರಲ್ಲಿ ಒಂದು ಕೋಟಿ ಯುದ್ಧದಲ್ಲಿ ತೊಡಗಿದ ಸೈನಿಕರಾದರೆ, 70 ಲಕ್ಷ ನಾಗರಿಕರು. ಯಾವುದೇ ಹಿಂದಿನ ಯುದ್ಧದಲ್ಲಿ ಇಷ್ಟು ದೊಡ್ಡ ಪ್ರಮಾಣದ ನಾಗರಿಕರ ಸಾವು ಆಗಿರಲಿಲ್ಲ. ಎರಡು ಕೋಟಿ ಜನ ತೀವ್ರವಾಗಿ ಗಾಯಗೊಂಡರು. ಸೈನಿಕರಲ್ಲಿ ಮೂರನೇ ಎರಡು ಭಾಗ ರಣರಂಗದಲ್ಲಿ ಸತ್ತರು. ಇನ್ನುಳಿದ ಮೂರನೇ ಒಂದು ಭಾಗ ಸೈನಿಕರು ಹಸಿವು–ಬಲಹೀನತೆ, ರೋಗ ರುಜಿನಗಳಿಂದ ಸತ್ತರು. ನಾಗರಿಕ ಸಾವುಗಳಲ್ಲಿ 24 ಲಕ್ಷ ನೇರ ಮಿಲಿಟರಿ ದಾಳಿ, ಮಿಲಿಟರಿ ನಡೆಸಿದ ನರಮೇಧಗಳಲ್ಲಿ ಸತ್ತರು. 46 ಲಕ್ಷ ಯುದ್ಧದ ಕಾರಣದಿಂದ ಆದ ಕ್ಷಾಮ, ರೋಗ ರುಜಿನಗಳಿಂದ ಸತ್ತರು. ಮೇಲಿನ ಚಿತ್ರಗಳಲ್ಲಿ ಎಡಗಡೆಯದ್ದು: ಮಹಿಳೆಯರನ್ನೂ ಒಳಗೊಂಡು ಸರ್ಬಿಯನ್ ನಾಗರಿಕರನ್ನು ಬಂದೂಕಿಗೆ ಆಹುತಿ ಮಾಡುತ್ತಿರುವ ಆಸ್ಟ್ರೊ––ಹಂಗೇರಿಯನ್ ಸೈನಿಕರು.

ಬಲಗಗಡೆ: ಗ್ಯಾಸ್ ದಾಳಿಯಿಂದ ಕುರುಡರಾದ ಬ್ರಿಟಿಷ್ ಸೈನಿಕರು

ಈ ಕೂಟಗಳು, ದೇಶಗಳು ಒಂದರ ವಿರುದ್ಧ ಇನ್ನೊಂದು ಕತ್ತಿ ಮಸೆಯುತ್ತಿದ್ದವು. ಯುದ್ಧಕ್ಕೆ ಹೋಗಲು ಅವರೆಲ್ಲರಿಗೂ ಒಂದು ನೆಪ ಬೇಕಾಗಿತ್ತು, ಅಷ್ಟೇ.

19 ಮತ್ತು 20ನೇ ಶತಮಾನದಲ್ಲಿ ಬಂಡವಾಳಶಾಹಿ ಜತೆ ಬೆಳೆದ ರಾಷ್ಟ್ರೀಯತಾವಾದ ಸಹ ಮತ್ತೊಂದು ಕಾರಣ. ಪ್ರಬಲ ಸಾಮ್ರಾಜ್ಯಶಾಹಿ ರಾಷ್ಟ್ರಗಳ (ಇಂಗ್ಲೆಂಡ್, ಫ್ರಾನ್ಸ್, ರಶ್ಯ, ಜರ್ಮನಿ, ಇಟಲಿ) ರಾಷ್ಟ್ರೀಯತೆಗಳ ರಾಷ್ಟ್ರೀಯತಾವಾದ ಒಂದು ಕಡೆ. ಇಂತಹ ಸಾಮ್ರಾಜ್ಯಶಾಹಿ ರಾಷ್ಟ್ರಗಳ ದಮನಕ್ಕೆ ಗುರಿಯಾದ ಸರ್ಬಿಯ, ಬೊಸ್ನಿಯಾ, ಮಸೆಡೊನಿಯ, ಐರ್ಲೆಂಡ್, ಪೋಲೆಂಡ್ ಮುಂತಾದ ಸಣ್ಣ ದುರ್ಬಲ ರಾಷ್ಟ್ರೀಯತೆಗಳ ರಾಷ್ಟ್ರೀಯತಾವಾದ ಇನ್ನೊಂದು ಕಡೆ. ಪ್ರಬಲ ಮತ್ತು ದುರ್ಬಲ ರಾಷ್ಟ್ರೀಯತೆಗಳ ನಡುವೆ ಮತ್ತು ಒಳಗೆ ಇದ್ದ ಸಂಘರ್ಷ ಬೆಳೆಯುತ್ತಾ 1914ರ ಹೊತ್ತಿಗೆ ಉಗ್ರ ರೂಪ ತಾಳಿತ್ತು.

ಯುರೋಪಿನಲ್ಲಿ ಬಾಲ್ಕನ್ ಎನ್ನುವ ಪ್ರದೇಶ ಹಲವು ಬುಡಕಟ್ಟು, ಜನಾಂಗ, ಧರ್ಮಗಳ ವೈವಿಧ್ಯಮಯ ಜನ ಒಟ್ಟಿಗೆ ವಾಸಿಸುವ ಪ್ರದೇಶ. ಉತ್ತರದಲ್ಲಿ ಬಾಲ್ಕನ್ ಪರ್ವತಗಳು ಇತರ ದಿಕ್ಕುಗಳಲ್ಲಿ ಸಮುದ್ರದಿಂದ ಆವೃತ್ತವಾಗಿರುವ ಚಾರಿತ್ರಿಕವಾಗಿ ರಾಜಕೀಯ–ಭೌಗೋಳಿಕವಾಗಿಯೂ ಆಯಕಟ್ಟಿನ ಪ್ರದೇಶ. ಇಲ್ಲಿನ ವಿವಿಧ ರಾಷ್ಟ್ರೀಯತೆಗಳು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಸಾಮ್ರಾಜ್ಯಗಳ ನಡುವೆ ಹರಿ ಹಂಚಿ ಹೋಗಿದ್ದವು. ಹಿಂದೆ ಬಹುಪಾಲು ಒಟ್ಟೊಮನ್ ಸಾಮ್ರಾಜ್ಯದ ಭಾಗವಾಗಿದ್ದ ಈ ದೇಶಗಳಲ್ಲಿ ಕೆಲವು ಸ್ವತಂತ್ರವಾಗಿದ್ದವು. ಕೆಲವು ಆಸ್ಟ್ರೋ–ಹಂಗರಿಯನ್ ಸಾಮ್ರಾಜ್ಯದ ಭಾಗವಾಗಿದ್ದವು. ಆದರೆ ಹೆಚ್ಚಿನವು ಸ್ಲಾವಿಷ್ ಗುಂಪಿನ ಭಾಷೆಗೆ ಸೇರಿದ್ದು ಜನಾಂಗೀಯವಾಗಿಯೂ ರಶ್ಯನರಿಗೆ ಹತ್ತಿರವಿದ್ದರು. ಇದನ್ನು ಬಳಸಿ ರಶ್ಯ ಸಹ ಇಲ್ಲಿ ತಾನು ಅವರ ರಕ್ಷಕನಂತೆ ಪೋಸು ಕೊಡುತ್ತಿತ್ತು. ಸರ್ಬಿಯಾ ಒಂದು ಸ್ವತಂತ್ರ ದೇಶವಾಗಿದ್ದರೂ, ಸರ್ಬಿಯಾ ರಾಷ್ಟ್ರೀಯತೆಯ ಜನ ದೊಡ್ಡ ಸಂಖ್ಯೆಯಲ್ಲಿ ಆಸ್ಟ್ರೋ–ಹಂಗರಿಯನ್ ಸಾಮ್ರಾಜ್ಯದ ಪ್ರದೇಶಗಳಲ್ಲೂ ವಾಸಿಸಿದ್ದರು. ಅವರು ಆಸ್ಟ್ರೋ–ಹಂಗರಿಯನ್ ಸಾಮ್ರಾಜ್ಯದಿಂದ ಬೇರ್ಪಟ್ಟು ಸರ್ಬಿಯಾ ಸೇರಬಯಸುತ್ತಿದ್ದರು. ಆಸ್ಟ್ರೋ–ಹಂಗರಿಯನ್ ಸಾಮ್ರಾಜ್ಯ ಅವರ ದಮನದಲ್ಲಿ ತೊಡಗಿದ್ದರಿಂದ ಅವರ ಹೋರಾಟ ಉಗ್ರಗಾಮಿ ಹಾದಿಯಲ್ಲಿ ನಡೆದಿತ್ತು. ಇಂತಹ ಉಗ್ರಗಾಮಿ ಸರ್ಬಿಯನ್ ಚಳುವಳಿಯ ಸದಸ್ಯನೇ ಮಹಾಯುದ್ಧಕ್ಕೆ ನೆಪವಾದ ಕೊಲೆ ಮಾಡಿದ್ದು.

ಹೀಗೆ, ಸಾಮ್ರಾಜ್ಯಶಾಹಿ ದೇಶಗಳ ನಡುವೆ ಆರ್ಥಿಕ–ಮಿಲಿಟರಿ ಪೈಪೋಟಿ, ವಸಾಹತು ಕಿತ್ತುಕೊಳ್ಳಲು ಸಂಘರ್ಷ, ಇಡೀ ಯುರೋಪಿನಲ್ಲಿ ಮತ್ತು ಬಾಲ್ಕನ್ ಪ್ರದೇಶದಲ್ಲಿ ರಾಷ್ಟ್ರೀಯತೆಗಳ ನಡುವೆ ಸಂಘರ್ಷ, ಸಿದ್ಧವಾಗಿತ್ತು. ಆಸ್ಟ್ರೋ–ಹಂಗರಿಯನ್ ಸಾಮ್ರಾಜ್ಯದ ರಾಜಕುಮಾರ ದಂಪತಿಗಳ ಕೊಲೆ ಕಿಡಿ ಒದಗಿಸಿತು.

ಒಂದು ಕೊಲೆಯಿಂದ

4 ವರ್ಷಗಳ ಮಹಾಯುದ್ಧ

ಜೂನ್ 28 ರ ರಾಜಕುಮಾರನ ಕೊಲೆಯ ಪ್ರಕರಣದ ಪರಿಣಾಮವಾಗಿ ಸರ್ಬಿಯನ್ನರು ವಾಸಿಸಿದ್ದ ಪ್ರಾಂತ್ಯಗಳಲ್ಲಿ ಅವರ ವಿರುದ್ಧ ವ್ಯಾಪಕ ದಂಗೆಗಳು ನಡೆದವು. ಅದಕ್ಕೆ ಸರಕಾರ ಕುಮ್ಮಕ್ಕು ಸಹ ಕೊಟ್ಟಿತು. ಇದಲ್ಲದೆ ಸುಮಾರು 500 ಸರ್ಬಿಯನ್ನರನ್ನು ಗಲ್ಲಿಗೇರಿಸಲಾಯಿತು. 2 ಸಾವಿರ ಸರ್ಬಿಯನ್ನರನ್ನು ಬಂಧಿಸಲಾಯಿತು. 5 ಸಾವಿರ ಸರ್ಬಿಯನ್ನರನ್ನು ದೇಶದಿಂದ ಉಚ್ಚಾಟನೆಗೊಳಿಸಲಾಯಿತು. ಈ ಅವಕಾಶವನ್ನು ಆಸ್ಟ್ರೋ–ಹಂಗರಿಯನ್ ಸರಕಾರ ಬಳಸಿಕೊಂಡು ಈ ಕೊಲೆ

ಸರ್ಬಿಯನ್ ಸರಕಾರದ ಪಿತೂರಿ ಇದು ಎಂದು ಹೇಳಿತು. ಅದನ್ನು ಒಪ್ಪಿಕೊಂಡು ಅದಕ್ಕೆ ತಕ್ಕ ಶಿಕ್ಷೆಗೆ ಒಪ್ಪದಿದ್ದರೆ ಯುದ್ಧ ಹೂಡುವುದಾಗಿ ಬೆದರಿಕೆ ಹಾಕಿತು. ಸರ್ಬಿಯಾದ ತಪ್ಪೊಪ್ಪಿಗೆಗೆ ಜುಲೈ 23ರ ಗಡುವು ಹಾಕಿತು. ಇದರ ಮೊದಲು ಆಸ್ಟ್ರೋ-ಹಂಗರಿಯುನ್ ಸರಕಾರ ಜರ್ಮನ್ ಸರಕಾರ ತನಗೆ ಬೆಂಬಲ ಕೊಡುವುದೇ ಎಂದು ಕೇಳಿತ್ತು. ಜರ್ಮನ್ ಸರಕಾರ ಸಹ ಸರ್ಬಿಯಾಕ್ಕೆ 'ಬುದ್ಧಿ ಕಲಿಸಬೇಕು' ಎಂದು ಹೇಳಿತು. ಇಬ್ಬರೂ ಸೇರಿ ರಶ್ಯ ಸರ್ಬಿಯಾದ ನೆರವಿಗೆ ಬರುವ ಸಾಧ್ಯತೆ ಬಗ್ಗೆ ಪರಿಶೀಲಿಸಿ ಅಂತಹ ಸಾಧ್ಯತೆ ಕಡಿಮೆ ಎಂಬ ನಿರ್ಧಾರಕ್ಕೆ ಬಂದವು. ರಶ್ಯ ಸರ್ಬಿಯಾ ನೆರವಿಗೆ ಬರದಿದ್ದರೆ ಅದನ್ನು ಕೆಲವೇ ವಾರಗಳಲ್ಲಿ ಸೋಲಿಸಿ ವಶ ಪಡಿಸಿಕೊಳ್ಳಬಹುದು ಎಂದು ಅವರ ಲೆಕ್ಕಾಚಾರವಾಗಿತ್ತು. ರಶ್ಯ ಸರ್ಬಿಯದ ನೆರವಿಗೆ ಬಂದರೆ ಫ್ರಾನ್ಸ್ ಸಹ ಯುದ್ಧಕ್ಕೆ ಸೇರಿಕೊಳ್ಳುತ್ತದೆ. ಫ್ರಾನ್ಸಿನ ಮೇಲೆ ಯುದ್ಧ ಹೂಡಿದರೆ ಬ್ರಿಟನ್ ಸೇರಿಕೊಳ್ಳಬಹುದು ಎಂಬ ಬಗ್ಗೆಯೂ ಜರ್ಮನಿಯಲ್ಲಿ ಜಿಜ್ಞಾಸೆ ನಡೆಯಿತು. ಈ ನಡುವೆ ಒಂದು ಕಡೆ ಬ್ರಿಟನ್ ಫ್ರಾನ್ಸ್, ಇನ್ನೊಂದು ಕಡೆ ರಶ್ಯ, ಈ ಗಡುವು ವಿಸ್ತರಿಸುವಂತೆ ಮತ್ತು ಶಾಂತಿ ಮಾತುಕತೆ ನಡೆಸುವಂತೆ ಆಸ್ಟ್ರೋ-ಹಂಗರಿಯನ್ ಮತ್ತು ಸರ್ಬಿಯನ್ ಸರಕಾರಗಳಿಗೆ ಮನವಿ ಮಾಡುವ ಮೂಲಕ ಜುಲೈ ತಿಂಗಳ ಉದ್ದಕ್ಕೂ 'ಶಾಂತಿ ನಾಟಕ' ಆಡಿದವು. ಅದೇ ಸಮಯದಲ್ಲಿ ಈ ನಾಲ್ಕು ದೇಶಗಳ ಸರಕಾರಗಳು ಯುದ್ಧ ತಯಾರಿಯಲ್ಲಿ ತೊಡಗಿದ್ದವು. ಯುದ್ಧ ಆದರೆ ತಮ್ಮ ಆದ್ಯತೆ ಯಾವುದು ಆಗಬೇಕು ಎಂದು ಲೆಕ್ಕಾಚಾರ ಹಾಕುತ್ತಿದ್ದವು.

ರಶ್ಯ ತನ್ನ ಬೆಂಬಲಕ್ಕೆ ಬರುತ್ತದೆ ಎಂಬ ಭರವಸೆಯಿಂದ ಸರ್ಬಿಯಾ ಆಸ್ಟ್ರೋ-ಹಂಗರಿಯನ್ ಬೆದರಿಕೆ ಮತ್ತು ಗಡುವನ್ನು ಮನ್ನಿಸಲಿಲ್ಲ. ಆಸ್ಟ್ರೋ-ಹಂಗರಿಯನ್ ಸೈನ್ಯ ಸರ್ಬಿಯಾದ ಮೇಲೆ ಜುಲೈ 28ರಂದು ಆಕ್ರಮಣ ಮಾಡಿತು. ಮರುದಿನ (ಜುಲೈ 29ರಂದು) ರಶ್ಯ, ಆಸ್ಟ್ರೋ-ಹಂಗರಿ ಗಡಿಯಲ್ಲಿ ಸೇನಾ ಜಮಾವಣೆಗೆ ಆಜ್ಞೆ ಹೊರಡಿಸಿತು. ಮಾರನೆಯ ದಿನ (ಜುಲೈ 30ರಂದು)ರಶ್ಯ, ಜರ್ಮನ್ ಗಡಿಯಲ್ಲಿ ಸೇನಾ ಜಮಾವಣೆಗೆ ಆಜ್ಞೆ ಹೊರಡಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಜರ್ಮನಿ ರಶ್ಯದ ವಿರುದ್ಧ 'ಯುದ್ಧದ ಅಪಾಯ' ಘೋಷಿಸಿ, ಸರ್ಬಿಯಾದ ನೆರವಿಗೆ ಬರದಿರಲು ಮತ್ತು ಫ್ರಾನ್ಸ್ ಜತೆ ಒಪ್ಪಂದ ಬಳಸದೆ ಅದು ತಟಸ್ಥವಾಗಿ ಇರುವಂತೆ ಮಾಡಬೇಕೆಂದು ರಶ್ಯಕ್ಕೆ ಹೇಳಿತು. ಫ್ರಾನ್ಸಿಗೂ ರಶ್ಯದ ನೆರವಿಗೆ ಹೋಗದಂತೆ ಹೇಳಿತು. ಇದಕ್ಕೆ ಸರಿಯಾದ ಪ್ರತಿಕ್ರಿಯೆ ಬರದಿದ್ದಾಗ ಅಗಸ್ಟ್ 1 ರಂದು ರಶ್ಯದ ಮೇಲೆ, 2ರಂದು ಲಕ್ಸಂಬರ್ಗ್ ಮೇಲೆ, 3ರಂದು ಫ್ರಾನ್ಸ್ ಮೇಲೆ, ಫ್ರಾನ್ಸಿಗೆ ಜರ್ಮನ್ ಪಡೆಗಳು ತಮ್ಮ ದೇಶದ ಮೂಲಕ ಹಾದು ಹೋಗಲು ಬಿಡದ ಬೆಲ್ಜಿಯಂ ಮೇಲೆ ಅಗಸ್ಟ್ 4ರಂದು ಜರ್ಮನಿ ಯುದ್ಧ ಘೋಷಿಸಿತು. ಬೆಲ್ಜಿಯಂನ್ನು ತಟಸ್ಥವಾಗಿರಲು ಕೇಳಿದ್ದಕ್ಕೆ ಪ್ರತಿಸ್ಪಂದನೆ ನೀಡದೆ ಇದ್ದಾಗ ಜರ್ಮನಿಯ ಮೇಲೆ ಅಗಸ್ಟ್ 4ರಂದು ಬ್ರಿಟನ್ ಯುದ್ಧ ಘೋಷಿಸಿತು. ಹೀಗೆ ಎರಡು ದೊಡ್ಡ ಮಿಲಿಟರಿ ಸಾಮ್ರಾಜ್ಯಶಾಹಿ ಕೂಟಗಳ ನಡುವೆ ಯುದ್ಧ ಆರಂಭವಾಗಿ ಜಾಗತಿಕ ಮಹಾಯುದ್ಧವಾಯಿತು.

ಸುಮಾರು 2 ವರ್ಷಗಳ ಯುದ್ಧದ ನಂತರ 1915ರಲ್ಲಿದ್ದಕ್ಕಿಂತ ಯುದ್ಧದ ಚಿತ್ರ ಬಹಳ ಏನೂ ಬದಲಾಗದಿದ್ದಾಗ ಯುದ್ಧ ಕೊನೆಗೊಳಿಸುವ ಯೋಚನೆಯನ್ನು ಎರಡೂ ಕೂಟಗಳು ಆರಂಭಿಸಿದವು. ಯುದ್ಧ-ವಿರೋಧಿ ಚಳುವಳಿಗಳು ಎಲ್ಲಾ ದೇಶಗಳಲ್ಲೂ ಆರಂಭವಾಗಿದ್ದವು. ರಶ್ಯ, ಜರ್ಮನಿ, ಫ್ರಾನ್ಸ್, ಬ್ರಿಟಿಷ್ ಸೈನಿಕರು ಹಲವು ಕಡೆ ದಂಗೆ ಎದ್ದರು. ಈ ಕೆಳಗಿನದ್ದು, ಈ ರೀತಿ ದಂಗೆಯೆದ್ದ ಫ್ರೆಂಚ್ ಸೈನಿಕರನ್ನು ಮರಣದಂಡನೆಗೆ ಗುರಿಪಡಿಸುತ್ತಿರುವ ಚಿತ್ರ.



ಭಾರತ ಆಗ ಬ್ರಿಟಿಷ್ ವಸಾಹತು ಆಗಿದ್ದು ಜನತೆಯ ಒಪ್ಪಿಗೆ ಇಲ್ಲದೆ ಮಹಾಯುದ್ಧಕ್ಕೆ ಎಳೆಯಲ್ಪಟ್ಟಿತ್ತು. ಬ್ರಿಟಿಷ್ ವಸಾಹತುಗಳಲ್ಲೇ ಅತ್ಯಂತ ಹೆಚ್ಚು ಸೈನಿಕರನ್ನು ಮಹಾಯುದ್ಧಕ್ಕೆ ಕಳಿಸಿತ್ತು. ಮಾತ್ರವಲ್ಲ, ಅತಿ ಹೆಚ್ಚು ಸಾವು-ನೋವುಗಳನ್ನೂ ಅನುಭವಿಸಿತು. 75 ಸಾವಿರ ಭಾರತೀಯ ಸೈನಿಕರು ಸತ್ತರು. 70 ಸಾವಿರ ಸೈನಿಕರು ತೀವ್ರವಾಗಿ ಗಾಯಗೊಂಡರು. ಈ ಕೆಳಗಿನ ಚಿತ್ರದಲ್ಲಿ ಗಾಯಗೊಂಡ ಒಬ್ಬ ಭಾರತೀಯ ಸೈನಿಕನನ್ನು ಕಾಣಬಹುದು





1914ರ ಕೊನೆಯಲ್ಲಿ ಜಪಾನ್, ಜರ್ಮನಿಯ ಮೇಲೆ ಯುದ್ಧ ಸಾರಿ ಏಶ್ಯನ್ ವಸಾಹತುಗಳನ್ನು ವಶಪಡಿಸಿಕೊಂಡಿತು. 1915ರಲ್ಲಿ ಇಟಲಿ, 1916ರಲ್ಲಿ ರೋಮೇನಿಯ ತ್ರಿವಳಿ ಕೂಟಕ್ಕೆ ಸೇರಿ ಯುದ್ಧಕ್ಕೆ ಇಳಿದವು. ಒಟ್ಟೊಮನ್ ಸಾಮ್ರಾಜ್ಯ ಮತ್ತು ಬಲ್ಗೇರಿಯಾ ಮಧ್ಯ ಯುರೋಪಿನ ಕೂಟಕ್ಕೆ ಸೇರಿ ಯುದ್ಧಕ್ಕೆ ಇಳಿದವು. ಇದರಿಂದ ಮಹಾಯುದ್ಧ ಉತ್ತರ ಆಫ್ರಿಕಾ ಮತ್ತು ಪಶ್ಚಿಮ ಏಶ್ಯಾಕ್ಕೆ ಹಬ್ಬಿತು. ಅಮೆರಿಕ ಮಹಾಯುದ್ಧದ ಹೆಚ್ಚಿನ ವೇಳೆಯಲ್ಲಿ ತಟಸ್ಥವಾಗಿತ್ತು. ಆದರೆ ಏಳು ಅಮೆರಿಕನ್ ಹಡಗುಗಳನ್ನು ಜರ್ಮನ್ ಸಬ್ ಮೆರಿನುಗಳು ಮುಳುಗಿಸಿದಾಗ ಎಪ್ರಿಲ್ 1917ರಲ್ಲಿ ತ್ರಿವಳಿ ಕೂಟದ ಪರವಾಗಿ ಮಹಾಯುದ್ಧಕ್ಕೆ ಸೇರಿಕೊಂಡಿತು.

ಯುದ್ಧ ಸಾಗರಗಳಲ್ಲೂ ನಡೆಯಿತು. ಜಗತ್ತಿನಾದ್ಯಂತ ಸಾಗರಗಳಲ್ಲಿ ಬ್ರಿಟನ್, ಫ್ರಾನ್ಸ್, ರಶ್ಯ ಮತ್ತು ಜರ್ಮನಿಯ ಯುದ್ಧ ನೌಕೆಗಳು ವೈರಿ ಯುದ್ಧ ನೌಕೆಗಳನ್ನು ಮುಳಗಿಸಲು ಪ್ರಯತ್ನಿಸಿದವು. ಸರಕುಗಳು ವೈರಿ ದೇಶಗಳಿಗೆ ಸಿಗದಂತೆ ಬ್ರಿಟನ್ ಮತ್ತು ಜರ್ಮನಿ ಪರಸ್ಪರ ನೌಕಾ ದಿಗ್ಬಂಧನಗಳನ್ನು ಹಾಕಿದವು. ಜರ್ಮನಿ ತ್ರಿವಳಿ ಕೂಟದ ದೇಶಗಳ ಕಮರ್ಶಿಯಲ್ ಹಡಗುಗಳ ಸಂಚಾರಕ್ಕೂ ಯೂ-ಬೋಟ್ ಮತ್ತು ಸಬ್ ಮೇರಿನುಗಳನ್ನು ಬಳಸಿ ತೊಂದರೆ ಮಾಡಲು ಪ್ರಯತ್ನಿಸಿತು. ಯುದ್ಧದಲ್ಲಿ ಟ್ಯಾಂಕುಗಳು, ಸಶಸ್ತ್ರ ಕಾರುಗಳನ್ನು ವೇಗದ ಮಿಲಿಟರಿ ಚಲನೆಗೆ, ಯುದ್ಧ ವಿಮಾನಗಳು, ಬಲೂನುಗಳನ್ನು ಬಾಂಬ್ ದಾಳಿ, ವೈರಿ ಪಡೆಗಳ ಸ್ಥಿತಿ ತಿಳಿದುಕೊಳ್ಳಲು ಬಳಸಲಾಯಿತು. ಅಂತರ್ರಾಷ್ಟ್ರೀಯ ಒಪ್ಪಂದದ ಪ್ರಕಾರ ನಿಷೇಧಿತವಾಗಿದ್ದರೂ, ಯುದ್ಧರಂಗದಲ್ಲಿ ಕೆಲವೊಮ್ಮೆ ನಾಗರಿಕರ ಮೇಲೂ ಕ್ಲೋರಿನ್ ಮತ್ತು ಮಸ್ಟರ್ಡ್ ಗ್ಯಾಸುಗಳನ್ನು ಬಳಸಲಾಯಿತು.

1917ರ ಹೊತ್ತಿಗೆ ಎರಡೂ ಕೂಟಗಳಲ್ಲಿ ಆಂತರಿಕ ಸಮಸ್ಯೆಗಳು ಕಂಡು ಬರಲಾರಂಭಿಸಿದವು. ಸುಮಾರು 2 ವರ್ಷಗಳ ಯುದ್ಧದ ನಂತರ 1915ರಲ್ಲಿದ್ದಕ್ಕಿಂತ ಯುದ್ಧದ ಚಿತ್ರ ಬಹಳ ಏನೂ ಬದಲಾಗದಿದ್ದಾಗ ಯುದ್ಧ ಕೊನೆಗೊಳಿಸುವ ಯೋಚನೆಯನ್ನು ಎರಡೂ ಕೂಟಗಳು ಆರಂಭಿಸಿದವು. ಯುದ್ಧ-ವಿರೋಧಿ ಚಳುವಳಿಗಳು ಎಲ್ಲಾ ದೇಶಗಳಲ್ಲೂ ಆರಂಭವಾಗಿದ್ದವು. ರಶ್ಯ, ಜರ್ಮನಿ, ಫ್ರಾನ್ಸ್, ಬ್ರಿಟಿಷ್ ಸೈನಿಕರು ಹಲವು ಕಡೆ ದಂಗೆ ಎದ್ದರು. ಯುದ್ಧದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಅಸಹಕಾರ ತೋರಿಸಿದರು. ಹಲವು ಕಡೆ ಸ್ಥಳೀಯವಾಗಿ ಎರಡೂ ಕಡೆ ಸೈನಿಕರು ಮಾತನಾಡಿಕೊಂಡು ಯುದ್ಧ ನಿಲ್ಲಿಸಿದರು. 1917ರಲ್ಲಿ ರಶ್ಯನ್ ಕ್ರಾಂತಿ ಆದ ಮೇಲೆ ಲೆನಿನ್ ಅವರ ನಾಯಕತ್ವದ ಸರಕಾರ ಜರ್ಮನಿ ಜತೆ ಕದನವಿರಾಮ ಒಪ್ಪಂದ ಮಾಡಿ ಯುದ್ಧದಿಂದ ಹಿಂದೆ ಸರಿಯಿತು. ರಶ್ಯನ್ ಕ್ರಾಂತಿ ನಂತರ ಅಂತಹುದೇ ಕ್ರಾಂತಿ ಆಗುವ ಲಕ್ಷಣಗಳು ಜರ್ಮನಿಯಲ್ಲೂ ಕಂಡು ಬಂದವು. ರೋಸಾ ಲಕ್ಸಂಬರ್ಗ್ ಮತ್ತು ಕಾರ್ಲ್ ಲೈಬ್ನಿಕ್ತ್ ನಾಯಕತ್ವದ ಕಮ್ಯುನಿಸ್ಟ್ ಪಕ್ಷ ಅದರ ನಾಯಕತ್ವ ವಹಿಸಿತ್ತು. ಬವೇರಿದಲ್ಲಿ ಸೈನಿಕರ ಸೋವಿಯೇಟುಗಳು ಅಧಿಕಾರ ವಹಿಸಿಕೊಂಡವು. ಇದು ದೇಶದ ತುಂಬಾ ಹರಡಬಹುದು ಎಂದು ಬೆದರಿದ ಆಳುವ ವರ್ಗಗಳು ರಾಜ ವಿಲ್ಹೆಲ್ಮ್‌ನನ್ನು ಹಾಲೆಂಡಿಗೆ ದೇಶಾಂತರ ಕಳಿಸಿ ಜರ್ಮನ್ ರಿಪಬ್ಲಿಕ್ ಘೋಷಿಸಿದರು. ಸೋಶಲಿಸ್ಟ್ ಪಕ್ಷವನ್ನು ತಾತ್ಕಾಲಿಕ ಸರಕಾರ ರಚಿಸಲು ಆಹ್ವಾನಿಸಿದರು. ಬ್ರಿಟನ್, ಫ್ರಾನ್ಸುಗಳೂ ಇದರಿಂದ ಬೆದರಿ ಕದನವಿರಾಮಕ್ಕೆ ತಯಾರಾದವು.

ಈ ಮಹಾಯುದ್ಧದ ಮಹಾ ನರಮೇಧ ಅನಿವಾರ್ಯವೇನೂ ಆಗಿರಲಿಲ್ಲ. ಮೊದಲ ಯುದ್ಧದ ಮೂಲಕಾರಣ 'ಸಾಮ್ರಾಜ್ಯಶಾಹಿ'. ಯುರೋಪಿನ ಸೋಶಲಿಸ್ಟ್ ಪಕ್ಷಗಳು ತಮ್ಮ ತಮ್ಮ ದೇಶಗಳ ಸರಕಾರದ ಮೇಲೆ ಯುದ್ಧದಲ್ಲಿ ಭಾಗವಹಿಸದಿರುವಂತೆ ಒತ್ತಡ ಹೇರುವಷ್ಟು ಶಕ್ತಿಶಾಲಿಯಾಗಿದ್ದವು, ವಿಶೇಷವಾಗಿ, ಜರ್ಮನಿಯಲ್ಲಿ. ಆದರೆ ಯುರೋಪಿನ ಹೆಚ್ಚಿನ ಸೋಶಲಿಸ್ಟ್ ಪಕ್ಷಗಳು ತಮ್ಮ ವರ್ಗದ ಹಿತಾಸಕ್ತಿ ಮರೆತು ತಮ್ಮ ದೇಶದ ಬೂರ್ಜ್ವಾ ವರ್ಗದ ಬಾಲಂಗೋಚಿಗಳಾದವು. ಲೆನಿನ್ ತಮ್ಮ 'ಸಾಮ್ರಾಜ್ಯಶಾಹಿ' ಪುಸ್ತಕದಲ್ಲಿ ವಾದಿಸಿದಂತೆ ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗೆ ಪ್ರಶಸ್ತ ಸಂದರ್ಭ ಸಿದ್ಧವಾಗಿತ್ತು. ರಶ್ಯದಲ್ಲಿ ಲೆನಿನ್ ನೇತೃತ್ವದಲ್ಲಿ 1917ರಲ್ಲಿ ಸಮಾಜವಾದಿ ಕ್ರಾಂತಿ ನಡೆಯಿತು. ಜಮನಿಯಲ್ಲೂ ಅಂತಹುದೇ ಕ್ರಾಂತಿ ಆಗುವ ಲಕ್ಷಣಗಳು ಕಂಡು ಬಂದವು. ರೋಸಾ ಲಕ್ಸಂಬರ್ಗ್ ಮತ್ತು ಕಾರ್ಲ್ ಲೈಬ್ನಿಕ್ತ್ ನಾಯಕತ್ವದ ಕಮ್ಯುನಿಸ್ಟ್ ಪಕ್ಷ ಅದರ ನಾಯಕತ್ವ ವಹಿಸಿತ್ತು. ಬವೇರಿಯಾದಲ್ಲಿ ಸೈನಿಕರ ಸೋವಿಯೇಟುಗಳು ಅಧಿಕಾರ ವಹಿಸಿಕೊಂಡವು. ಇದು ದೇಶದ ತುಂಬಾ ಹರಡಬಹುದು ಎಂದು ಆಳುವ ವರ್ಗಗಳು ಹೆದರಿದವು. ರೋಸಾ ಲಕ್ಸೆಂಬರ್ಗ್ ಮತ್ತು ಲೈಬ್ನಿಕ್ಟ್ ಕೊಲೆ ಮಾಡಿಸಿ ಕ್ರಾಂತಿಯನ್ನು ವಿಫಲಗೊಳಿಸಿದವು. ಕೆಳಗಿನ ಚಿತ್ರಗಳಲ್ಲಿ ಎಡಗಡೆಯದ್ದು 1917ರಲ್ಲಿ ರಶ್ಯದಲ್ಲಿ ಬೋಲ್ಶೆವಿಕ್ ಕ್ರಾಂತಿಯ ಒಂದು ದೃಶ್ಯ. ಬಲಗಡೆಯದ್ದು 1918ರ ವಿಫಲ ಜರ್ಮನ್ ಕ್ರಾಂತಿಯ ಒಂದು ದೃಶ್ಯ





ಅಮೆರಿಕದ ಅಧ್ಯಕ್ಷ ಯುದ್ಧ ಸೇರುವಾಗ ಈ ಮಹಾಯುದ್ಧ 'ಎಲ್ಲಾ ಯುದ್ಧಗಳನ್ನು ಕೊನೆಗೊಳಿಸುವ ಯುದ್ಧ' ಎಂದು ಕರೆದಿದ್ದರಂತೆ. ಅದನ್ನು ಅಣಕಿಸುವಂತೆ ವರ್ಸೆಲಿಸ್ ಶಾಂತಿ ಒಪ್ಪಂದವನ್ನು 'ಶಾಂತಿಯನ್ನು ಎಲ್ಲಾ ಕಾಲಕ್ಕೂ ಕೊನೆಗೊಳಿಸುವ ಶಾಂತಿ ಒಪ್ಪಂದ' ಎಂದು ಕರೆಯಲಾಗಿದೆ. ಯಾಕೆಂದರೆ ಗೆದ್ದ ಮೂರು ದೊಡ್ಡ ಪ್ರಬಲ ಶಕ್ತಿ ರಾಷ್ಟ್ರಗಳು ಜರ್ಮನಿಯನ್ನು ಮತ್ತೆ ತಲೆ ಎತ್ತದಂತೆ ಮಾಡುವ ಅವುಗಳಿಗೆ ಮಿಲಿಟರಿ-ಆರ್ಥಿಕ ಪೈಪೋಟಿ ಕೊಡಲು ಸಾಧ್ಯವೇ ಇಲ್ಲದಂತೆ ಮಾಡುವ ಮತ್ತು ಯಾವುದೇ ಸ್ವಾಭಿಮಾನಿ ಪ್ರಾತಿನಿಧಿಕ ಸರಕಾರ ಜಾರಿ ಮಾಡಲು ಸಾಧ್ಯವೇ ಇಲ್ಲದಂತಹ ಭಾರೀ ಅಮಾನವೀಯ ಮತ್ತು ಅವಮಾನಕಾರಿ ಶರತ್ತುಗಳನ್ನು ಹಾಕಿದವು. ಇದು ಮುಂದೆ ಉಗ್ರ ರಾಷ್ಟ್ರೀಯವಾದ ಮತ್ತು ಫ್ಯಾಸಿಸಂ ಬೆಳೆಯಲು ಪ್ರಶಸ್ತ ವಾತಾವರಣ ಸಿದ್ಧಗೊಳಿಸಿತು. ಅದು ಎರಡನೇ ಮಹಾಯುದ್ಧಕ್ಕೆ ನಾಂದಿ ಹಾಡಿತು ಎಂಬುದು ಈಗ ಇತಿಹಾಸ.

1918ರ ಬೇಸಗೆಯ ನಂತರ ತ್ರಿವಳಿ ಕೂಟದ ಕೈಮೇಲಾಗುತ್ತಿದ್ದಂತೆ ಮಧ್ಯ ಯುರೋಪ್ ಕೂಟದ ದೇಶಗಳು ಕದನ ವಿರಾಮಕ್ಕೆ ಮನಸ್ಸು ಮಾಡಿದವು. ಸೆಪ್ಟೆಂಬರ್ 20ರಿಂದ ಆರಂಭಿಸಿ ನವೆಂಬರ್ 9ರ ಅವಧಿಯಲ್ಲಿ ಬಲ್ಗೇರಿಯಾ, ಒಟ್ಟೊಮನ್ ಸಾಮ್ರಾಜ್ಯ, ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯ, ಜರ್ಮನಿ ಒಂದೊಂದಾಗಿ ಕದನ ವಿರಾಮ ಒಪ್ಪಂದಕ್ಕೆ ಸಹಿ ಹಾಕಿದವು. ಆ ನಂತರ ಶಾಶ್ವತ ಶಾಂತಿ ಒಪ್ಪಂದಕ್ಕೆ ಮಾತುಕತೆ ಆರಂಭವಾಗಿ, ಜೂನ್ 28 1919ರಂದು ಪ್ಯಾರಿಸಿನ ಬಳಿಯ ಕುಖ್ಯಾತ ವಾರ್ಸೆಲೆಸ್ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಆ ಮೇಲೆ ಆಸ್ಟ್ರಿಯ, ಹಂಗರಿ, ಬಲ್ಗೇರಿಯ ಮತ್ತು ಒಟ್ಟೊಮನ್ ಜತೆ ಪ್ರತ್ಯೇಕ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

'ಶಾಂತಿಯನ್ನು ಎಲ್ಲಾ ಕಾಲಕ್ಕೂ ಕೊನೆಗೊಳಿಸುವ ಶಾಂತಿ ಒಪ್ಪಂದ'

ಇಂತಹ ಮಹಾಯುದ್ಧದ ಒಟ್ಟು ಪರಿಣಾಮಗಳು ಏನು? ಬಹುಶಃ ಯಾವ ಯುದ್ಧವೂ (ಎರಡನೇ ಮಹಾಯುದ್ಧವೂ) ಜಗತ್ತಿನ ರಾಜಕೀಯ ನಕ್ಷೆಯನ್ನು ಇಷ್ಟು ಬದಲಾಯಿಸಲಿಲ್ಲ. ಮಹಾಯುದ್ಧದ ಪರಿಣಾಮವಾಗಿ ನಾಲ್ಕು ಸಾಮ್ರಾಜ್ಯಗಳು - ಜರ್ಮನ್, ರಶ್ಯನ್, ಆಸ್ಟ್ರೋ-ಹಂಗರಿಯನ್ ಮತ್ತು ಒಟ್ಟೊಮನ್ - ಇಲ್ಲವಾದವು. ಕೊನೆಯ ಎರಡು ಪೂರ್ಣವಾಗಿ ಇಲ್ಲವಾದವು. ಮೊದಲ ಎರಡು ಸಾಕಷ್ಟು ಪ್ರದೇಶ ಕಳೆದುಕೊಂಡು ಹೊಸ ರೂಪದಲ್ಲಿ ಕಾಣಿಸಿಕೊಂಡವು. ನಾಲ್ಕು ಸಾಮ್ರಾಜ್ಯಗಳು ಇಲ್ಲವಾದ್ದರಿಂದ ಹಲವು ದಮನಿತ ದೇಸಿ-ಜನಾಂಗೀಯ ಗುಂಪುಗಳು ಸ್ವತಂತ್ರ ದೇಶಗಳಾದವು.

ರಶ್ಯದ ಕ್ರಾಂತಿ ಜಗತ್ತಿನಲ್ಲೇ ಮೊದಲ ಬಾರಿಗೆ ಹೊಸ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು ತಂದಿತು. ಆದರೆ ರಶ್ಯದಲ್ಲಿ ಯುದ್ಧ ನಿಜವಾಗಿಯೂ 1918ರಲ್ಲಿ ಮುಗಿಯಲಿಲ್ಲ. ಈ ಎಲ್ಲಾ ಶಾಂತಿ ಒಪ್ಪಂದಗಳ ನಂತರವೂ ಮುಗಿಯಲಿಲ್ಲ. ಸೋವಿಯೆಟ್ ರಶ್ಯ ಯಾವುದೇ ಶಾಂತಿ ಒಪ್ಪಂದದ ಭಾಗವಾಗಿರಲಿಲ್ಲ. ಯಾಕೆಂದರೆ ಅದು ಮೊದಲೇ ಶಾಂತಿ ಒಪ್ಪಂದ ಮಾಡಿಕೊಂಡಿತ್ತು. ಮಾತ್ರವಲ್ಲ, ರಶ್ಯದ ಹೊಸ ಸರಕಾರವನ್ನು ಹಿಂಸಾತ್ಮಕವಾಗಿ ಉರುಳಿಸಲು 14 ದೇಶಗಳ ಸೈನ್ಯಗಳು ಸ್ಥಳೀಯ ಪ್ರತಿ-ಕ್ರಾಂತಿಕಾರಿ 'ಶ್ವೇತ ಸೈನ್ಯ'ದೊಂದಿಗೆ ಮಧ್ಯಪ್ರವೇಶ ಮಾಡಿದವು. ಬ್ರಿಟನ್, ಫ್ರಾನ್ಸ್ ತಮ್ಮ ದೊಡ್ಡ ಸೈನ್ಯ ತುಕಡಿಗಳನ್ನು ಕಳಿಸಬೇಕೆಂದಿದ್ದವು. ಆದರೆ ಅವುಗಳ ಆಂತರಿಕ ಸಮಸ್ಯೆಗಳಿಂದ ಅದು ಸಾಧ್ಯವಾಗಲಿಲ್ಲ. ಸೋವಿಯೆಟ್ ರಶ್ಯದಲ್ಲಿ ಎಲ್ಲಾ ರಾಷ್ಟ್ರೀಯತೆಗಳಿಗೆ ಸ್ವಾಯತ್ತತೆ ಮತ್ತು ಪ್ರತ್ಯೇಕ ಅಸ್ತಿತ್ವದ ಹಕ್ಕು ಕೊಡಲಾಯಿತು. ಆದರೆ ಮಾಜಿ ಝಾರನ ಸಾಮ್ರಾಜ್ಯದ ಹೆಚ್ಚಿನ ದೇಶಗಳು ಕೆಲವೇ ವರ್ಷಗಳಲ್ಲಿ, ಸಮಾಜವಾದಿ ಗಣತಂತ್ರಗಳಾಗಿ ಸ್ವ-ಇಚ್ಛೆ ಯಿಂದ ಸೋವಿಯೆಟ್ ಸಮಾಜವಾದಿ ಒಕ್ಕೂಟದ ಭಾಗ ಆದವು. ಎಸ್ಟೋನಿಯ, ಲ್ಯಾಟಿವಿಯ, ಲಿಥುವಾನಿಯ, ಫಿನ್‌ಲ್ಯಾಂಡ್, ಪೋಲೆಂಡ್ ಸ್ವತಂತ್ರ ದೇಶಗಳಾದವು.

ಆಸ್ಟ್ರೋ-ಹಂಗರಿಯನ್ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಿ ಸ್ವತಂತ್ರ ದೇಶಗಳಾಗಿ ಆಸ್ಟ್ರಿಯ, ಹಂಗರಿ, ಚೆಕೊಸ್ಲಾವಕಿಯ, ಯುಗೊಸ್ಲಾವಿಯಗಳು ಉದಯವಾದವು. ಮಹಾಯುದ್ಧ ಮುಗಿದ ಕೂಡಲೇ ತುರ್ಕಿಯ ರಾಷ್ಟ್ರೀಯ ಕ್ರಾಂತಿಯಾಗಿ ಅದು ಗಣತಂತ್ರವಾಯಿತು. ಒಟ್ಟೊಮನ್ ಸಾಮ್ರಾಜ್ಯದ ವಿಘಟನೆ ನಂತರ ಹಲವು ಪಶ್ಚಿಮ ಏಶ್ಯಾದ ಹೊಸ (ಹೆಚ್ಚಾಗಿ ಅರಬ್)ದೇಶಗಳು-ಇರಾಕ್, ಸಿರಿಯಾ-ಲೆಬನಾನ್ ಇತ್ಯಾದಿ - ಉದಯವಾದವು. ಆದರೆ ಅವು ಫ್ರೆಂಚ್ ಅಥವಾ ಬ್ರಿಟಿಷ್ ಹಿಡಿತದಲ್ಲಿ ಮುಂದುವರೆದವು. ಜರ್ಮನಿ ಸಹ ಸಾಕಷ್ಟು ಪ್ರದೇಶಗಳನ್ನು ಪೋಲೆಂಡ್ ಮುಂತಾದ ನೆರೆಯ ಹೊಸ ದೇಶಗಳಿಗೆ ಕಳೆದುಕೊಂಡಿತು.

ಅಮೆರಿಕದ ಅಧ್ಯಕ್ಷ ಯುದ್ಧ ಸೇರುವಾಗ ಈ ಮಹಾಯುದ್ಧ 'ಎಲ್ಲಾ ಯುದ್ಧಗಳನ್ನು ಕೊನೆಗೊಳಿಸುವ ಯುದ್ಧ' ಎಂದು ಕರೆದಿದ್ದರಂತೆ. ಅದನ್ನು ಅಣಕಿಸುವಂತೆ ವರ್ಸೆಲಿಸ್ ಶಾಂತಿ ಒಪ್ಪಂದವನ್ನು 'ಶಾಂತಿಯನ್ನು ಎಲ್ಲಾ ಕಾಲಕ್ಕೂ ಕೊನೆಗೊಳಿಸುವ ಶಾಂತಿ

ಈ ಮಹಾಯುದ್ಧದ ಕಾರಣಗಳಾದ – ಸಾಮ್ರಾಜ್ಯಶಾಹಿ ಪೈಪೋಟಿ, ಆರ್ಥಿಕ-ಮಿಲಿಟರಿ ಪೈಪೋಟಿ, ಮಿತಿಮೀರಿದ ಮಿಲಿಟರಿ ವೆಚ್ಚ, ಉಗ್ರ ರಾಷ್ಟ್ರೀಯತಾವಾದ, ದೇಸಿ-ಜನಾಂಗೀಯ ಸಂಘರ್ಷಗಳು ಇವೆಲ್ಲವೂ ನಮ್ಮ ಮುಂದೆ ಇವೆ. ಇವುಗಳಲ್ಲಿ ಕೆಲವು ಮೊದಲ ಮಹಾಯುದ್ಧದ ಕಾಲದಿಂದ ಬಂದವು. ಅದರ ಪರಿಣಾಮವಾಗಿ ಹುಟ್ಟಿದ ಫ್ಯಾಸಿಸಂ ಸಹ ಪುನಃ ತಲೆಎತ್ತಿದೆ. ಮೂರನೇ ಮಹಾಯುದ್ಧದತ್ತ ಮನುಕುಲವನ್ನು ತಳ್ಳುವ ಪರಿಸ್ಥಿತಿ ಇಂದು ಇದೆ. ಇವೆಲ್ಲಕ್ಕೂ ಮೂಲಕಾರಣವಾದ ಸಾಮ್ರಾಜ್ಯಶಾಹಿಯ ಮೂಲೋತ್ಪಾಟನೆಗೆ ಹೋರಾಡಬೇಕು ಎಂಬುದೇ ನಾವು ಇದರಿಂದ ಕಲಿಯಬೇಕಾದ ಪಾಠ.

ಒಪ್ಪಂದ' ಎಂದು ಕರೆಯಲಾಗಿದೆ. ಯಾಕೆಂದರೆ ಗೆದ್ದ ಮೂರು ದೊಡ್ಡ ಪ್ರಬಲ ಶಕ್ತಿ ರಾಷ್ಟ್ರಗಳು ಜರ್ಮನಿಯನ್ನು ಮತ್ತೆ ತಲೆ ಎತ್ತದಂತೆ ಮಾಡುವ ಅವುಗಳಿಗೆ ಮಿಲಿಟರಿ-ಆರ್ಥಿಕ ಪೈಪೋಟಿ ಕೊಡಲು ಸಾಧ್ಯವೇ ಇಲ್ಲದಂತೆ ಮಾಡುವ ಮತ್ತು ಯಾವುದೇ ಸ್ವಾಭಿಮಾನಿ ಪ್ರಾತಿನಿಧಿಕ ಸರಕಾರ ಜಾರಿ ಮಾಡಲು ಸಾಧ್ಯವೇ ಇಲ್ಲದಂತಹ ಭಾರೀ ಅಮಾನವೀಯ ಮತ್ತು ಅವಮಾನಕಾರಿ ಶರತ್ತುಗಳನ್ನು ಹಾಕಿದವು. ಜರ್ಮನಿ ಈ ಮಹಾಯುದ್ಧಕ್ಕೆ ಮೂಲ ಕಾರಣ. ಆದ್ದರಿಂದ ಯುದ್ಧದ ಪೂರ್ಣ ಭಾರ ಅದು ಹೊತ್ತುಕೊಳ್ಳಬೇಕು ಎಂಬ ಕಲಮು ಒಪ್ಪಂದದಲ್ಲಿ ಇತ್ತು. ಯುದ್ಧ ಪರಿಹಾರವಾಗಿ ಜರ್ಮನಿ 22,600 'ಕೋಟಿ ಜರ್ಮನ್ ಮಾರ್ಕುಗಳನ್ನು ಕೊಡಬೇಕಾಗಿತ್ತು. ಇದು ತೀರಾ ಅಸಾಧ್ಯವಾಗಿತ್ತು. ಅದನ್ನು ಮುಂದೆ 13,200'ಕೋಟಿ ಜರ್ಮನ್ ಮಾರ್ಕುಗಳಿಗೆ ಇಳಿಸಲಾಯಿತು. ಆದರೆ ಆ ಮೊತ್ತ ಸಹ ಜರ್ಮನಿಯ ಆರ್ಥಿಕತೆಯನ್ನು ಮುರಿಯುವಂತದ್ದಾಗಿತ್ತು. ಅದರಿಂದ ಸೂಪರ್ ಹಣದುಬ್ಬರ ಆಗಿ, ಜನತೆಗೆ ತೀವ್ರ ಸಂಕಟಗಳನ್ನು ಅದು ತಂದಿತು. ಅದರ ಮಿಲಿಟರಿ ಸಾಮರ್ಥ್ಯದ ಮೇಲೂ ತೀವ್ರ ಮಿತಿಗಳನ್ನು ಹಾಕಲಾಯಿತು. ನಿಜವಾಗಿಯೂ ಯುದ್ಧದ ಹೊಣೆ ಹೊರಬೇಕಿದ್ದ ರಾಜ ವಿಲ್‌ಹೆಲ್ಮ್ ಹಾಲೆಂಡಿನಲ್ಲಿ ಆರಾಮಾಗಿದ್ದ. ಇದರ ಎಲ್ಲಾ ಭಾರ ಜನಸಾಮಾನ್ಯರ ಮೇಲೆ ಬಿತ್ತು. ಇದು ಮುಂದೆ ಉಗ್ರ ರಾಷ್ಟ್ರೀಯವಾದ ಮತ್ತು ಫ್ಯಾಸಿಸಂ ಬೆಳೆಯಲು ಪ್ರಶಸ್ತ ವಾತಾವರಣ ಸಿದ್ಧಗೊಳಿಸಿತು. ಅದು ಎರಡನೇ ಮಹಾಯುದ್ಧಕ್ಕೆ ನಾಂದಿ ಹಾಡಿತು ಎಂಬುದು ಈಗ ಇತಿಹಾಸ.

ಮೊದಲ ಮಹಾಯುದ್ಧದಿಂದ ಏನು ಕಲಿಯಬಹುದು ?

ಇಂತಹ ದೊಡ್ಡ ನರಮೇಧ ಯಾಕಾಯಿತು? ಈ ಮಹಾ ನರಮೇಧದ ಪರಿಣಾಮಗಳೇನು? ಎಂಬ ಪ್ರಶ್ನೆಗಳಿಗೆ ಈಗಾಗಲೇ ಮೇಲೆ ಹೇಳಿದ ವಿಷಯಗಳಲ್ಲಿ ಉತ್ತರ ಇದೆ. ಇದು ಅನಿವಾರ್ಯವಾಗಿತ್ತೇ? ಖಂಡಿತ ಇಲ್ಲಾ. ಒಂದೇ ಶಬ್ದದಲ್ಲಿ ಹೇಳುವುದಾದರೆ ಮೊದಲ ಯುದ್ಧದ ಮೂಲಕಾರಣ 'ಸಾಮ್ರಾಜ್ಯಶಾಹಿ'. ಯುರೋಪಿನ ಸೋಶಲಿಸ್ಟ್ ಪಕ್ಷಗಳು ತಮ್ಮ ತಮ್ಮ ದೇಶಗಳ ಸರಕಾರದ ಮೇಲೆ ಯುದ್ಧದಲ್ಲಿ ಭಾಗವಹಿಸದಿರುವಂತೆ ಒತ್ತಡ ಹೇರುವಷ್ಟು ಶಕ್ತಿಶಾಲಿಯಾಗಿದ್ದವು. ಅದರಲ್ಲೂ ಜರ್ಮನಿಯಲ್ಲಿ ಸೋಶಲಿಸ್ಟ್ ಪಕ್ಷಗಳು ಅತ್ಯಂತ ಶಕ್ತಿಶಾಲಿಯಾಗಿತ್ತು. ಅದರ ಬದಲು ಯುರೋಪಿನ ಹೆಚ್ಚಿನ ಸೋಶಲಿಸ್ಟ್ ಪಕ್ಷಗಳು ತಮ್ಮ ವರ್ಗದ ಹಿತಾಸಕ್ತಿ ಮರೆತು ತಮ್ಮ ದೇಶದ ಬೂರ್ಜ್ವಾ ವರ್ಗದ ಬಾಲಂಗೋಚಿಗಳಾದವು. ಲೆನಿನ್ ತಮ್ಮ 'ಸಾಮ್ರಾಜ್ಯಶಾಹಿ' ಪುಸ್ತಕದಲ್ಲಿ ವಾದಿಸಿದಂತೆ ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗೆ ಪ್ರಶಸ್ತ ಸಂದರ್ಭ ಸಿದ್ಧವಾಗಿತ್ತು.

ಈ ಮಹಾಯುದ್ಧವನ್ನು ಯಾಕೆ ನೆನಪಿಸಿಕೊಳ್ಳಬೇಕು? ಇದರಿಂದ ಮನುಕುಲದ ಭವಿಷ್ಯದ ದೃಷ್ಟಿಯಿಂದ ಏನು ಕಲಿಯಬಹುದು? ಈ ಮಹಾಯುದ್ಧದ ಕಾರಣಗಳಾದ – ಸಾಮ್ರಾಜ್ಯಶಾಹಿ ಪೈಪೋಟಿ, ಆರ್ಥಿಕ-ಮಿಲಿಟರಿ ಪೈಪೋಟಿ, ಮೀತಿಮೀರಿದ ಮಿಲಿಟರಿ ವೆಚ್ಚ, ಉಗ್ರ ರಾಷ್ಟ್ರೀಯತಾವಾದ, ದೇಸಿ-ಜನಾಂಗೀಯ ಸಂಘರ್ಷಗಳು ಇವೆಲ್ಲವೂ ನಮ್ಮ ಮುಂದೆ ಇವೆ. ಇವುಗಳಲ್ಲಿ ಕೆಲವು ಮೊದಲ ಮಹಾಯುದ್ಧದ ಕಾಲದಿಂದ ಬಂದವು. ಅದರ ಪರಿಣಾಮವಾಗಿ ಹುಟ್ಟಿದ ಫ್ಯಾಸಿಸಂ ಸಹ ಪುನಃ ತಲೆಎತ್ತಿದೆ. ಮೂರನೇ ಮಹಾಯುದ್ಧದತ್ತ ಮನುಕುಲವನ್ನು ತಳ್ಳುವ ಪರಿಸ್ಥಿತಿ ಇಂದು ಇದೆ. ಇವೆಲ್ಲಕ್ಕೂ ಮೂಲಕಾರಣವಾದ ಸಾಮ್ರಾಜ್ಯಶಾಹಿಯ ಮೂಲೋತ್ಪಾಟನೆಗೆ ಹೋರಾಡಬೇಕು. ಅತ್ಯಂತ ವ್ಯಾಪಕವಾದ ಸಾಮ್ರಾಜ್ಯಶಾಹಿ-ವಿರೋಧಿ ರಂಗ ರಚಿಸಿ ಅದರ ಮೂಲೋತ್ಪಾಟನೆಗೆ ಪ್ರಯತ್ನಿಸಬೇಕು ಎಂಬುದೇ ನಾವು ಇದರಿಂದ ಕಲಿಯಬೇಕಾದ ಪಾಠ.

"ಒಂದು ಮಾತ್ರ ನಿಜ – ಇವತ್ತಿನ ಪ್ರತಿಯೊಂದು ರೈಲಿನಲ್ಲೂ ಒಬ್ಬ ಪರಿಮಲ್ ಕುಮಾರ್ ಚಟರ್ಜಿ ಮತ್ತು ಮುಹಮ್ಮದ್ ಯೂಸುಪ್ ಒಬ್ಬರನ್ನೊಬ್ಬರು ರಕ್ಷಿಸುತ್ತಿದ್ದಾರೆ. ಎರಿಕ್ ಶೆಲ್ಬನ್‌ಗಳು ಇಲ್ಲಿ ಎಂದೆಂದಿಗೂ ಬದುಕಿರುತ್ತಾರೆ"

ಪ್ರೀತಿಯ ಯಿಲ್ಮಾಜ್,

ಈ ಪತ್ರವು ಈಗಾಗಲೇ ತಡವಾಗಿದೆ. ನೀನು ನಮ್ಮ ಸಂಸದ್ ಚುನಾವಣಾ ಫಲಿತಾಂಶಗಳು ಬರುತ್ತಿರಬೇಕಾದರೆ ಮೇ ತಿಂಗಳ 16 ರಂದು ಪತ್ರ ಬರೆದಿದ್ದೆ. ಮತ್ತೆ ಇನ್ನೊಂದು ಬಾರಿ ನಮ್ಮ ನೂತನ ಪ್ರಧಾನಮಂತ್ರಿ ಅಧಿಕಾರ ಸ್ವೀಕರಿಸುತಿದ್ದಂತೆ ಮೇ ತಿಂಗಳ 26 ರಂದು ಪತ್ರ ಬರೆದೆ. ಒಳ್ಳೆಯ ದಿನಗಳಿಗಾಗಿ ಎಲ್ಲರೂ ಕಾಯುತ್ತಿದ್ದಾರೆಂದು ನನಗೆ ಗೊತ್ತು. ಆದರೆ, ನಿನಗೇ ತಿಳಿದಿರುವಂತೆ, ನೀನಿರುವ ಪ್ರದೇಶದಲ್ಲಿ ಕೆಟ್ಟ ಘಟನೆಗಳು ನಡೆಯುತ್ತಿವೆ. ಗಾಜಾ ಪ್ರದೇಶದಲ್ಲಿ ಪಾಲೆಸ್ತೀನಿಯರ ಕೊಲೆಗಳ ಬಗ್ಗೆ ನಾನು ಹೇಳುತಿದ್ದೇನೆ. (ಫುಟ್ಬಾಲ್)ವಿಶ್ವ ಕಪ್‌ನ ಜ್ವರದಿಂದ ಈ ವಿಷಯವು ಜನರ ಗಮನಕ್ಕೆ ಬರಲೇ ಇಲ್ಲ. ನಮ್ಮ ಸರಕಾರಕ್ಕೆ ಇದು ಸಂಸತ್ತಿನಲ್ಲಿ ಚರ್ಚೆ ಮಾಡಬೇಕಾದ ವಿಷಯ ಎಂದೆನಿಸಿಲ್ಲ. ನನಗಂತೂ ಇದು ಅಸಹ್ಯಕರವಾದ, ನಾಚಿಕೆಕೇಡಿನ ವಿಷಯ. ಪ್ರತಿಯೊಂದು ಕ್ರಿಯೆಗೂ ಒಂದು ಸಮನಾದ ಮತ್ತು ವಿರುದ್ಧವಾದ ಪ್ರತಿಕ್ರಿಯೆ ಇರುತ್ತದೆಂದು ಹೇಳಿದ್ದವರು ಇವರೇ-2002ರ ಗುಜರಾತ್ ಹತ್ಯಾಕಾಂಡದ ಬಳಿಕ. ಸಮಾನ ಮತ್ತು ವಿರುದ್ಧ! ಎಷ್ಟೊಂದು ಪ್ರಮಾಣ ತಪ್ಪಿದ ಸಮಾನತೆ!!

ಇವು ಗುಜರಾತಿನಲ್ಲಿ ಹನ್ನೆರಡು ವರ್ಷಗಳ ಹಿಂದೆ ನಡೆದ ಘಟನೆಗಳನ್ನು ನೆನಪಿಗೆ ತಂದವು. ಆ ಸಮಯದಲ್ಲಿ ನಾನು ನನ್ನ ತಂದೆಯ ಬದುಕಿನಲ್ಲಿನ ಒಂದು ಘಟನೆಯ ಆಧಾರದಮೇಲೆ

"ಎರಿಕ್ ಶೆಲ್ಟನ್‌ಗಳು ಇಲ್ಲಿ ಎಂದೆಂದಿಗೂ ಬದುಕಿರುತ್ತಾರೆ"

2014ರಲ್ಲಿ 1947ರ ಒಂದು ನೆನಪು

–ಡಾ.ಸಬ್ಯಸಾಚಿ ಚಟರ್ಜಿ

ಒಂದು ಸಣ್ಣ ಕಥೆಯನ್ನು ಬರೆದಿದ್ದೆ. ಈಗ ಮತ್ತೆ ಅದನ್ನು ನಿನಗಾಗಿ ಬರೆಯುತ್ತೇನೆ.

ನಿನಗೆ ತಿಳಿದಿರುವಂತೆ ಫೆಬ್ರವರಿ 28 ನಮ್ಮ ರಾಷ್ಟ್ರೀಯ ವಿಜ್ಞಾನ ದಿನ. 1928 ರಲ್ಲಿ ಈ ದಿನದಂದು ರಾಮನ್ ಪರಿಣಾಮ ಕಂಡುಹಿಡಿಯಲಾಯಿತು. ಪ್ರತಿ ಬಾರಿಯೂ ಈ ದಿನದಂದು ಸಮಾರಂಭಗಳು ಇರುತ್ತವೆ. 2002 ಇಸವಿಯಲ್ಲಿ ನನ್ನ ಮಗನೂ ತನ್ನ ಪ್ರದರ್ಶನಗಳನ್ನು ತಯಾರಿ ಮಾಡಿ ಭಾಗವಹಿಸಿದ್ದ. ಅದರ ಹಿಂದಿನ ದಿನವಾದ 27 ರಂದು ಗುಜರಾತಿನ ಗೋದ್ರಾ ನಿಲ್ದಾಣದಲ್ಲಿ ಕೆಲವು ಹಿಂದೂ ಬಲ ಪಂಥೀಯರು ಅವರು ಪ್ರಯಾಣಿಸುತ್ತಿದ್ದ ಟ್ರೈನು ಡಬ್ಬಿಗೆ ಬೆಂಕಿ ಬಿದ್ದು ಸತ್ತುಹೋದರು. ಅದು ಹೇಗೆ ಬೆಂಕಿ ಬತ್ತೆಂಬುದು ಇನ್ನೂ ಗೊತ್ತಾಗಿಲ್ಲ. ಎಲ್ಲರಂತೆಯೇ ನಾನೂ ಅವರ ಸಾವಿನಿಂದ ಖಿನ್ನನಾದೆ. ಆದರೆ, ಕೋಮು ಗಲಭೆ ಉಂಟಾಗಬಹುದೆಂಬ ಭಯವಿತ್ತು. ಬಾಬ್ರಿ ಮಸೀದಿಯ ಧ್ವಂಸದ ನಂತರ ನಡೆದ ಗಲಭೆಯನ್ನು ನೆನಪಿಟ್ಟು, ನನ್ನ ಮಗನನ್ನು ಒಬ್ಬನನ್ನೇ ಕಳಿಸದೇ, ನಾನೂ ಅವನ ಜೊತೆಯಲ್ಲಿ ಹೋದೆ. ಅಲ್ಲಿ ನನ್ನ ಮಗ ಮತ್ತು ಅವನ ಸ್ನೇಹಿತರು ಸಿದ್ಧವಾಗುತ್ತಿರುವಾಗ, ಅಹಮದಾಬಾದಿನಲ್ಲಿ ಕೆಲವು ಮಕ್ಕಳನ್ನು ಸೀಮೆಯೆಣ್ಣೆ ಸುರಿದು ಸುಡುತ್ತಿರುವರೆಂಬ ವಾರ್ತೆ ಬಂತು. ಮುಸ್ಲಿಮರಾಗಿದ್ದುದೇ ಆ ಮಕ್ಕಳ ಅಪರಾಧವಾಗಿತ್ತು. ಟಿ.ವಿ. ಯಲ್ಲಿ ಈ ದೃಶ್ಯಗಳನ್ನು ನೋಡುತ್ತಿರಬೇಕಾದರೆ ನನಗೆ ಇಬ್ಬರು ನೆನಪಿಗೆ ಬಂದರು – ರಾಷ್ಟ್ರಪಿತ ಮಹಾತ್ಮ ಗಾಂಧಿ ಮತ್ತು ನನ್ನ ತಂದೆ. ಹಿಂದೂಗಳಿಗೆ ವಿಶ್ವಾಸಘಾತ ಮಾಡಿದರೆಂಬ ಆಪಾದನೆ ಹೊತ್ತು ಗಾಂಧೀಜಿ ಗುಂಡಿಗೆ ಬಲಿಯಾದರು. ಇವತ್ತು ಮತ್ತೆ, ಅವರ ಪ್ರಿಯ ಸಬರಮತಿಯ ಹತ್ತಿರ, ಬಾಪುನಗರದಲ್ಲಿ, ಅವರ ಸಜೀವ ದಹನವಾಗುತ್ತಿದೆ ಎಂದನಿಸಿತು.



ಇನ್ನೊಬ್ಬ ವ್ಯಕ್ತಿ ನನ್ನ ಸ್ವಂತ ತಂದೆ. ಪ್ರಪಂಚಕ್ಕೆ ಅವರ ಬಗ್ಗೆ ಏನೂ ಗೊತ್ತಿಲ್ಲ ಮತ್ತು ಗೊತ್ತಾಗಬೇಕಾಗಿಯೂ ಇಲ್ಲ. ಇವತ್ತು ಅವರು ಬದುಕಿದ್ದರೆ, ಅಗ್ನಿ ಪರೀಕ್ಷೆಯನ್ನು ಎದುರಿಸಬೇಕಾಗುತ್ತಿತ್ತು. ಕಾರಣ – ರಾಮ ಸೇವಕರ ದೃಷ್ಟಿಯಲ್ಲಿ, ಅವರು ನಮ್ಮ 'ರಾಷ್ಟ್ರ'ಕ್ಕೆ ದೊಡ್ಡ 'ವಿಶ್ವಾಸಘಾತ' ಬಗೆದಿದ್ದರು, ದೇಶ ವಿಭಜನೆಯ ಸಮಯದಲ್ಲಿ ಅವರು ಒಂದು ಮುಸ್ಲಿಂ ಕುಟುಂಬವನ್ನು ರಕ್ಷಿಸಿದ್ದರು.

ಅವರು, ಬಹಳ ವರ್ಷಗಳ ಹಿಂದೆ, ಎಲ್.ಕೆ.ಅದ್ವಾನಿಯವರ ರಥಯಾತ್ರೆಯ ಸಮಯದಲ್ಲಿ, ಅದ್ವಾನಿಯವರು ಶ್ರೀರಾಮನಂತೆ ಒಂದು ಕೈಯ್ಯಲ್ಲಿ ಬಿಲ್ಲು ಮತ್ತು ಇನ್ನೊಂದರಲ್ಲಿ ವಿಜಯದ ಸಂಕೇತ ವನ್ನು ಪ್ರದರ್ಶಿಸುತ್ತ ರಥದಲ್ಲಿ ಸಾಗುತ್ತಿದ್ದ ಚಿತ್ರಗಳನ್ನು ನೋಡುತ್ತ ಹೇಳಿದ ಕತೆಯಿದು. ನನ್ನ ತಂದೆ ಅದೃಷ್ಟಶಾಲಿ – ಬಾಬ್ರಿ ಮಸೀದಿ ಧ್ವಂಸವನ್ನು ಅವರು ನೋಡಲಿಲ್ಲ.

ನನ್ನ ತಂದೆ 1947ರ ಸೆಪ್ಟೆಂಬರ್‌ನಲ್ಲಿ ಅನುಭವಿಸಿದ ಘಟನೆಯಿದು. ಅದು ದೇಶವಿಭಜನೆಯ ಸಮಯ. ದಿಲ್ಲಿಯಲ್ಲಿ ತುಂಬಾ ಗಲಭೆ ಆಗುತಿತ್ತು. ನನ್ನ ತಂದೆಯ ಹೊಸ ಕೆಲಸದ ಸಂಬಂಧವಾಗಿ ದಿಲ್ಲಿಗೆ ಹೋಗಬೇಕಾಗಿ ಬಂತು. ಬೇರೊಬ್ಬರು ಹೋಗಬೇಕಾಗಿತ್ತು, ಅದರೆ ಅಲ್ಲಿನ ಕೋಮುಗಲಭೆಯಿಂದ ಆತ ಹೋಗಲು ಇಷ್ಟಪಡಲಿಲ್ಲ. ಅದರಿಂದ ತಂದೆ ಹೋಗಲು ಒಪ್ಪಿಕೊಂಡರು.

"ನಾನ್ಯಾಕೆ ಒಪ್ಪಿಕೊಂಡೆನೆಂದು ಹೇಳುವುದಕ್ಕಾಗುವುದಿಲ್ಲ. ನಾನೇನೂ ಅಂತಹ ಸಾಹಸಪ್ರಿಯನಲ್ಲ. ಒಪ್ಪಿಕೊಂಡೆ. ಅಷ್ಟೆ.

"ಕಂಪೆನಿಯ ಕೆಲಸಕ್ಕಾಗಿ ಹೋಗುವುದರಿಂದ ನಾನು ಪ್ರಥಮ ದರ್ಜೆಯಲ್ಲಿ ಪ್ರಯಾಣಿಸ ಬೇಕಾಗಿತ್ತು. ಹೌರಾ ನಿಲ್ದಾಣದಲ್ಲಿ ಒಂದು ಕಂಪಾರ್ಟಮೆಂಟ್ ಹತ್ತಿರ ಕೆಲವು ಪೋಲೀಸರನ್ನು ಕಂಡೆ. ವಿಚಾರಿಸಿದರೆ, ಒಬ್ಬ ವಿ.ಐ.ಪಿ. ಪ್ರಯಾಣಿಸುತ್ತಿರುವುದಾಗಿಯೂ, ಆತನ ರಕ್ಷಣೆಗೆ ಇವೆಲ್ಲವೂ ಎಂದು ತಿಳಿಯಿತು.

"ನನ್ನ ರೈಲು ಕೂಪೆಯನ್ನು ಪ್ರವೇಶಿಸಬೇಕಾದರೆ, ಒಬ್ಬ ಆಂಗ್ಲೋ-ಇಂಡಿಯನ್ ಯುವಕ ಅಕ್ಕರೆಯಿಂದ ನನ್ನನ್ನು ಬರಮಾಡಿಕೊಂಡ. ದಿಲ್ಲಿಯವರೆಗೂ ಹೋಗುತ್ತಿರುವಿರಾ? ನಾನೂ ಅಲ್ಲಿಗೇ. ನನ್ನ ಹೆಸರು ಎರಿಕ್ ಷೆಲ್ಟನ್ ಎಂದ. ನನಗೆ ಯಾವ

ವಿಧವಾದ ಕೋಮು ಬೇಧವಿಲ್ಲದಿದ್ದರೂ, ಈ ಯುವಕನ ಅಕ್ಕರೆಗೆ ಆಶ್ಚರ್ಯವಾಯಿತು. ಆ ಕಾಲದಲ್ಲಿ ಈ ಆಂಗ್ಲೋ-ಇಂಡಿಯನ್ನರು ಭಾರತೀಯರು 'ಸ್ಥಳೀಯರು' ಎಂದು ನಮ್ಮನ್ನು ಕೀಳಾಗಿ ನೋಡುತಿದ್ದರು. ತಾವು ಬ್ರಿಟನ್ನಿನ ರಾಜನ ಸಂಬಂಧಿಗಳು ಎಂದು ಭಾವಿಸಿದ್ದರು. ಭಾರತದಲ್ಲಿನ ಪೊಲೀಸ್,ಸೈನ್ಯ ಮತ್ತು ರೈಲ್ವೇಗಳಲ್ಲಿ ಸೇರಿಕೊಂಡು, ತಮ್ಮ ರಾಜನನ್ನು ಗಾಂಧೀಜೀ ಮತ್ತು ಭಗತಸಿಂಗ್ ಮೊದಲಾದವರುಗಳಿಂದ ರಕ್ಷಿಸುತಿದ್ದರು.

"ಆದರೆ ಎರಿಕ್ ಅವರಿಗಿಂತ ಭಿನ್ನವಾಗಿದ್ದ. 26 ಅಥವಾ 27 ವಯಸ್ಸಿನವನಾಗಿದ್ದು ನನಗಿಂತಲೂ ಕೆಲವು ವರ್ಷಗಳು ಚಿಕ್ಕವನಾಗಿದ್ದ. ವಿಪರೀತ ಮಾತುಗಾರ. ತಂದೆ ಬ್ರಿಟಿಷ ಮತ್ತು ತಾಯಿ ಅಂಗ್ಲೋ-ಇಂಡಿಯನ್. ಇದರಿಂದ ತನಗೆ ಇಂಗ್ಲೀಷ್ ಇಂಗ್ಲೀಷ್, ಆಂಗ್ಲೋ ಇಂಗ್ಲೀಷ್ ಮತ್ತು ಹಿಂದುಸ್ಥಾನೀ ಇಂಗ್ಲೀಷ್ ಎಲ್ಲವೂ ಬರುತ್ತದೆ ಎಂದ. ಎರಿಕ್‌ಗೆ ಬಹಳಷ್ಟು ಇಂಗ್ಲೀಷ್ ಸ್ನೇಹಿತರು ಇರಲಿಲ್ಲ. ಕಾರಣ - ಇವನ ಆಂಗ್ಲೋ-ಇಂಡಿಯನ್ ಅಮ್ಮನನ್ನು ಅವರು ಒಪ್ಪಿಕೊಳ್ಳಲಿಲ್ಲ. ಪೂರಾ ಭಾರತೀಯಳಾಗಿದ್ದರೆ ಅವರು ಶುದ್ಧ ಜನಾಂಗಕ್ಕೆ ಸೇರಿದವರಾಗುತ್ತಾರೆ. ಈ ಆಂಗ್ಲೋ-ಇಂಡಿಯಬ್ಬರು ಆಗಲೇ ಮಿಶ್ರ ತಳಿ. ಅವನ ತಂದೆ ಪುಣೆಯ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದು ಈಗ ಇಲ್ಲ. ತಾಯಿಯು ಸಹಾರಣಪುರದಲ್ಲಿ ಸಹೋದರನ ಜೊತೆ ಇದ್ದಾಳೆ. ಸಹೋದರನಿಗೆ ರೈಲ್ವೇಯಲ್ಲಿ ಕೆಲಸ.

"ಮೆಟ್ರಿಕ್ ಓದು ಆದಮೇಲೆ ಮುಂದೆ ಓದಲು ಎರಿಕ್‌ಗೆ ಇಚ್ಛೆ ಇರಲಿಲ್ಲ. 'ಬ್ರಿಟಿಶ್ ರಾಜ್ಯಭಾರದಲ್ಲಿ ನನ್ನ ಜಾತಿಯ ಜನರಿಗೆ ಯಾವುದೋ ಒಂದು ಕೆಲಸ ನಿಶ್ಚಿತ ಮತ್ತು ನಾನು ಸಿಕ್ಕ ಮೊದಲ ಅವಕಾಶದಲ್ಲಿಯೇ ಕೆಲಸಕ್ಕೆ ಸೇರಿಕೊಂಡೆ' ಎಂದ ಆತ.

"ಆದರೂ ಎರಿಕ್‌ಗೆ ಪ್ರಪಂಚದ ಆಗುಹೋಗುಗಳ ತಿಳುವಳಿಕೆ ಚನ್ನಾಗಿತ್ತು. ಅದರಲ್ಲೂ ಭಾರತದ ಬಹಳ ಜಾಗಗಳನ್ನು ನೋಡಿದ್ದ. ಕೆಲಸವು ಅವನನ್ನು ವಿವಿಧ ಪ್ರದೇಶಗಳಿಗೆ ಭೇಟಿ ನೀಡುವಂತೆ ಮಾಡಿತ್ತು. ಆ ಜಾಗಗಳ ಬಗ್ಗೆ ಕೇಳಲು ಕುತೂಹಲಕಾರಿಯಾಗಿತ್ತು. ನಾನೂ ನನ್ನ ಬಗ್ಗೆ ಅವನಲ್ಲಿ ಹೇಳಿಕೊಂಡೆ. ಎಂ.ಎ. ಇಂಗ್ಲೀಷ್‌ನಲ್ಲಿ ಹೆಚ್ಚು ಅಂಕಗಳನ್ನು ತೆಗೆದರೂ ಹೇಗೆ ರೈಲ್ವೇನಲ್ಲಿ ಚಿಕ್ಕ ಕೆಲಸಕ್ಕೆ ಸೇರಿಕೊಂಡೆ ಎಂದು ಹೇಳಿದೆ. ಆದರೆ ಯುದ್ದವು ನನಗೆ ಒಳ್ಳೆಯ ಅವಕಾಶವನ್ನು ತೆರೆಯಿತು. ಸರಕಾರ ಒಂದು 'ಏರ್ ರೈಡ್ ಪ್ರಿಕೊಷನ್'(ವಿಮಾನದಾಳಿ ಮುನ್ನೆಚ್ಚರಿಕೆ) ವಿಭಾಗವನ್ನು ಆರಂಬಿಸಿತು. ನಾನು ಆಯ್ಕೆಯಾದೆ ಮತ್ತು ಹುದ್ದೆಯಲ್ಲಿ ಮುನ್ನಡೆ ಗಿಟ್ಟಿಸಿದೆ. ಯುದ್ದವುಮುಕ್ತಾಯದನಂತರ ಆ ವಿಭಾಗವನ್ನು ಮುಚ್ಚಿದರು. ನನಗೆ ಬೇರೊಂದು, ಈ ಒಳ್ಳೆಯ ಕೆಲಸವೇ ಸಿಕ್ಕಿತು.

"ಎರಿಕ್ ನನ್ನ ಅದೃಷ್ಟಕ್ಕೆ ಅಭಿನಂದಿಸಿದ. ಅವನೂ ಅದೃಷ್ಟವಂತನಾಗಿದ್ದ. ಈಗ ಅವನು ಬಂಗಾಲ ಸರಕಾರದ ಗೃಹ ಕಾರ್ಯದರ್ಶಿಯ ಖಾಸಗಿ ಕಾರ್ಯದರ್ಶಿಯ ಹತ್ತಿರ ಕೆಲಸಕ್ಕಿದ್ದ. ಅವರಿಬ್ಬರು ವಿಶೇಷ ಬೋಗಿಯಲ್ಲಿದ್ದರು. ಎರಿಕ್ ತನ್ನ ಮೇಲಧಿಕಾರಿಯನ್ನು ಪಾಟ್ನಾ ಮತ್ತು ಬೇಕಾದರೆ ಬೇರೆ ಸ್ಟೇಷನ್ನುಗಳಲ್ಲಿ ಭೇಟಿ ಮಾಡಬೇಕಾಗಿತ್ತು. ಗೃಹ ಕಾರ್ಯದರ್ಶಿ ಬಹಳ ನಿಷ್ಠೆ ಮತ್ತು ಶ್ರಧ್ಧೆಯಿಂದ ಕೆಲಸಮಾಡುವವರಂತೆ. ನಮ್ಮ ರೈಲು ಮಾರನೆಯ ದಿನ ಸಾಯಂಕಾಲ ದಿಲ್ಲಿಯನ್ನು ತಲುಪುವುದು.

"ಪಾಟ್ನಾ ತಲುಪುವುದಕ್ಕೆ 12 ಗಂಟೆಗಳು ಬೇಕಾದವು. ಮೊಕಾಮಾ ಘಾಟ್ ಸ್ಟೇಷನ್ನಲ್ಲಿ ಜನರ ಕೂಗಾಟ ಮತ್ತು ಕಿರುಚಾಟ ಕೇಳಿಸಿತು. ನಾವು ಕಿಟಕಿಯಿಂದ ಹೊರಗೆ ನೋಡಿದಾಗ ಕಂಡುಬಂದದ್ದು ಲಾಠಿ ಮತ್ತು ದೊಣ್ಣೆ ಹಿಡಿದ ಜನರ ಗುಂಪುಗಳು. ಹತ್ತು ಜನರ ಒಂದು ಗುಂಪು ನಮ್ಮ ಕಡೆ ಓಡಿಬಂದು ನಮ್ಮ ಡಬ್ಬಿಯಲ್ಲಿ ಮುಸಲ್ಮಾನರು ಇದಾರಾ ಎಂದು ಹುಡುಕಿದರು. ನಾನ್ಯಾರು ಎಂದು ಯೋಚಿಸುವಂತಾಯಿತು. ಸಮರ ಕೂಗುಗಳು ಬೇರೆ-ಬೇರೇ ರೀತಿಯ ದಿರಬಹುದು. 'ಹರ ಹರ ಮಹಾದೇವ್', 'ಅಲ್ಲಾ-ಹೊ-ಅಕ್ಬರ್' ಅಥವಾ 'ಸತ್ ಶ್ರೀ ಅಕಾಲ್', ಆದರೆ ಇವೆಲ್ಲವೂ ಸಮರ ಘೋಷಗಳೇ ತಾನೇ, ಅಮಾಯಕರ ಮೇಲಿನ ಸಮರ.

"ನಾನು ಮೌನವಾಗಿದ್ದೆ. ಎರಿಕ್ ಮುಂದೆ ಬಂದ. 'ಏನಂದು ಕೊಂಡಿದ್ದೀರಿ? ನಾವು ಗವರ್ನರ್ ಸಾಹೇಬರ ಆಫೀಸಿನವರು. ನಮ್ಮ ಜೊತೆ ಪೋಲೀಸಿನವರಿದ್ದಾರೆ.ರಾಮ್ ಸಿಂಗ್, ಇವರನ್ನು ಹಿಡಿದುಕೊಳ್ಳಿ' ಎಂದು ತನ್ನ ಇಂಗ್ಲಿಷ್-ಹಿಂದೂಸ್ತಾನಿಯಲ್ಲಿ ರಿವಾಲ್ವರ್ ತೋರಿಸುತ್ತ ಹೇಳಿದ. ನಿಜವಾಗಿಯೂ ಅಲ್ಲಿ ರಾಮ್ ಸಿಂಗ್ ಎನ್ನುವವರು ಯಾರೂ ಇರಲಿಲ್ಲ. ಆದರೆ, ಎರಡು ಡಬ್ಬಿಗಳ ಮುಂದೆ ಆ ಜನ ಪೋಲೀಸರನ್ನು ನೋಡಿದ್ದರು. ಅದೂ ಅಲ್ಲದೆ, ಫಿರಂಗಿ ಜನರನ್ನು ಸಿಟ್ಟಿಗೆಬ್ಬಿಸುವ ಉದ್ದೇಶ ಅವರಿಗಿರಲಿಲ್ಲ. ಆ ಜನರೆಲ್ಲಾ ಎಲ್ಲಿಂದಲ್ಲಿ ಕರಗಿ ಹೋದರು.

"ಎರಿಕ್ ಇದೇ ಕೆಲಸ ದಾನಾಪೂರ್, ಬಕ್ಸರ್ ಮತ್ತು ಮುಗಲ್ಸರಾಯಿನಲ್ಲಿ ಮತ್ತೆ ಪ್ರದರ್ಶಿಸಿದ. ಪಾಟ್ನಾದಲ್ಲಿ ತನ್ನ ಮೇಲಧಿಕಾರಿಯನ್ನು ನೋಡಿಬಂದ. ಬಹಳಷ್ಟು ಕೆಲಸವೇನೂ ಇಲ್ಲದಿರುವುದರಿಂದ ದಿಲ್ಲಿಯಲ್ಲೇ ತನ್ನ ಅಧಿಕಾರಿಯನ್ನು ನೋಡುವೆನೆಂದು ಹೇಳಿದ

"ಮೊಕಾಮಾದಲ್ಲಿ ನಡೆದ ಘಟನೆ, ನನ್ನನ್ನು ಆಘಾತಗೊಳಿಸಿದ್ದವು. ನಾನು ಹಿಂದೂ ಮನೆಯಲ್ಲಿ ಹುಟ್ಟಿದ್ದೇನೋ ನಜ. ಆದರೆ, ಆ ಒಂದು ಕಾರಣಕ್ಕೆ ನನಗೆ ಹೆಚ್ಚು ದಿನ ಬದುಕುವ ಹಕ್ಕು ಇದೆಯೆಂದು ನಾನು ಯಾವತ್ತೂ ಭಾವಿಸಿರಲಿಲ್ಲ. ನನ್ನ ಹಿಂದೂ ಜನ್ಮದ ಬಗ್ಗೆ ಹೇಳಿ ನನ್ನನ್ನು ನಾನು ಕಾಪಾಡಿಕೊಳ್ಳಬಹುದಿತ್ತು. ಅದು ನಾನು ಮಾಡಲಿಲ್ಲ - ನನ್ನನು ಬದುಕಿಸಿದ್ದು, ಈ ಘನತೆ, ಪೂರ್ತಿ ಎರಿಕ್‌ಗೆ ಸೇರಿದೆ.

"ನಮ್ಮ ಪ್ರಯಾಣದುದ್ದಕ್ಕೂ ನಾವು ಮಾತನಾಡುತ್ತಲೇ ಬಂದೆವು. ನಾವು ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರವನ್ನು ಕುರಿತೂ ಮಾತಾಯಿತು. ಈ ವಿಷಯದಲ್ಲಿ ಮಾತ್ರ ಎರಿಕ್‌ನ ಅಭಿಮತ

ಬ್ರಿಟಿಷರ ಕಡೆ ಇತ್ತು. ನಾನು ಗಾಂಧಿ, ಬೋಸ್, ಐ.ಎನ್.ಎ. ಹೀರೋಗಳು ಮತ್ತು ಕ್ರಾಂತಿಕಾರಿಗಳನ್ನು ಸಮರ್ಥಿಸಿದಾಗ, ಎರಿಕ್ ಇಷ್ಟು ಮಾತ್ರ ಹೇಳಿದ – 'ಸರಿ, ಸ್ವಲ್ಪ ದಿನಗಳ ಕಾಲ ನಿಮಗೆ ಸ್ವಾತಂತ್ರ ಕೊಟ್ಟು ನೀವು ಅದನ್ನು ಹೇಗೆ ನಡೆಸಿಕೊಳ್ಳುತ್ತೀರೆಂಬುದನ್ನು ನೋಡಬೇಕು. ನಿಮ್ಮ ನಾಯಕರು ಹೇಗೆ ಒಬ್ಬರನ್ನೊಬ್ಬರು ಕೊಲ್ಲುತಿದ್ದಾರೆಂದು ನೋಡಿ. ಬ್ರಿಟಿಷ್ ರಾಜ್ಯ ಇದಕ್ಕೆ ಅವಕಾಶ ಕೊಡುತ್ತಿರಲಿಲ್ಲ'

"ಬ್ರಿಟಿಷರ ಭಾರತವೂ ಕೋಮುಗಲಭೆಗಳಂದ ಮುಕ್ತವಾಗಿರಲಿಲ್ಲವೆಂದು ನಾನು ನಯವಾಗಿ ಎರಿಕ್‌ಗೆ ಹೇಳಿದೆ. 'ಕಲ್ಕತ್ತಾ ಕಾಂಡವು' ಬ್ರಿಟಷರ ಆಳ್ವಿಕೆಯಲ್ಲಿ ಆಗಲಿಲ್ಲವೇ? ಇದರಿಂದ ಶುರುವಾದ ಹಿಂಸಾಕಾಂಡ ಕಲ್ಕತ್ತಾ, ಪಂಜಾಬ್, ಬಿಹಾರ್ ಮತ್ತು ದಿಲ್ಲಿಗೆ ವ್ಯಾಪಿಸಿತು. ಇವುಗಳನ್ನು ತಡೆಗಟ್ಟಲು ಬ್ರಿಟಿಷರು ಏನೂ ಮಾಡಲಿಲ್ಲ. ಕ್ವೆಟ್ಟಾ ಗಲಭೆ, ಪುಣೆ ಮತ್ತು ಕಾನ್ಪುರ ಕಾಂಡವನ್ನು ಅವನು ಮರೆತನೇ? ಇವೆಲ್ಲದರಲ್ಲೂ ಬ್ರಿಟಿಷರ 'ಕೈ' ಇತ್ತು.

"ಟ್ರೈನು ಶಾದ್ರಾ ನಿಲ್ದಾಣಕ್ಕೆ ಬಂದಾಗ ಇನ್ನು ವಿದಾಯ ಹೇಳಬೇಕೆಂದು ಇಬ್ಬರಿಗೂ ಗೊತ್ತಾಯಿತು. ಅರ್ಧ ಗಂಟೆಯಲ್ಲಿ ದಿಲ್ಲಿ ಸೇರುವುದಿತ್ತು. ಎರಿಕ್ ಗಂಭೀರನಾದ. 'ಚಟರ್ಜಿಯವರೇ, ನಾನು ಕ್ಷಮೆ ಕೇಳಬೇಕು. ಸುಳ್ಳು ಹೇಳಿದೆ.'

"ನಾನು ಆಶ್ಚರ್ಯದಿಂದ ನೋಡಿದೆ. 'ನನ್ನ ಹೆಸರು ಎರಿಕ್ ಶೆಲ್ಟನ್ ಅಲ್ಲ. ನಾನು ಮೊಹಮ್ಮದ್ ಯೂಸಫ್. ಒಂದು ವಿಧದಲ್ಲಿ ನಾನು ಆಂಗ್ಲೋ–ಇಂಡಿಯನ್. ತಂದೆ ಭಾರತೀಯ. ತಾಯಿ ಸ್ವಿಸ್‌ನ್ನ ತಂದೆ ಜಾಲಂಧರ್‌ನವರು. ಅವರಿಬ್ಬರೂ ಸಿಮ್ಲಾದಲ್ಲಿ ಭೇಟಿಯಾದರು. ಲಾಹೋರ್‌ನಲ್ಲಿ ನಮ್ಮ ವಾಸವಿತ್ತು. ತಾಯಿ ಎರಡು ತಿಂಗಳ ಹಿಂದೆ ಲಾಹೋರ್‌ನಲ್ಲಿ ತೀರಿಕೊಂಡಳು. ತಂದೆ ಅಲ್ಲೇ ಅವರ ಸಹೋದರನ ಜೊತೆ ಇದ್ದಾರೆ. ನಾನು ಕಲ್ಕತ್ತಾ ಬಂದರಿನಲ್ಲಿ ಕೆಲಸದಲ್ಲಿದ್ದೇನೆ. ನನ್ನ ಚರ್ಮದ ಬಣ್ಣದಿಂದ 'ಕಲ್ಕತ್ತಾ ಕಾಂಡ' ದಿಂದ ಬದುಕುಳಿದೆ. ನನ್ನ ಸಹೋದರರು ದಿಲ್ಲಿಯಲ್ಲಿದ್ದಾರೆ. ಕಳೆದ ಒಂದು ತಿಂಗಳಿಂದ ಅವರ ಸಂಪರ್ಕವಿಲ್ಲ. ಅವರನ್ನು ಹುಡುಕಲು ದಿಲ್ಲಿಗೆ ಹೋಗುತ್ತಿದ್ದೇನೆ.

"ನಮ್ಮ ರೈಲು ಯಮುನಾ ನದಿಯ ಸೇತುವೆಗೆ ಬಂದಾಗ, ಸ್ವಲ್ಪ ಹೊತ್ತು ಅಲ್ಲೇ ನಿಂತಿತು. ಸೇತುವೆಯ ಬದಿಯಲ್ಲಿ, ನದಿಯಲ್ಲಿ ಹೆಣದ ರಾಶಿಯನ್ನೇ ನೋಡಿದೆವು. ಬದುಕಿನಲ್ಲಿ ಅವರೆಲ್ಲರೂ ಹಿಂದೂ, ಸಿಖ್ಖ ಅಥವ ಮುಸ್ಲಿಮರಾಗಿದ್ದರು. ಸಾವಿನಲ್ಲಿ ಕೇವಲ ಹೆಣಗಳಾಗಿದ್ದರು, ಅನಾಹುತಕ್ಕೆ ಒಳಗಾದವರ ಪಟ್ಟಿಯಲ್ಲಿ ಬರೀ ಒಂದು ಸಂಖ್ಯೆಯಾಗಿದ್ದರು. ಅವರ ದೇಹಗಳನ್ನು ಹದ್ದುಗಳು ತಿಂದಿದ್ದವು, ಅಥವಾ, ಮನುಷ್ಯರು ಊನಗೊಳಿಸಿದ್ದರು. ಮಕ್ಕಳ ದೇಹಗಳು – ಅಪ್ಪ ಅಮ್ಮನ ತೋಳಿನಲ್ಲಿ – ಇಂಥವುಗಳನ್ನು ಬೇಕಾದಷ್ಟು ನೋಡಿದೆವು. – ಇನ್ನು ಈ ಭಯಾನಕ ದೃಶ್ಯಗಳ ಬಗ್ಗೆ ಹೇಳುವುದಿಲ್ಲ.

"ನಾನು ಒಮ್ಮೆ ನದಿಯನ್ನು, ಕಟ್ಟೆಯನ್ನು ಮತ್ತು ಎರಿಕ್‌ನನ್ನು ನೋಡಿದೆ. 'ನಾನು ಏನಾದರೂ ಸಹಾಯ ಮಾಡಬಹುದೇ?'

"ಮಿಸ್ಟರ್.ಚಟರ್ಜಿ, ನಿಮ್ಮಲ್ಲಿ ಯಾಕೋ ಎಲ್ಲವೂ ಹೇಳಬೇಕೆನ್ನಿಸಿತು. ಆದರೆ, ನನಗೆ ಸಹಾಯಮಾಡಿ ನೀವು ತೊಂದರೆಗೆ ಸಿಲುಕಬೇಡಿ"

"ಅವನ ಎಚ್ಚರಿಕೆಯನ್ನು ತಳ್ಳಿಹಾಕಿದೆ. 'ನಾನು ಹೆಚ್ಚೇನೂ ಮಾಡುವುದಕ್ಕಾಗುವುದಿಲ್ಲ. ನಾನು ದಿಲ್ಲಿಗೆ ಹೊಸಬ. ನಿನ್ನನ್ನು ನನ್ನ ಸ್ನೇಹಿತರಿಗೆ ಪರಿಚಯಿಸುತ್ತೇನೆ. ಅವರ ಸಹಾಯ ಖಂಡಿತ ಇರುತ್ತದೆ.'

"ನಾನು ಎರಿಕ್‌ನ್ನು ನಾನು ಸದಸ್ಯನಾಗಿರುವ ಕಮ್ಯುನಿಸ್ಟ್ ಪಾರ್ಟಿ ಕಚೇರಿಗೆ ಕರೆದುಕೊಂಡು ಹೋದೆ. ನಾವು, ಕಲ್ಕತ್ತದಲ್ಲಿ ಕೋಮು ಗಲಭೆಯನ್ನು ಹತ್ತಿಕ್ಕಲು ಸಾಕಷ್ಟು ಕೆಲಸ ಮಾಡಿದ್ದೆವು. ಮಾಜಿ ರೈಲ್ವೇ ನೌಕರನಾಗಿ ನಾನು ಅನೇಕ ರೈಲ್ವೇ ಜನಗಳನ್ನು ಬಲ್ಲವನಾಗಿದ್ದೆ, ಅಲ್ಲಿ ಹಲವು ತಮ್ಮನ್ನು ತೊಡಗಿಸಿಕೊಂಡಿದ್ದವರ ಪರಿಚಯವಿತ್ತು. ಅವರಲ್ಲಿ ಒಬ್ಬರು ಈಗ ಪ್ರಮುಖರಾಗಿದ್ದಾರೆ – ಜ್ಯೋತಿ ಬಸು – ಇವತ್ತಿನ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ. ಆಗ ಅವರು ಚಿಕ್ಕವರಾಗಿದ್ದರು. ನಮ್ಮ ಸಂಘದ ಕೆಲಸಕ್ಕಾಗಿ ಯಾರ ಭಯವೂ ಇಲ್ಲದೇ, ಅವಿರತವಾಗಿ ದುಡಿಯುತ್ತಿದ್ದರು. ನನಗೆ ಅವರು ಮತ್ತು ಭೂಪೇಶ ಗುಪ್ತಾರವರು ಚೆನ್ನಾಗಿ ಗೊತ್ತಿದ್ದರು. ಅಲ್ಲದೆ ಹಿರಿಯ ನಾಯಕರಾದ ಬಂಕಿಂ ಮುಖರ್ಜಿ, ಸೋಮನಾಥ ಲಾಹಿರಿ, ಮುಜಫ್ಫರ್ ಅಹಮದ್, ಅಬ್ದುಲ್ ಹಲೀಮ್ ಅವರುಗಳೂ ಗೊತ್ತಿದ್ದರು. ಇಂತಹವರು ಇನ್ನೂ ಕೆಲವರು ಇದ್ದರು. ರೈಲ್ವೇ ಬಸ್ತಿಯಲ್ಲಿ ಕೋಮುಗಲಭೆ ನಡೆಯದಂತೆ ನಾವು ನೋಡಿಕೊಂಡೆವು. ಗಾಂಧಿಜೀ ಬೆಲಿಯಘಾಟಾಗೆ ಬರುವುದಕ್ಕೆ ಮೊದಲು ಸಂಘಟಿತ ರಾಜಕೀಯ ಪಕ್ಷವಾಗಿ ಇದ್ದವರು ನಾವು ಮಾತ್ರ. ಒಂದು ರಾಜಕೀಯ ಪಕ್ಷವಾಗಿ ಯೇನೋ ನಾವು ಬಲಹೀನರಾದ್ದೆವು. ಆದರೂ ಪ್ರಯತ್ನದಲ್ಲಿ ಯಾವುದೇ ಕೊರತೆ ಇರಲಿಲ್ಲ. ಪಂಜಾಬ್ ಮತ್ತು ದಿಲ್ಲಿ ಯಲ್ಲಿಯೂ ನಮ್ಮ ಸ್ನೇಹಿತರು ಇಂಥ ಹೋರಾಟವನ್ನೇ ನಡೆಸುತಿದ್ದರು. ಅವರು ಎರಿಕ್‌ಗೆ ಎಲ್ಲಾ ವಿಧವಾದ ಸಹಾಯ ಮಾಡಿದರು.

"ದಿಲ್ಲಿಯಲ್ಲಿ ನಾನು ಕೆಲವೇ ದಿನಗಳು ಇದ್ದೆ. ನಾನು ಹೊರಗಡೆ ಹೆಚ್ಚು ಹೋಗಲಿಲ್ಲ. ಎಲ್ಲಿ ನೋಡಿದರೂ ಗಲಭೆ ಆಗುತ್ತಿತ್ತು. ಎರಿಕ್ ಮತ್ತು ಅವನ ಜನರಿಗೆ ಏನಾಯಿತೆಂದು ನನಗೆ ತಿಳಿಯಲಿಲ್ಲ. ಹತ್ತು ವರ್ಷಗಳ ನಂತರ ಅವನ ವಿಷಯ ಗೊತ್ತಾಯಿತು. ಆಗ ನನಗೆ ದಿಲ್ಲಿಗೆ ವರ್ಗಾವಣೆ ಆಯಿತು. ನೀನು ಮತ್ತು ನಿನ್ನ ತಂಗಿ ಚಿಕ್ಕವರು. ನಾನು ಮೊದಲು ಬಂದು ನಮಗೆ ಮನೆ ಹುಡುಕುತ್ತಿದ್ದೆ. ದಿಲ್ಲಿ ರೈಲ್ವೇ ನಿಲ್ದಾಣದ ಹತ್ತಿರ ಪಹಾರಗಂಜ್‌ನಲ್ಲಿ ಒಂದು ಹೋಟಲ್ಲಲ್ಲಿದ್ದು ಹತ್ತಿರವೇ ಒಂದು ಕಡೆ ಊಟ ಮಾಡುತ್ತಿದ್ದೆ. ಒಂದು ದಿನ ಹೀಗೇ ಮನೆ ಹುಡುಕುತ್ತಿರಬೇಕಾದರೆ "ಮಿಸ್ಟರ್. ಚಟರ್ಜಿ" ಅಂತ ಯಾರೋ ಕರೆದರು. ಯಾರೆಂದು ನೋಡುವಾಗಲೇ, ಆ ಧ್ವನಿ ಹತ್ತಿರಕ್ಕೆ ಬಂದು ಮತ್ತೆ ಕರೆಯಿತು.

"ಮಿಸ್ಟರ್. ಎರಿಕ್ ಶೆಲ್ಟನ್! ನೀವೆಲ್ಲಾ ಇಲ್ಲೇ ಇದ್ದೀರೇನು?"

"ಎರಿಕ್ ನನ್ನನ್ನು ಒಳ್ಳೆಯ ಹೋಟೆಲ್‌ಗೆ ಕರೆದೊಯ್ದು 'ಇಲ್ಲ, ನನ್ನ ತಂದೆ ಲಾಹೋರ ನಲ್ಲೇ ಇರಲು ಬಯಸಿದರು. ನನ್ನ ಒಡಹುಟ್ಟಿದವರೆಲ್ಲ ಪಾಕಿಸ್ತಾನಕ್ಕೆ ಹೊರಟುಹೋದರು.' ಎರಿಕ್ ಮಿತ್ರರು ಹೆಚ್ಚು ಜನ ಭಾರತದಲ್ಲಿ ಇರಲಿಲ್ಲ. ಅವನನ್ನು ಒಂಟಿತನ ಪೀಡಿಸುತ್ತಿತ್ತು. ಮದುವೆಯಾಗಲಿಲ್ಲ, ಅವನು ಪ್ರೀತಿಸಿದ ಹುಡುಗಿ ತನ್ನ ತಂದೆ ತಾಯಿ ಜೊತೆ ಪಾಕಿಸ್ತಾನಕ್ಕೆ ಹೊರಟುಹೋದಳು.

"ನೀನೂ ಹೋಗುವುದಕ್ಕೆ ಪ್ರಯತ್ನಿಸಲಿಲ್ಲವೇ?"

"ಹೌದು. ನಾನೂ ಹೋಗ ಬೇಕೆಂದಿದ್ದೆ. ಆ ಕತ್ತಲಿನ ದಿನಗಳಲ್ಲಿ ಮನಸ್ಸಲ್ಲಿ ಬಿರುಗಾಳಿ ಇತ್ತು. ಬ್ರಿಟಿಷರು ಹೋದರೆ, ನನ್ನ ಗತಿ ಏನು? ಒಬ್ಬರನ್ನೊಬ್ಬರು ಕೊಲ್ಲುವುದನ್ನು ನೋಡಿದರೆ, ಪಾಕಿಸ್ತಾನಕ್ಕೆ ಹೊರಡ ಬೇಕೆನ್ನಿಸಿತು. 'ಮಹಮ್ಮದ್ ಯೂಸಫ್' ಹೆಸರನ್ನು ಬಳಸಿಕೊಳ್ಳಬೇಕೆನಿಸಿತ್ತು, ಅದು ಅಲ್ಲಿ ನನ್ನನ್ನು ದೊಡ್ಡ ಮನುಷ್ಯನಾಗಿಸುತ್ತಿತ್ತು.'

"ಎರಿಕ್ ಕಷ್ಟಪಟ್ಟು ಮಾತು ಮುಂದುವರೆಸಿದ. ಮೊದಲಲ್ಲಿ ನಾನು ಇಲ್ಲಿ ಬರೀ ಕೆಟ್ಟದ್ದನ್ನು ಕಂಡೆ. ಆಮೇಲೆ ಒಳ್ಳೆಯದನ್ನೂ ಕಾಣಲು ಶುರುಮಾಡಿದೆ. ಈ ಬದಲಾವಣೆಯಲ್ಲಿ ನೀವು ಮಾಡಿದ ಸಹಾಯವನ್ನು ಎಂದಿಗೂ ಮರೆಯುವುದಿಲ್ಲ. ಅಸಲಿಗೆ, ಅದುವೇ ಪ್ರಾರಂಭ ಎನ್ನಬಹುದು.

"ನಾನು ಸುಮ್ಮನೆ ತಲೆಯಾಡಿಸಿದೆ. ಎರಿಕ್ ಮುಂದುವರೆಸಿದ; 'ನಿಮ್ಮ ಪಾರ್ಟಿಯ ಸ್ನೇಹಿತರನ್ನು ಭೇಟಿಯಾದೆ. ಅವರು ನನಗೆ ಸಹಾಯ ಮತ್ತು ಧೈರ್ಯ ಎರಡನ್ನೂ ಕೊಟ್ಟರು. ನಾನು ಯೋಚಿಸುವಂತೆ ಮಾಡಿದರು. ನಾನು ಪಾಕಿಸ್ತಾನದಲ್ಲಿ ಎಂದಿಗೂ ಒಬ್ಬನಾಗುವುದಿಲ್ಲವೆಂದು ನನಗೇ ಅರ್ಥವಾಯಿತು.

"ಮತ್ತೆ, ಬ್ರಿಟಿಷ್ ರಾಜ್ಯದ ಲಾಭಗಳ ಕಥೆಯೇನು?"–ನಾನು ಕೇಳಿದೆ.

"ಓ! ಬ್ರಿಟಿಷ್ ರಾಜ್ಯ! ನಾನೆಂದಿಗೂ ಅದು ಮತ್ತೆ ಬರಲಿ ಎಂದು ಸ್ವಾಗತಿಸುವುದಿಲ್ಲ. ಹೀಗೇ ಚೆನ್ನಾಗಿದೆ. ಈಗ ನಾವಿಬ್ಬರೂ ಸ್ವತಂತ್ರರು. ಇಬ್ಬರ ನಡುವೆ ಯಾವ ಅಂತರವೂ ಇಲ್ಲ.

"ಇದು ಎರಿಕ್ ಮತ್ತು ನನ್ನ ಕಡೆಯ ಭೇಟಿ. ಈ ರಥಯಾತ್ರೆಯು ಅವನ ನಿರ್ಧಾರವನ್ನು ಹಿಮ್ಮೆಟ್ಟಿಸದಿರಲಿ. ಒಂದು ಮಾತ್ರ ನಿಜ – ಇವತ್ತಿನ ಪ್ರತಿಯೊಂದು ರೈಲಿನಲ್ಲೂ ಒಬ್ಬ ಪರಿಮಲ್ ಕುಮಾರ್ ಚಟರ್ಜಿ ಮತ್ತು ಮಹಮ್ಮದ್ ಯೂಸುಫ್ ಒಬ್ಬರನ್ನೊಬ್ಬರು ರಕ್ಷಿಸುತ್ತಿದ್ದಾರೆ.

"ಎರಿಕ್ ಶೆಲ್ಪನ್‌ಗಳು ಇಲ್ಲಿ ಎಂದೆಂದಿಗೂ ಬದುಕಿರುತ್ತಾರೆ"

ಇದು, ಯಿಲ್ಮಾಜ್, ಕಥೆಯ ಮುಕ್ತಾಯ. ನಾನೂ ಇಲ್ಲಿಗೆ ಮುಗಿಸಬೇಕು. ಅಯೇಶೆಯೊಂದಿಗೆ ಭಾರತಕ್ಕೆ ಮತ್ತೆ ಬಾ. ನಿಮ್ಮಿಬ್ಬರನ್ನೂ ಮತ್ತೆ ನೋಡುವ ಇಚ್ಚೆ ಇದೆ. ಇನ್ನು ಭವಿಷ್ಯದ ಒಳ್ಳೆಯ ದಿನಗಳ ಬಗ್ಗೆ ಹೇಳುವದಾದರೆ, ನನ್ನ ತಂದೆ ಹೇಳಿದುದನ್ನೇ ಮತ್ತೆ ಹೇಳುತ್ತೇನೆ– "ಎರಿಕ್ ಶೆಲ್ಪನ್‌ಗಳು ಇಲ್ಲಿ ಎಂದೆಂದಿಗೂ ಬದುಕಿರುತ್ತಾರೆ".

ಪ್ರೀತಿಯಿಂದ,

ಸಬ್ಯ

ಕಾಂ. ಆರ್. ಕೋದಂಡರಾಮ್

ಜನಪರ ಸಾಹಿತ್ಯದ ವಿತರಣೆಗೊಂದು ಮಾದರಿ

ಕಾಂ. ಕೋದಂಡರಾಮ್ ಅವರು ಬೆಂಗಳೂರು ನಗರದಲ್ಲಿ, ಹೆಚ್ಚಾಗಿ ಕೆ.ಆರ್. ಪುರಂ ಮತ್ತು ಸುತ್ತ ಮುತ್ತಲ ಪ್ರದೇಶಗಳಲ್ಲಿ ದಶಕಗಳ ಕಾಲ ಐಕ್ಯರಂಗ ಪತ್ರಿಕೆ ಹಾಗೂ ಇತ್ತೀಚಿನ ವರ್ಷಗಳಲ್ಲಿ ಜನಶಕ್ತಿ ಕನ್ನಡ ವಾರ ಪತ್ರಿಕೆಯನ್ನು ಹಾಗೂ ಮಾರ್ಕ್ಸ್‌ವಾದಿ ಸಾಹಿತ್ಯ ಜನರಿಗೆ– ಮನೆ ಮನೆಗೆ, ಕಾರ್ಖಾನೆ, ಕಛೇರಿಗಳಿಗೆ ತಲುಪಿಸಿದ ನಿಷ್ಠಾವಂತ ಸಂಗಾತಿ. ಕಾಂ. ಕೋದಂಡರಾಮ್ ಮೂಲತಃ ತಮಿಳುನಾಡಿನ ತಂಜಾವೂರು ಜಿಲ್ಲೆಯವರು. ಉದ್ಯೋಗ ನಿಮಿತ್ತ ಬೆಂಗಳೂರಿಗೆ ಬಂದು ಸಾರ್ವಜನಿಕ ವಲಯದ ಐಟಿಐ ಕಾರ್ಖಾನೆಯಲ್ಲಿ ಉದ್ಯೋಗಿಯಾಗಿ ಈಗ ಇಲ್ಲಿಯೇ ನೆಲೆಸಿರುವವರು.

1962 ರಲ್ಲಿ ದ್ರಾವಿಡ ಮುನ್ನೇತ್ರ ಕಳಗಂ– ಡಿಎಂಕೆ ಚಳುವಳಿಗೆ ಆಕರ್ಷಿತನಾಗಿ ಸೇರಿದ ನಂತರ ಭ್ರಮ ನಿರಸನಗೊಂಡಿದ್ದ ಕೋದಂಡರಾಮ್ ಸಿ.ಪಿ.ಐ.(ಎಂ)ನ ಸಂವಿಧಾನ ಮತ್ತು ಕಾರ್ಯಕ್ರಮ ಓದಿ 1976 ರಲ್ಲಿ ಸಿಪಿಐ(ಎಂ) ಪಕ್ಷ ಸದಸ್ಯರಾದರು. ಅಂದಿನಿಂದ ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಮಿಕರ ಚಳುವಳಿಯಲ್ಲಿ ಸಕ್ರಿಯರಾಗಿ ಭಾಗವಹಿಸುವುದರೊಂದಿಗೇ ಮಾರ್ಕ್ಸ್‌ವಾದಿ ಮತ್ತು ಇತರ ಜನಪರ ಸಾಹಿತ್ಯ ಪ್ರಸರಣದಲ್ಲಿ ಅತ್ಯಂತ ತನ್ಮಯತೆಯಿಂದ ತೊಡಗಿಸಿ ಕೊಂಡವರು ಕಾಂ. ಕೋದಂಡರಾಮ್. ಸಿಪಿಐ(ಎಂ) ಪಕ್ಷದ ಸಂವಿಧಾನದಲ್ಲಿ ಪಕ್ಷದ ಸದಸ್ಯರ ಕರ್ತವ್ಯಗಳಲ್ಲಿ ಕಮ್ಯುನಿಸ್ಟ್ ಸಾಹಿತ್ಯ ಪ್ರಸರಣದ ಬಗೆಗೆ ಇರುವುದನ್ನು ನೋಡಿ ನಾನು ಈ ಬಗ್ಗೆ ತೀರ್ಮಾನಕ್ಕೆ ಬಂದುದಾಗಿ ಅವರು ಹೇಳುತ್ತಾರೆ.

ಕೋದಂಡರಾಮ್ ಅವರ ಇನ್ನೊಂದು ವೈಶಿಷ್ಟ್ಯವೆಂದರೆ ಸಾಕಷ್ಟು ಪತ್ರಿಕೆಗಳನ್ನು ವಿತರಣೆ ಮಾಡುತ್ತಿದ್ದರೂ ಕೂಡ ತಮ್ಮ ಹೆಸರಿನಲ್ಲಿ ಪತ್ರಿಕೆಯ ಹಣ ಬಾಕಿ ಇರುವುದನ್ನು ಅವರೆಂದೂ ಸಹಿಸುತ್ತಿ ರಲಿಲ್ಲ. ಪ್ರತಿ ತಿಂಗಳು ಪತ್ರಿಕೆಯ ಬಿಲ್ ಹಾಕುವ ಮೊದಲೇ ಹಾಜರಾಗುವ ಅವರು ತಮ್ಮ ತಿಂಗಳ ಹಣವನ್ನು ಚುಕ್ತ ಮಾಡಿಯೇ ತೀರುತ್ತಿದ್ದರು. ಹಲವಾರು ಬಾರಿ ಅವರು ತಮ್ಮ ಕೈಯಿಂದ ಹಣ ತುಂಬಿ ಓದುಗರಿಂದ ಆ ನಂತರ ಹಣ ವಸೂಲಿ ಮಾಡಿಕೊಳ್ಳುತ್ತಿದ್ದರೆಂಬುದು ನಮಗೆ ಗೊತ್ತಾಗುತ್ತಿತ್ತು. ಹೇಗಾದರೂ ಸರಿ ಪತ್ರಿಕೆಯ ಹಣ ಬಾಕಿ ಇಡದಂತೆ ಕೊಟ್ಟು ಬಿಡಬೇಕು ಎಂಬುದು ಅವರ ಹಠ, ತವಕ, ತಲ್ಲಣ ಎಲ್ಲವೂ ಆಗಿತ್ತು.


ಶುಭಾಶಯಗಳೊಂದಿಗೆ


Telephone:
271266 (Factory)
271426 (Factory)
08254 (STD)

M/S PRABHAKARA TILES


Manufacturers of Tiles, Ridges, Hollow Bricks, Ventelator Bricks, Flower Pots, Bonsai Pots, Decorative Pots, Interlocks and many more items.

Address: Ferry Road, Gulvady - 576283, Kundapura Tq.





ಶುಭಾಶಯಗಳೊಂದಿಗೆ



ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ
(ಸಿಐಟಿಯು) ಕುಂದಾಪುರ

ವಿ. ನರಸಿಂಹ	–	ಅಧ್ಯಕ್ಷರು
ಎಚ್. ನರಸಿಂಹ	–	ಪ್ರಧಾನ ಕಾರ್ಯದರ್ಶಿ
ಜಯಂತ	–	ಕೋಶಾಧಿಕಾರಿ

ನಾನಾ ಸಾಹೇಬ್ ರಸ್ತೆ, ವಡೇರಹೋಬಳಿ,
ಕುಂದಾಪುರ – 576201 ದೂರವಾಣಿ – 233814

ಜನಶಕ್ತಿ ಸ್ವಾತಂತ್ರ್ಯೋತ್ಸವ ವಿಶೇಷಾಂಕಕ್ಕೆ
ಶುಭಾಶಯಗಳು



ಹಂಚಿನ ಕಾರ್ಖಾನೆ ಕಾರ್ಮಿಕರ
ಸಹಕಾರ ಸಂಘ, ನಿಯಮಿತ
ಕುಂದಾಪುರ – 576201, ಉ.ಜಿ

ಎಚ್. ನರಸಿಂಹ	–	ಅಧ್ಯಕ್ಷರು
ಆನಂದ ಶೆಟ್ಟಿ	–	ಉಪಾಧ್ಯಕ್ಷರು
ರಮಾನಾಥ ಭಂಡಾರಿ	–	ಕಾರ್ಯದರ್ಶಿ

ನಿರ್ದೇಶಕರು :
ಎನ್. ಶ್ರೀನಿವಾಸ, ರಾಜೀವ ಶೆಟ್ಟಿ, ಶ್ರೀಮತಿ ಗಿರಿಜ,
ಡಿ. ಲಕ್ಷ್ಮಣ, ಡಿ. ಅಣ್ಣಪ್ಪ, ಜಯಂತ, ವಿ. ಶಂಕರ
ಹಾಗೂ ಸಿಬ್ಬಂದಿ ಶಂಕರ ಆನಗಳ್ಳಿ

With Revolutionary Greetings & Best Wishes for the Success of Janashakthi Utsava

The Office Bearers, Executive Committee Members
And Working Committee Members

CWC
CENTRE OF WORKING CLASS

(Supportive Organisation of CITU)

&

CWC MULTI-PURPOSE CO-OPERATIVE SOCIETY

BEML Limited, Bemlnagar, KGF-563 115

OPPOSE FDI IN DEFENCE PRODUCTION, RAILWAYS & INSURANCE !
STOP DISINVESTMENT OF PUBLIC SECTOR SHARES !
STOP DILUTION OF LABOUR LAWS !

ಶುಭಾಶಯಗಳೊಂದಿಗೆ

ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ

ಮಾವಿನಕುರ್ವೆ ತಾಲೂಕ, ಹೊನ್ನಾವರ (ಉ.ಕ)

ನಮ್ಮ ಸಂಘವು ರೈತರಿಗೆ ಅವಶ್ಯವಿರುವ ಸಹಕಾರ ಕಿಸಾನ ಕ್ರೆಡಿಟ ಕಾರ್ಡ್ ಸಾಲ, ಮಾಧ್ಯಮಿಕ ಸಾಲ, ಕೃಷಿಯೇತರ ಸಾಲ ಮತ್ತು ಬಂಗಾರ ಸಾಲವನ್ನು ಯೋಗ್ಯ ಬಡ್ಡಿದರದಲ್ಲಿ ನೀಡುತ್ತದೆ. ಆಕರ್ಷಕ ಬಡ್ಡಿದರದಲ್ಲಿ ಠೇವುಗಳನ್ನು ಸ್ವೀಕರಿಸುತ್ತದೆ. ರೈತರಿಗೆ ಅವಶ್ಯವಿರುವ ರಾಸಾಯನಿಕ ಗೊಬ್ಬರ ಹಾಗೂ ಜೀವನಾವಶ್ಯಕ ವಸ್ತುಗಳನ್ನು ಸಕಾಲದಲ್ಲಿ ವಿತರಿಸುತ್ತದೆ.

ತಾ॥ 31.03.2014ಕ್ಕೆ ಇದ್ದಂತೆ ಸಂಘದ ಸಾಂಪತ್ತಿಕ ಸ್ಥಿತಿ ಈ ಕೆಳಗಿನಂತಿರುತ್ತದೆ

ವಿವರಗಳು	ರಕಂ ಲಕ್ಷ ರೂ.ಗಳಲ್ಲಿ
ಸದಸ್ಯತ್ವ	962
ಶೇರು ಬಂಡವಾಳ	9.61
ಕಾಯ್ದಿಟ್ಟ ನಿಧಿಗಳು	15.20
ಠೇವುಗಳು	61.45
ದುಡಿಯುವ ಬಂಡವಾಳ	154.30
ನಿವ್ವಳ ಲಾಭ	3.14

ಚಂದ್ರಕಾಂತ ದಾಸ ನಾಯಕ
ಮುಖ್ಯ ಕಾರ್ಯನಿರ್ವಾಹಕರು

ತಿಲಕ ಜಟ್ಟಿ ಗೌಡ
ಚೇರ್‌ಮನ್

ಶುಭಾಶಯಗಳೊಂದಿಗೆ

ಸಮಾಜ ಸೇವಾ ಸಹಕಾರಿ ಬ್ಯಾಂಕ್ ನಿಯಮಿತ


ನಂ. 7149, ಸಮಾಜ ಸಹಕಾರಿ ಭವನ,
ಬೈಪಾಸು ಕೂಡು ರಸ್ತೆ, ಬಂಟ್ವಾಳ, ದ.ಕ.ಜಿಲ್ಲೆ
ಶಾಖೆಗಳು : ಬಂಟ್ವಾಳ ಪಟ್ಟಣ, ಫರಂಗಿಪೇಟೆ, ವಿಟ್ಲ, ಕುಕ್ಕಾಜೆ, ಮುಡಿಪು, ಬಂಟ್ವಾಳ ಬೈಪಾಸ್ ಜಂಕ್ಷನ್, ಪಡೀಲ್, ಕಲ್ಲಡ್ಕ, ಬಜಪೆ
ಸ್ಥಾಪನೆ : 1980–81


1. ಸದಸ್ಯರು - 5814, 2. ಪಾಲು ಬಂಡವಾಳ - 230 ಲಕ್ಷ
3. ಠೇವಣಾತಿಗಳು - 6012 ಲಕ್ಷ, 4. ನಿಧಿಗಳು - 295 ಲಕ್ಷ
5. ಸಾಲಗಳು - 4715 ಲಕ್ಷ, 6. ವಿನಿಯೋಗಗಳು - 2049 ಲಕ್ಷ
7. ದುಡಿಯುವ ಬಂಡವಾಳ - 6628 ಲಕ್ಷ, 8. ಲಾಭ - 82.20 ಲಕ್ಷ
9. ಆಡಿಟ್ ವರ್ಗೀಕರಣ 'ಎ' ತರಗತಿ (2012-13)
10. ಸದಸ್ಯರಿಗೆ ಡಿವಿಡೆಂಡ್ - ಶೇ.18


ವಿವಿಧ ರೀತಿಯ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರ ಕೊಡಲಾಗುವುದು ಮತ್ತು ವಿವಿಧ ರೀತಿಯ ಸಾಲ ಸೌಲಭ್ಯಗಳು

ಶ್ರೀ ಕೆ. ದಯಾನಂದ — ಅಧ್ಯಕ್ಷರು
ಶ್ರೀ ರಮಾನಾಥ ವಿಟ್ಲ — ಉಪಾಧ್ಯಕ್ಷರು
ಶ್ರೀ ಉಮೇಶ್ ಪಿ.ಕೆ. — ಪ್ರಧಾನ ವ್ಯವಸ್ಥಾಪಕರು


ನಿರ್ದೇಶಕರು : ಶ್ರೀಯುತರುಗಳಾದ : ಆನಂದ ಮೂಲ್ಯ ಸಿ. ಭೋಜ ಅಡ್ಯಾರ್ ಉಮೇಶ್ ಕುಲಾಲ್ ಮಂಚಿ, ಸದಾಶಿವ ಬಂಗೇರ, ವಿಶ್ವನಾಥ ಕೆ.ಬಿ, ಎಂ.ಪರಮೇಶ್ವರ, ಎಂ. ಭೋಜ, ಎ.ವಸಂತ, ಸುರೇಶ್ ಕುಲಾಲ್, ಶ್ರೀಮತಿ ಯಶೋಧ ಬಿ.ಎಲ್. ಕುಲಾಲ್, ಗಂಗಾಧರ ನಾಯ್ಕ







ಎಸ್. ಮುನಿರಾಜು



ಕೆ. ಮಹದೇಶ್ವರ




ಎಂ. ಚೆಲುವರಾಜು



ಎನ್. ಆನಂದ



ಆರ್. ವೆಂಕಟೇಶ್



ಎಂ. ನಂಜೇಗೌಡ




PEARLPET
With Best Compliments
From
PEARL
Pearl Polymers Limited
Catering to the packaging needs of
diverse market segment



Best Compliments from
Pre-Cleaner
Fine-Cleaner
Gravity Separator
Destoner
Destoner, Csp-502 (closed Circuit Type)
Paddy Separator, Se-500
Friction Polisher, Xpf-50
Abrasive Whitner, XPA-25
Sifter, SF-301
Indented Cylinder
Colour Sorter
Flat Bottom Silo Systems
Modular CleanerCC
fowler westrup
FOWLER WESTRUP (INDIA) PVT. LTD.
(A joint venture of John Fowler, India & Westrup, Denmark)
Plot No. 60- 63, KIADB Industrial Area, IV Phase, Malur - 563130 Kolar Dist. Karnataka.
e-mail: fwi@fowlerwestrup.com web: www.fowlerwestrup.com
Fowler Westrup - Creating a Greener & Cleaner World... Store Clean Recycle
Contact:
Malur: Tel: +91 8152 282500 Mob: +91 99452 41738
Delhi: +91 11 29942741/29942742
Mumbai: +91 22 25916456/59
Kolkata: +91 33 24646586



“ಮಾಹಿತಿಗಳನ್ನು ನೀಡಿ ಅಭಿಪ್ರಾಯ ರೂಪಿಸಲು ನೆರವಾಗುವುದು ಮಾಧ್ಯಮಗಳ ಸಾಮಾಜಿಕ ಹೊಣೆಗಾರಿಕೆ”

ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗ. ಉಳಿದ ಮೂರು ಅಂಗಗಳ ಬಗ್ಗೆ ಜನರಿಗೆ ಮಾಹಿತಿ ನೀಡುವುದು, ಆ ಬಗ್ಗೆ ಚರ್ಚೆ ಮೂಲಕ ಜನತೆಗೆ ಹಲವು ವಿಷಯಗಳ ಬಗ್ಗೆ ಅಭಿಪ್ರಾಯ ರೂಪಿಸಲು ಸಹಾಯ ಮಾಡುವುದು ಮಾಧ್ಯಮಗಳ ಸಾಮಾಜಿಕ ಹೊಣೆಗಾರಿಕೆ. ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲೂ, ಸ್ವಾತಂತ್ರ್ಯ ನಂತರದ ಕೆಲವು ದಶಕಗಳ ವರೆಗೂ ಇದು ತಕ್ಕ ಮಟ್ಟಿಗೆ ಆಗಿತ್ತು. ಆದರೆ ಇಂದು ಎಲ್ಲಾ ಮಾಧ್ಯಮಗಳ ಮೇಲೆ ಮುಕೇಶ ಅಂಬಾನಿ ಒಬ್ಬರದೇ ನಿಯಂತ್ರಣ ಶೇ.60 ರಷ್ಟು ಇರುವ ಪರಿಸ್ಥಿತಿಯಲ್ಲಿ ಅದು ಪೂರ್ಣವಾಗಿ ಹಿಂದಕ್ಕೆ ಸರಿದಿದೆ. ಇಂದು ಮಾಧ್ಯಮಗಳ ಮೇಲೆ ಕಾರ್ಪೊರೆಟ್ ನಿಯಂತ್ರಣ ಹೆಚ್ಚಿದೆ ಮಾತ್ರವಲ್ಲ, ಮಾಧ್ಯಮ ಕಂಪನಿಗಳೇ ದೊಡ್ಡ ಕಾರ್ಪೊರೇಟುಗಳೂ ಆಗಿವೆ ಎಂದು ‘ಪೀಪಲ್ಸ್ ಡೆಮೊಕ್ರಸಿ’ ವಾರ ಪತ್ರಿಕೆಯ ಸಂಪಾದಕರೂ, ರಾಜ್ಯಸಭಾ ಸದಸ್ಯ ರೂ ಆಗಿರುವ ಸೀತಾರಾಂ ಯೆಚುರಿ ಹೇಳಿದರು. ಅವರು ಅಗಸ್ಟ್ 17ರಂದು ಜನಶಕ್ತಿ ವಾರಪತ್ರಿಕೆ ಸಂಘಟಿಸಿದ್ದ ‘ಜನಶಕ್ತಿ ಉತ್ಸವ’ದ ಅಂಗವಾಗಿ ಏರ್ಪಡಿಸಿದ್ದ ‘ಮಾಧ್ಯಮ ಮತ್ತು ಸಾಮಾಜಿಕ ಹೊಣೆಗಾರಿಕೆ–ಸವಾಲುಗಳು ಮತ್ತು ಪರ್ಯಾಯಗಳು’ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತಿದ್ದರು. ಇದರ ಮೊದಲು ಅವರು ಜನಶಕ್ತಿಯ ಸ್ವಾತಂತ್ರೋತ್ಸವ ವಿಶೇಷಾಂಕ ಬಿಡುಗಡೆ ಮಾಡಿದರು. ಜನಶಕ್ತಿ ವಾರಪತ್ರಿಕೆಗೆ ಅತ್ಯುತ್ತಮ ವರದಿ, ಲೇಖನ, ವಿತರಣೆ, ನಿರ್ವಹಣೆ ಮುಂತಾದವುಗಳ ಮೂಲಕ ದೀರ್ಘ ಕಾಲ ಕಾಣಿಕೆ ನೀಡಿದ ಹಿರಿಯರನ್ನೂ ಸನ್ಮಾನಿಸಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಮುಂದುವರೆದು ಅವರು ಕಾರ್ಪೊರೆಟ್ ಮಾಧ್ಯಮಗಳು ಹಲವು ವಿಷಯಗಳನ್ನೂ ಮಾಹಿತಿಗಳನ್ನೂ ಕೊಡುವುದೇ ಇಲ್ಲ. ಮಾತ್ರವಲ್ಲ, ತಮ್ಮ(ಅಥವಾ ಮಾಲಕರ) ಅಭಿಪ್ರಾಯಗಳನ್ನೇ ಸುದ್ದಿಯಾಗಿಸುತ್ತಿವೆ. ವಿಷಯಗಳನ್ನೇ ತಿರುಚಿಕೊಡುತ್ತಿವೆ ಎಂದು ಅಭಿಪ್ರಾಯ ಪಟ್ಟರು.

ಲೋಕಪಾಲ ಮಸೂದೆಗಾಗಿ ಅಣ್ಣಾ ಹಜಾರೆ ಸುತ್ತ ನೆರೆದ ಸಣ್ಣ ಗುಂಪಿನ ಚಳುವಳಿಗೆ 24ಗಂಟೆ ಪ್ರಚಾರ ದೊರೆಯಿತು. ಅದೇ ಮೈದಾನದಲ್ಲಿ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ವಿರುದ್ಧ ಎಷ್ಟೋ ದೊಡ್ಡ ಸಂಖ್ಯೆಯಲ್ಲಿದ್ದ ಎಡ ಪಕ್ಷಗಳ ಕಾರ್ಯಕರ್ತರ ಧರಣಿ ಸುದ್ದಿಯಾಗಲೇ ಇಲ್ಲ. ಎಡ ಪಕ್ಷಗಳ ಕರೆ ಮೇರೆಗೆ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ವಿರುದ್ಧ ಪಾರ್ಲಿಮೆಂಟಿನ ಎದುರು ನೆರೆದ





ಜನಶಕ್ತಿ ಸ್ವಾತಂತ್ರ್ಯೋತ್ಸವ ವಿಶೇಷಾಂಕ ಬಿಡುಗಡೆ

ಮೂರು ಲಕ್ಷ ಜನರ ರ್‍ಯಾಲಿ ಸಹ ಹೆಚ್ಚಿನ ಪತ್ರಿಕೆಗಳಲ್ಲಿ ಸುದ್ದಿಯಾಗಲಿಲ್ಲ. ಒಂದು ಪತ್ರಿಕೆಯಲ್ಲಿ ಮಾತ್ರ ಈ ರ್‍ಯಾಲಿ ದೆಹಲಿಯ ಟ್ರಾಫಿಕ್ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿತು ಎಂದು ಮಾತ್ರ ಸುದ್ದಿಯಾಯಿತು. ಇದೇ ರೀತಿಯಲ್ಲಿ ಎಎಪಿಯನ್ನು ದೆಹಲಿ ವಿಧಾನಸಭೆಯಲ್ಲಿ ಎತ್ತಿ ಹಿಡಿದ ಮಾಧ್ಯಮಗಳು, ಕೇಜ್ರಿವಾಲ್ ಸರಕಾರ ಅಂಬಾನಿ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಮುಂದಾದ ಕೂಡಲೇ ಎಎಪಿಯ ಮೇಲೆ ದಾಳಿ ಆರಂಭಿಸಿದವು ಎಂದು ಮಾಧ್ಯಮಗಳ ಧೋರಣೆಗಳನ್ನು ಅವರು ಬಿಚ್ಚಿಟ್ಟರು.

ಮಾಧ್ಯಮಗಳಿಗೆ ನೀತಿ ಸಂಹಿತೆ ಅಗತ್ಯ. ಕಾರ್ಪೊರೇಟ್ ಮತ್ತು ರಾಜಕೀಯ ಪಕ್ಷಗಳು ಮಾಧ್ಯಮಗಳ ಒಡೆತನ ಹೊಂದಿರಬಾರದು ಎಂದು ಟ್ರಾಯ್ ಶಿಫಾರಸು ಮಾಡಿದೆ. ಕಾರ್ಪೊರೇಟ್ ಮತ್ತು ರಾಜಕೀಯ ಪಕ್ಷಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವ ಈ ನೀತಿಯನ್ನು ಒಪ್ಪುವುದು ಕಷ್ಟ. ಪ್ರೆಸ್ ಕೌನ್ಸಿಲ್, ಪಾರ್ಲಿಮೆಂಟ್ ಇತ್ಯಾದಿಗಳೂ ನೀತಿ ಸಂಹಿತೆಯ ಬಗ್ಗೆ ಚರ್ಚೆ ನಡೆಸುತ್ತಿವೆ. ಮಾಧ್ಯಮಗಳೂ ತಾವೇ ರೂಪಿಸಿದ ನೀತಿ ಸಂಹಿತೆ ಆಧಾರದಲ್ಲಿ ಸ್ವಯಂ-ನಿಯಂತ್ರಣ ಒಪ್ಪಿಕೊಂಡರೆ ಒಳ್ಳೆಯದು. ಆದರೆ ಅದನ್ನು ದೀರ್ಘಕಾಲ ನಿರಾಕರಿಸಿದರೆ ಇಂತಹ ನೀತಿ ಸಂಹಿತೆ ಹೊರಿಸಲು ಹೊರಗಿಂದ ಒತ್ತಡ ಬಂದೇ ಬರುತ್ತದೆ. ಸಾರ್ವಜನಿಕ ಮತ್ತು ಸಾಮಾನ್ಯ ಜನತೆಯ ಹಿತಾಸಕ್ತಿ ವಿಷಯಗಳನ್ನು ಕಾರ್ಪೊರೇಟ್ ಮಾಧ್ಯಮಗಳು ಮರೆಸುವ, ಕಡೆಗಣಿಸುವ ಇಂತಹ ಪರಿಸ್ಥಿತಿಯಲ್ಲಿ, ಅವನ್ನು ಎತ್ತಿ ಹಿಡಿಯುವ ಜನಶಕ್ತಿಯಂತಹ ಸಣ್ಣ ಸ್ವತಂತ್ರ ಪತ್ರಿಕೆಗಳ ಮಹತ್ವ ಹೆಚ್ಚಿನದ್ದು. ಇಂತಹ ಪತ್ರಿಕೆಗಳನ್ನು ಬಲಗೊಳಿಸಬೇಕು ಎಂದು ಸೀತಾರಾಂ ಯೆಚ್ಚುರಿ ಕರೆ ನೀಡಿದರು.

'ಜನಶಕ್ತಿ ಹೆಸರು ಕೇಳಿದರೆನೇ ನನಗೆ ರೋಮಾಂಚನ ಆಗುತ್ತದೆ'

ಜನಶಕ್ತಿ ಹೆಸರು ಕೇಳಿದರೆನೇ ನನಗೆ ರೋಮಾಂಚನ ಆಗುತ್ತದೆ. ಏಕೆಂದರೆ 'ಚಿಂತನೆಯ ಮಳೆ ಹರಿಸಿ ಜನಶಕ್ತಿಯ ಬೆಳೆ ತೆಗೆಯುವ ಮುಂಗಾರು' ಎಂಬ ಧ್ಯೇಯವಾಕ್ಯ ಹೊಂದಿದ್ದ 'ಮುಂಗಾರು' ಪತ್ರಿಕೆಯಲ್ಲಿ ನಾನು ನನ್ನ ಪತ್ರಕರ್ತ ವೃತ್ತಿ ಆರಂಭಿಸಿದ್ದನ್ನು ಅದು ನೆನಪಿಸುತ್ತದೆ- ಇದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು ಅವರ ಉದ್ಗಾರ. ವಿಚಾರ ಸಂಕಿರಣದ ಆಶಯ ನುಡಿಗಳನ್ನಾಡುತ್ತಾ, ಅವರು ಇದನ್ನು ಹೇಳಿದರು. ಮಾಧ್ಯಮ ವೃತ್ತಿಯ ಬದಲು ಒಂದು ಉದ್ಯಮ ಆದ ಮೇಲೆ ಅದರ ಸಾಮಾಜಿಕ ಹೊಣೆಗಾರಿಕೆ ಇಲ್ಲವಾಗಿದೆ. ಒಂದು ದಿನಪತ್ರಿಕೆಯ ಸರಾಸರಿ ಖರ್ಚು ರೂ.15 ಆದರೆ, ಓದುಗ ಕೊಡುವುದು ರೂ. 4 ಮಾತ್ರ, ರೂ.11 ಕೊಡುವ ಕಾರ್ಪೊರೇಟ್ ಜಾಹೀರಾತುದಾರ ಸ್ವಾಭಾವಿಕವಾಗಿಯೇ ಪತ್ರಿಕೆಯ ಧೋರಣೆ, ಸುದ್ದಿಗಳ ಆಯ್ಕೆಯನ್ನು

ದಿನೇಶ್ ಅಮೀನ್ ಮಟ್ಟು



ಎಸ್.ಎ.ಎಂ. ಇಸ್ಮಾಯಿಲ್



ನವೀನ್ ಸೂರಿಂಜೆ





ನಿರ್ಧರಿಸುತ್ತಾನೆ. ಸಾಮಾಜಿಕ ನ್ಯಾಯ ಕರ್ನಾಟಕದ ಮಾಧ್ಯಮಗಳಲ್ಲಿ ಅತ್ಯಂತ ಹೆಚ್ಚು ಅವಹೇಳನಕ್ಕೆ ಈಡಾಗಿದೆ. ಇತರ ಎಲ್ಲರಂತೆ ಪತ್ರಕರ್ತರೂ ಭ್ರಷ್ಟರಾಗಿದ್ದಾರೆ. ಪತ್ರಕರ್ತರಲ್ಲಿ ಭ್ರಷ್ಟಾಚಾರ ಹೋಗಲಾಡಿಸಲು ಅವರನ್ನು ಲೋಕಪಾಲ ಕಾಯಿದೆ ಅಡಿಯಲ್ಲಿ ತರಬೇಕು. 'ಕಾಸಿಗಾಗಿ ಸುದ್ದಿ' ಬಗ್ಗೆ ಪ್ರೆಸ್ ಕೌನ್ಸಿಲ್ ಸಲ್ಲಿಸಿರುವ ವರದಿಯನ್ನು ಅದರ ಅಧ್ಯಕ್ಷ ನ್ಯಾಯಮೂರ್ತಿ ಕಾಟ್ಜು ಅಂಗೀಕರಿಸಿ ಅದರಂತೆ ಕ್ರಮ ಕೈಗೊಳ್ಳಬೇಕು ಎಂದು ಅಮಿನ್ ಮಟ್ಟು ಅವರು ಹೇಳಿದರು. ಈ ಸಂದರ್ಭದಲ್ಲಿ ಜನಶಕ್ತಿಯಂತಹ ಸಣ್ಣ ಪತ್ರಿಕೆಗಳ ಮಹತ್ವದ ಬಗ್ಗೆ ಸಹ ಅವರು ಒತ್ತಿ ಹೇಳಿದರು.

'ಓದುಗ ತನ್ನ ಹಕ್ಕು ಚಲಾಯಿಸಬೇಕು'

ಮಾಧ್ಯಮದವರಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು ಎಂದು ಗೊತ್ತಿಲ್ಲ, ಅದನ್ನು ನಾವು ಹೇಳಿಕೊಡಬೇಕು ಎಂದುಕೊಳ್ಳಬೇಕಾಗಿಲ್ಲ. ಅವರಿಗೆ ಅದು ಚೆನ್ನಾಗಿ ಗೊತ್ತಿದೆ. ಆಗಾಗ ಸಾಮಾಜಿಕ ಜವಾಬ್ದಾರಿಯ ಉತ್ತಮ ನಾಟಕಗಳನ್ನೂ ಮತ್ತು ಆ ಬಗ್ಗೆ ಜಾಣ ಮರೆವು ಸಹ ಪ್ರದರ್ಶಿಸುತ್ತಾರೆ. ಆದ್ದರಿಂದ ಪರ್ಯಾಯಗಳನ್ನು ಹುಡುಕುವುದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದವರು ಪ್ರಜಾವಾಣಿಯ ಹಿರಿಯ ಪತ್ರಕರ್ತ ಎನ್.ಎ.ಎಂ. ಇಸ್ಮಾಯಿಲ್.

ಇಲ್ಲಿ ನನಗೆ ಎಡ್ವರ್ಡ್ ಸೈದ್ ಮತ್ತು ನೋಮ್ ಚೋಮ್ಸ್ಕಿ ನಡುವಿನ ಚರ್ಚೆ ನೆನಪಾಗ್ತದೆ. ಸತ್ಯವನ್ನು ಪ್ರಭುತ್ವಕ್ಕೆ ಹೇಳಬೇಕು ಎಂದು ಸೈದ್ ಅಭಿಪ್ರಾಯವಾದರೆ, ಚೋಮ್ಸ್ಕಿ ಸತ್ಯವನ್ನು ಜನಕ್ಕೆ ಹೇಳಬೇಕು ಅಂತಾರೆ. ಈ ಹೊತ್ತು ನನಗೆ ಚೋಮ್ಸ್ಕಿ ಅವರದ್ದು ಹೆಚ್ಚು ಪ್ರಾಕ್ಟಿಕಲ್ ಮತ್ತು ಪ್ರಸ್ತುತ ಅನ್ನಿಸ್ತದೆ ಎಂದರು ಇಸ್ಮಾಯಿಲ್. ನಿಜ ಸುದ್ದಿಯನ್ನು ತಿಳಿಸಲು, ಮಾಧ್ಯಮದ ಧೋರಣೆಗಳನ್ನು ಬಯಲು ಪಡಿಸಲು ಯಾವುದೇ ವಿಧಾನ ಬಳಸಿಕೊಳ್ಳಬಹುದು. ಮಾಧ್ಯಮಗಳನ್ನೇ ಸಹ ಬಳಸಿಕೊಳ್ಳಬಹುದು. ಒಬ್ಬ ಓದುಗನಾಗಿ 4 ರೂ. ಮಾತ್ರ ಕೊಡುತ್ತಿದ್ದರೂ ಅವನು ತನ್ನ ಹಕ್ಕು ಚಲಾಯಿಸಬಹುದು. ಚಲಾಯಿಸಬೇಕು. ಓದುಗರ ಪತ್ರ ಮತ್ತಿತರ ಅಂಕಣಗಳ ಮೂಲಕ ಸತತ ಒತ್ತಡ ಹಾಕಬೇಕು. ಮಾಧ್ಯಮದ ತಪ್ಪು ಧೋರಣೆಗಳನ್ನು ಬಯಲಿಗೆಳೆಯುತ್ತಾರೆ ಎಂಬ ಭಯ ಮಾತ್ರ ಮಾಧ್ಯಮಗಳನ್ನು ನಿಯಂತ್ರಣಕ್ಕೆ ತರಬಲ್ಲುದು. ರಾಡಿಯ ಪ್ರಕರಣ ಬೆಳಕಿಗೆ ಬಂದಿದ್ದು ಸಾಮಾಜಿಕ ಮಾಧ್ಯಮಗಳ ಮೂಲಕ. ಆ ಮೇಲೆ ಕೆಲವು ಪತ್ರಿಕೆಗಳು ಅದನ್ನು ಎತ್ತಿಕೊಂಡಾಗ ಇಡೀ ಮಾಧ್ಯಮ ಹಿಂಬಾಲಿಸಲೇಬೇಕಾಯಿತು. ಸತ್ಯ ಹೇಳಲು ಈ ಹೊತ್ತು ಕರಪತ್ರದಿಂದ ಹಿಡಿದು ಸಾಮಾಜಿಕ ಮಾಧ್ಯಮವರೆಗೆ ಎಲ್ಲವನ್ನೂ ಬಳಸಿಕೊಳ್ಳಬೇಕು. ಇವೆಲ್ಲ ಇದ್ದಾಗ್ಯೂ ಪತ್ರಿಕೆಗಳು ಟಿವಿಗಿಂತ ಹೆಚ್ಚು ಸಂವೇದನಾಶೀಲವಾಗಿ ಇದೆ ಎನ್ನಬಹುದು. ಕೆ.ಪಿ.ಎಸ್.ಸಿ. ಹಗರಣದಲಿ ಟಿವಿ ವಾಹಿನಿಗಳು 362 ಜನರ ಬಗ್ಗೆ ಕಣ್ಣೀರು ಹಾಕುತ್ತಿದ್ದರೆ, ಪತ್ರಿಕೆಗಳು ಸೈದ್ಧಾಂತಿಕ ಗೆರೆಗಳನ್ನು ದಾಟಿ ಸರಕಾರದ ಕ್ರಮ ಸ್ವಾಗತಿಸಿ ಸಂಪಾದಕೀಯ ಸಹ ಬರೆದವು. ಇಂತಹ ಕೆಲವು ಓಯಸಿಸ್‌ಗಳು

ಜಿ.ಎಸ್. ನಾಗರಾಜ್



ಎಸ್. ವೈ. ಗುರುಶಾಂತ್



ನಿತ್ಯಾನಂದ ಸ್ವಾಮಿ





ಜನಶಕ್ತಿ ಉತ್ಸವದಲ್ಲಿ ಸನ್ಮಾನಿತರು (ಕುಳಿತವರಲ್ಲಿ ಎಡದಿಂದ ಬಲಕ್ಕೆ): ವಿ.ಪಿ.ಕುಲಕರ್ಣಿ, ವಿಡಂಬಾರಿ, ಸಿ.ಆರ್. ಶಾನಬಾಗ, ಬಿ.ಉಮೇಶ್ ಮತ್ತು ಲಕ್ಷ್ಮಣ ನೆಲ್ಲಿಕಟ್ಟೆ, ಸೀತಾರಾಂ ಯೆಚುರಿ, ಜಿ.ವಿ.ಶ್ರೀರಾಮ ರೆಡ್ಡಿ ಮತ್ತು ಇತರ ಗಣ್ಯರೊಂದಿಗೆ

ಇವೆ. ಎಡ ಚಳುವಳಿ ಈ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುತ್ತಾ, ವಿಸ್ತರಿಸುತ್ತಾ ಸತ್ಯ ಹೇಳುವ ಕೆಲಸ ಮಾಡಬೇಕು ಎಂದರು ಇಸ್ಮಾಯಿಲ್.

ಅರಸು ಅವರ 'ಅದೃಶ್ಯ ಮತದಾರರು' 'ದೃಶ್ಯ'ರಾದದ್ದು

ಸಾಮಾಜಿಕ ಮಾಧ್ಯಮಗಳ ಪ್ರಭಾವ, ಸಾಧ್ಯತೆಗಳು ಮತ್ತು ಸವಾಲುಗಳ ಬಗ್ಗೆ ಮಾತನಾಡುತ್ತಾ ಜಿ.ಎನ್.ನಾಗರಾಜ್, ಜನತೆಯ ಅಭಿವ್ಯಕ್ತಿ ಸ್ವಾತಂತ್ರ್ಯ ಮಾಧ್ಯಮ ಮಾಲಿಕರ ಸ್ವಾತಂತ್ರ್ಯ ಮತ್ತು ಜನತೆಯ ಅಸ್ವಾತಂತ್ರ್ಯವಾಗಿ ಪರಿವರ್ತಿತವಾಗಿದೆ ಎಂದರು. ದೇವರಾಜ ಅರಸು ಅವರು ಹೇಳಿದ ಮಾಧ್ಯಮಗಳ ಹಿಡಿತದ ಆಚೆಗೆ ಇರುವ 'ಅದೃಶ್ಯ ಮತದಾರರು' ಇಂದು ಇಲ್ಲ. ಇತ್ತೀಚಿನ ಮೋದಿ ಪ್ರಚಾರ ಯಂತ್ರ ಸಾಮಾಜಿಕ ಮಾಧ್ಯಮಗಳು ಸೇರಿದಂತೆ ದೃಶ್ಯ ಮಾಧ್ಯಮಗಳನ್ನು ಬಳಸಿದ ರೀತಿ ನೋಡಿದರೆ ಎಲ್ಲರೂ ಈಗ 'ದೃಶ್ಯ' ಮತದಾರರು ಆಗಿದ್ದಾರೆ.

ಸದ್ಯಕ್ಕೆ ಫೇಸ್‌ಬುಕ್ ಮುಂತಾದ ಸಾಮಾಜಿಕ ಮಾಧ್ಯಮಗಳಲ್ಲಿ ಮಾಲಿಕರ ಸರಕಾರದ ನಿಯಂತ್ರಣ ಇಲ್ಲದೆ ಪ್ರಗತಿಪರ ಚಳುವಳಿಗಳ ಬಗ್ಗೆ ಸುದ್ದಿ, ಚರ್ಚೆ, ಪ್ರಚಾರ ಮಾಡುವ ಸಾಧ್ಯತೆ ಕಾಣಿಸುತ್ತಿದೆ. ಕಂಪ್ಯೂಟರುಗಳಿಂದ ಸಾಮಾಜಿಕ ಮಾಧ್ಯಮ ಮೊಬೈಲುಗಳಿಗೆ ಬಂದ ಮೇಲೆ ಇವಕ್ಕೆ ಅತ್ಯಂತ ಹೆಚ್ಚಿನ ವ್ಯಾಪಕತೆ ಬಂದಿದೆ. ಇದು ಇನ್ನೂ ಹೆಚ್ಚು ವ್ಯಾಪಕತೆ ಪಡೆದುಕೊಳ್ಳಲಿದೆ. ಬರಿಯ ಸಾಮಾಜಿಕ ಶಿಷ್ಟಾಚಾರಗಳಿಗೆ ಸೀಮಿತವಾಗಿದ್ದ ಇವು, ಹೆಚ್ಚಿನ ಗಂಭೀರ ಸಂವಹನಕ್ಕೆ ತೆರೆದು ಕೊಳ್ಳುತ್ತಿವೆ. ಎಡ-ಪ್ರಗತಿಪರ ಚಳುವಳಿಗಳು ತಮ್ಮ ಸುದ್ದಿ, ಅಭಿಪ್ರಾಯ ತಿಳಿಸಲು ಚರ್ಚೆ ನಡೆಸಲು, ಎಲ್ಲಾ ವಾದ-ವಿವಾದಗಳಲ್ಲಿ ಮಧ್ಯಪ್ರವೇಶ ಮಾಡಲು ಇದನ್ನು ಬಳಸಿಕೊಳ್ಳಬೇಕು. ಸಾಮಾಜಿಕ ಮಾಧ್ಯಮಗಳ ಸೀಮಿತತೆ ಮತ್ತು ಅಪಾಯ ಅವುಗಳ ಮೇಲೆ ಮತ್ತು ಇಡೀ ಇಂಟರ್‌ನೆಟ್ ಮೇಲೆ ಒಡೆತನ ಹೊಂದಿರುವ ಅಮೆರಿಕನ್ ಕಂಪನಿಗಳಿಂದ ಬರುತ್ತದೆ. ಸಾಮಾಜಿಕ ಮಾಧ್ಯಮಗಳು ರಾಷ್ಟ್ರೀಯ ಮಾಲಿಕರ ಸರಕಾರಗಳಿಂದ 'ಸ್ವತಂತ್ರ'ವಾಗಿದ್ದರೂ, ಅಂತರ್‌ರಾಷ್ಟ್ರೀಯ ಬಂಡವಾಳದ ಹಿಡಿತದಲ್ಲಿ ಸಂಪೂರ್ಣ ವಾಗಿ ಇವೆ ಎಂದು ನೆನಪಿಟ್ಟುಕೊಳ್ಳಬೇಕು.

ಬಲಪಂಥಿಯರು ಸಂಘಟಿತವಾಗಿ ಸುವ್ಯವಸ್ಥಿತವಾಗಿ ಮಾಧ್ಯಮಗಳಲ್ಲಿ ಮಧ್ಯ ಪ್ರವೇಶಿಸಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಎಡ ಪ್ರಗತಿಪರ ಶಕ್ತಿಗಳು ಸಹ ಮಾಡಬೇಕು ಎಂದು ಬಿ ಟಿವಿಯ ನವೀನ್ ಸೂರಿಂಜೆ ಹೇಳಿದರು. ಅವರು ಪತ್ರಿಕೆಗಳು ಟಿವಿಗಿಂತ ಹೆಚ್ಚು ಸಂವೇದನಾಶೀಲವಾಗಿ ಇವೆ ಎಂಬ ಇಸ್ಮಾಯಿಲ್ ಅವರ ಪ್ರತಿಪಾದನೆಯನ್ನು ಒಪ್ಪದೆ, ಆ ಬಗ್ಗೆ ಹಲವು ಪ್ರತಿ-ಉದಾಹರಣೆಗಳನ್ನು ನೀಡಿದರು. ಆರಂಭದಲ್ಲಿ ಜನಶಕ್ತಿ ಬಳಗದ ಗುರುಶಾಂತ್ ಅವರು ಪ್ರಸ್ತಾವನೆ ಮಾಡಿದರು. ಕೆ.ಮಹಾಂತೇಶ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಜನಶಕ್ತಿಯ ಸಂಪಾದಕ ನಿತ್ಯಾನಂದ ಸ್ವಾಮಿ ಅವರು ಅಧ್ಯಕ್ಷೀಯ ಮಾತುಗಳನ್ನಾಡಿದರು.

ಈ ಉತ್ಸವದ ಭಾಗವಾಗಿ ನಡೆದ ಎರಡನೇ ಅಧಿವೇಶನದಲ್ಲಿ ಜನಶಕ್ತಿ ವಾರಪತ್ರಿಕೆಯ ವರದಿಗಾರರು, ಲೇಖಕರು ಹಾಗೂ ವಿತರಕರು ಭಾಗವಹಿಸಿದ್ದರು. ಪತ್ರಿಕೆಯ ಸಂಪಾದಕೀಯ ಕೆಲಸದ ಬಗ್ಗೆ ಆರ್. ರಾಮಕೃಷ್ಣ ಮತ್ತು ವಿತರಣೆಯ ಬಗ್ಗೆ ಜಿ.ಚಂದ್ರಶೇಖರ್ ಸಲ್ಲಿಸಿದ ವರದಿಗಳಲ್ಲಿ ಪತ್ರಿಕೆಯ ಗುಣಮಟ್ಟ ಹಾಗೂ ಪ್ರಸಾರವನ್ನು ಹೆಚ್ಚಿಸುವ ಬಗ್ಗೆ ನಿರ್ದಿಷ್ಟ ಸೂಚನೆಗಳನ್ನು ಮಂಡಿಸಲಾಯಿತು. ಈ ಬಗ್ಗೆ ಚರ್ಚೆ ನಡೆದು ಪ್ರಸಾರವನ್ನು ಮುಂದಿನ ಆರು ತಿಂಗಳಲ್ಲಿ ಮೂರು ಪಟ್ಟು ಹೆಚ್ಚಿಸಲು ಕರೆ ನೀಡಲಾಯಿತು. ಚರ್ಚೆಯಲ್ಲಿ ಭಾಗವಹಿಸಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಪತ್ರಿಕೆಯ ಪ್ರಕಾಶಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಮಾಧ್ಯಮಗಳು ಕಾರ್ಪೋರೇಟ್ ಹಿಡಿತಕ್ಕೆ ಒಳಗಾಗಿರುವ ಸಂದರ್ಭದಲ್ಲಿ ಜನಶಕ್ತಿ ವಾರ ಪತ್ರಿಕೆಯ ಪ್ರಸಾರ ಹೆಚ್ಚಳದ ಮಹತ್ವವನ್ನು ಒತ್ತಿ ಹೇಳಿದರು.

ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ದಲ್ಲಿ ಲಿಂಗರಾಜು ಮತ್ತುಸಂಗಡಿಗರ ಜಾಗೃತಿ ಮತ್ತು ಸಾಮರಸ್ಯದ ಹಾಡುಗಳು ಹಾಗೂ ದೊಡ್ಡಮ್ಲೆ ರವಿ ಮತ್ತು ತಂಡವರಿಂದ ಕೈವಾರ ತಾತಯ್ಯನವರ ತತ್ವಪದಗಳನ್ನು ಪ್ರಸ್ತುತ ಪಡಿಸಿದರು. ■



ಹಿರಿಯ ಸಂಗಾತಿಗಳ ಕೊಡುಗೆಗಳ ಸ್ಮರಣೆ, ಸನ್ಮಾನ

ಜನಶಕ್ತಿ ಉತ್ಸವದಲ್ಲಿ ಜನಶಕ್ತಿ ವಾರಪತ್ರಿಕೆಗೆ, ಇದರ ಮೊದಲು 'ಐಕ್ಯರಂಗ' ವಾರಪತ್ರಿಕೆಗೆ ಅತ್ಯುತ್ತಮ ವರದಿ, ಲೇಖನ, ವಿತರಣೆ, ನಿರ್ವಹಣೆ ಮುಂತಾದವುಗಳ ಮೂಲಕ ದೀರ್ಘ ಕಾಲ ಕಾಣಿಕೆ ನೀಡಿದ ಹನ್ನೆರಡು ಹಿರಿಯ ಮುಖಂಡರನ್ನು, ಸಂಗಾತಿಗಳನ್ನು ಸನ್ಮಾನಿಸಲಾಯಿತು. ಅವರ ಹೆಸರುಗಳು ಹೀಗಿವೆ:

ಪತ್ರಿಕೆಯ ಒಟ್ಟು ಬೆಳವಣಿಗೆಗೆ ಅಮೂಲ್ಯ ಕೊಡುಗೆ ನೀಡಿದ ಹಿರಿಯ ಸಂಗಾತಿಗಳು:

ಕೆ.ಆರ್.ಶ್ರೀಯಾನ್, ಮಂಗಳೂರು

ವಿ.ಪಿ.ಕುಲಕರ್ಣಿ, ರಾಮದುರ್ಗ

ಜನಪರ ಚುಟುಕಗಳ ಕೊಡುಗೆಗಾಗಿ:

ವಿಡಂಬಾರಿ, (ವಿಜಿ.ಭಂಡಾರಿ), ಹೊನ್ನಾವರ

ನಿರಂತರ ವರದಿಗಾರಿಕೆಗೆ:

ವಾಸುದೇವ ಉಚ್ಚಿಲ್, ಮಂಗಳೂರು

ಮಾದರಿ ವಿತರಣೆಗಾಗಿ:

ಆರ್. ಕೋದಂಡರಾಮ್, ಬೆಂಗಳೂರು

ಸಿ.ಆರ್.ಶಾನಭಾಗ, ಸಿರಸಿ

ಈಗ ಹೆಚ್ಚು ಜನರಿಗೆ ಪತ್ರಿಕೆಯನ್ನು ತಲುಪಿಸುತ್ತಿರುವ ವಿತರಕರು:

ಡಾ.ಐ.ಆರ್.ದುರ್ಗಾಪ್ರಸಾದ್, ವಿರಾಜಪೇಟೆ

ಬಿ.ಉಮೇಶ್, ತುಮಕೂರು

ಕೃಷ್ಣಪ್ಪ ಸಾಲ್ಯಾನ್, ಮಂಗಳೂರು

ಕೃಷ್ಣಪ್ಪ ಕೊಂಚಾಡಿ, ಮಂಗಳೂರು

ಬಿ.ಎಲ್.ನಾಯ್ಕ, ದಾಂಡೇಲಿ

ಲಕ್ಷ್ಮಣ ನೆಲ್ಲಿಕಟ್ಟೆ, ಕುಂದಾಪುರ

ಇವರಲ್ಲಿ ವಿ.ಪಿ.ಕುಲಕರ್ಣಿ, ವಿಡಂಬಾರಿ, ಸಿ.ಆರ್.ಶಾನಭಾಗ, ಬಿ.ಉಮೇಶ್ ಮತ್ತು ಲಕ್ಷ್ಮಣ ನೆಲ್ಲಿಕಟ್ಟೆ ಉತ್ಸವದಲ್ಲಿ ಭಾಗವಹಿಸಿದರು. ಅವರಿಗೆ ಸೀತಾರಾಂ ಯೆಚುರಿಯವರು ಶಾಲು ಹೊದಿಸಿ ನೆನಪಿನ ಕಾಣಿಕೆಗಳನ್ನು ನೀಡಿ ಸನ್ಮಾನಿಸಿದರು.

ಈಗಲೂ ಜನಶಕ್ತಿಯ ಸಂಪಾದಕ ಮಂಡಳಿಯ ಸದಸ್ಯರಾಗಿ ಕೊಡುಗೆ ನೀಡುತ್ತಿರುವ ಕೆ.ಆರ್.ಶ್ರೀಯಾನ್ ಸೇರಿದಂತೆ ಇತರ ಸಂಗಾತಿಗಳು ಕಾರಣಾಂತರಗಳಿಂದ ಉತ್ಸವದಲ್ಲಿ ಭಾಗವಹಿಸಲಾಗಲಿಲ್ಲ. ಇವರನ್ನು ಅವರ ವರ ಸ್ಥಳಗಳಲ್ಲೇ ಸನ್ಮಾನಿಸಲಾಗುವುದು.

ಈ ಹನ್ನೆರಡು ಸಂಗಾತಿಗಳು ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ವಿಶಿಷ್ಟ ಅನುಭವಿಗಳು. ಸಂಕ್ಷಿಪ್ತ ಪರಿಚಯವನ್ನು ಈ ಮುಂದೆ ಕೊಡಲಾಗಿದೆ. ಇವರಲ್ಲಿ ಕೆಲವರ ಫೋಟೋಗಳು ತಕ್ಷಣವೇ ಸಿಕ್ಕಿಲ್ಲ ವಾದ್ದರಿಂದ ಇಲ್ಲಿ ಕೊಡಲು ಸಾಧ್ಯವಾಗಿಲ್ಲ.

ಕೆ.ಆರ್.ಶ್ರೀಯಾನ್: ದಕ್ಷಿಣ ಕನ್ನಡದ ಅತ್ಯಂತ ಹಿರಿಯ ಕಾರ್ಮಿಕ ನಾಯಕರು, ಕಮ್ಯೂನಿಸ್ಟ್ ಚಳುವಳಿಯ ಪ್ರಮುಖರು. ಅವರು ಯುವಕನಾಗಿದ್ದಾಗಲೇ ಕಲೆ, ಸಾಹಿತ್ಯ ರಚನೆ, ನಾಟಕ ರಂಗವನ್ನೂ ಒಳಗೊಂಡು ಸಾಮಾಜಿಕವಾಗಿ ತೊಡಗಿಸಿ ಕೊಂಡ ಸಂಘಟಕರು. ಅವರು ಕಟ್ಟಿ ಬೆಳೆಸಿದ ದುಡಿಯುವ ವರ್ಗದ ಚಳುವಳಿಯ ಉದ್ದಕ್ಕೂ ಪತ್ರಿಕೆಯ ಮಹತ್ವವನ್ನು ಅರಿತು ವಿಶೇಷವಾಗಿ ದುಡಿಯುವ ವರ್ಗಗಳ ನಡುವೆ ಆರಂಭದ ದಿನಗಳಿಂದಲೂ ಅದರ ಬೆಳವಣಿಗೆಗೆ ಶ್ರಮಿಸಿದವರು.

1964 ರಲ್ಲಿ ಜನಾಂದೋಲನದ ಧ್ವನಿಯಾಗಿ 'ಐಕ್ಯರಂಗ'ವು ಮಂಗಳೂರಿ ನಿಂದ ಪ್ರಕಟಣೆ ಆರಂಭಿಸಿತು. ನಂತರದ ದಿನಗಳಲ್ಲಿ ನೆರೆಯ ಜಿಲ್ಲೆಗಳಿಗೆ ಹರಡಿ ಮುಂದೆ ರಾಜ್ಯಮಟ್ಟದ ಪತ್ರಿಕೆಯಾಯಿತು. ಈ ಪತ್ರಿಕೆಗಳ ಆರಂಭದ ಸಂಕಷ್ಟದ ದಿನಗಳಲ್ಲಿ–ಸವಾಲಿನ ದಿನಗಳಲ್ಲಿ ಹೊರತರುವಲ್ಲಿ ತೊಡಗಿದ ಸಂಗಾತಿಗಳ ತಂಡದ ಪ್ರಮುಖರಾಗಿ ಕೆ.ಆರ್. ಶ್ರೀಯಾನ್‌ರು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಈಗಲೂ 'ಜನಶಕ್ತಿ'ಯ ಪ್ರಕಟಣೆಗೆ, ಸಂಪಾದಕ ಮಂಡಳಿಯ ಹಿರಿಯ ಸದಸ್ಯರಾಗಿ ಸಹಕಾರ ನೀಡುವಲ್ಲಿ, ಸಕ್ರಿಯವಾಗಿ ತೊಡಗಿದ್ದಾರೆ, ಸ್ಫೂರ್ತಿಯಾಗಿದ್ದಾರೆ.

ವಿಡಂಬಾರಿ: ವಿಡಂಬಾರಿ ಎಂಬ ಕಾವ್ಯನಾಮದಿಂದ ಚಿರಪರಿಚಿತರಾಗಿರುವ ಹಿರಿಯ ಜೀವಿ ವಿ.ಜಿ.ಭಂಡಾರಿಯವರು ದಿನಕರ ದೇಸಾಯಿಯವರ ನಂತರ ಚುಟುಕು ಪ್ರಧಾನ ನೆಲೆಗೆ ಬಂದಿದ್ದು ಇವರಿಂದ. ಉತ್ತರ ಕನ್ನಡದ ಹೊನ್ನಾವರದ ಇಡಗುಂಜಿಯಲ್ಲಿ ದೇವದಾಸಿಯ ಮಗನಾಗಿ ಜನಿಸಿದರು. ವಿದ್ಯಾಭ್ಯಾಸವನ್ನು 3ನೇ ತರಗತಿಗೆ ನಿಲ್ಲಿಸಬೇಕಾಯ್ತು. ಆದರೆ ಅವರ ಸಾಂಸ್ಕೃತಿಕ ತುಡಿತ ನಿಲ್ಲಲಿಲ್ಲ. ಅವರ ಕಲಿಯುವಿಕೆಯ ಉತ್ಸಾಹದಿಂದಾಗಿ ಪಂಚವಾದ್ಯ ಕಲಾವಿದನಾಗಿ, ಯಕ್ಷಗಾನ ದಲ್ಲಿ ಚಂಡೆವಾದನ ಪರಿಣಿತನಾಗಿ ರೂಪುಗೊಂಡರು. ಅಂಚೆ ಕಛೇರಿಯಲ್ಲಿ ನೌಕರನಾಗಿ ದುಡಿಯುತ್ತಿರು ವಾಗಲೇ ಚುಟುಕುಗಳ ರಚನೆ ಮತ್ತು ಸಾಮಾಜಿಕ ವಾಗಿ ತೊಡಗಿಸಿಕೊಂಡರು. ಅವರ ಹಲವು ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಜನಪರ ಚಳುವಳಿಯಲ್ಲಿ ತೊಡಗಿಸಿ ಕೊಳ್ಳುವುದು, ನಿವೃತ್ತಿಯ ನಂತರ ಚಿಂತನ ಪುಸ್ತಕ ಮಳಿಗೆಯಲ್ಲಿ ಪುಸ್ತಕ ಮಾರಾಟದ ಜೊತೆಗೆ ಜನಶಕ್ತಿ ಪತ್ರಿಕೆಯ ಮಾರಾಟಕ್ಕೂ ವಿಶೇಷ ಗಮನ ನೀಡುತ್ತಿರುವವರು. ಅಲ್ಲದೇ ನಿರಂತರವಾಗಿ ಅವರ ಜನಪರ ಚುಟುಕುಗಳನ್ನು ಪತ್ರಿಕೆಯ ಪ್ರಕಟಣೆಗೆ

ಕೆ.ಆರ್. ಶ್ರೀಯಾನ್



ಐ.ಆರ್. ದುರ್ಗಾಪ್ರಸಾದ್



ಆರ್.ಕೋದಂಡರಾಮ್




ಕೃಷ್ಣಪ್ಪ ಕೊಂಚಾಡಿ





ವ್ಹಿ.ಪಿ.ಕುಲಕರ್ಣಿ



ವಿಡಂಬಾರಿ

ನೀಡುತ್ತಿರುವವರು.

ವ್ಹಿ.ಪಿ. ಕುಲಕರ್ಣಿ: 'ಬಂಡೆಪ್ಪ ಕುಲಕರ್ಣಿ' ಎಂದು, ಅಂದರೆ ಅನ್ಯಾಯಗಳ ವಿರುದ್ಧ ಬಂಡೆದ್ದ ಕುಲಕರ್ಣಿ ಎಂದೇ ಹೆಸರಾದ ರಾಮದುರ್ಗದ ವ್ಹಿ.ಪಿ.ಕುಲಕರ್ಣಿ ಯವರು ಎಂಭತ್ತರ ದಶಕದಲ್ಲಿ ಐಕ್ಯರಂಗ ವನ್ನು ಹೊರ ತರುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ. ಐಕ್ಯರಂಗದ ಪ್ರಕಟಣೆಯು 1978ರಲ್ಲಿ ಬೆಂಗಳೂರಿಗೆ ಸ್ಥಳಾಂತರ ಗೊಂಡಾಗ ಪತ್ರಿಕೆಯ ಹೊಣೆಗಾರಿಕೆ ಯನ್ನು ಹೆಗಲ ಮೇಲೆ ಹೊತ್ತು ಶ್ರದ್ಧೆಯಿಂದ ನಿರ್ವಹಿಸಿದವರು.

ಸಿ.ಆರ್.ಶಾನಭಾಗ: 1978ರಿಂದಲೂ ಧಾರವಾಡದಲ್ಲಿ ಮತ್ತು ನಂತರ ಶಿರಸಿಯಲ್ಲಿ 'ಪೀಪಲ್ಸ್ ಡೆಮೋಕ್ರಸಿ' ಮತ್ತು ಹಿಂದೆ 'ಐಕ್ಯರಂಗ' ಹಾಗೂ 'ಜನಶಕ್ತಿ' ಪತ್ರಿಕೆಗಳನ್ನು ನಿರಂತರವಾಗಿ ಜನತೆಗೆ ತಲುಪಿಸುತ್ತಾ ಬಂದಿದ್ದಾರೆ. ಮುಖ್ಯವಾಗಿ ಶಿರಸಿಯ ಬಸ್ ಸ್ಟಾಂಡ್ ಮತ್ತು ಬಜಾರಿನ ಅಂಗಡಿಗಳಿಗೆ ಪ್ರತಿ ವಾರವೂ ಖುದ್ದಾಗಿ ತಂಡದ ನಾಯಕರಾಗಿ ತೆರಳಿ ಜನಶಕ್ತಿಯನ್ನು ಮಾರುತ್ತಿದ್ದದ್ದು ವಿಶಿಷ್ಟ ಅನುಭವವಾಗಿದೆ. ಇಂತಹ ಪ್ರಯತ್ನ ಗಳಿಂದಾಗಿ ಪ್ರತಿವಾರವೂ 350 ಕ್ಕಿಂತಲೂ ಹೆಚ್ಚು ಪತ್ರಿಕೆ ಮಾರಾಟ ಕಂಡಿತು.

ಡಾ. ಐ.ಆರ್.ದುರ್ಗಾಪ್ರಸಾದ್: ಕೊಡಗಿನ ವಿರಾಜಪೇಟೆಯಲ್ಲಿ ವೃತ್ತಿಯಲ್ಲಿ ವೈದ್ಯರಾಗಿರುವ ಪ್ರಸಾದ್‌ರವರು ಬಹು ಹಿಂದಿನಿಂದಲೂ ಪತ್ರಿಕೆಯ ಪ್ರಸಾರಕ್ಕೆ ಬಹುವಾಗಿ ತಮ್ಮನ್ನು ತೊಡಗಿಸಿ ಕೊಂಡವರು. ಲೇಖಕರು, ಸಾಮಾಜಿಕ ಕಾರ್ಯಕರ್ತರೂ ಆಗಿರುವ ಅವರು ದುಡಿಯುವ ಜನರ ನಡುವೆ, ಪ್ರಗತಿಪರ ಚಿಂತಕರಲ್ಲಿ ಪ್ರಸಾರಕ್ಕೆ ಒತ್ತು ನೀಡಿದವರು.

ಬಿ.ಉಮೇಶ್: ವಿದ್ಯಾರ್ಥಿ ದೆಸೆಯಿಂದಲೇ ಪ್ರಗತಿಪರ ಚಳುವಳಿಯಲ್ಲಿ ತೊಡಗಿದ ಉಮೇಶ್‌ರವರು ಈಗ ರೈತ ಸಂಘಟನೆ, ಕಾರ್ಮಿಕ ಸಂಘಟನೆಯ ಮುಖಂಡರು. ತುಮಕೂರು ಜಿಲ್ಲೆಯ ನಗರದಲ್ಲಿ ಪತ್ರಿಕೆಯ ಪ್ರಸಾರಕ್ಕೆ ಶ್ರಮಿಸುವಲ್ಲಿ, ಪ್ರಸಾರದಲ್ಲಿ ಅವರ ವಿಶೇಷ ಕೊಡುಗೆ ಇದೆ.

ಲಕ್ಷ್ಮಣ ನೆಲ್ಲಿಕಟ್ಟೆ: ಕುಂದಾಪುರದಲ್ಲಿ ಕಾರ್ಮಿಕನಾಗಿರುವ ಅವರು ಅತ್ಯಂತ ಕಡಿಮೆ ಶಿಕ್ಷಣ ಹೊಂದಿರುವ ಕಾರ್ಮಿಕರ ನಡುವೆ ಪತ್ರಿಕೆಯ ಪ್ರಸಾರಕ್ಕೆ ವಿಶೇಷ ಗಮನ ನೀಡಿ ಬೆಳೆಸುತ್ತಿದ್ದಾರೆ.

ಕೆ. ಕೃಷ್ಣಪ್ಪ ಸಾಲ್ಯಾನ್ : ಮಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರು ದುಡಿಯುವ ಜನರ ನಡುವೆ ನಿರಂತರ ವಾಗಿ ಪತ್ರಿಕೆಯನ್ನು ಕೊಂಡೊಯ್ಯುವ ಕೆಲಸದ ಪ್ರಾಮುಖ್ಯತೆ ಅರಿತು ಅದನ್ನು ನಿರ್ವಹಿಸುತ್ತಾ ಬರುತ್ತಿರುವ ಹಿರಿಯ ಸಂಗಾತಿ, ಕಾರ್ಮಿಕ ಮುಂದಾಳು.

ಕೃಷ್ಣಪ್ಪ ಕೊಂಚಾಡಿ: ಸಂವೇದನಾಶೀಲ ಬರಹಗಾರರು. ಮಂಗಳೂರಿನಲ್ಲಿ ಪತ್ರಿಕೆಯನ್ನು ಪ್ರಸಾರ ಮಾಡುವಲ್ಲಿ ಅವರ ಶ್ರದ್ಧೆ ಮತ್ತು ಪ್ರೀತಿ ಅನುಕರಣೀಯ. ಲೆಕ್ಕಾಚಾರಗಳ ಅಚುಕಟ್ಟುತನವೂ ಸಹ ಒಂದು ಮಾದರಿ.

ವಾಸುದೇವ ಉಚ್ಚಿಲ್: 'ಜನಶಕ್ತಿ'ಯ ಕಡಲ ತಡಿ ಅಂಕಣಕ್ಕೆ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಜನಪರ ಹೋರಾಟಗಳು ಮತ್ತು ಚಟುವಟಿಕೆಗಳನ್ನು ಅತ್ಯಂತ ನಿಯಮಿತ ವಾಗಿ ವರದಿ ಮಾಡುತ್ತಿರುವ ಸಂಗಾತಿ, ಲೇಖಕರೂ ಸಹ. ಸಾಂಸ್ಕೃತಿಕ ಕ್ಷೇತ್ರದ ಉತ್ತಮ ಒಳನೋಟ ನೀಡುವ ಮತ್ತು ಅಸ್ಪೃಶ್ಯತೆ–ಮಡೆಸ್ನಾನದಂತಹ ಸಾಮಾಜಿಕ ಪಿಡುಗುಗಳ ಕುರಿತ ಉತ್ತಮ ವರದಿಗಳನ್ನು ನೀಡಿರುವವರು. ನೌಕರಿಯಿಂದ ನಿವೃತ್ತ ರಾದ ಮೇಲೆ ಮತ್ತಷ್ಟು ತನ್ಮಯತೆಯಿಂದ ಜನಶಕ್ತಿಯ ಅಗತ್ಯಗಳಿಗೆ ಸ್ಪಂದಿಸುತ್ತಾ ಬರುತ್ತಿರುವ ಸಂಗಾತಿ.


ಕೋದಂಡರಾಮ್ : (ಇದೇ ಸಂಚಿಕೆಯಲ್ಲಿ ಕೋದಂಡರಾಮ್‌ರವರ ಕೊಡುಗೆಯ ಬಗೆಗೆ ಒಂದು ಪತ್ಯೇಕ ಬರಹ ಇದೆ)

ಬಿ. ಎಲ್. ನಾಯ್ಕ : ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ದುಡಿಯುವ ಜನರ ನಡುವೆ ಪತ್ರಿಕೆಗಳನ್ನು ಸುದೀರ್ಘ ಕಾಲದಿಂದ ವಿತರಿಸುತ್ತಿರುವ ಸಂಗಾತಿ ಬಿ.ಎಲ್. ನಾಯ್ಕ. ದಾಂಡೇಲಿಯಲ್ಲಿ ಸುದೀರ್ಘ ಕಾಲದಿಂದ ಪತ್ರಿಕೆಯನ್ನು ಜನರಿಗೆ ತಲುಪಿಸುತ್ತಿರುವ ಸಂಗಾತಿ.

ಸಿ.ಆರ್.ಶಾನಭಾಗ



ಬಿ.ಉಮೇಶ್



ಲಕ್ಷ್ಮಣ ನೆಲ್ಲಿಕಟ್ಟೆ



ದುಡಿವ ಜನರ ಪ್ರಾಣಮಿತ್ರ 'ಜನಶಕ್ತಿ' ಪತ್ರಿಕೆಯ
ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆಗೆ ಶುಭಾಶಯಗಳು

'ದುಡಿಯುವ ಜನತೆ ಗುಲಾಮರಲ್ಲ,
ನಿಮ್ಮ ವಿಮೋಚನೆಗಾಗಿ ಸಂಘಟಿತರಾಗಿ– ಹೋರಾಟಕ್ಕೆ ಮುಂದಾಗಿ
ಹೋರಾಡೋಣ ಯಶಸ್ಸು ಗಳಿಸೋಣ
ಸಿಐಟಿಯು ಜಿಂದಾಬಾದ್

CITU



ಕರ್ನಾಟಕ ರಾಜ್ಯ ಅಂಗನವಾಡಿ ನೌಕರರಸಂಘ (ಸಿಐಟಿಯು)

ಕರ್ನಾಟಕ ರಾಜ್ಯಸಮಿತಿ

ನಂ.25, 1ನೇ ಮಹಡಿ, 1ನೇ ಮುಖ್ಯರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560027.
ಟೆಲಿಫ್ಯಾಕ್ಸ್ :080 22114036



ಸ್ವಾತಂತ್ರ್ಯದಿಂದ
ಸರ್ವೋದಯದತ್ತ...
68ನೇ
ಸ್ವಾತಂತ್ರ್ಯ ದಿನಾಚರಣೆ
ದಿನಾಂಕ: 15.08.2014
" ಬಡತನ, ಅನಕ್ಷರತೆ ಮತ್ತು ಅಸಮಾನತೆಗಳಿಂದ
ಮುಕ್ತಿಯೇ ನಿಜವಾದ ಸ್ವಾತಂತ್ರ್ಯ"
....ಮಹಾತ್ಮ ಗಾಂಧಿ
ಮಹಾತ್ಮ ಗಾಂಧೀಜಿ ಅವರ ನಾಯಕತ್ವದಲ್ಲಿ ಅಹಿಂಸಾ ಮಾರ್ಗದಲ್ಲಿ ಮುನ್ನಡೆದು ಸ್ವಾತಂತ್ರ್ಯಗಳಿಸಿದ
ಹೆಮ್ಮೆ ನಮ್ಮದು. ಅಸಂಖ್ಯಾತ ರಾಷ್ಟ್ರ ಪ್ರೇಮಿಗಳ ತ್ಯಾಗ ಬಲಿದಾನಗಳಿಂದ ನಾವು ಪಡೆದಿರುವ
ಸ್ವಾತಂತ್ರ್ಯಕ್ಕೆ ಬೆಲೆಕಟ್ಟಲಾಗದು. ಅವರೆಲ್ಲರ ಅಪರಿಮಿತ ದೇಶ ಭಕ್ತಿಗೆ ನಮ್ಮ ನಮನಗಳು.
ಈ ಮಹನೀಯರ ಆಶಯದಂತೆ ವೈವಿಧ್ಯತೆಯಲ್ಲಿ ಏಕತೆಯನ್ನು ಮೈಗೂಡಿಸಿಕೊಂಡು
ಶಾಂತಿ, ಸಹಬಾಳ್ವೆಯಿಂದ ಸರ್ವೋದಯದೆಡೆಗೆ ಸಾಗುತ್ತಿರುವ
ನಮ್ಮ ನಾಡಿನ ಜನತೆಗೆ 68ನೇ ಸ್ವಾತಂತ್ರ್ಯ ದಿನಾಚರಣೆಯ
ಹಾರ್ದಿಕ ಶುಭಾಶಯಗಳು....
ಸಿದ್ದರಾಮಯ್ಯ
ಮುಖ್ಯಮಂತ್ರಿಗಳು
ನುಡಿದಂತೆ ನಡೆಯುತ್ತಿದ್ದೇವೆ
ಆರ್. ರೋಷನ್‌ಬೇಗ್
ಮೂಲಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು
ಕರ್ನಾಟಕ ವಾರ್ತೆ
ಪ್ರಕಟಣೆ: ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

JANASHAKTHI KANNADA VARA PATHRIKE AUG 31, 2014 Price Rs. 20
"REGISTERED" Postal Reg. No. RNP/KA/BGS/2078/2013-15 Posted at MBC Bangalore GPO
RNI NO. KARKAN/2006/17926 Posted on every Saturday
Licensed to Post Without Prepayment License No. WPP-283



ಸ್ವಾತಂತ್ರ್ಯ ಹೋರಾಟದ ಹುತಾತ್ಮರಿಗೆ ನಮ್ಮ ನಮನ

aiiea

ವಿಮಾ ಕಾರ್ಪೊರೇಷನ್ ನೌಕರರ ಸಂಘ, ಬೆಂಗಳೂರು ವಿಭಾಗ-1
ವಿಮಾ ನೌಕರರ ಸಂಘ, ಉಡುಪಿ ವಿಭಾಗ
ವಿಮಾ ನೌಕರರ ಸಂಘ, ಧಾರವಾಡ ವಿಭಾಗ
ವಿಮಾ ಕಾರ್ಪೊರೇಷನ್ ನೌಕರರ ಸಂಘ, ಮೈಸೂರು ವಿಭಾಗ
ವಿಮಾ ನೌಕರರ ಸಂಘ, ರಾಯಚೂರು ವಿಭಾಗ
ವಿಮಾ ಕಾರ್ಪೊರೇಷನ್ ನೌಕರರ ಸಂಘ, ಬೆಂಗಳೂರು ವಿಭಾಗ-2
ವಿಮಾ ನೌಕರರ ಸಂಘ, ಬೆಳಗಾವಿ ವಿಭಾಗ
ವಿಮಾ ನೌಕರರ ಸಂಘ, ಶಿವಮೊಗ್ಗ ವಿಭಾಗ
ಬೆಂಗಳೂರು ಪ್ರದೇಶ ಸಾಮಾನ್ಯ ವಿಮಾ ನೌಕರರ ಸಂಘ
ಹುಬ್ಬಳ್ಳಿ-ಧಾರವಾಡ ಪ್ರದೇಶ ಸಾಮಾನ್ಯ ವಿಮಾ ನೌಕರರ ಸಂಘ

JANASHAKTHI VARA PATRIKE : Printed by G.V. SRIRAMAREDDY, EMS Bhavan, No. 37/A, 8th Cross, Mahalakshmi Layout, BANGALORE-560086; Published by G.V. Sriramareddy, EMS Bhavan, No. 37/A, 8th Cross, Mahalakshmi Layout, BANGALORE-560086; Karnataka on behalf of Communist Party of India(Marxist) and Printed at Kriya Prakashana, No. 12, 18th Cross, Sampangirama Nagar, Bangalore-560 027 Karnataka State and published at Bangalore. EMS Bhavana, No. 37/A, 8th Cross, Mahalakshmi Layout, Bangalore-56006; Editor : NITHYANANDASWAMI